ಸೋಮವಾರ, ಜನವರಿ 17, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೋವಿಡ್ ಪರೀಕ್ಷೆ

ವಾರಾಂತ್ಯದ ನಿರ್ಬಂಧಗಳ ಸಂದರ್ಭದಲ್ಲಿ ಜಮ್ಮುವಿನಲ್ಲಿ ಆರೋಗ್ಯ ಕಾರ್ಯಕರ್ತೆಯೊಬ್ಬರು ಭಾನುವಾರ ಕೋವಿಡ್ ಪರೀಕ್ಷೆಯನ್ನು ಸ್ವತಃ ಮಾಡಿಕೊಂಡರು



ಅಖಿಲೇಶ್ ಪಾಳಯ ಸೇರಿದ ಒಬಿಸಿ ನಾಯಕ ದಾರಾ ಸಿಂಗ್, ಅಪ್ನಾ ದಳದ ಶಾಸಕ ವರ್ಮಾ

ಬಿಜೆಪಿಯ ಮತ್ತೊಬ್ಬ ಮಾಜಿ ಸಚಿವ ಎಸ್‌ಪಿಗೆ


ಉತ್ತರ ಪ್ರದೇಶದ ಮಾಜಿ ಸಚಿವ ದಾರಾ ಸಿಂಗ್ ಅವರನ್ನು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಭಾನುವಾರ ಪಕ್ಷಕ್ಕೆ ಬರಮಾಡಿಕೊಂಡರು–ಪಿಟಿಐ ಚಿತ್ರ

ಲಖನೌ (ಪಿಟಿಐ): ಉತ್ತರ ಪ್ರದೇಶ ಮಾಜಿ ಸಚಿವ, ಇತರ ಹಿಂದುಳಿದ ವರ್ಗಗಳ ಪ್ರಮುಖ ನಾಯಕ ದಾರಾ ಸಿಂಗ್ ಚೌಹಾಣ್ ಅವರು ಸಮಾಜವಾದಿ ಪಕ್ಷಕ್ಕೆ(ಎಸ್‌ಪಿ) ಭಾನುವಾರಸೇರಿದರು.

ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ಅವರ ಸಂಪುಟಕ್ಕೆ ಅವರು ಬುಧವಾರವಷ್ಟೇ ರಾಜೀನಾಮೆ ನೀಡಿದ್ದರು.

ದಾರಾ ಸಿಂಗ್ ಅವರ ಜೊತೆಗೆ, ಹಿಂದುಳಿದ ವರ್ಗಗಳ ನಾಯಕ, ವಿಶ್ವನಾಥ್‌ಗಂಜ್ ವಿಧಾನಸಭೆ ಕ್ಷೇತ್ರದ ಅಪ್ನಾ ದಳ (ಸೋನೆಲಾಲ್) ಪಕ್ಷದ ಶಾಸಕ ಆರ್.ಕೆ. ವರ್ಮ ಕೂಡಾ ಎಸ್‌ಪಿಗೆ ಸೇರ್ಪಡೆ ಆದರು. ಅಪ್ನಾ ದಳ (ಸೋನೆಲಾಲ್) ಬಿಜೆಪಿಯ ಮಿತ್ರ ಪಕ್ಷವಾಗಿದೆ.

ಎಸ್‌ಪಿ ಸೇರ್ಪಡೆ ವೇಳೆ ಬಿಜೆಪಿ ವಿರುದ್ಧ ಟೀಕಾ ಪ್ರಹಾರ ನಡೆಸಿರುವ ದಾರಾ ಸಿಂಗ್, 'ಉತ್ತರ ಪ್ರದೇಶದಲ್ಲಿ 2017ರಲ್ಲಿ ಸರ್ಕಾರ ರಚಿಸುವಾಗ ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್ (ಎಲ್ಲರ ಜೊತೆ ಎಲ್ಲರ ವಿಕಾಸ) ಎಂಬ ಘೋಷಣೆಯನ್ನು ಬಿಜೆಪಿ ಮಾಡಿತ್ತು. ಆದರೆ ವಿಕಾಸ ಆಗಿದ್ದು ಬೆರಳೆಣಿಕೆಯಷ್ಟು ಜನರ ಬದುಕಿನಲ್ಲಿ ಮಾತ್ರ. ಉಳಿದವರ ಜೀವನವನ್ನು ಅವರವರ ಹಣೆಬರಹಕ್ಕೆ ಬಿಡಲಾಯಿತು' ಎಂದರು.

ಎಸ್‌ಪಿಯನ್ನು ತನ್ನ ಹಳೆಯ ಮನೆ ಎಂದು ಅವರು ಕರೆದಿದ್ದಾರೆ. 'ನಾವು ಉತ್ತರ ಪ್ರದೇಶ ರಾಜಕೀಯದಲ್ಲಿ ಬದಲಾವಣೆ ತರುತ್ತೇವೆ ಮತ್ತು ಅಖಿಲೇಶ್ ಯಾದವ್‌ರನ್ನು ಮತ್ತೊಮ್ಮೆ ಮುಖ್ಯಮಂತ್ರಿಯನ್ನಾಗಿ ಮಾಡುತ್ತೇವೆ. ಇತರ ಹಿಂದುಳಿದ ವರ್ಗಗಳು ಮತ್ತು ದಲಿತರು ಒಟ್ಟಾಗುತ್ತಾರೆ. ನಮ್ಮ ಎದುರಾಳಿಗಳು ಶಕ್ತಿ ಮೀರಿ ಪ್ರಯತ್ನಿಸಬಹುದು, ಆದರೆ ಅವರಿಂದ ಈ ಚಂಡಮಾರುತವನ್ನು ತಡೆಯಲು ಸಾಧ್ಯವಿಲ್ಲ' ಎಂದರು.

ಮೌ ಜಿಲ್ಲೆಯ ಮಧುಬನ್ ಕ್ಷೇತ್ರದ ಶಾಸಕರಾಗಿದ್ದ ಅವರು, 'ದಲಿತರು, ಹಿಂದುಳಿದ ವರ್ಗದವರು ಮತ್ತು ನಿರುದ್ಯೋಗಿಗಳಿಗೆ ಬಿಜೆಪಿ ಸರ್ಕಾರದಿಂದ ನ್ಯಾಯ ಸಿಗಲಿಲ್ಲ. ಬಡವರು ಈ ಸರ್ಕಾರವನ್ನು ರಚಿಸಿದ್ದರು. ಆದರೆ ಕಳೆದ ಐದು ವರ್ಷಗಳಿಂದ ಸರ್ಕಾರದ ಉಪಯೋಗವನ್ನು ಇತರರು ಪಡೆದರು. ಬಿಜೆಪಿ ಸರ್ಕಾರಕ್ಕೆ ದಲಿತರು, ಹಿಂದುಳಿದವರಿಗಿಂತ ಜಾನುವಾರುಗಳೇ ಮುಖ್ಯವಾಗಿದ್ದವು'. ಎಂದು ಆರೋಪಿಸಿದರು.

ದಾರಾ ಸಿಂಗ್ ಮತ್ತು ವರ್ಮ ಅವರನ್ನು ಪಕ್ಷಕ್ಕೆ ಬರ ಮಾಡಿಕೊಂಡ ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್, 'ಎಸ್‌ಪಿ ಅಧಿಕಾರಕ್ಕೆ ಬಂದರೆ ಜಾತಿ ಗಣತಿ ನಡೆಸಲಿದೆ' ಎಂದರು.

2017ರಲ್ಲಿ ಬಿಜೆಪಿ ಟಿಕೆಟ್‌ನಿಂದ ಶಾಸಕರಾಗಿ ಆಯ್ಕೆ ಆಗುವ ಮೊದಲು ದಾರಾ ಸಿಂಗ್ ಅವರು 2009 ಮತ್ತು 2014ರಲ್ಲಿ ಬಹುಜನ ಸಮಾಜ ಪಕ್ಷದ ಟಿಕೆಟ್‌ನಿಂದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. 2009ರ ಚುನಾವಣೆಯಲ್ಲಿ ಗೆದ್ದರೆ, 2014ರಲ್ಲಿ ಸೋಲು ಕಂಡಿದ್ದರು.

ಆಜಂಗಡ, ಮೌ, ಗಾಜಿಪುರ ಮತ್ತು ಬಲಿಯಾ ಜಿಲ್ಲೆಗಳನ್ನು ಒಳಗೊಂಡ ಪೂರ್ವಾಂಚಲ ಪ್ರದೇಶದಲ್ಲಿ ಚೌಹಾಣ್ ಅವರು ಪ್ರಭಾವಿ ಎನ್ನಲಾಗಿದೆ.

ಎಸ್‌ಪಿಗೆ ಶನಿವಾರ ಸೇರ್ಪಡೆ ಆದ ಮತ್ತೊಬ್ಬ ಮಾಜಿ ಸಚಿವ ಸ್ವಾಮಿ ಪ್ರಸಾದ್ ಮೌರ್ಯ ಅವರು ಕೂಡಾ, ಬಿಜೆಪಿ ಹಿಂದುಳಿದ ವರ್ಗಗಳನ್ನು ನಿರ್ಲಕ್ಷಿಸಿದೆ ಎಂದು ಆರೋಪಿಸಿದ್ದರು.

ಈವರೆಗೂ ಬಿಜೆಪಿಯ ಮೂರು ಸಚಿವರು ಮತ್ತು ಎಂಟು ಶಾಸಕರು ಎಸ್‌ಪಿ ಸೇರಿದ್ದಾರೆ. ಅವರಲ್ಲಿ ಬಹುತೇಕರು ಹಿಂದುಳಿದ ವರ್ಗದ ನಾಯಕರು. ಬಿಜೆಪಿ ಬಿಟ್ಟು ಬರುವ ಇನ್ನಷ್ಟು ಮುಖಂಡರನ್ನು ಎಸ್‌ಪಿಗೆ ಸೇರಿಸುವುದಿಲ್ಲ ಎಂದು ಅಖಿಲೇಶ್ ಯಾದವ್ ಅವರು ಶನಿವಾರವಷ್ಟೇ ಹೇಳಿದ್ದರು.

ಅಪರಾಧ ಹಿನ್ನೆಲೆಯವರಿಗೆ ಎಸ್‌ಪಿ ಟಿಕೆಟ್: ಯೋಗಿ ಆರೋಪ

ಲಖನೌ (ಪಿಟಿಐ): 'ಸಮಾಜವಾದಿ ಪಕ್ಷವು ಅಪರಾಧ ಹಿನ್ನೆಲೆಯವರಿಗೆ ಟಿಕೆಟ್ ನೀಡಿದೆ' ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಟೀಕಿಸಿದ್ದಾರೆ.

ಇಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಬಿಜೆಪಿ ನಿನ್ನೆ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಸಮಾಜದ ಎಲ್ಲಾ ವರ್ಗಗಳಿಗೂ ಆ ಪಟ್ಟಿಯಲ್ಲಿ ಸ್ಥಾನ ನೀಡಲಾಗಿದೆ. ನಮ್ಮ ಪಟ್ಟಿಯು ಸಾಮಾಜಿಕ ನ್ಯಾಯವನ್ನು ಪ್ರತಿಬಿಂಬಿಸುತ್ತದೆ. ಎಲ್ಲರ ಜತೆ, ಎಲ್ಲರ ವಿಕಾಸ ಎಂಬುದನ್ನೂ ಆ ಪಟ್ಟಿಯು ತೋರಿಸುತ್ತದೆ' ಎಂದು ಯೋಗಿ ಆದಿತ್ಯನಾಥ ಹೇಳಿದ್ದಾರೆ.

'ಆದರೆ ಸಮಾಜವಾದಿ ಪಕ್ಷ ಮತ್ತು ಅದ ಮಿತ್ರ ಪಕ್ಷಗಳ ಪಟ್ಟಿಯನ್ನು ಗಮನಿಸಿದ್ದೀರಾ? ಕೈರಾನಾದಲ್ಲಿ ಹಿಂದೂಗಳ ವಲಸೆಗೆ ಕಾರಣರಾದವರು ಮತ್ತು ಮುಜಫ್ಫರ್‌ನಗರ ಗಲಭೆಗೆ ಕಾರಣರಾದವರಿಗೆ ಟಿಕೆಟ್ ನೀಡಲಾಗಿದೆ. ಲೋನಿಯಲ್ಲಿ ರೌಡಿ ಶೀಟರ್‌ಗೆ ಟಿಕೆಟ್ ನೀಡಲಾಗಿದೆ. ಅವರು, ಅಪರಾಧಿಗಳಿಗೆ ಟಿಕೆಟ್ ನೀಡುವ ಮೂಲಕ ಸರ್ಕಾರವನ್ನು ವಸೂಲಿಬಾಜಿಯ ಮಾಧ್ಯಮವನ್ನಾಗಿ ಮಾಡಿಕೊಳ್ಳಲು ಹೊರಟಿದ್ದಾರೆ. ಇದು ಅವರ ಸಾಮಾಜಿಕ ನ್ಯಾಯ' ಎಂದು ಅವರು ಹರಿಹಾಯ್ದಿದ್ದಾರೆ.

ಏಳು ಶುಭ ಸಂಖ್ಯೆ ಪಕ್ಷಗಳ ನಂಬಿಕೆ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಗೆ ಏಳು ಹಂತಗಳಲ್ಲಿ ಮತದಾನ ನಡೆಯಲಿದೆ. ಏಳು ಎಂಬುದು ಶುಭ ಸಂಖ್ಯೆ. ಇದುವೇ ತಮ್ಮ ಗೆಲುವಿಗೆ ಕಾರಣವಾಗುತ್ತದೆ ಎಂದು ಹಲವು ರಾಜಕಾರಣಿಗಳು ನಂಬಿದ್ದಾರೆ.

ಚುನಾವಣೆಯಲ್ಲಿ ತಾವು ಗೆಲ್ಲುತ್ತೇವೆ ಎಂಬುದನ್ನು ಸಮರ್ಥಿಸಲು ಅಭ್ಯರ್ಥಿಗಳು ಚಿತ್ರ ವಿಚಿತ್ರ ಕಾರಣಗಳನ್ನು ನೀಡುತ್ತಿದ್ದಾರೆ. ಸಪ್ತರ್ಷಿ ಮಂಡಲ ಇದೆ, ಸಂಗೀತದಲ್ಲಿ ಏಳು ಸ್ವರಗಳಿವೆ. ಹಾಗಾಗಿ, ಏಳು ಹಂತಗಳ ಮತದಾನದಲ್ಲಿ ತಾವು ಗೆಲ್ಲುತ್ತೇವೆ ಎನ್ನುತ್ತಿದ್ದಾರೆ.

ಹ್ಯಾಟ್ರಿಕ್ ಗೆಲುವು ಬಿಜೆಪಿಯ ಗುರಿ. ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್‌ಗೆ ಮರಳಿ ಅಧಿಕಾರ ಹಿಡಿಯುವ ಕನಸು–ಎಲ್ಲರೂ ಶುಭ ಸಂಖ್ಯೆ 7 ಅನ್ನು ನೆಚ್ಚಿಕೊಂಡಿದ್ದಾರೆ.

'ಸಪ್ತರ್ಷಿ ಮಂಡಲ ಇದೆ. ಮಳೆಬಿಲ್ಲಿನಲ್ಲಿ ಏಳು ಬಣ್ಣಗಳಿವೆ. ಶಾಸ್ತ್ರೀಯ ಸಂಗೀತದಲ್ಲಿ ಏಳು ಸ್ವರಗಳಿವೆ. 2017ರ ವಿಧಾನಸಭಾ ಚುನಾವಣೆ, 2019ರ ಲೋಕಸಭಾ ಚುನಾವಣೆಗಳೆರಡೂ ಏಳು ಹಂತಗಳಲ್ಲಿ ನಡೆದಿವೆ. ಈ ಎರಡರಲ್ಲೂ ಬಿಜೆಪಿ ಭಾರಿ ಅಂತರದಿಂದ ಗೆದ್ದಿದೆ. ಏಳು ಹಂತಗಳಲ್ಲಿ ನಡೆಯಲಿರುವ ಈ ಬಾರಿಯ ಚುನಾವಣೆಯಲ್ಲಿಯೂ ಬಿಜೆಪಿ 300ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಲಿದೆ' ಎಂದು ಬಿಜೆಪಿಯ ರಾಜ್ಯ ಸಭಾ ಸದಸ್ಯ ಸಂಜಯ ಸೇಥ್ ಹೇಳಿದ್ದಾರೆ.

ಮತದಾನವು ರಾಜ್ಯದ ಪಶ್ಚಿಮದಲ್ಲಿ ಆರಂಭವಾಗಿ ಪೂರ್ವದತ್ತ ಸಾಗಲಿದೆ. ಇದು ಕೂಡ ಬಿಜೆಪಿ ಗೆಲುವಿಗೆ ಕಾರಣವಾಗಲಿದೆ ಎಂದು ಬಿಜೆಪಿ ವಕ್ತಾರ ಮನೀಶ್ ಶುಕ್ಲಾ ನಂಬಿದ್ದಾರೆ.

ಆದರೆ ಬಿಜೆಪಿಯದ್ದು ಮೋಸದ ರಾಜಕಾರಣ ಎಂದು ಉತ್ತರ ಪ್ರದೇಶ ಕಾಂಗ್ರೆಸ್‌ನ ವಕ್ತಾರ ಅಶೋಕ್ ಸಿಂಗ್ ಹೇಳಿದ್ದಾರೆ. '2014ರ ನಂತರ ರಾಜ್ಯದಲ್ಲಿ ನಡೆದ ಎಲ್ಲ ಚುನಾವಣೆಗಳಲ್ಲಿಯೂ ಬಿಜೆಪಿ ಮೋಸದ ರಾಜಕಾರಣ ಮಾಡಿದೆ. ಏಳು ಬಣ್ಣದ ಕನಸುಗಳ ಬಿಜೆಪಿಯ ಆಮಿಷಕ್ಕೆ ರಾಜ್ಯದ ಜನರು ಈ ಬಾರಿ ಬಲಿ ಬೀಳುವುದಿಲ್ಲ. ಬಿಜೆಪಿಯನ್ನು ಏಳು ಸಮುದ್ರದಾಚೆ ಎಸೆಯಲು ಜನರು ನಿರ್ಧರಿಸಿದ್ದಾರೆ' ಎಂದು ಅವರು ಹೇಳಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷವು ಏಳು ಸಮುದ್ರಗಳನ್ನು ಸರಾಗವಾಗಿ ದಾಟಲಿದೆ. ಸಪ್ತರ್ಷಿಗಳು ಕಾಂಗ್ರೆಸ್ ಪಕ್ಷವನ್ನು ಆಶೀರ್ವದಿಸಲಿದ್ದಾರೆ ಎಂದಿದ್ದಾರೆ.

'ಏಳು ಹಂತಗಳ ಮತದಾನವು ಎಸ್‌ಪಿಗೆ ಈ ಬಾರಿ ಅದೃಷ್ಟದಾಯಕ ಎನಿಸಲಿದೆ. ಪಕ್ಷವು ಮಿತ್ರ ಪಕ್ಷಗಳ ಜತೆಗೂಡಿ ಸಂಗೀತದ ಏಳು ಸ್ವರಗಳ ಮೂಲಕ ಜನರಿಗೆ ಮೋಡಿ ಮಾಡಲಿದೆ. ಏಳು ಹಂತಗಳ ಮತದಾನದ ಕೊನೆಯ ಹಂತವು ಮಾರ್ಚ್ 7ರಂದೇ ನಡೆಯಲಿರುವುದು ಕೂಡ ಆಸಕ್ತಿದಾಯಕ' ಎಂದು ಸಮಾಜವಾದಿ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಸುರೇಂದ್ರ ಶ್ರೀವಾಸ್ತವ ಹೇಳಿದ್ದಾರೆ.

ಬಿಜೆಪಿಗೆ ಮತ ಹಾಕದಂತೆ ರೈತರಿಗೆ ಮನವಿಗೆ ಬಿಕೆಯು ನಿರ್ಧಾರ

ಎಸ್‌ಪಿ-ಆರ್‌ಎಲ್‌ಡಿ ಮೈತ್ರಿಕೂಟಕ್ಕೆ ಬೆಂಬಲ

ಪ್ರಜಾವಾಣಿ ವಾರ್ತೆ

ಲಖನೌ: ಕೇಂದ್ರ ಸರ್ಕಾರದ ಮೂರು ಕೃಷಿ ನೀತಿಗಳ ವಿರುದ್ಧ ರೈತರ ಹೋರಾಟವನ್ನು ಮುನ್ನಡೆಸಿದ್ದ ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಸಂಘಟನೆಯು ಸಮಾಜವಾದಿ ಪಕ್ಷ (ಎಸ್‌ಪಿ) ಮತ್ತು ರಾಷ್ಟ್ರೀಯ ಲೋಕ ದಳ (ಆರ್‌ಎಲ್‌ಡಿ) ಮೈತ್ರಿಕೂಟಕ್ಕೆ ಅಧಿಕೃತವಾಗಿ ಬೆಂಬಲ ಸೂಚಿಸಿದೆ. ಈ ಬೆಳವಣಿಗೆಯಿಂದಾಗಿ ಜಾಟ್ ಸುಮುದಾಯದ ಪ್ರಾಬಲ್ಯವಿರುವ ಉತ್ತರ ಪ್ರದೇಶದ ಪಶ್ಚಿಮ ಭಾಗದ ರಾಜಕೀಯದಲ್ಲಿ ಗುರುತರ ಬದಲಾವಣೆ ಆಗಲಿದೆ ಎಂದು ಅಂದಾಜಿಸಲಾಗಿದೆ.

ಬಿಕೆಯು ರಾಷ್ಟ್ರೀಯ ಅಧ್ಯಕ್ಷ ನರೇಶ್ ಟಿಕಾಯತ್ ಅವರು ಎಸ್‌ಪಿ-ಆರ್‌ಎಲ್‌ಡಿ ಮೈತ್ರಿಕೂಟದ ಅಭ್ಯರ್ಥಿಗಳಿಗೆ ಚುನಾವಣೆಯಲ್ಲಿ ಬೆಂಬಲ ನೀಡುವಂತೆ ಸಿಸೌಲಿಯ ಕಿಸಾನ್ ಭವನದಲ್ಲಿ ನಡೆದ ರೈತರ ಸಭೆಯಲ್ಲಿ ಕೇಳಿಕೊಂಡರು. ಇದೇ ವೇಳೆ, ಮುಜಫ್ಫರ್‌ನಗರ ಜಿಲ್ಲೆಯ ಬುಲ್ಡಾನ ಕ್ಷೇತ್ರದ ಅಭ್ಯರ್ಥಿ ರಾಜಪಾಲ್ ಬಲಿಯಾನ್ ಮತ್ತು ಮೀರಾಪುರ ಕ್ಷೇತ್ರದ ಅಭ್ಯರ್ಥಿ ಚಂದನ್ ಚೌಹಾನ್ ಅವರಿಗೆ ಬೆಂಬಲ ಪತ್ರವನ್ನೂ ನೀಡಿದರು. ಇದೇ ಜಿಲ್ಲೆಯ ಥಾನ ಭವನ್ ಕ್ಷೇತ್ರದ ಅಭ್ಯರ್ಥಿ ಅಶ್ರಫ್ ಅಲಿ ಅವರಿಗೂ ಬೆಂಬಲ ಸೂಚಿಸಿದರು.


ನರೇಶ್ ಟಿಕಾಯತ್

ಈ ವೇಳೆ ರೈತರನ್ನು ಉದ್ದೇಶಿಸಿ ಮಾತನಾಡಿದ ಟಿಕಾಯತ್ ಅವರು, 'ಇದು ನಮ್ಮ ಹಕ್ಕುಗಳ ಪ್ರಶ್ನೆ. ಈ ಭಾಗದಲ್ಲಿ ಎಸ್‌ಪಿ-ಆರ್‌ಎಲ್‌ಡಿ ಮೈತ್ರಿಕೂಟದ ಅಭ್ಯರ್ಥಿಗಳೇ ಗೆಲ್ಲುವಂತೆ ಮಾಡೋಣ. ಅವರನ್ನು ವಿರೋಧಿಸುವವರ ಮನವೊಲಿಸಿ' ಎಂದರು.

ರಾಜ್ಯದ ಬೇರೆಬೇರೆ ಭಾಗಗಳ ರೈತರು ಮತ್ತು ಇತರರಿಗೆ ಬಿಜೆಪಿಯನ್ನು ತಿರಸ್ಕರಿಸುವಂತೆ ಮನವಿ ಮಾಡಲು ಬಿಕೆಯು ನಿರ್ಧರಿಸಿದೆ ಎಂದು ಮೂಲಗಳು ಹೇಳಿವೆ.

ಕೃಷಿ ನೀತಿಗಳನ್ನು ಹಿಂದಕ್ಕೆ ಪಡೆದ ಕಾರಣ ರೈತರ ಬೆಂಬಲವನ್ನು ಪುನಃ ಪಡೆಯಬಹುದು ಎಂದು ಬಿಜೆಪಿ ಅಂದಾಜಿಸಿತ್ತು. ಆದರೆ ಎಸ್‌ಪಿ-ಆರ್‌ಎಲ್‌ಡಿ ಮೈತ್ರಿಕೂಟಕ್ಕೆ ಬಿಕೆಯು ಬೆಂಬಲ ನೀಡಿದ ಕಾರಣ ಬಿಜೆಪಿಗಿದ್ದ ಭರವಸೆಗೆ ಪೆಟ್ಟು ಬಿದ್ದಿದೆ ಎನ್ನಲಾಗಿದೆ.

ಮೈತ್ರಿಕೂಟದ ಮುಸ್ಲಿಂ ಅಭ್ಯರ್ಥಿಯನ್ನು ಬಿಕೆಯು ಬೆಂಬಲಿಸಿರುವುದು, 2013ರ ಮುಜಫ್ಫರ್‌ನಗರ ಕೋಮುಗಲಭೆಯ ಹಿಂದಿನ ಚುನಾವಣಾ ಸಮೀಕರಣವನ್ನು ಸೂಚಿಸುತ್ತದೆ. ಜಾಟ್ ಮತ್ತು ಮುಸ್ಲಿಮರ ಮತ ಬ್ಯಾಂಕ್ ಹೊಂದಿದ್ದ ಆರ್‌ಎಲ್‌ಡಿಯು ಕೋಮುಗಲಭೆ ಬಳಿಕ ತನ್ನ ನೆಲೆಯನ್ನು ಕಳೆದುಕೊಂಡಿತು. ಈ ಭಾಗದಲ್ಲಿ ಬಿಜೆಪಿ ಭಾರಿ ಯಶಸ್ಸು ಕಂಡಿತು.

ರೈತ ಸಂಘಟನೆಗಳ ಒಕ್ಕೂಟ ಸಂಯುಕ್ತ ಕಿಸಾನ್ ಮೋರ್ಚಾವು (ಎಸ್‌ಎಂಕೆ) ಫೆ.1ರಂದು 'ಮಿಷನ್ ಯುಪಿ' ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿರುವ ಹಿನ್ನೆಲೆಯಲ್ಲಿಯೂ ಬಿಕೆಯು ತೆಗೆದುಕೊಂಡಿರುವ ನಿರ್ಧಾರಕ್ಕೆ ಮಹತ್ವವಿದೆ ಎನ್ನಲಾಗಿದೆ.

ಇದಕ್ಕೂ ಮೊದಲು, ತಮ್ಮ ಮೈತ್ರಿಕೂಟದ ಅಭ್ಯರ್ಥಿ ಆಗಿ ಕಣಕ್ಕಿಳಿಯಬೇಕು ಎಂದು ಎಸ್‌ಪಿ-ಆರ್‌ಎಲ್‌ಡಿ ಮೈತ್ರಿಕೂಟವು ಬಿಕೆಯು ನಾಯಕ ರಾಕೇಶ್ ಟಿಕಾಯತ್ ಅವರಿಗೆ ಕೇಳಿಕೊಂಡಿತ್ತು. ಅವರು ನಿರಾಕರಿಸಿದ ಬಳಿಕ ನರೇಶ್ ಟಿಕಾಯತ್ ಅವರ ಮಗ ಗೌರವ್ ಟಿಕಾಯತ್ ಅವರನ್ನು ಕೇಳಿಕೊಂಡಿತ್ತು. ಅವರು ಕೂಡಾ ಈ ಪ್ರಸ್ತಾವನೆಯನ್ನು ನಿರಾಕರಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಹಸ್ತಿನಾಪುರ 'ಹೋರಾಟ'ಕ್ಕೆ ಅರ್ಚನಾ ಸಜ್ಜು

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಹಸ್ತಿನಾಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಸಿಕ್ಕ ಬೆನ್ನಿಗೇ ರಾಜಕಾರಣವು ಎಷ್ಟೊಂದು ವಿಷಯುಕ್ತವಾಗಿದೆ ಎಂಬುದು ನಟಿ ಮತ್ತು ರೂಪದರ್ಶಿ ಅರ್ಚನಾ ಗೌತಮ್ ಅವರಿಗೆ ಅರಿವಾಗಿದೆ. ಆದರೆ, 'ಧೃತಿಗೆಡದಿರಲು ನಿರ್ಧರಿಸಿದ್ದೇನೆ' ಎಂದು ಅವರು ಹೇಳುತ್ತಾರೆ. 'ಭಯಪಡಬೇಡಿ, ಗಟ್ಟಿಯಾಗಿ ನಿಲ್ಲಿ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಧೈರ್ಯ ತುಂಬಿದ್ದಾರೆ ಎಂದು ಅವರು ಹೇಳಿದ್ದಾರೆ.

ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿರುವ ಹಸ್ತಿನಾಪುರ ಅತ್ಯಂತ ಸಾಂಪ್ರದಾಯಿಕವಾದ, ಗ್ರಾಮೀಣ ಪ್ರದೇಶವೇ ಹೆಚ್ಚಾಗಿರುವ ಕ್ಷೇತ್ರ. ಈ ಕ್ಷೇತ್ರದ ಅಭ್ಯರ್ಥಿಯಾಗಿರುವ ಅರ್ಚನಾಗೆ ಇದು ಚೊಚ್ಚಲ ಚುನಾವಣೆ. ಅವರು ಮಿಸ್ ಬಿಕಿನಿ ಇಂಡಿಯಾ ಸ್ಪರ್ಧೆ ಗೆದ್ದ ರೂಪದರ್ಶಿ. ಆಗಿನ ಅವರ ಫೋಟೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಲಾಗಿದೆ. ಅವರ ಬಗ್ಗೆ ಅತ್ಯಂತ ಅವಹೇಳನಕಾರಿಯಾದ ಮಾತುಗಳನ್ನು ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಆಡಲಾಗಿದೆ. ಬಿಜೆಪಿ ಮತ್ತು ಅಖಿಲ ಭಾರತ ಹಿಂದೂ ಮಹಾಸಭಾದಂತ ಗುಂಪುಗಳು ಅರ್ಚನಾ ವಿರುದ್ಧವಾಗ್ದಾಳಿ ನಡೆಸಿವೆ. ಈ ಯಾವುದರಿಂದಲೂ ವಿಚಲಿತರಾಗಿಲ್ಲ ಎಂದು ಅರ್ಚನಾ ಹೇಳಿದ್ದಾರೆ.


ಪ್ರಿಯಾಂಕಾ ಗಾಂಧಿ ಜೊತೆ ಅರ್ಚನಾ ಗೌತಮ್–ಟ್ವಿಟರ್ ಚಿತ್ರ

> **ಜೀವನ ಇರಲಿ, ದೇಶ ಇರಲಿ, ಪ್ರತಿಯೊಬ್ಬರಿಗೂ ಬದಲಾವಣೆ ಬೇಕು. ಹಸ್ತಿನಾಪುರದ ಜನರೂ ಬದಲಾವಣೆ ಬಯಸಿದ್ದಾರೆ. ಅವರ ಮುಂದೆ ಒಂದು ತಾಜಾ ಮುಖ ಇದೆ**
> **ಅರ್ಚನಾ ಗೌತಮ್**
> ಹಸ್ತಿನಾಪುರದ ಕಾಂಗ್ರೆಸ್ ಅಭ್ಯರ್ಥಿ

'ನಾನು ಹೆದರಿಲ್ಲ, ಮುಂದಕ್ಕೆ ಸಾಗಲು ಯಾವ ಹಿಂಜರಿಕೆಯೂ ಇಲ್ಲ' ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಅರ್ಚನಾ ಅವರು ಕಳೆದ ನವೆಂಬರ್‌ನಲ್ಲಿ ಕಾಂಗ್ರೆಸ್ ಸೇರಿದ್ದರು. ಅದಕ್ಕೂ ಮೊದಲು ಅಲ್ಪ ಕಾಲ ಸಿನಿಮಾ ರಂಗದಲ್ಲಿದ್ದರು. 'ಗ್ರೇಟ್ ಗ್ರ್ಯಾಂಡ್ ಮಸ್ತಿ', 'ಹಸೀನಾ ಪಾರ್ಕರ್' ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ಆದರೆ, 2018ರಲ್ಲಿ ಮಿಸ್ ಬಿಕಿನಿ ಇಂಡಿಯಾ ಸ್ಪರ್ಧೆ ಸಂದರ್ಭದ ಅವರ ಫೋಟೊಗಳನ್ನು ರಾಜಕೀಯ ಪ್ರತಿಸ್ಪರ್ಧಿಗಳು ಬಳಸಿಕೊಳ್ಳುತ್ತಿದ್ದಾರೆ.

'ಅರ್ಚನಾ, ನೀನು ಇಲ್ಲಿ ಬರುವಾಗ ಅರೆ ಮನಸ್ಸಿನಿಂದ ಬರಬೇಡ. ನಿನ್ನ ಫೋಟೊಗಳು ಮತ್ತು ವಿಡಿಯೊಗಳನ್ನು ಹಿಡಿದುಕೊಂಡು ಜನರು ಟ್ರೋಲ್ ಮಾಡುತ್ತಾರೆ. ಅದಕ್ಕೆಲ್ಲ ಹೆದರುವ ಅಗತ್ಯ ಇಲ್ಲ. ಗಟ್ಟಿಯಾಗಿ ಇರು' ಎಂದು ಪ್ರಿಯಾಂಕಾ ಅವರ ಜತೆಗೆ ಮಾತನಾಡಿದಾಗ ಹೇಳಿದರು ಎಂದು ಅರ್ಚನಾ ಹೇಳುತ್ತಾರೆ.

ಅಂತರರಾಷ್ಟ್ರೀಯ ವೇದಿಕೆಯಲ್ಲಿ ಭಾರತವನ್ನು ತಾನು ಪ್ರತಿನಿಧಿಸಿದ್ದು ಅದರ ಬಗ್ಗೆ ಜನರು ಹೆಮ್ಮೆಪಡಬೇಕು ಎಂಬುದು ಅವರ ಅಭಿಪ್ರಾಯ.

'ನನಗೆ ಎರಡು ವೃತ್ತಿಪರ ಜೀವನಗಳಿವೆ. ಎರಡೂ ಭಿನ್ನ. ಅವುಗಳನ್ನು ಬೆರೆಸಬಾರದು. ಅಂತರರಾಷ್ಟ್ರೀಯ ವೇದಿಕೆಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದೇನೆ. ದೇಶ ಹೆಮ್ಮೆ ಪಡುವಂತೆ ಮಾಡಿದ್ದೇನೆ ಎಂಬುದನ್ನು ನನ್ನ ಬಗ್ಗೆ ಅಶ್ಲೀಲ ಹೇಳಿಕೆ ನೀಡುತ್ತಿರುವವರಿಗೆ ಹೇಳಲು ಬಯಸುತ್ತೇನೆ' ಎಂಬುದು ಅರ್ಚನಾ ಅವರ ನೇರ ನುಡಿ.

ಮಹಾಭಾರತದಲ್ಲಿ ಹಸ್ತಿನಾಪುರವು ಕೌರವರ ರಾಜಧಾನಿ. ಹಾಗಾಗಿ, ಹಸ್ತಿನಾಪುರದ ಮೇಲೆ ದ್ರೌಪದಿಯ ಶಾಪ ಇರುವುದರಿಂದ ಈ ಪ್ರದೇಶ ಅಭಿವೃದ್ಧಿ ಆಗುವುದಿಲ್ಲ ಎಂದು ಜನರು ಭಾವಿಸಿದ್ದಾರೆ. ಈ ಶಾಪ ವಿಮೋಚನೆಗೆ ನಾವು ಬಹಳ ಕೆಲಸ ಮಾಡಬೇಕಿದೆ ಎಂಬುದು ನನಗೆ ತಿಳಿದಿದೆ ಎಂದು ಅರ್ಚನಾ ಹೇಳುತ್ತಾರೆ.

'ನಾನು ಇದೇ ನಗರದಲ್ಲಿ ಹುಟ್ಟಿ ಬೆಳೆದವಳು. ಹಾಗಾಗಿ, ಈ ನಗರದಲ್ಲಿ ಬದಲಾವಣೆ ತರಲು ಸಾಧ್ಯ ಎಂಬ ಆತ್ಮವಿಶ್ವಾಸ ನನ್ನಲ್ಲಿ ಇದೆ. ಚುನಾವಣೆಗಾಗಿ ನಾನು ಮುಂಬೈನಿಂದ ಬಂದವಳು ಅಲ್ಲ. ನನ್ನ ಮನೆ ಇಲ್ಲಿಯೇ ಇದೆ. ನಾನು ಇಲ್ಲಿಯೇ ಕಲಿತವಳು' ಎಂದಿದ್ದಾರೆ ಅರ್ಚನಾ

'ರಾಜಕೀಯವನ್ನು ಬಾಲ್ಯದಿಂದಲೇ ಗಮನಿಸಿದ್ದೇನೆ. ರಾಜಕೀಯದಲ್ಲಿ ಏನಾಗುತ್ತಿದೆ ಎಂಬುದರ ಅರಿವು ನನಗೆ ಸದಾ ಇತ್ತು. ನಾನು ಪತ್ರಿಕೆಗಳನ್ನು ಓದುತ್ತೇನೆ ಮತ್ತು ಸುದ್ದಿ ವಾಹಿನಿಗಳನ್ನು ನೋಡುತ್ತೇನೆ. ಜನರಿಗೆ ಅನ್ಯಾಯ ಆಗುತ್ತಿದೆ ಎಂದಾಗ ನನಗೆ ಭಾರಿ ಸಿಟ್ಟು ಬರುತ್ತದೆ' ಎಂದು ಅರ್ಚನಾ ಅವರು ತಮ್ಮ ರಾಜಕೀಯ ಹಿನ್ನೆಲೆಯನ್ನು ವಿವರಿಸಿದ್ದಾರೆ.

ಪ್ರಿಯಾಂಕಾ ಅವರ 'ನಾನು ಹುಡುಗಿ, ಹೋರಾಡಬಲ್ಲೆ' ಘೋಷಣೆಯೇ ರಾಜಕೀಯಕ್ಕೆ ಬರಲು ತಮಗೆ ಪ್ರೇರಣೆ. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಸ್ಫೂರ್ತಿ ಎಂದು ಅರ್ಚನಾ ಹೇಳಿದ್ದಾರೆ.

ಚುನಾವಣಾ ಕಣದಲ್ಲಿ...

- **ಖಿಚಿಡಿ ಹಂಚಿದ್ದಕ್ಕೆ ದೂರು ದಾಖಲು:** ಉತ್ತರ ಪ್ರದೇಶದ ಪುರ್ಖಾಸಿ ಕ್ಷೇತ್ರದ ಶಾಸಕ ಪ್ರಮೋದ್ ಉತ್ವಲ್ ಮತ್ತು ಅವರ 27 ಬೆಂಬಲಿಗರ ವಿರುದ್ಧ ಚುನಾವಣಾ ನೀತಿ ಸಂಹಿತೆ ಮತ್ತು ಕೋವಿಡ್ ತಡೆ ನಿಯಮಗಳ ಉಲ್ಲಂಘನೆ ಆರೋಪದಲ್ಲಿ ಪ್ರಕರಣ ದಾಖಲಿಸಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಕಾಣಿಸಿದ ವಿಡಿಯೊ ಆಧಾರದಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಮೇಘನಾ ಚಂದನ್ ಎಂಬ ಗ್ರಾಮದಲ್ಲಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಇವರು ಖಿಚಿಡಿ ಹಂಚಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ
- **'ಆಕ್ಷೇಪಾರ್ಹ ಹೇಳಿಕೆ':** ಬಿಜೆಪಿ ಮುಖಂಡ ಮತ್ತು ಉತ್ತರ ಪ್ರದೇಶದ ಥಾರು ಬುಡಕಟ್ಟು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಚಂದ್ರರಾಮ್ ಚೌಧರಿ ಅವರು ಪಕ್ಷದ ಶಾಸಕನ ವಿರುದ್ಧ 'ಆಕ್ಷೇಪಾರ್ಹ' ಹೇಳಿಕೆ ನೀಡಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಗೈಸ್ರಿ ಕ್ಷೇತ್ರದ ಶಾಸಕ ಶೈಲೇಶ್ ಕುಮಾರ್ ಸಿಂಗ್ ಶೈಲು ಅವರಿಗೆ ಚಪ್ಪಲಿಯಲ್ಲಿ ಹೊಡೆಯಬೇಕು ಎಂದು ಜನರು ಹೇಳುತ್ತಿದ್ದಾರೆ ಎಂದು ಚೌಧರಿ ಅವರು ಹೇಳಿದ್ದು ವಿಡಿಯೊದಲ್ಲಿ ಸೆರೆಯಾಗಿದೆ. ಚೌಧರಿ ಅವರು ಥಾರು ಸಮುದಾಯದವರಾಗಿದ್ದು ಗೈಸಿರಿ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.
- **ಗೋವಾದಲ್ಲಿ ಸೇನಾ ಸ್ಪರ್ಧೆ:** ಗೋವಾ ಚುನಾವಣೆಯಲ್ಲಿ 10–15 ಕ್ಷೇತ್ರಗಳಲ್ಲಿ ಶಿವಸೇನಾ ಸ್ಪರ್ಧಿಸಲಿದೆ ಎಂದು ಪಕ್ಷದ ಮುಖಂಡ ಸಂಜಯ ರಾವುತ್ ಭಾನುವಾರ ಹೇಳಿದ್ದಾರೆ. ಗೋವಾದಲ್ಲಿ ಮಹಾರಾಷ್ಟ್ರ ಮೂಲದ ಮತದಾರರು ಗಣನೀಯ ಸಂಖ್ಯೆಯಲ್ಲಿ ಇದ್ದಾರೆ. ಹಾಗಾಗಿ, ಹಿಂದಿನಿಂದಲೂ ಸೇನಾ ಇಲ್ಲಿ ಸ್ಪರ್ಧಿಸುತ್ತಿದೆ. ಆದರೆ, ಪಕ್ಷಕ್ಕೆ ಯಶಸ್ಸು ಮಾತ್ರ ಸಿಕ್ಕಿಲ್ಲ. ಮಹಾರಾಷ್ಟ್ರದಲ್ಲಿ ಸರ್ಕಾರ ನಡೆಸುತ್ತಿರುವ ಮಹಾವಿಕಾಸ ಅಘಾಡಿಯ ಮಿತ್ರ ಪಕ್ಷಗಳಾದ ಎನ್‌ಸಿಪಿ ಮತ್ತು ಕಾಂಗ್ರೆಸ್ ಜತೆಗೆ ಮೈತ್ರಿ ಮಾತುಕತೆಯಲ್ಲಿ ಸೇನಾ ತೊಡಗಿದೆ. ಮೈತ್ರಿ ಏರ್ಪಡುವ ಸಾಧ್ಯತೆ ಕಡಿಮೆ ಎನ್ನಲಾಗಿದೆ

ಬಿಜೆಪಿ-ನಿಶಾದ್ ಪಕ್ಷದ ಮೈತ್ರಿ ಅಂತಿಮ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ನಿಶಾದ್ ಪಕ್ಷವು ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದೆ. ಪಕ್ಷವು 15 ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯಲಿದೆ ಎಂದು ಪಕ್ಷದ ಅಧ್ಯಕ್ಷ ಸಂಜಯ್ ನಿಶಾದ್ ಹೇಳಿದ್ದಾರೆ.

'ಮೈತ್ರಿ ಮತ್ತು ಕ್ಷೇತ್ರ ಹಂಚಿಕೆ ಸಂಬಂಧ ಈಗಾಗಲೇ ಮಾತುಕತೆ ನಡೆದಿದೆ. 403ರಲ್ಲಿ ನಾವು 15 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದೇವೆ. ಆ 15 ಕ್ಷೇತ್ರಗಳು ಯಾವುವು ಎಂಬುದನ್ನು ಅಂತಿಮಗೊಳಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜತೆ ಸಭೆ ಸೋಮವಾರ ಸಭೆ ನಡೆಯಲಿದೆ' ಎಂದು ಸಂಜಯ್ ನಿಶಾದ್ ಹೇಳಿದ್ದಾರೆ.

'ಆದರೆ ನಮ್ಮ ಪಕ್ಷಕ್ಕೆ ದೊರೆಯಲಿರುವ ಕ್ಷೇತ್ರಗಳಲ್ಲಿ ಬಹುತೇಕವು ಈಗಾಗಲೇ ಅಂತಿಮವಾಗಿವೆ. ರಾಜ್ಯದ ಪೂರ್ವಾಂಚಲದಲ್ಲಿ ಹಲವು ಕ್ಷೇತ್ರಗಳನ್ನು ನಮಗೆ ಬಿಟ್ಟುಕೊಡಲಾಗಿದೆ. ಪಶ್ಚಿಮಾಂಚಲದಲ್ಲಿ ಕೆಲವು ಕ್ಷೇತ್ರಗಳನ್ನು ಬಿಟ್ಟುಕೊಡಲಾಗಿದೆ. ಆದರೆ ಕೆಲವು ಕ್ಷೇತ್ರಗಳಲ್ಲಿನ ರಾಜಕೀಯ ಸ್ಥಿತಿ ಭಿನ್ನವಾಗಿದೆ. ಹೀಗಾಗಿ ಕೆಲವು ಕ್ಷೇತ್ರಗಳನ್ನು ಬದಲಿಸಬೇಕಿದೆ. ಯಾವ ಕ್ಷೇತ್ರ ಎನ್ನುವುದು ನಮಗೆ ಮುಖ್ಯವಲ್ಲ, ಗೆಲುವಷ್ಟೇ ಮುಖ್ಯ' ಎಂದು ಅವರು ಹೇಳಿದ್ದಾರೆ.


> **ಮುಖ್ಯಾಂಶಗಳು**
> - 403 ಕ್ಷೇತ್ರಗಳಲ್ಲಿ ಪಕ್ಷಕ್ಕೆ 15ರಲ್ಲಿ ಸ್ಪರ್ಧೆಗೆ ಅವಕಾಶ
> - ಕ್ಷೇತ್ರಗಳು ಇನ್ನಷ್ಟೇ ಅಂತಿಮವಾಗಬೇಕಿವೆ
> - ಗೃಹ ಸಚಿವ ಅಮಿತ್ ಶಾ ಜತೆಗೆ ಸೋಮವಾರ ಸಭೆ


ಅಪರಾಧ ಹಿನ್ನೆಲೆಯ ಕೆಲವು ಅಭ್ಯರ್ಥಿಗಳನ್ನು ಬಿಜೆಪಿಯು ನಿಶಾದ್ ಪಕ್ಷದ ಮೂಲಕ ಕಣಕ್ಕೆ ಇಳಿಸುತ್ತಿದೆ ಎಂಬ ಆರೋಪವಿದೆ ಎಂದು ಪತ್ರಕರ್ತರು ಕೇಳಿದ್ದನ್ನು, ಸಂಜಯ್ ಅಲ್ಲಗೆಳೆದಿದ್ದಾರೆ. 'ನಮ್ಮ ಪಕ್ಷದ ಕಾರ್ಯಕರ್ತರು ಯಾರನ್ನು ಆಯ್ಕೆ ಮಾಡುತ್ತಾರೋ ಅವರನ್ನಷ್ಟೇ ಅಭ್ಯರ್ಥಿಯನ್ನಾಗಿ ಮಾಡಲಾಗುತ್ತದೆ. ಅದಕ್ಕೂ ಮುನ್ನ ಅಂತಹವರ ಹಿನ್ನೆಲೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗುತ್ತದೆ' ಎಂದು ಉತ್ತರಿಸಿದ್ದಾರೆ.



ಮಾಜಿ ಐಪಿಎಸ್ ಅಧಿಕಾರಿ ಅಸೀಮ್ ಅರುಣ್ ಅವರು (ಮಧ್ಯ) ಲಖನೌದಲ್ಲಿ ಭಾನುವಾರ ಬಿಜೆಪಿ ಸೇರಿದರು–ಪಿಟಿಐ ಚಿತ್ರ

'ರಾಜ್ಯದ 70 ಜಿಲ್ಲೆಗಳಲ್ಲಿ ನಮ್ಮ ಡಿಜಿಟಲ್ ಕಚೇರಿ ಇದೆ. ಈ ಕಚೇರಿಗಳ ಮೂಲಕ ನಮ್ಮ ಕಾರ್ಯಕರ್ತರು ಪ್ರಚಾರ ನಡೆಸಲಿದ್ದಾರೆ. ನಾವು ಟ್ವಿಟರ್, ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂನಲ್ಲಿ ಸಕ್ರಿಯವಾಗಿದ್ದೇವೆ. ವರ್ಚುವಲ್ ಪ್ರಚಾರಕ್ಕೆ ಇವೆಲ್ಲವನ್ನೂ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತೇವೆ' ಎಂದು ಅವರು ಹೇಳಿದ್ದಾರೆ.

ನುಡಿ-ಕಿಡಿ


ಬಿಜೆಪಿಯ ದ್ವೇಷ ರಾಜಕಾರಣವು ದೇಶಕ್ಕೆ ಅತ್ಯಂತ ಹಾನಿಕರ ಎಂದು ನಾನು ಭಾವಿಸಿದ್ದೇನೆ. ಈ ದ್ವೇಷವೇ ನಿರುದ್ಯೋಗಕ್ಕೂ ಕಾರಣ. ಸಮಾಜದಲ್ಲಿ ಶಾಂತಿ ಇಲ್ಲದೇ ಇದ್ದರೆ ದೇಶೀಯ ಮತ್ತು ವಿದೇಶಿ ಉದ್ಯಮಗಳು ನಡೆಯುವುದು ಸಾಧ್ಯವಿಲ್ಲ. ನಿಮ್ಮ ಸುತ್ತಲೂ ಇರುವ ದ್ವೇಷವನ್ನು ಸಹೋದರತ್ವದಿಂದ ಸೋಲಿಸಬಹುದು. ನೀವು ನನ್ನೊಂದಿಗೆ ಇದ್ದೀರಾ?
ರಾಹುಲ್ ಗಾಂಧಿ, ಕಾಂಗ್ರೆಸ್ ಸಂಸದ


ಎಸ್‌ಪಿಯ ನಂ. ಒಂದು ಅಭ್ಯರ್ಥಿ ನಹೀದ್ ಹಸನ್ ಅವರು ಜೈಲಿನಲ್ಲಿದ್ದಾರೆ. ಎರಡನೇ ಅಭ್ಯರ್ಥಿ ಅಬ್ದುಲ್ಲಾ ಆಜಂ ಜಾಮೀನಿನಲ್ಲಿದ್ದಾರೆ. ಎಸ್‌ಪಿ ಅಭ್ಯರ್ಥಿಗಳನ್ನು ನೋಡಿದರೆ ಒಬ್ಬರು ಜೈಲಿನಲ್ಲಿ ಇನ್ನೊಬ್ಬರು ಬೈಲಿನಲ್ಲಿ ಇದ್ದಾರೆ. ಜೈಲ್ ಮತ್ತು ಬೈಲ್ ಸಮಾಜವಾದಿ ಪಕ್ಷದ ನಿಜವಾದ ಆಟ
ಅನುರಾಗ್ ಠಾಕೂರ್, ಕೇಂದ್ರ ಸಚಿವ


ದೆಹಲಿ ಮುಖ್ಯಮಂತ್ರಿಯು ಗೋವಾದಲ್ಲಿ ಮನೆ ಮನೆ ಪ್ರಚಾರ ನಡೆಸುತ್ತಿದ್ದಾರೆ. ದೆಹಲಿಯಲ್ಲಿ ಕೊರೊನಾ ಹರಡುತ್ತಿದೆ. ಅವರು ಇಲ್ಲಿ ಮನೆ ಮನೆಗೆ ಹೋಗುತ್ತಿದ್ದಾರೆ. ಪಕ್ಷದ ನೆಲೆ ವಿಸ್ತರಿಸುವುದು ಒಳ್ಳೆಯದೇ. ಆದರೆ, ಗೋವಾದಲ್ಲಿ ಏನಾಗುತ್ತಿದೆ ನೋಡೋಣ. ಅವರು ಪ್ರಚಾರ ಮಾಡುತ್ತಿದ್ದಾಗ ನಾನು ರಸ್ತೆಯಲ್ಲಿ ಇದ್ದೆ
ಸಂಜಯ ರಾವುತ್, ಶಿವಸೇನಾ ಸಂಸದ


ಬಿಜೆಪಿ ತೊರೆಯುತ್ತಿರುವ ಒಬಿಸಿ ನಾಯಕರಿಗೆ ಪಕ್ಷದ ಪ್ರಚಾರದಲ್ಲಿ ಮಹತ್ವದ ಸ್ಥಾನ ನೀಡಲಾಗಿತ್ತು. ಈಗ ಬಹಿರಂಗ ರ್‍ಯಾಲಿಗಳನ್ನು ನಿಷೇಧಿಸಿರುವ ಕಾರಣ ಅವರೆಲ್ಲಾ ಪಕ್ಷ ಬಿಟ್ಟು ಬಿಜೆಪಿ ಸೇರುತ್ತಿದ್ದಾರೆ. ಬಿಜೆಪಿ ಎಲ್ಲಾ ಜಾತಿಗಳನ್ನು ಸಮಾನವಾಗಿ ಕಾಣುತ್ತದೆ. ಮೊದಲ ಪಟ್ಟಿಯಲ್ಲಿ ಒಬಿಸಿ ನಾಯಕರಿಗೇ ಹೆಚ್ಚಿನ ಟಿಕೆಟ್ ನೀಡಲಾಗಿದೆ
ಸಂಜಯ್ ನಿಶಾದ್, ನಿಶಾದ್ ಪಕ್ಷದ ಅಧ್ಯಕ್ಷ

ಅಫ್ಗಾನಿಸ್ತಾನ: 2 ತಿಂಗಳಲ್ಲಿ ಬಾಲಕಿಯರು ಮತ್ತೆ ಶಾಲೆಗೆ?

ಕಾಬೂಲ್ (ಎಪಿ): ಅಫ್ಗಾನಿಸ್ತಾನದಲ್ಲಿ ಮಾರ್ಚ್ 21ರಂದು ಹೊಸ ವರ್ಷ ಆಚರಿಸಲಾಗುತ್ತಿದ್ದು, ಬಳಿಕ ದೇಶದಲ್ಲಿ ಮಹಿಳಾ ಶಿಕ್ಷಣಕ್ಕೆ ಒಂದಿಷ್ಟು ಉತ್ತೇಜನ ಸಿಗುವ ಸುಳಿವು ಲಭಿಸಿದೆ.

ತಾಲಿಬಾನ್‌ನ ಸಂಸ್ಕೃತಿ ಮತ್ತು ಮಾಹಿತಿ ಇಲಾಖೆಯ ಉಪಸಚಿವ ಜಬಿಯುಲ್ಲಾ ಮುಜಾಹಿದ್ ಅವರು ಎಪಿ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಈ ವಿಷಯ ತಿಳಿಸಿದ್ದು, ಎರಡು ತಿಂಗಳ ಬಳಿಕ ದೇಶದಾದ್ಯಂತ ಬಾಲಕಿಯರಿಗಾಗಿ ಶಾಲೆಗಳು ತೆರೆಯುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಕಳೆದ ವರ್ಷ ಆಗಸ್ಟ್ ಮಧ್ಯಭಾಗದಲ್ಲಿ ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಕ್ಕೆ ಪಡೆದುಕೊಂಡ ಬಳಿಕ ದೇಶದ ಹೆಚ್ಚಿನ ಕಡೆಗಳಲ್ಲಿ 7ನೇ ತರಗತಿ ನಂತರ ಬಾಲಕಿಯರಿಗೆ ಶಿಕ್ಷಣ ಬಂದ್ ಆಗಿದೆ. 20 ವರ್ಷಗಳ ಹಿಂದೆ ಸಹ ತಾಲಿಬಾನ್ ಆಡಳಿತದಲ್ಲಿ ಇಂತಹದೇ ಬೆಳವಣಿಗೆ ಕಂಡಿದ್ದ ಜಗತ್ತು ಈಗಿನ ಬೆಳವಣಿಗೆಯ ಬಗ್ಗೆ ಅಚ್ಚರಿ ಪಟ್ಟಿರಲಿಲ್ಲ. ಶಿಕ್ಷಣ, ಉದ್ಯೋಗ ಮತ್ತು ಸಾರ್ವಜನಿಕ ಜೀವನದಲ್ಲಿ ಮಹಿಳೆಯರಿಗೆ ಸ್ಥಾನವಿಲ್ಲ ಎಂಬುದು ತಾಲಿಬಾನ್‌ನ ನಿಲುವಾಗಿದೆ.


ಸಾಂದರ್ಭಿಕ ಚಿತ್ರ

'ಸದ್ಯ ಬಾಲಕಿಯರಿಗೆ ಸಹ ಶಿಕ್ಷಣ ನೀಡುವುದು ಒಂದು ಸಾಮರ್ಥ್ಯದ ಪ್ರಶ್ನೆಯಾಗುತ್ತದೆ. ಬಾಲಕಿಯರಿಗೆ ಪ್ರತ್ಯೇಕ ತರಗತಿ ಕೊಠಡಿಗಳನ್ನು, ಹಾಸ್ಟೆಲ್‌ಗಳನ್ನು ವ್ಯವಸ್ಥೆ ಮಾಡಬೇಕು. ಜನದಟ್ಟಣೆಯ ಪ್ರದೇಶಗಳಲ್ಲಿ ಪ್ರತ್ಯೇಕ ಶಾಲಾ ಕಟ್ಟಡಗಳನ್ನೇ ಒದಗಿಸಬೇಕು. ನಾವು ಹೆಣ್ಮಕ್ಕಳ ಶಿಕ್ಷಣ ವಿರೋಧಿಗಳಲ್ಲ, ಬಾಲಕಿಯರು ಶಾಲೆಗೆ ತೆರಳುವ ನಿಟ್ಟಿನಲ್ಲಿ ಇಂತಹ ವ್ಯವಸ್ಥೆಗಳನ್ನು ಮಾಡುವ ಹಂತದಲ್ಲಿದ್ದೇವೆ' ಎಂದು ಮುಜಾಹಿದ್ ಹೇಳಿದರು.

ಸದ್ಯ ಹೇಗಿದೆ ಸ್ಥಿತಿ: ಅಫ್ಗಾನಿಸ್ತಾನದಲ್ಲಿ ಒಟ್ಟು 34 ಪ್ರಾಂತ್ಯಗಳಿದ್ದು, 10 ಪ್ರಾಂತ್ಯಗಳನ್ನು ಹೊರತುಪಡಿಸಿ ಉಳಿದೆಡೆ ಬಾಲಕಿಯರು 7ನೇ ತರಗತಿಯಿಂದ ಮುಂದಕ್ಕೆ ಶಾಲೆಗೆ ಹೋಗಬಾರದು ಎಂಬ ನಿಮಯ ಇದೆ. ರಾಜಧಾನಿ ಕಾಬೂಲ್‌ನಲ್ಲಿ ತಾಲಿಬಾನ್ ಆಡಳಿತ ಮತ್ತೆ ಆರಂಭವಾದ ಮೇಲೂ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಪ್ರೌಢಶಾಲೆಗಳಲ್ಲಿ ಮಹಿಳಾ ಶಿಕ್ಷಣ ಮುಂದುವರಿದಿದೆ. ಆದರೆ ಇಲ್ಲೂ ಸಹ ಬಾಲಕಿಯರು ಬಾಲಕರ ಜತೆಯಲ್ಲಿ ಸಹ ಶಿಕ್ಷಣ ಪಡೆಯುವುದಕ್ಕೆ ನಿರ್ಬಂಧ ವಿಧಿಸಲಾಗಿದ್ದು, ಕೊಠಡಿಗಳಲ್ಲಿ ಪ್ರತ್ಯೇಕವಾಗಿರಿಸಿಯೇ ಬೋಧನೆ ನಡೆಸಲಾಗುತ್ತಿದೆ.

ತೆರಿಗೆ ಸಂಗ್ರಹ ಏರಿಕೆ: 'ದೇಶದಲ್ಲಿ ಈಗ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರರ ಪೈಕಿ ಶೇ 80ರಷ್ಟು ಮಂದಿ ಈ ಹಿಂದಿನ ಸರ್ಕಾರಗಳ ಅವಧಿಯಲ್ಲಿ ನೇಮಕಗೊಂಡವರೇ ಆಗಿದ್ದಾರೆ. ದೇಶದ ಗಡಿ ಭಾಗದಲ್ಲಿ ಉತ್ತಮ ರೀತಿಯಿಂದ ತೆರಿಗೆ ಸಂಗ್ರಹ ನಡೆಯುತ್ತಿದ್ದು, ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಆಗಿದ್ದಕ್ಕಿಂತ ಅಧಿಕ ತೆರಿಗೆ ಸಂಗ್ರಹ ಆಗಿದೆ.

ಸುಲ್ಲಿ ಡೀಲ್ಸ್ ಸೃಷ್ಟಿಕರ್ತನಿಗೆ ಜಾಮೀನು ನಿರಾಕರಣೆ

ನವದೆಹಲಿ (ಪಿಟಿಐ): ವಿವಾದಾತ್ಮಕ ಸುಲ್ಲಿ ಡೀಲ್ಸ್ ಆ್ಯಪ್ ಅನ್ನು ಸೃಷ್ಟಿಸಿದ ಆರೋಪದ ಮೇರೆಗೆ ಬಂಧಿತನಾಗಿರುವ ಓಂಕಾರೇಶ್ವರ ಠಾಕೂರ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ದೆಹಲಿಯ ನ್ಯಾಯಾಲಯವೊಂದು ತಿರಸ್ಕರಿಸಿದೆ. ಈ ಹಂತದಲ್ಲಿ ಜಾಮೀನು ನೀಡಿದರೆ ನಿಷ್ಪಕ್ಷಪಾತ ತನಿಖೆಯ ಹಾದಿ ತಪ್ಪಬಹುದು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ನೂರಕ್ಕೂ ಅಧಿಕ ಖ್ಯಾತ ಮುಸ್ಲಿಂ ಮಹಿಳೆಯರ ಕುರಿತು ಮಾಹಿತಿ ನೀಡಿ ಬಳಕೆದಾರರು ಅವರ ಹರಾಜಿನಲ್ಲಿ ಪಾಲ್ಗೊಳ್ಳುವಂತೆ ಮಾಡುವ ಈ ಸುಲ್ಲಿ ಡೀಲ್ಸ್ ಆ್ಯಪ್ ಬಗ್ಗೆ ಭಾರಿ ಆಕ್ರೋಶ ವ್ಯಕ್ತವಾಗಿತ್ತು. ಬುಲ್ಲಿ ಬಾಯಿ ಆ್ಯಪ್ ಪ್ರಕರಣದ ರೂವಾರಿ ನೀರಜ್ ಬಿಷ್ಣೋಯ್ ಎಂಬಾತ ತನಿಖೆಯ ವೇಳೆ ನೀಡಿದ ಮಾಹಿತಿ ಮೇರೆಗೆ ದೆಹಲಿಯ ವಿಶೇಷ ಘಟಕದ ಪೊಲೀಸರು ಇಂದೋರ್‌ನಲ್ಲಿ ಕಳೆದ ವಾರ ಆರೋಪಿ ಓಂಕಾರೇಶ್ವರ ಠಾಕೂರ್‌ನನ್ನು ಬಂಧಿಸಿದ್ದರು.

ಜಾಮೀನು ಕುರಿತ ವಾದ, ಪ್ರತಿವಾದವನ್ನು ಆಲಿಸಿದ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ವಸುಂಧರಾ ಚೌಂಕರ್ ಅವರು ಆರೋಪಿಗೆ ಜಾಮೀನು ನಿರಾಕರಿಸಿ ಆದೇಶ ನೀಡಿದರು.

ಮಿಜೋರಾಂ: ಮಹಿಳಾ ಮತದಾರರೇ ಅಧಿಕ

ಐಜ್ವಾಲ್ (ಪಿಟಿಐ): ಮಿಜೋರಾಂನಲ್ಲಿ ಪುರುಷ ಮತದಾರರಿಗೆ ಹೋಲಿಸಿದರೆ, ಮಹಿಳಾ ಮತದಾರರ ಸಂಖ್ಯೆ 23,492 ಹೆಚ್ಚು. ಚುನಾವಣಾ ಆಯೋಗದ ಮತದಾರರ ಪಟ್ಟಿಯ ಪ್ರಕಾರ, ರಾಜ್ಯದಲ್ಲಿ ಒಟ್ಟು 8,33,426 ಮತದಾರರಿದ್ದಾರೆ. ಈ ಪೈಕಿ 4,28,459 ಮಹಿಳೆಯರು, 4,04,967 ಪುರುಷ ಮತದಾರರಿದ್ದಾರೆ. ತೃತೀಯ ಲಿಂಗಿ ಮತದಾರರು ಇಲ್ಲಿಲ್ಲ.

ಕಳೆದ ಜನವರಿಗೆ ಹೋಲಿಸಿದರೆ, 17,288 ಮತದಾರರು ಹೆಚ್ಚಳವಾಗಿದ್ದಾರೆ. ಐಜ್ವಾಲ್ ಜಿಲ್ಲೆಯ 12 ವಿಧಾನಸಭಾ ಕ್ಷೇತ್ರಗಳಲ್ಲಿ ಹೆಚ್ಚು (2,76,155) ಮತದಾರರಿದ್ದಾರೆ.


ಬಿಹಾರದಲ್ಲಿ ನಕಲಿ ಮದ್ಯ ದುರಂತ: ಸಾವಿನ ಸಂಖ್ಯೆ 11ಕ್ಕೆ ಏರಿಕೆ

ನಳಂದ (ಬಿಹಾರ): ಜಿಲ್ಲೆಯಲ್ಲಿ ನಕಲಿ ಮದ್ಯ ಸೇವನೆಯಿಂದ ಮತ್ತೆ ಮೂವರು ಮೃತಪಟ್ಟಿದ್ದು, ಸಾವಿನ ಸಂಖ್ಯೆ 11ಕ್ಕೆ ಏರಿಕೆಯಾಗಿದೆ. ಶನಿವಾರ ಎಂಟು ಮಂದಿ ಸಾವಿಗೀಡಾಗಿದ್ದರು. ಪ್ರಕರಣ ಸಂಬಂಧ ಛೋಟಿ ಪಹರಿ ಪ್ರದೇಶದಲ್ಲಿ ರಕ್ಷಣಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ದುರಂತವನ್ನು ಅಂತ್ಯ ಗೊಳಿಸಲು ಜಿಲ್ಲಾ ಪೊಲೀಸರು ಛೋಟಿ ಪಹರಿ ಪ್ರದೇಶದಲ್ಲಿ ಕಾರ್ಯಾಚರಣೆ ಆರಂಭಿಸಿದ್ದಾರೆ. ತನಿಖೆಯನ್ನು ಉತ್ತಮವಾಗಿ ನಡೆಸುವ ಉದ್ದೇಶದಿಂದ ಪ್ರದೇಶವನ್ನು ನಾಲ್ಕು ಭಾಗವಾಗಿ ವಿಭಾಗಿಸಿ ಕಾರ್ಯಾಚರಣೆ ಕೈಗೊಂಡಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

ಹನ್ನೊಂದು ಮಂದಿ ನಕಲಿ ಮದ್ಯ ಸೇವನೆಯಿಂದ ಮೃತಪಟ್ಟಿರುವುದು ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿದೆ ಎಂದು ಜಿಲ್ಲಾಧಿಕಾರಿ ಶಶಾಂಕ್ ಶುಭಂಕರ್ ತಿಳಿಸಿದ್ದಾರೆ.

ನಳಂದ ಜಿಲ್ಲೆಯಲ್ಲಿ ಇದುವರೆಗೆ 184 ಲೀಟರ್ ದೇಶೀಯ ಮದ್ಯ, 225 ಲೀಟರ್ ವಿದೇಶಿ ಮದ್ಯ ವಶಪಡಿಸಿಕೊಳ್ಳಲಾಗಿದ್ದು ಮತ್ತು 34 ಮಂದಿಯನ್ನು ಬಂಧಿಸಲಾಗಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಟೆಕ್ಸಾಸ್ ಒತ್ತೆ ಪ್ರಕರಣ ಅಂತ್ಯ


ಟೆಕ್ಸಾಸ್‌ನ ಕಾಲಿವಿಲ್ಲೆಯಲ್ಲಿರುವ ಯಹೂದಿ ಮಂದಿರದಿಂದ ಅಧಿಕಾರಿಗಳು ಶನಿವಾರ ಒತ್ತೆಯಾಳನ್ನು ಪಾರು ಮಾಡಿದರು– ಎಪಿ ಚಿತ್ರ

ಕಾಲಿವಿಲ್ಲೆ, ಅಮೆರಿಕ (ಎಪಿ): ಟೆಕ್ಸಾಸ್‌ನ ಯಹೂದಿ ಮಂದಿರದಲ್ಲಿ ನಡೆದ ಒತ್ತೆಯಾಳು ಪ್ರಕರಣವು ಭಾನುವಾರ ಸುಖಾಂತ್ಯ ಕಂಡಿದ್ದು, ಒತ್ತೆಯಾಳುಗಳಾಗಿದ್ದ ನಾಲ್ವರು ಸುರಕ್ಷಿತವಾಗಿದ್ದಾರೆ ಹಾಗೂ ಒತ್ತೆ ಇಟ್ಟಿದ್ದ ದುಷ್ಕರ್ಮಿಯನ್ನು ಹತ್ಯೆ ಮಾಡಲಾಗಿದೆ.

ಅಫ್ಗಾನಿಸ್ತಾನದಲ್ಲಿ ಅಮೆರಿಕ ಸೇನಾಧಿಕಾರಿಗಳನ್ನು ಕೊಲ್ಲಲು ಯತ್ನಿಸಿದ ಪಾಕಿಸ್ತಾನದ ನರ ವಿಜ್ಞಾನಿಯನ್ನು ಬಿಡುಗಡೆ ಮಾಡುವಂತೆ ಬೇಡಿಕೆ ಇಟ್ಟಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋಮವಾರ, ಜನವರಿ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 17 | ಪುಟ 22

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಪರೀಕ್ಷೆಯ ಯಶಸ್ಸಿಗೆ ಓದಿನ ಪುನರಾವರ್ತನೆ ಹೇಗಿರಬೇಕು? ಪೂರ್ಣ ವಿವರ ಇಲ್ಲಿದೆ



ಆಳ-ಅಗಲ ಯಾರಿಗೂ ಸಲೀಸಲ್ಲ ಮಣಿಪುರ ಅಧಿಕಾರ

ಕೋವಿಡ್ ಪ್ರಸರಣ ಸೂಚ್ಯಂಕ 2.2ಕ್ಕೆ ಇಳಿಕೆ 17

2ನೇ ಡೋಸ್‌ನಲ್ಲಿ ಹಿಂದೆ ಬಿದ್ದ 18 ಜಿಲ್ಲೆಗಳು 16

ಲಸಿಕೆ ಕಾರ್ಯಕ್ರಮಕ್ಕೆ ವರ್ಷ

156 ಕೋಟಿಗೂ ಅಧಿಕ ಡೋಸ್ ನೀಡಿಕೆ 16

ಇಳಿಕೆಯತ್ತ ಕೊರೊನಾ?


ಕೋವಿಡ್ ಮೂರನೇ ಅಲೆ ಗರಿಷ್ಠ ಮಟ್ಟಕ್ಕೆ: ಸೋಂಕು ತಜ್ಞರ ಅಂದಾಜು

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಮತ್ತು ಮುಂಬೈ ಮಹಾನಗರಗಳಲ್ಲಿ ಕೋವಿಡ್ ಹರಡುವಿಕೆ ಪ್ರಮಾಣವು ತಗ್ಗಿದೆ ಎಂದು ತಜ್ಞರು ಭಾನುವಾರ ಹೇಳಿದ್ದಾರೆ. ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ ಸೋಂಕು ಎರಡೂ ಮಹಾನಗರಗಳಲ್ಲಿ ಗರಿಷ್ಠ ಮಟ್ಟ ತಲುಪಿದೆ ಎಂಬುದರ ಸೂಚನೆ ಇದು ಆಗಿರಬಹುದು. ಅದಲ್ಲದೆ, ಎರಡೂ ನಗರಗಳಲ್ಲಿ ಕೋವಿಡ್ ದೃಢಪಡುವಿಕೆ ದರ ಸ್ಥಿರವಾಗಿದೆ. ಇದು ಕೋವಿಡ್ ನಿಯಂತ್ರಣಕ್ಕೆ ಬರಬಹುದು ಎಂಬ ಆಶಾಭಾವಕ್ಕೆ ಕಾರಣವಾಗಿದೆ.

ಆದರೆ, ಕೋವಿಡ್ ಪರೀಕ್ಷೆಗಳನ್ನು ಕಡಿಮೆ ಮಾಡುವ ಕಾರ್ಯತಂತ್ರವನ್ನು ಸರ್ಕಾರ ಅನುಸರಿಸುತ್ತಿದೆ. ಹಾಗಾಗಿ, ಸೋಂಕು ಹರಡುವಿಕೆ ಪ್ರವೃತ್ತಿ ಯಾವ ರೀತಿಯಲ್ಲಿ ಇರಲಿದೆ ಎಂಬುದು ಸ್ಪಷ್ಟವಾಗಲು ಇನ್ನೂ ಸ್ವಲ್ಪ ಸಮಯ ಬೇಕು ಎಂದು ತಜ್ಞರು ಹೇಳಿದ್ದಾರೆ.

ಮುಂಬೈಯಲ್ಲಿ ಇದೇ 12ರಂದು ಅತಿ ಹೆಚ್ಚು ಅಂದರೆ, 16,420 ಪ್ರಕರಣಗಳು ದೃಢಪಟ್ಟಿದ್ದವು. ಸೋಂಕು ದೃಢಪಡುವಿಕೆ ಪ್ರಮಾಣವು ಶೇ 24.38ರಷ್ಟಿತ್ತು. ನಂತರದ ನಾಲ್ಕು ದಿನಗಳಲ್ಲಿ ಪ್ರಕರಣಗಳ ಸಂಖ್ಯೆಯಲ್ಲಿ ಸತತ ಕುಸಿತ ಆಗಿದೆ. 7,895 ಪ್ರಕರಣಗಳು ಮಾತ್ರ ಭಾನುವಾರ ವರದಿಯಾಗಿವೆ. ದೆಹಲಿಯಲ್ಲಿ ಇದೇ 13ರಂದು ಅತಿ ಹೆಚ್ಚು ಅಂದರೆ, 28,867 ಪ್ರಕರಣಗಳು ಕಂಡು ಬಂದಿದ್ದವು. ನಂತರದ ದಿನಗಳಲ್ಲಿ ಅಲ್ಲಿಯೂ ಸತತ ಇಳಿಕೆ ದಾಖಲಾಗಿದೆ.



‘ಪರೀಕ್ಷೆಗಳ ಸಂಖ್ಯೆಯಲ್ಲಿ ಇಳಿಕೆ ಆಗಿದೆ. ಆದರೆ, ಸೋಂಕು ದೃಢಪಡುವಿಕೆ ಪ್ರಮಾಣವೂ ಇಳಿಕೆಯಾಗಿದೆ. ಅಂದರೆ, ಸಾಂಕ್ರಾಮಿಕದ ಹೊಸ ಅಲೆಯ ಗರಿಷ್ಠಮಟ್ಟ ತಲುಪಿದ್ದೇವೆ ಎಂಬುದರ ಸೂಚನೆ ಅದು. ಮುಂದಿನ ವಾರಗಳಲ್ಲಿ ನಿಜವಾದ ಇಳಿಕೆ ಕಾಣಿಸಿಕೊಳ್ಳಬಹುದು’ ಎಂದು ಇನ್‌ಸ್ಟಿಟ್ಯೂಟ್ ಆಫ್ ಜಿನೋಮಿಕ್ಸ್ ಆ್ಯಂಡ್ ಇಂಟಗ್ರೇಟಿವ್ ಬಯಾಲಜಿಯ ನಿರ್ದೇಶಕ ಅನುರಾಗ್ ಅಗರ್‌ವಾಲ್ ಹೇಳಿದ್ದಾರೆ. ಇದು ಭಾರತದ ಸಾರ್ಸ್ ಕೋವ್–2 ಜಿನೋಮ್ ಕನ್‌ಸೋರ್ಸಿಯಂನ ಸದಸ್ಯ ಸಂಸ್ಥೆಯಾಗಿದೆ.

ಆದರೆ, ಕೋವಿಡ್ ಪರೀಕ್ಷೆ ಇಳಿಕೆ ಆಗಿರುವುದೇ ಪ್ರಕರಣಗಳ ಇಳಿಕೆಗೆ ಕಾರಣ. ಹಾಗಾಗಿ ಎಚ್ಚರಿಕೆ ಅಗತ್ಯ ಎಂದು ಹಲವು ತಜ್ಞರು ಪ್ರತಿಪಾದಿಸಿದ್ದಾರೆ.

‘ಈಗ ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿರುವುದು ಕಡಿಮೆ ಸಂಖ್ಯೆಯ ಪರೀಕ್ಷೆಗಳನ್ನು ನಡೆಸುತ್ತಿರುವುದಕ್ಕೋ ಅಥವಾ ಈ ಅಲೆಯು ಗರಿಷ್ಠಮಟ್ಟ ತಲುಪಿ ಇಳಿಕೆಯಾಗುತ್ತಿರುವುದಕ್ಕೋ ಎಂಬುದನ್ನು ಈಗಲೇ ಹೇಳಲು ಸಾಧ್ಯವಿಲ್ಲ’ ಎಂದು ಅಶೋಕ ವಿಶ್ವವಿದ್ಯಾಲಯ ಮತ್ತು ಚೆನ್ನೈನ ಐಎಂಎಸ್‌ನ ಪ್ರಾಧ್ಯಾಪಕ ಗೌತಮ್ ಮೆನನ್ ಹೇಳಿದ್ದಾರೆ.

‘ದೇಶದ ದೊಡ್ಡ ನಗರಗಳಲ್ಲಿ ಓಮೈಕ್ರಾನ್ ಸೋಂಕು ಜನವರಿ 20ರ ವೇಳೆಗೆ ಹೆಚ್ಚಾಗಲಿದೆ ಎಂದು ನಮ್ಮ ಒಂದು ಗಣಿತೀಯ ವಿಶ್ಲೇಷಣೆ ಹೇಳಿದೆ. ದೇಶದ ಬೇರೆ ಕಡೆ, ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಓಮೈಕ್ರಾನ್ ವ್ಯಾಪಿಸಲು ಮತ್ತಷ್ಟು ಸಮಯ ಬೇಕಾಗುತ್ತದೆ. ಅದು ಹಾಗೆಯೇ ಆಗುವ ಸಾಧ್ಯತೆಗಳು ಗೋಚರಿಸುತ್ತಿವೆ’ ಎಂದು ಅವರು ವಿವರಿಸಿದ್ದಾರೆ.

ದೆಹಲಿ ಮತ್ತು ಮುಂಬೈನಲ್ಲಿ ಪ್ರಕರಣಗಳ ಸಂಖ್ಯೆ ಗರಿಷ್ಠ ಮಟ್ಟದಲ್ಲಿ ಇರುವುದು, ಮೂರನೇ ಅಲೆಯ ಅಂತ್ಯವನ್ನು ಸೂಚಿಸುತ್ತಿಲ್ಲ. ಏಕೆಂದರೆ ದೇಶದ 265 ಜಿಲ್ಲೆಗಳಲ್ಲಿ ಕೋವಿಡ್ ದೃಢಪಡುವ ಪ್ರಮಾಣ ಶೇ 10ಕ್ಕಿಂತಲೂ ಹೆಚ್ಚು ಎಂದೂ ತಜ್ಞರು ಹೇಳಿದ್ದಾರೆ.

‘ದೇಶದ ಸಣ್ಣ ಪಟ್ಟಣಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲೂ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗದೇ ಇದ್ದರೆ, ದೇಶದೆಲ್ಲೆಡೆ ಕೋವಿಡ್‌ನ ಮೂರನೇ ಅಲೆ ಗರಿಷ್ಠಮಟ್ಟ ಮುಟ್ಟಿದೆ ಎನ್ನಲಾಗದು’ ಎಂದು ಪಬ್ಲಿಕ್ ಹೆಲ್ತ್ ಫೌಂಡೇಷನ್ ಆಫ್ ಇಂಡಿಯಾದ ಅಧ್ಯಕ್ಷ ಕೆ.ಶ್ರೀನಾಥ್ ರೆಡ್ಡಿ ಹೇಳಿದ್ದಾರೆ.

ಪರೀಕ್ಷೆ ಸಂಖ್ಯೆ ಕುಸಿತ

ದೆಹಲಿಯಲ್ಲಿ ಜನವರಿ 12ರಂದು 1,05,000 ಜನರ ಮಾದರಿ ಪರೀಕ್ಷೆ ನಡೆಸಲಾಗಿತ್ತು. ಜನವರಿ 13ರಂದು ಅದು 99,000ಕ್ಕೆ ಇಳಿದಿತ್ತು. ಜನವರಿ 16ರಂದು ಪರೀಕ್ಷೆಗಳ ಸಂಖ್ಯೆಯು 67,000ಕ್ಕೆ ಕುಸಿಯಿತು.

ಮುಂಬೈಯಲ್ಲಿ ಜನವರಿ 9ರಂದು 68,249 ಜನರ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಜನವರಿ 15ರಂದು ಪರೀಕ್ಷೆಯ ಸಂಖ್ಯೆಯು54,500ಕ್ಕೆ ಇಳಿದಿತ್ತು. ಹಾಗಿದ್ದರೂ ಜನವರಿ 16ರಂದು ಇದು 57,500ಕ್ಕೆ ಹೆಚ್ಚಳವಾಗಿತ್ತು.

ಮುಖ್ಯಾಂಶಗಳು

- ಮುಂಬೈ, ದೆಹಲಿಯಲ್ಲಿ ಕೋವಿಡ್ ಪ್ರಕರಣ ಇಳಿಕೆ
- ಮೂರನೇ ಅಲೆ ಗರಿಷ್ಠ ಮಟ್ಟಕ್ಕೆ ಎಂಬ ಬಗ್ಗೆ ತಜ್ಞರಲ್ಲಿ ಭಿನ್ನಮತ

ಕೋವಿಡ್ ನಿಯಂತ್ರಣ: ಸಿ.ಎಂ ನೇತೃತ್ವದಲ್ಲಿ ಇಂದು ಸಭೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕೆ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಸೋಮವಾರ ಉನ್ನತಮಟ್ಟದ ಸಭೆ ನಡೆಯಲಿದೆ.

16

₹ 34.70 ಕೋಟಿಗೆ ಪಿಎಸ್‌ಎಂಆರ್‌ಐ ನೋಟಿಸ್

‘ಆರೋಗ್ಯವಾಣಿ–104’ ಸ್ಥಗಿತ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೋವಿಡ್ ಮೂರನೇ ಅಲೆ ಅಬ್ಬರಿಸುತ್ತಿರುವ ಬೆನ್ನಲ್ಲೇ, ರಾಜ್ಯದ ‘ಆರೋಗ್ಯವಾಣಿ–104’ ಸ್ಥಗಿತಗೊಂಡಿದೆ. ಇದರಿಂದಾಗಿ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸುಲಭವಾಗಿ ಲಭ್ಯವಿದ್ದ ಆರೋಗ್ಯ ಸೇವಾ ಸೌಲಭ್ಯಕ್ಕೆ ಸಮಸ್ಯೆಯಾಗಿದೆ. ಜೊತೆಗೆ, ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿದ್ದ ಈ ಸಹಾಯವಾಣಿ ಕೇಂದ್ರದ 400ಕ್ಕೂ ಹೆಚ್ಚು ಸಿಬ್ಬಂದಿ ಬೀದಿಗೆ ಬೀಳುವ ಆತಂಕ ಎದುರಾಗಿದೆ.

ಪ್ರಜಾವಾಣಿ ವಿಶೇಷ

‘ಒಡಂಬಡಿಕೆಯಂತೆ ರಾಜ್ಯ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ’ ಎಂದು ಆರೋಪಿಸಿರುವ ಯೋಜನೆಯ ಗುತ್ತಿಗೆ ವಹಿಸಿರುವ ಹೈದರಾಬಾದ್‌ನ ಪೆರುಮಾಳ್ ಸ್ವಾಸ್ಥ್ಯ ನಿರ್ವಹಣೆ ಮತ್ತು ಸಂಶೋಧನಾ ಸಂಸ್ಥೆ (ಪಿಎಸ್‌ಎಂಆರ್‌ಐ), ಈ ಸೇವೆ ಮುಕ್ತಾಯಗೊಳಿಸಲು ನಿರ್ಧರಿಸಿದೆ. ‘ಹಂತ ಹಂತವಾಗಿ ಹಣ ಬಿಡುಗಡೆ ಮಾಡಿದರೂ ಸೇವೆ ನೀಡಲು ಸಂಸ್ಥೆ ಸಿದ್ಧವಿಲ್ಲ. ಹೀಗಾಗಿ, ಹೊಸ ಸಂಸ್ಥೆಗೆ ಗುತ್ತಿಗೆ ನೀಡಲು ಟೆಂಡರ್ ಆಹ್ವಾನಿಸಲಾಗಿದೆ. ಶೀಘ್ರದಲ್ಲಿ ಈ ಸೇವೆ ಮತ್ತೆ ಆರಂಭಿಸುತ್ತೇವೆ’ ಎಂದು ಆರೋಗ್ಯ ಇಲಾಖೆಯ ಆಯುಕ್ತ ಡಿ. ರಂದೀಪ್ ತಿಳಿಸಿದರು.

₹ 34.70 ಕೋಟಿ ಪಾವತಿಸಿ: ‘ರಾಜ್ಯ ಸರ್ಕಾರ ಬಾಕಿ ಉಳಿಸಿಕೊಂಡಿರುವ ₹ 23.67 ಕೋಟಿ ಮತ್ತು ಒಡಂಬಡಿಕೆಯಂತೆ ನಡೆದುಕೊಳ್ಳದೇ ಇರುವುದರಿಂದ ಒಪ್ಪಂದ ಮುಕ್ತಾಯ ಮಾಡಿಕೊಂಡ ಕಾರಣಕ್ಕೆ (ಒಪ್ಪಂದ ಮುಕ್ತಾಯವಾದರೆ ಮೂರು ತಿಂಗಳ ಹಣ ಹೆಚ್ಚುವರಿಯಾಗಿ ಕೊಡಬೇಕು) ₹ 11.03 ಕೋಟಿ ಸೇರಿ ಒಟ್ಟು ₹ 34.70 ಕೋಟಿ ಪಾವತಿಸಬೇಕು’ ಎಂದು ಆರೋಗ್ಯ ಇಲಾಖೆಯ ಆಯುಕ್ತ ಮತ್ತು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರಿಗೆ ಪಿಎಸ್‌ಎಂಆರ್‌ಐ ಮುಖ್ಯ ಹಣಕಾಸು ಅಧಿಕಾರಿ ಕೆ. ಚಂದ್ರಮೌಳಿ ಅವರು ಜ. 12ರಂದು ನೋಟಿಸ್ ನೀಡಿದ್ದಾರೆ.

16ನೇ ಪುಟ ನೋಡಿ

‘ಶೀಘ್ರದಲ್ಲಿ ಹೊಸ ಸಂಸ್ಥೆಗೆ ಗುತ್ತಿಗೆ’



‘ಸದ್ಯಕ್ಕೆ 104 ಆರೋಗ್ಯ ಸಹಾಯವಾಣಿ ಸ್ಥಗಿತಗೊಂಡಿದೆ. ಗುತ್ತಿಗೆ ವಹಿಸಿಕೊಂಡ ಸಂಸ್ಥೆಯೇ (ಪಿಎಸ್‌ಎಂಆರ್‌ಐ) ಒಡಂಬಡಿಕೆ ಮುಕ್ತಾಯದ ನೋಟಿಸ್ ನೀಡಿದೆ. ಅದನ್ನು ಅಂಗೀಕರಿಸುತ್ತೇವೆ. ಈಗಾಗಲೇ ಹೊಸ ಟೆಂಡರ್ ಕರೆದಿದ್ದೇವೆ. ಇನ್ನು 10 ದಿನಗಳಲ್ಲಿ ತಾಂತ್ರಿಕ ಬಿಡ್ ತೆರೆಯುತ್ತೇವೆ. ಈ ತಿಂಗಳ ಅಂತ್ಯದಲ್ಲಿ ಈ ಸಹಾಯವಾಣಿ ಮತ್ತೆ ಆರಂಭಿಸುತ್ತೇವೆ’ ಎಂದು ಆರೋಗ್ಯ ಇಲಾಖೆಯ ಆಯುಕ್ತ ಡಿ. ರಂದೀಪ್ ತಿಳಿಸಿದರು.

‘ಸರ್ಕಾರದಲ್ಲಿ ಹಂತ ಹಂತವಾಗಿಯೇ ಹಣ ನೀಡಲಾಗುತ್ತದೆ. ಒಂದೇ ಬಾರಿಗೆ ₹ 12 ಕೋಟಿ ಬಿಡುಗಡೆ ಮಾಡಿ ಎಂದು ಸಂಸ್ಥೆ ಹಟ ಹಿಡಿದಿದೆ. ನಾವು ಒಂದಷ್ಟು ಹಣ ಬಿಡುಗಡೆ ಮಾಡಿದ ನಂತರವೂ ಅವರು ಸೇವೆ ಆರಂಭಿಸಿಲ್ಲ. ಸಂಸ್ಥೆಯವರ ಮಾತುಗಳನ್ನು ಅಲ್ಲಿನ ಸಿಬ್ಬಂದಿ ಕೇಳುತ್ತಿಲ್ಲ. ಸಿಬ್ಬಂದಿ ಮೇಲೆ ಆಡಳಿತ ವರ್ಗಕ್ಕೆ ನಿಯಂತ್ರಣ ಇಲ್ಲ. ಎಲ್ಲರೂ ಹೊರಗುತ್ತಿಗೆ ಸಿಬ್ಬಂದಿ ಆಗಿರುವುದರಿಂದ ನಾವು ಮಧ್ಯಪ್ರವೇಶಿಸುವಂತಿಲ್ಲ. ಸದ್ಯ ಎಲ್ಲ ಆರೋಗ್ಯ ಸೇವಾ ಸೌಲಭ್ಯಗಳನ್ನು 14410 ಸಹಾಯವಾಣಿ ಮೂಲಕ ನೀಡುತ್ತಿದ್ದೇವೆ. ಸಂಸ್ಥೆಯವರು ಕೋವಿಡ್ ಸಂದರ್ಭದಲ್ಲಿ ಸಹಾಯ ಮಾಡದೇ ಇದ್ದರೆ ಹೇಗೆ? ಹೀಗಾಗಿ, ಮತ್ತೆ ಅವರನ್ನು ಮುಂದುವರಿಸುವ ಪ್ರಶ್ನೆಯೇ ಇಲ್ಲ. ಅವರ ಬಾಕಿ ಹಣದ ಬಗ್ಗೆ ಮುಂದೆ ನೋಡೋಣ ಎಂದು ಎರಡೂ ಕೇಂದ್ರಗಳನ್ನು ಬಂದ್ ಮಾಡಿದ್ದೇವೆ. ಅವರಿಗೆ ಈ ಹಿಂದೆಯೂ ನೋಟಿಸ್ ನೀಡಿ ಶೇ 50ರಷ್ಟು ಹಣ ತಡೆಹಿಡಿಯುವುದಾಗಿ ಸೂಚನೆ ನೀಡಿದ್ದೆವು. ಈ ಎಲ್ಲ ಪರಿಸ್ಥಿತಿಯ ಕಾರಣಕ್ಕೆ ಪಿಎಸ್‌ಎಂಆರ್‌ಐ ಜೊತೆಗಿನ ಒಪ್ಪಂದ ರದ್ದು ಮಾಡಿದ್ದೇವೆ’ ಎಂದು ಸ್ಪಷ್ಟಪಡಿಸಿದರು.

ಲಂಚ: ಸಿಬಿಐನಿಂದ ಗೇಲ್ ನಿರ್ದೇಶಕ ಬಂಧನ

ನವದೆಹಲಿ (ಪಿಟಿಐ): ₹ 50 ಲಕ್ಷಕ್ಕೂ ಹೆಚ್ಚು ಲಂಚ ಪಡೆದ ಆರೋಪದ ಪ್ರಕರಣಕ್ಕೆ ಸಂಬಂಧಿಸಿ ಸಾರ್ವಜನಿಕ ವಲಯ ಉದ್ದಿಮೆ ಭಾರತೀಯ ಅನಿಲ ಪ್ರಾಧಿಕಾರದ (ಗೇಲ್) ನಿರ್ದೇಶಕ (ಮಾರುಕಟ್ಟೆ) ಇ.ಎಸ್.ರಂಗನಾಥನ್ ಅವರನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಗೇಲ್ ಮಾರಾಟ ಮಾಡುವ ಪೆಟ್ರೊ ಕೆಮಿಕಲ್ ಉತ್ಪನ್ನಗಳನ್ನು ಖರೀದಿಸುವ ಖಾಸಗಿ ಕಂಪನಿಗಳಿಗೆ ರಿಯಾಯಿತಿ ಕೊಡುವುದಕ್ಕಾಗಿ ಅವರು ಲಂಚ ಪಡೆದಿದ್ದರು ಎಂದು ಆರೋಪಿಸಲಾಗಿದೆ.

ಈ ಲಂಚದ ಹಗರಣವನ್ನು ಭೇದಿಸಿದ ಸಿಬಿಐ ಅಧಿಕಾರಿಗಳು, ರಂಗನಾಥನ್ ಹಾಗೂ ಮಧ್ಯವರ್ತಿಗಳು ಮತ್ತು ವರ್ತಕರು ಸೇರಿ ಐವರನ್ನು ಶನಿವಾರ ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ರಂಗನಾಥನ್ ಅವರ ಕಚೇರಿ ಹಾಗೂ ನಿವಾಸ ಸೇರಿದಂತೆ ಎಂಟು ಸ್ಥಳಗಳಲ್ಲಿ ಅಧಿಕಾರಿಗಳು ಶೋಧ ಕೈಗೊಂಡಿದ್ದರು. ₹ 1.29 ಕೋಟಿ ನಗದು ಹಾಗೂ ಚಿನ್ನಾಭರಣಗಳು ಸೇರಿ ₹ 1.25 ಕೋಟಿ ಮೌಲ್ಯದ ವಸ್ತುಗಳನ್ನು ಈ ಶೋಧ ಕಾರ್ಯದ ವೇಳೆ ವಶಪಡಿಸಿಕೊಳ್ಳಲಾಗಿದೆ’ ಎಂದು ಸಿಬಿಐ ವಕ್ತಾರ ಆರ್.ಸಿ.ಜೋಶಿ ತಿಳಿಸಿದ್ದಾರೆ.

‘200 ನವೋದ್ಯಮಗಳಿಗೆ ಗರಿಷ್ಠ ತಲಾ ₹ 50 ಲಕ್ಷ ಮೂಲನಿಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಹೆಚ್ಚುವರಿಯಾಗಿ 75 ನವೋದ್ಯಮಗಳು (ಸ್ಟಾರ್ಟ್ ಅಪ್) ಸೇರಿದಂತೆ ಪ್ರಸಕ್ತ ವರ್ಷ ರಾಜ್ಯದಲ್ಲಿ ಒಟ್ಟು 200 ನವೋದ್ಯಮಗಳಿಗೆ ಗರಿಷ್ಠ ತಲಾ ₹ 50 ಲಕ್ಷವರೆಗೆ ಮೂಲನಿಧಿ (ಸೀಡ್ ಫಂಡ್) ನೀಡಲಾಗುವುದು’ ಎಂದು ಐಟಿ, ಬಿಟಿ ಮತ್ತು ಕೌಶಲಾಭಿವೃದ್ಧಿ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ಹೇಳಿದರು.



ವಿಧಾನಸೌಧದಲ್ಲಿ ಭಾನುವಾರ ನಡೆದ ಪ್ರಥಮ ‘ರಾಷ್ಟ್ರೀಯ ನವೋದ್ಯಮ ದಿನ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಈವರೆಗೆ ಸುಮಾರು 500 ನವೋದ್ಯಮಗಳಿಗೆ ಅನುದಾನ ನೀಡಲಾಗಿದೆ. ಮೂಲನಿಧಿ ಕೊಡುವ ಉಪಕ್ರಮ ಬೇರೆ ಯಾವ ರಾಜ್ಯದಲ್ಲೂ ಇಲ್ಲ’ ಎಂದರು.

‘ಪ್ರಸಕ್ತ ಆರ್ಥಿಕ ವರ್ಷದಲ್ಲಿ ಉದ್ದಿಮೆಗಳ ಸ್ಥಾಪನೆಗಾಗಿ ರಾಜ್ಯಕ್ಕೆ ₹ 1.60 ಲಕ್ಷ ಕೋಟಿ ವಿದೇಶಿ ಬಂಡವಾಳ ಹರಿದುಬಂದಿದೆ. ದೇಶದ ಒಟ್ಟು ಹೂಡಿಕೆಯಲ್ಲಿ ಶೇ 50ಕ್ಕಿಂತ ಹೆಚ್ಚು ಕರ್ನಾಟಕದಲ್ಲೇ ಆಗಿದೆ’ ಎಂದರು.

16ನೇ ಪುಟ ನೋಡಿ

14 ನವೋದ್ಯಮಗಳಿಗೆ ಪ್ರಶಸ್ತಿ

ರಾಷ್ಟ್ರೀಯ ಮಟ್ಟದಲ್ಲಿ ನಡೆದ ಸ್ಟಾರ್ಟ್ ಅಪ್ ಇಂಡಿಯಾ ನಾವೀನ್ಯತಾ ಸಪ್ತಾಹ’ದಲ್ಲಿ ವಿವಿಧ ವಲಯಗಳಲ್ಲಿ 46 ನವೋದ್ಯಮಗಳಿಗೆ ಪ್ರಶಸ್ತಿ ನೀಡಲಾಗಿದ್ದು, ರಾಜ್ಯದ 14 ನವೋದ್ಯಮಗಳು ಪ್ರಶಸ್ತಿಗೆ ಪಾತ್ರವಾಗಿವೆ. ಅವು, ನಫಾ ಇನ್ನೋವೇಷನ್ಸ್, ಉಂಬೋ ಇಡ್-ಟೆಕ್ (ಫಿನ್ಟೆಕ್), ಥಿಂಕರ್ ಬೆಲ್ ಲ್ಯಾಬ್ಸ್ (ಎಡುಟೆಕ್), ಸಿಂಪ್ಲೋಟೆಲ್ ಟೆಕ್ನಾಲಜೀಸ್ (ಪ್ರವಾಸ ಮತ್ತು ಆತಿಥ್ಯೋದ್ಯಮ), ಬ್ಲಿಂಕಿನ್ ಟೆಕ್ನಾಲಜೀಸ್ (ಆಗ್ಮೆಂಟೆಡ್ ರಿಯಾಲಿಟಿ), ಟ್ಯಾಗ್ ಬಾಕ್ಸ್ ಸೊಲ್ಯೂಷನ್ಸ್ (ಐಒಟಿ), ಶಾಪೋಸ್ ಸರ್ವೀಸಸ್, ಆತ್ರೇಯ ಗ್ಲೋಬಲ್ ಸೊಲ್ಯೂಷನ್ಸ್, ಝುನ್ ಟ್ರಾನ್ ಲ್ಯಾಬ್ಸ್ ಪ್ರೈ.ಲಿ. (ಕೃಷಿ), ಲೀಡ್ ಸ್ಕ್ವೇರ್ಡ್ (ಗ್ರಾಹಕ ಸಂಬಂಧ), ಲಿಯೂಸಿನ್ ರಿಚ್ ಬಯೋ ಪ್ರೈ.ಲಿ. (ಜೀವವಿಜ್ಞಾನ), ಸ್ಟೆಲ್ ಆಪ್ಸ್ (ಪಶು ಸಂಗೋಪನೆ), 1ಬ್ರಿಡ್ಜ್ (ಲಾಜಿಸ್ಟಿಕ್ಸ್) ಮತ್ತು ಸ್ಟೆರಡಿಯನ್ ಸೆಮಿ (ಸಾರಿಗೆ ನಿರ್ವಹಣೆ).



ಕೋವಿಡ್‌ನಿಂದಾಗಿ ಈ ವರ್ಷವೂ ಪೂರ್ಣ ಪ್ರಮಾಣದಲ್ಲಿ ತರಗತಿಗಳಿಗೆ ಖುದ್ದು ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಆದರೆ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ

ಪುಟ 13

3 ಮಕ್ಕಳ ಸಾವು

ಪ್ರಜಾವಾಣಿ ವಾರ್ತೆ


ರಾಮದುರ್ಗ/ಬೆಳಗಾವಿ: ರಾಮದುರ್ಗ ತಾಲ್ಲೂಕಿನ ಮಲ್ಲಾಪುರ ಮತ್ತು ಬೋಚಬಾಳದ ಮೂರು ಶಿಶುಗಳು ಮೃತಪಟ್ಟಿವೆ. ‘ಸಾಲಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ‘ರುಬೆಲ್ಲಾ’ ಲಸಿಕೆ (ಚುಚ್ಚುಮದ್ದು) ಪಡೆದ ಕೆಲವೇ ಗಂಟೆಗಳಲ್ಲಿ ಶಿಶುಗಳು ಅಸ್ವಸ್ಥಗೊಂಡಿದ್ದವು’ ಎಂದು ಪೋಷಕರು ಮತ್ತು ಗ್ರಾಮಸ್ಥರು ಆರೋಪಿಸಿದ್ದಾರೆ.

ಬೋಚಬಾಳದ ಪವಿತ್ರಾ ಹುಲಗೂರ (13 ತಿಂಗಳು), ಮಧು ಕರಗುಂದಿ (14 ತಿಂಗಳು), ಮಲ್ಲಾಪುರದ ಚೇತನ ಪೂಜಾರಿ (15 ತಿಂಗಳು) ಮೃತರು. ಚೇತನ ಮತ್ತು ಪವಿತ್ರಾ 13ರಂದು ಮನೆಯಲ್ಲಿ, ಮಧು ಜಿಲ್ಲಾಸ್ಪತ್ರೆ (ಬಿಮ್ಸ್) ಯಲ್ಲಿ ಶನಿವಾರ ಸಂಜೆ ಮೃತಪಟ್ಟಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಪೋಷಕರಿಗೆ ಭಾನುವಾರ ಹಸ್ತಾಂತರಿಸಲಾಯಿತು.

4ನೇ ಪುಟ ನೋಡಿ

ಜೊಕೊವಿಚ್‌ಗೆ ‘ಸೋಲು’

ಮೆಲ್ಬರ್ನ್ (ಎಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ಈ ಬಾರಿ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಆಡುವ ಅವಕಾಶ ಕಳೆದುಕೊಂಡರು. ಕೋವಿಡ್ ಲಸಿಕೆ ಪಡೆಯಲು ನಿರಾಕರಿಸಿದ ಅವರ ವೀಸಾ ರದ್ದುಗೊಳಿಸಿದ ಆಸ್ಟ್ರೇಲಿಯಾ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲೇರಿದ್ದ ನೊವಾಕ್ ಸೋಲನುಭವಿಸಿದ್ದಾರೆ.



ಭಾನುವಾರ ಸಂಜೆ ಸರ್ಕಾರದ ಪರ ತೀರ್ಪು ಪ್ರಕಟವಾಗುತ್ತಿದ್ದಂತೆಯೇ ಜೊಕೊವಿಚ್ ಆಸ್ಟ್ರೇಲಿಯಾದಿಂದ ದುಬೈಗೆ ತೆರಳಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಒಂಬತ್ತು ಬಾರಿ ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಆಗಿರುವ ದಾಖಲೆ ಅವರದ್ದಾಗಿದೆ.ಒಟ್ಟು 20 ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದಿರುವ ಆಟಗಾರನಾಗಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ





ವಿಷ್ಣುಶರಣ್ ಭಟ್ ಮತ್ತು ಪೂಜಾ ಹೆಗ್ಡೆ

ಪೂಜಾ ಹೆಗ್ಡೆ ಭೀಮ ಜುವೆಲರ್ಸ್‌ನ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೀಮ ಜುವೆಲರ್ಸ್‌ನ ಮೊದಲ ರಾಯಭಾರಿ ಆಗಿ ನಟಿ ಪೂಜಾ ಹೆಗ್ಡೆ ಅವರನ್ನು ನೇಮಿಸಲಾಗಿದೆ. ತನ್ನ 97 ವರ್ಷಗಳ ಇತಿಹಾಸದಲ್ಲಿ ಬ್ರ್ಯಾಂಡ್ ರಾಯಭಾರಿಯನ್ನು ನೇಮಿಸುತ್ತಿರುವುದು ಇದೇ ಮೊದಲು ಎಂದು ಕಂಪನಿಯು ತಿಳಿಸಿದೆ.

'ಹೊಸ ಮಾರುಕಟ್ಟೆಗಳು ಮತ್ತು ಹೊಸ ಗ್ರಾಹಕರನ್ನು ತಲುಪಲು ಪೂಜಾ ಹೆಗ್ಡೆ ಅವರು ನಮಗೆ ನೆರವಾಗಲಿದ್ದಾರೆ' ಎಂದು ಭೀಮ ಜುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ವಿಷ್ಣುಶರಣ್ ಭಟ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪ್ರಮುಖ ಬ್ರ್ಯಾಂಡ್‌ನೊಂದಿಗೆ ಸಹಭಾಗಿ ಆಗಿರುವುದು ನನಗೆ ಅತ್ಯಂತ ವಿಶೇಷವಾದ ಕ್ಷಣ' ಎಂದು ಪೂಜಾ ಹೆಗ್ಡೆ ಹೇಳಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕರ್ನಾಟಕ ರಕ್ಷಣಾ ವೇದಿಕೆ ಟ್ವೀಟ್ ಅಭಿಯಾನ: ಅಗತ್ಯ ಏನಿದೆ ಎಂದು ಪ್ರಶ್ನೆ

ಸಂಸ್ಕೃತ ವಿ.ವಿ ಸ್ಥಾಪನೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಅಭಿಯಾನಕ್ಕೆ ಉತ್ತಮ ಪ್ರತಿಕ್ರಿಯೆ
- ಸಂಸ್ಕೃತ ಕಲಿಸುವ ಹುನ್ನಾರ ಎಂದು ಟೀಕೆ
- 50 ಸಾವಿರಕ್ಕೂ ಹೆಚ್ಚು ಟ್ವೀಟ್, ಮರುಟ್ವೀಟ್

ಬೆಂಗಳೂರು: ಮಾಗಡಿಯಲ್ಲಿ 'ಸಂಸ್ಕೃತ ವಿಶ್ವವಿದ್ಯಾಲಯ'ವನ್ನು ಸ್ಥಾಪಿಸುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ.

ಈ ಬಗ್ಗೆ ಕರ್ನಾಟಕ ರಕ್ಷಣಾ ವೇದಿಕೆ ಭಾನುವಾರ ಕೈಗೊಂಡಿದ್ದ 'ಸಂಸ್ಕೃತ ವಿ.ವಿ. ಬೇಡ' ಟ್ವಿಟರ್ ಅಭಿಯಾನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸಾವಿರಾರು ಕನ್ನಡಿಗರು ಸಂಸ್ಕೃತ ವಿಶ್ವ ವಿದ್ಯಾಲಯ ಸ್ಥಾಪನೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸರ್ಕಾರ ತನ್ನ ನಿರ್ಧಾರ ರದ್ದುಪಡಿಸಬೇಕು ಎಂದು ಒತ್ತಾಯಿಸಿ ಟ್ವೀಟ್ ಮಾಡಿರುವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣಗೌಡ, 'ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ರಾಜ್ಯ ಸರ್ಕಾರ ₹359ಕೋಟಿ ನೀಡಿದೆ. ಆದರೆ, ಕನ್ನಡ ವಿಶ್ವವಿದ್ಯಾಲಯಕ್ಕೆ ₹2 ಕೋಟಿ ರುಪಾಯಿ ಸಹ ನೀಡಲು ಹಿಂದೇಟು ಹಾಕುತ್ತಿದೆ' ಎಂದು ವಿವರಿಸಿದ್ದಾರೆ.

'ದೇಶದಲ್ಲಿ ಒಟ್ಟು ಹದಿನಾರು ಸಂಸ್ಕೃತ ವಿಶ್ವವಿದ್ಯಾಲಯಗಳಿವೆ. ಸಂಸ್ಕೃತ ಮಾತನಾಡುವವರ ಸಂಖ್ಯೆ ಜಗತ್ತಿನಲ್ಲಿ ಕೇವಲ 24,000. ಇಷ್ಟು ಜನರ ನುಡಿಗೆ ಹದಿನಾರು ವಿಶ್ವವಿದ್ಯಾಲಯಗಳ ಅಗತ್ಯವಾದರೂ ಏನಿತ್ತು. ಆದರೆ, ಏಳು ಕೋಟಿ ಜನರು ಮಾತನಾಡುವ ಕನ್ನಡ ನುಡಿಗೆಂದು ಇರುವುದು ಒಂದೇ ವಿಶ್ವವಿದ್ಯಾಲಯ' ಎಂದು ಟ್ವೀಟ್ ಮಾಡಿದ್ದಾರೆ.

'ರಾಮನಗರ ಜಿಲ್ಲೆಯಲ್ಲಿ ನೂರು ಎಕರೆ ಅರಣ್ಯ ಪ್ರದೇಶವನ್ನೇ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಕೊಡಲಾಗಿದೆ. ಈಗಿರುವ ಸಂಸ್ಕೃತ ವಿಶ್ವವಿದ್ಯಾಲಯಗಳಲ್ಲಿ ಓದಲು ವಿದ್ಯಾರ್ಥಿಗಳು ಬರುತ್ತಿಲ್ಲ. ಹೀಗಿರುವಾಗ ಇಷ್ಟು ದೊಡ್ಡ ಜಾಗವನ್ನು ಯಾಕೆ ಕೊಡಲಾಗಿದೆ? ಇದೇ ಜಾಗದಲ್ಲಿ ಇನ್ನೊಂದು ಕನ್ನಡ ವಿಶ್ವವಿದ್ಯಾಲಯ ತೆರೆಯಬಹುದಿತ್ತಲ್ಲವೇ?' ಎಂದು ಪ್ರಶ್ನಿಸಿದ್ದಾರೆ.

'ಕನ್ನಡದ ಬದಲು ಸಂಸ್ಕೃತ ಕಲಿಸುವ ದೊಡ್ಡ ಹುನ್ನಾರ ನಡೆಯುತ್ತಿದೆ. ಸಂಸ್ಕೃತಕ್ಕೆ ಸಂಬಂಧಿಸಿದ ಸಂಸ್ಥೆಗಳು, ಅಧ್ಯಾಪಕರು ಪದವಿ ಹಂತದಲ್ಲಿ ಕನ್ನಡ ಕಲಿಕೆ ಕಡ್ಡಾಯ ಮಾಡಬಾರದು ಎಂದು ಹೈಕೋರ್ಟ್ ಮೆಟ್ಟಿಲೇರಿರುವುದು ಇದಕ್ಕೆ ತಾಜಾ ಉದಾಹರಣೆ. ಇವರ ಸಂಚನ್ನು ವಿಫಲಗೊಳಿಸೋಣ' ಎಂದು ನಾರಾಯಣಗೌಡ ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಜೆಡಿಎಸ್ ಮಾಹಿತಿ ತಂತ್ರಜ್ಞಾನ ಘಟಕದ ಅಧ್ಯಕ್ಷ ಪ್ರತಾಪ್ ಕಣಗಾಲ್, 'ಸರ್ಕಾರದ ಹಣದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಆರಂಭಿಸುವ ಅಗತ್ಯ ಏನು' ಎಂದು ಪ್ರಶ್ನಿಸಿದ್ದಾರೆ.

'2011ರ ಜನಗಣತಿ ಅನ್ವಯ ಕೇವಲ 1,218 ಜನರು ಸಂಸ್ಕೃತ ತಮ್ಮ ಮಾತೃ ಭಾಷೆ ಎಂದು ಹೇಳಿದ್ದಾರೆ. ಜನ ಸಂಖ್ಯೆಯ ಶೇಕಡ 1ಕ್ಕಿಂತ ಕಡಿಮೆ ಮಾತನಾಡುವ ಜನರಿಗಾಗಿ ₹300ಕೋಟಿಗೂ ಹೆಚ್ಚು ಮೊತ್ತ ಖರ್ಚು ಮಾಡುವ ಅಗತ್ಯವಿದೆಯೇ? ಜನರ ತೆರಿಗೆ ಹಣವನ್ನು ಈ ರೀತಿ ವ್ಯರ್ಥ ಮಾಡುವುದು ಸರಿಯೇ' ಎಂದು ಎಂ.ಎಚ್. ಗೌತಮ್ ಗಣೇಶ್ ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ.

ಈ ಅಭಿಯಾನದಲ್ಲಿ ಇಡೀ ದಿನ 50ಸಾವಿರಕ್ಕೂ ಹೆಚ್ಚು ಟ್ವೀಟ್‌ಗಳು ಮತ್ತು ಮರುಟ್ವೀಟ್‌ಗಳನ್ನು ಮಾಡಲಾಗಿದೆ.

ತ್ಯಾಗರಾಜರ ಆರಾಧನಾ ಮಹೋತ್ಸವ ರದ್ದು

ಬೆಂಗಳೂರು: ಸದ್ಗುರು ತ್ಯಾಗಬ್ರಹ್ಮ ಆರಾಧನಾ ಕೈಂಕರ್ಯ ಟ್ರಸ್ಟ್ ವತಿಯಿಂದ ಚಾಮರಾಜಪೇಟೆಯ ಶೃಂಗೇರಿ ಶಂಕರಮಠದಲ್ಲಿ ಜ.16ರಿಂದ 22ರವರೆಗೆ ನಿಗದಿಯಾಗಿದ್ದ '175ನೇ ವರ್ಷದ ತ್ಯಾಗರಾಜರ ಆರಾಧನಾ ಮಹೋತ್ಸವ ಹಾಗೂ ಸಂಗೀತೋತ್ಸವ'ವನ್ನು ಕೋವಿಡ್ ಕಾರಣದಿಂದ ರದ್ದು ಮಾಡಲಾಗಿದೆ.

'ಆರಾಧನಾ ಮಹೋತ್ಸವ ಹಾಗೂ ಸಂಗೀತೋತ್ಸವಕ್ಕೆ ಎಲ್ಲ ಸಿದ್ಧತೆ ನಡೆದಿತ್ತು. ಸರ್ಕಾರ ಸೂಚಿಸಿರುವ ನಿರ್ಬಂಧಗಳಿಂದಾಗಿ ಕಾರ್ಯಕ್ರಮಗಳನ್ನು ರದ್ದು ಮಾಡಲಾಗಿದೆ' ಎಂದು ಸದ್ಗುರು ತ್ಯಾಗಬ್ರಹ್ಮ ಆರಾಧನಾ ಕೈಂಕರ್ಯ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ರಾಧಾಕೃಷ್ಣ ಜಿ.ಶೇಷಪ್ಪ ತಿಳಿಸಿದ್ದಾರೆ.



ಮರೆತ ಅಂತರ

ವಾರಾಂತ್ಯ ಕರ್ಫ್ಯೂ ಜಾರಿಯಲ್ಲಿದ್ದರಿಂದ ಆಹಾರ ಪಾರ್ಸೆಲ್ ತೆಗೆದುಕೊಳ್ಳಲು ಶ್ರೀನಗರದ ದರ್ಶಿನಿಯೊಂದರ ಎದುರು ಭಾನುವಾರ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು

ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

'ಮಹಿಳೆಯರನ್ನು ಮುನ್ನೆಲೆಗೆ ತಂದ ಅಬಲಾಶ್ರಮ'

ಬೆಂಗಳೂರು: 'ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತಂದು, ಅವರೂ ಪುರುಷರಷ್ಟೇ ಸಮಾನ ಎನ್ನುವುದನ್ನು ಸಾರಲು ಅಬಲಾಶ್ರಮ ಶ್ರಮಿಸುತ್ತಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಬಸವನಗುಡಿಯ ಅಬಲಾಶ್ರಮದ ಸ್ವಾಸ್ಥ್ಯ ಆರೋಗ್ಯ ಸೇವೆಗಳ ಕಾರ್ಯಕ್ರಮ ಉದ್ಘಾಟಿಸಿದ ಅವರು, '117 ವರ್ಷಗಳ ಹಿಂದೆ ಚಕ್ರವರ್ತಿ ವೆಂಕಟ ಅಯ್ಯಂಗಾರ್ ಹಾಗೂ ಕೃಷ್ಣಮ್ಮ ದಂಪತಿ ಅಬಲಾಶ್ರಮ ನಿರ್ಮಿಸಿದರು. ಅವರು ಎಲ್ಲರಿಗೂ ಆದರ್ಶರಾಗಿದ್ದಾರೆ. ಅಬಲಾಶ್ರಮದಿಂದ ಸಾವಿರಾರು ಅಬಲೆಯರಿಗೆ ಆಶ್ರಯ ಸಿಕ್ಕಿದೆ. ಮಹಿಳೆಯರಿಗೂ ಸಮಾನ ಅವಕಾಶಗಳನ್ನು ನೀಡಿದಾಗ ಮಾತ್ರ ದೇಶ ಅಭಿವೃದ್ಧಿಯಾಗುತ್ತದೆ' ಎಂದು ಹೇಳಿದರು.



ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ, ಅಬಲಾಶ್ರಮದ ಅಧ್ಯಕ್ಷೆ ಡಾ.ವಿ. ಜಯಲಕ್ಷ್ಮಿ ದೇಶಮಾನೆ, ಬಿಜೆಪಿ ಮುಖಂಡ ಬಿ.ಎಸ್. ಸತ್ಯನಾರಾಯಣ ಇದ್ದರು.

ಕಾವೇರಿಯಲ್ಲಿ ಸಮನ್ವಿತಾ ಅಸ್ಥಿ ವಿಸರ್ಜನೆ

ಶ್ರೀರಂಗಪಟ್ಟಣ: ಬೆಂಗಳೂರಿನಲ್ಲಿ ಈಚೆಗೆ ನಡೆದ ಅಪಘಾತದಲ್ಲಿ ಮೃತಪಟ್ಟ, ಬಾಲ ಕಲಾವಿದೆ ಸಮನ್ವಿತಾ ಅವರ ಅಸ್ಥಿಯನ್ನು ಪಟ್ಟಣದ ಬಳಿ ಕಾವೇರಿ ನದಿಯಲ್ಲಿ ಭಾನುವಾರ ವಿಸರ್ಜಿಸಲಾಯಿತು.

ರಾಜ ಸೋಪಾನಘಟ್ಟದ ಬಳಿ ಅಸ್ಥಿಯನ್ನು ಸಮನ್ವಿತಾ ಅವರ ತಾತ ನಾರಾಯಣಸ್ವಾಮಿ ಹಾಗೂ ತಂದೆ ರೂಪೇಶ್ ವಿಸರ್ಜಿಸಿದರು. ನದಿ ದಡದಲ್ಲಿರುವ ಗೌತಮ ಮಂಟಪದಲ್ಲಿ ಅಸ್ಥಿ ಕುಡಿಕೆಗೆ ಪೂಜೆ ಸಲ್ಲಿಸಲಾಯಿತು. ಜ್ಯೋತಿಷಿ ಡಾ.ಭಾನುಪ್ರಕಾಶ್ ಶರ್ಮಾ, ಅರಸೀಕರೆ ಕಾಳಿಕಾ ಆಶ್ರಮದ ಋಷಿ ಕುಮಾರ ಸ್ವಾಮೀಜಿ ಸಮ್ಮುಖದಲ್ಲಿ ವೈದಿಕರು ಪೂಜೆ ಸಲ್ಲಿಸಿದರು. ವೈದಿಕರು ವೇದಿಕಾ ರೂಪಣಾ ಕೈಂಕರ್ಯ ನೆರವೇರಿಸಿದರು. ದುರ್ಮುಖಿ ನಾರಾಯಣ ಬಲಿ ಅಸ್ಥಿ ಸಂಚಯನ ಮೊದಲಾದ ವಿಧಿ, ವಿಧಾನಗಳು ನಡೆದವು.

ಕಲುಷಿತಗೊಳ್ಳಲು ಕಾರಣರಾದವರ ಗುರುತಿಸಿ ನೋಟಿಸ್: ಎನ್‌ಜಿಟಿಗೆ ಪ್ರಮಾಣಪತ್ರ

ಎಲೆ ಮಲ್ಲಪ್ಪ ಶೆಟ್ಟಿ ಕೆರೆ ರಕ್ಷಣೆಗೆ ಕ್ರಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು– ಹೊಸಕೋಟೆ ರಸ್ತೆಯಲ್ಲಿ, ಆವಲಹಳ್ಳಿ ಗ್ರಾಮದಲ್ಲಿರುವ ಎಲೆ ಮಲ್ಲಪ್ಪ ಶೆಟ್ಟಿ ಕೆರೆಯನ್ನು ಕಲುಷಿತಗೊಳಿಸುತ್ತಿವುದರ ವಿರುದ್ಧ ಕ್ರಮಜರುಗಿಸಲಾಗುವುದು, ಇದಕ್ಕೆ ಕಾರಣರಾಗುವವರ ಪತ್ತೆ ಹಚ್ಚಿ ನೋಟಿಸ್ ಜಾರಿ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ತಿಳಿಸಿದೆ.

ಈ ಸಂಬಂಧ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ದಕ್ಷಿಣ ಪೀಠಕ್ಕೆ ಪ್ರಮಾಣಪತ್ರ ಸಲ್ಲಿಸಿರುವ ಕೆಎಸ್‌ಪಿಸಿಬಿಯು, ಕೆರೆಯ ಆಸುಪಾಸಿನಲ್ಲಿರುವ ಸುಮಾರು 110 ಗ್ರಾಮಗಳ ವ್ಯಾಪ್ತಿಯಲ್ಲಿರುವ ಅನಧಿಕೃತ ಬಡಾವಣೆಗಳಿಂದ ಕಲುಷಿತ, ಒಳಚರಂಡಿ ನೀರು ಕೆರೆಯಂಗಳವನ್ನು ಸೇರುತ್ತಿರುವುದೇ ಕೆರೆಯು ಕಲುಷಿತಗೊಳ್ಳಲು ಕಾರಣ ಎಂದು ತಿಳಿಸಿದೆ.



ಎಲೆ ಮಲ್ಲಪ್ಪ ಶೆಟ್ಟಿ ಕೆರೆ (ಸಂಗ್ರಹ ಚಿತ್ರ)

ಎಲೆ ಮಲ್ಲಪ್ಪ ಶೆಟ್ಟಿ ಕೆರೆಯನ್ನು ಕಲುಷಿತಗೊಳಿಸುವವರ ವಿರುದ್ಧ ಕ್ರಮಕ್ಕೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಎನ್‌ಜಿಟಿ ತೆಗೆದುಕೊಂಡಿದೆ. ಎನ್‌ಜಿಟಿಯು ಈ ಹಿಂದೆ, ಕೆರೆಯ ಸ್ವಚ್ಛತೆಗೆ ಕೈಗೊಂಡಿರುವ ಕ್ರಮಗಳನ್ನು ಕುರಿತು ಯೋಜನಾವರದಿ ಸಲ್ಲಿಸಬೇಕು ಎಂದು ಕೆಎಸ್‌ಪಿಸಿಬಿಗೆ ಸೂಚನೆ ನೀಡಿತ್ತು.

ಕೆರೆ ಆಸುಪಾಸಿನಲ್ಲಿರುವ ಸುಮಾರು 110 ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಮತ್ತು ಕಲುಷಿತ ನೀರು ಸಂಸ್ಕರಣಾ ಘಟಕ ಸ್ಥಾಪಿಸುವ ಕಾಮಗಾರಿಯು 2025ರ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು (ಬಿಡಬ್ಲ್ಯುಎಸ್‌ಎಸ್‌ಬಿ) ತಿಳಿಸಿದೆ ಎಂದು ಕೆಎಸ್‌ಪಿಸಿಬಿ ಮಾಹಿತಿ ನೀಡಿದೆ.

ಕೆರೆ ಕಲುಷಿತವಾಗುವುದನ್ನು ತಡೆಯಲು ಅಲ್ಪಾವಧಿ ಮತ್ತು ದೀರ್ಘಾವಧಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಪಾವಧಿ ಕಾಮಗಾರಿಗಳ ಜಾರಿge 2022ರ ಡಿಸೆಂಬರ್‌ವರೆಗೂ ಬಿಡಬ್ಲ್ಯುಎಸ್‌ಎಸ್‌ಬಿ ಸಮಯ ಕೋರಿದೆ. ಅಲ್ಲದೆ, ದೀರ್ಘಾವಧಿಯ ಕಾಮಗಾರಿಗಳನ್ನು 2027ರ ಡಿಸೆಂಬರ್ ವೇಳೆಗೆ ಪೂರ್ಣಗೊಳಿಸಲಾಗುವುದು ಎಂದು ಕೆಎಸ್‌ಪಿಸಿಬಿ ತಿಳಿಸಿದೆ.

ಕೆರೆಯ ಬಫರ್ ಝೋನ್ ವಲಯದಲ್ಲಿ ಅತಿಕ್ರಮಣವನ್ನು ತಡೆಯಲು ಬಿಬಿಎಂಪಿ ಮತ್ತು ಸ್ಥಳೀಯ ಗ್ರಾಮ ಪಂಚಾಯಿತಿಗಳಿಂದ ವಿವರ ಕೇಳಿದ್ದು, ಅದನ್ನು ಆಧರಿಸಿ ಕ್ರಮ ಜರುಗಿಸಲಾಗುವುದು ಎಂದು ಮಂಡಳಿಯು ಎನ್‌ಜಿಟಿಗೆ ಭರವಸೆ ನೀಡಿದೆ.

ಗಾಂಧೀಜಿ ಬದುಕು ಪ್ರಶ್ನೆಗಳಿಗೆ ಆಹ್ವಾನ

ಬೆಂಗಳೂರು: ಮಹಾತ್ಮಗಾಂಧಿ ಅವರ ಜೀವನ ಕುರಿತ ಸಂದೇಹಗಳಿಗೆ ಸಮರ್ಪಕ ವಿವರಣೆ ಒಳಗೊಂಡ ಕೃತಿಯನ್ನು ಪ್ರಕಟಿಸಲು ಗಾಂಧಿ ವಿಚಾರ ವೇದಿಕೆ ನಿರ್ಧರಿಸಿದೆ.

ಗಾಂಧೀಜಿ ಅವರ ಕುರಿತ ಸಂದೇಹಗಳು, ತಾತ್ವಿಕ ವಿರೋಧಗಳು, ಚಾರಿತ್ರ್ಯ ಹನನದ ಸುಳ್ಳುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಈ ಕೃತಿ ತರಲು ಉದ್ದೇಶಿಸಲಾಗಿದೆ. ಹೀಗಾಗಿ, ಗಾಂಧೀಜಿ ಅವರ ಕುರಿತ ಎಲ್ಲ ರೂಪದ ಪ್ರಶ್ನೆಗಳನ್ನು ಸಾರ್ವಜನಿಕರಿಂದ ಆಹ್ವಾನಿಸಲಾಗಿದೆ. ಈ ಪ್ರಶ್ನೆಗಳಿಗೆ ರಾಜ್ಯದ ಇತಿಹಾಸ ತಜ್ಞರು, ರಾಜಕೀಯ ತಜ್ಞರು, ಧಾರ್ಮಿಕ ವಿದ್ವಾಂಸರಿಂದ ಉತ್ತರ ಪಡೆದು ಪ್ರಕಟಿಸಲಾಗುವುದು ಎಂದು ಪ್ರಧಾನ ಸಂಪಾದಕ ಎಂ.ಜಿ.ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಶ್ನೆಗಳನ್ನು mghegde@gmail.comಗೆ ಜ.30ರ ಒಳಗೆ ಕಳುಹಿಸಬೇಕು. ಲೇಖನಗಳ ರೂಪದಲ್ಲಿರುವ ಪ್ರಶ್ನೆಗಳನ್ನು ಸ್ವೀಕರಿಸುವುದಿಲ್ಲ. ಒಬ್ಬರು ಎಷ್ಟು ಪ್ರಶ್ನೆ ಬೇಕಾದರೂ ಕಳಿಸಬಹುದು. ಪ್ರಶ್ನೆ ಕೇಳುವವರ ವಿಳಾಸ ಮತ್ತು ದೂರವಾಣಿ ಸಂಖ್ಯೆ ಇರಲೇಬೇಕು ಎಂದು ತಿಳಿಸಿದ್ದಾರೆ.

ಮೇಕೆದಾಟು ಪಾದಯಾತ್ರೆ: ವರದಿ ನೀಡಲು ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಪಾದಯಾತ್ರೆಗೆ ಸಂಬಂಧಿಸಿದಂತೆ ದಾಖಲಾಗಿರುವ ಎಲ್ಲ ಪ್ರಕರಣಗಳ ಮಾಹಿತಿ ಹಾಗೂ ದಾಖಲೆಗಳನ್ನು ಸಂಗ್ರಹಿಸಿ, ಪರಿಶೀಲಿಸಿ ಮುಂದಿನ ಕಾನೂನು ಕ್ರಮ ಮತ್ತು ಹೋರಾಟದ ಬಗ್ಗೆ ಮೂರು ದಿನಗಳ ಒಳಗೆ ವರದಿ ನೀಡಲು ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್. ಪೊನ್ನಣ್ಣ ಅವರು ಐವರು ಸದಸ್ಯರ ಉನ್ನತ ಸಮಿತಿಯನ್ನು ರಚಿಸಿದ್ದಾರೆ.

ಕೆಪಿಸಿಸಿ ಕಾನೂನು ಘಟಕದ ಮಾಜಿ ಅಧ್ಯಕ್ಷ ಧನಂಜಯ, ಹೈಕೋರ್ಟ್ ವಕೀಲರಾದ ಎಚ್.ಸಿ. ಚಂದ್ರಮೌಳಿ, ಎ.ಜಿ. ಶಿವಣ್ಣ, ಕೆ. ದಿವಾಕರ ಮತ್ತು ಕರ್ನಾಟಕ ವಕೀಲರ ಪರಿಷತ್ ಸದಸ್ಯ ಮುನಿಯಪ್ಪ ಈ ಸಮಿತಿಯ ಸದಸ್ಯರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸೂಚನೆಯಂತೆ ಈ ಸಮಿತಿ ರಚಿಸಲಾಗಿದೆ. ತಕ್ಷಣ ಕಾರ್ಯಪ್ರವೃತ್ತರಾಗಿ, ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನು ಭೇಟಿ ಮಾಡಿ ವರದಿ ತಯಾರಿಸಿ ನೀಡಬೇಕು ಎಂದು ಸಮಿತಿಗೆ ಪೊನ್ನಣ್ಣ ಅವರು ಸೂಚಿಸಿದ್ದಾರೆ.

ಉದ್ಯಮಿ ಸಿದ್ಧಾರ್ಥ ಕಥೆ ಬಿಂಬಿಸುವ 'ಆನಂದ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಫಿ ಡೇ ಸಂಸ್ಥಾಪಕ ದಿವಂಗತ ವಿ.ಜಿ.ಸಿದ್ಧಾರ್ಥ ಅವರ ಜೀವನ ಕಥೆ ಹೋಲುವ ರೀತಿ ರಚಿಸಲಾಗಿರುವ 'ಆನಂದ' ಕೃತಿಯನ್ನು ಭಾನುವಾರ ವರ್ಚುವಲ್ ವೇದಿಕೆಯಲ್ಲಿ ಬಿಡುಗಡೆ ಮಾಡಲಾಯಿತು.

ಕ್ಯಾಪ್ಟನ್ ಸಹನಾ ಸುಂದರ್ ಹಾಗೂ ನೈಜೀರಿಯಾದ ಲೇಖಕ ಕೋಶಿ ಒಫೋರ್‌ಬೂಕ್ ವಿಸ್ಡಮ್ ಅವರು ರಚಿಸಿರುವ ಈ ಕೃತಿಯನ್ನು ಲೇಖಕ ಡಾ.ರಾಧಾಕೃಷ್ಣ ಪಿಳ್ಳೈ ಬಿಡುಗಡೆ ಮಾಡಿದರು.

'ಕೃತಿಯಲ್ಲಿ ಬರಹ ಶೈಲಿ ಸರಳ ಮತ್ತು ವಿಭಿನ್ನವಾಗಿದೆ. ನಾಯಕನ ಪಾತ್ರ ಆನಂದನ ವ್ಯಕ್ತಿತ್ವವನ್ನು ಸುಂದರವಾಗಿ ಅನಾವರಣಗೊಳಿಸಲಾಗಿದೆ. ಕಾಫಿ ಉದ್ಯಮಿ ಸಿದ್ಧಾರ್ಥ ಅವರನ್ನು ನೇರವಾಗಿ ಈ ಪಾತ್ರವು ಹೋಲುತ್ತದೆ. ಅವರ ಘನತೆಯ ವ್ಯಕ್ತಿತ್ವವನ್ನು ಇಲ್ಲಿ ಬಿಂಬಿಸಲಾಗಿದೆ' ಎಂದು ಡಾ. ರಾಧಾಕೃಷ್ಣ ಪಿಳ್ಳೈ ವಿವರಿಸಿದರು.

'ಒಬ್ಬ ವ್ಯಕ್ತಿಯ ಜೀವನದಲ್ಲಿ ಮಹಿಳೆಯು ಯಾವ ರೀತಿಯ ಪಾತ್ರವಹಿಸುತ್ತಾರೆ ಎನ್ನುವುದನ್ನೂ ವಿವರಿಸಲಾಗಿದೆ. ಇದೇ ರೀತಿ ಕೃತಿಯಲ್ಲಿನ ಪ್ರತಿಯೊಂದು ಪಾತ್ರವು ಗೌರವ ಬಯಸುತ್ತದೆ' ಎಂದು ವಿಶ್ಲೇಷಿಸಿದರು.

ಸಿದ್ಧಾರ್ಥ ಅವರ ಜತೆ ಹಲವು ವರ್ಷ ಕಾರ್ಯನಿರ್ವಹಿಸಿರುವ ಹಾಗೂ ಆಪ್ತರಾಗಿದ್ದ ಟ್ಯಾಂಗ್ಲಿನ್ ಡೆವಲಪ್‌ಮೆಂಟ್‌ನ ವ್ಯವಸ್ಥಾಪಕ ನಿರ್ದೇಶಕ ಶಂಕರ್ ವೆಂಕಟರಮನ್ ಅವರು, 'ಸಿದ್ಧಾರ್ಥ ಅವರ ನಿಜ ವ್ಯಕ್ತಿತ್ವವನ್ನು ಯೋಗ್ಯ ರೀತಿಯಲ್ಲಿ ಕೃತಿಯಲ್ಲಿ ಬಿಂಬಿಸಲಾಗಿದೆ. ಪ್ರತಿಭೆ ಇರುವ ವ್ಯಕ್ತಿಗಳನ್ನು ಸಿದ್ಧಾರ್ಥ ಗುರುತಿಸುತ್ತಿದ್ದರು. ಸಾಮಾನ್ಯರನ್ನು ಅಸಾಮಾನ್ಯರನ್ನಾಗಿ ಪರಿವರ್ತಿಸಿದರು. ಕಾಫಿ ಕುರಿತು ಅವರ ಕಂಡ ಕನಸುಗಳನ್ನು ನನಾಗಿಸಿಕೊಂಡರು' ಎಂದು ವಿವರಿಸಿದರು.

'1996ರಲ್ಲಿ ಕಾಫಿ ಡೇ ಆರಂಭವಾಯಿತು. ಆರಂಭದಲ್ಲಿ ಎಂಟು ಕಿಲೋ ಮೀಟರ್ ವ್ಯಾಪ್ತಿ ಒಳಗೆ ಒಂದು ಕಾಫಿ ಡೇ ಇರುತ್ತಿತ್ತು. ನಂತರ, ಒಂದು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಎಂಟು ಕಾಫಿ ಡೇಗಳನ್ನು ಆರಂಭಿಸಲಾಯಿತು. ಇದು ಅವರ ಯಶೋಗಾಥೆ. ವೈಫಲ್ಯಗಳ ಬಗ್ಗೆ ಗಮನಹರಿಸಬೇಡಿ. ಪ್ರಯತ್ನಗಳನ್ನು ಕೈಬಿಡಬೇಡಿ ಎಂದು ಹೇಳುತ್ತಿದ್ದರು. ಎಲ್ಲರನ್ನೂ ಸಮನವಾಗಿ ಕಾಣುತ್ತಿದ್ದರು' ಎಂದು ನೆನಪಿಸಿಕೊಂಡರು.

ಕ್ಯಾಪ್ಟನ್ ಸಹನಾ ಸುಂದರ್, ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್, ಪತ್ರಕರ್ತೆ ವಾಸಂತಿ ಹರಿಪ್ರಕಾಶ್ ಇದ್ದರು.

ಕಟ್ಟಡದಿಂದ ಜಿಗಿದು ಸರ್ಕಾರಿ ನೌಕರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ): ಪಟ್ಟಣದ ತಾಲ್ಲೂಕು ಕಚೇರಿ ಕಟ್ಟಡದ ಮೇಲಿನಿಂದ ಭಾನುವಾರ ಜಿಗಿದು ಸರ್ಕಾರಿ ನೌಕರರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಂಡ್ಯ ತಾಲ್ಲೂಕು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೆಂಕಟೇಶ್ (48) ಆತ್ಮಹತ್ಯೆ ಮಾಡಿಕೊಂಡವರು.



ವೆಂಕಟೇಶ್

ಕಾರ್ಯ ನಿಮಿತ್ತ ಮದ್ದೂರು ತಾಲ್ಲೂಕು ಕಚೇರಿಗೆ ವೆಂಕಟೇಶ್ ಬಂದಿದ್ದರು. ಈ ವೇಳೆ ಕಟ್ಟಡದ ಮೇಲಿನಿಂದ ಜಿಗಿದಿದ್ದಾರೆ. ಕೂಡಲೇ ಕಚೇರಿ ಸಿಬ್ಬಂದಿ ಆಸ್ಪತ್ರೆಗೆ ಕರೆದೊಯ್ದು, ಚಿಕಿತ್ಸೆ ಕೊಡಿಸಿದ್ದಾರೆ. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸಲಿಲ್ಲ.

ಮದ್ದೂರು ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪೌಷ್ಟಿಕ ಆಹಾರ ಸೇವಿಸಿ

ವಾರಾಂತ್ಯ ಕರ್ಫ್ಯೂ, ಕೋವಿಡ್ ನಿರ್ಬಂಧ: ಪ್ರವಾಸಿಗರ ಸಂಖ್ಯೆ ಇಳಿಮುಖ

ಮೃಗಾಲಯದ ಆದಾಯಕ್ಕೆ ಹೊಡೆತ

ಪ್ರಜಾವಾಣಿ ವಾರ್ತೆ

ಮೈಸೂರು: ಕೋವಿಡ್ ಪ್ರಕರಣಗಳು ಏರಿಕೆ ಆಗುತ್ತಿದ್ದಂತೆಯೇ ಮೈಸೂರಿಗೆ ಬರುವ ಪ್ರವಾಸಿಗರು ಕಡಿಮೆಯಾಗಿದ್ದಾರೆ. ಮೊದಲ ಮತ್ತು ಎರಡನೇ ಅಲೆಯಲ್ಲಿ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿದ್ದ ಚಾಮರಾಜೇಂದ್ರ ಮೃಗಾಲಯ, ಮೂರನೇ ಅಲೆಯಲ್ಲೂ ನಷ್ಟದ ಭೀತಿ ಎದುರಿಸುತ್ತಿದೆ.

ದಸರಾ ಬಳಿಕ ಮೈಸೂರಿನಲ್ಲಿ ಪ್ರವಾಸೋದ್ಯಮ ಚೇತರಿಸಿಕೊಳ್ಳುತ್ತಿತ್ತು. ವರ್ಷಾಂತ್ಯದ ವೇಳೆ ಹೆಚ್ಚಿನ ಪ್ರವಾಸಿಗರು ಬಂದಿದ್ದರಿಂದ, ಮೃಗಾಲಯಕ್ಕೂ ಆದಾಯ ಬರತೊಡಗಿತ್ತು. ಆದರೆ, ಹೊಸ ವರ್ಷದ ಆರಂಭದಲ್ಲಿ ಮತ್ತೆ ಕೋವಿಡ್ ಹೆಚ್ಚಾಗುತ್ತಿರುವುದು ಚಿಂತೆಗೆ ಕಾರಣವಾಗಿದೆ.

ಓಡಾಟಕ್ಕೆ ನಿರ್ಬಂಧ ಹಾಗೂ ವಾರಾಂತ್ಯ ಕರ್ಫ್ಯೂ ಕಾರಣಕ್ಕೆ ಹೊರ ಜಿಲ್ಲೆ ಮತ್ತು ಹೊರ ರಾಜ್ಯಗಳ ಪ್ರವಾಸಿಗರು ಗಣನೀಯವಾಗಿ ಕಡಿಮೆಯಾಗಿದ್ದಾರೆ. ಮೃಗಾಲಯಕ್ಕೆ ಶುಕ್ರವಾರ, ಶನಿವಾರ ಮತ್ತು ಭಾನುವಾರ ಹೆಚ್ಚು ಸ್ಥಳೀಯರು ಮತ್ತು ಪ್ರವಾಸಿಗರು ಬರುತ್ತಾರೆ. ಕಳೆದ ವಾರಾಂತ್ಯ ಮತ್ತು ಈ ವಾರಾಂತ್ಯ ಮೃಗಾಲಯದ ಬಾಗಿಲು ಮುಚ್ಚಲಾಗಿದೆ.

ಡಿಸೆಂಬರ್ ಕೊನೆಯ ವಾರದಲ್ಲಿ ಸರಾಸರಿ 10 ಸಾವಿರ ಮಂದಿ ಭೇಟಿ ನೀಡಿದ್ದರು. ಜ.2ರಂದು 12 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಬಂದಿದ್ದರು. ನಂತರ ಭೇಟಿ ನೀಡುವವರು ಕಡಿಮೆ ಯಾಗಿದ್ದಾರೆ. ಈಗ ಸರಾಸರಿ 2 ಸಾವಿರ ಮಂದಿಯಷ್ಟೇ ಭೇಟಿ ನೀಡುತ್ತಿದ್ದಾರೆ.

'ಮೃಗಾಲಯದ ನಿರ್ವಹಣೆಗೆ ಅನುದಾನ ಬಿಡುಗಡೆ ಸೇರಿದಂತೆ ನಮ್ಮ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸಿದೆ. ಸದ್ಯ ಮೃಗಾಲಯಕ್ಕೆ ಗಂಭೀರ ಆರ್ಥಿಕ ಸಮಸ್ಯೆ ಎದುರಾಗಿಲ್ಲ' ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.



ವಾರಾಂತ್ಯ ಕರ್ಫ್ಯೂ ಕಾರಣ ಚಾಮರಾಜೇಂದ್ರ ಮೃಗಾಲಯ ಬಿಕೋ ಎನ್ನುತ್ತಿತ್ತು

ಕಳೆದ ವರ್ಷ ₹7 ಕೋಟಿ ಆದಾಯ

ಎರಡು ವರ್ಷಗಳಲ್ಲಿ ಮೈಸೂರು ಮೃಗಾಲಯದ ಆದಾಯ ಭಾರಿ ಕುಸಿತ ಕಂಡಿದೆ. 2020ರಲ್ಲಿ ₹7.40 ಕೋಟಿ ಹಾಗೂ 2021ರಲ್ಲಿ ₹7.20 ಕೋಟಿ ಆದಾಯ ಸಂಗ್ರಹವಾಗಿತ್ತು. ಕೋವಿಡ್ ಬರುವುದಕ್ಕಿಂತಲೂ ಮುಂಚೆ ಪ್ರತಿ ವರ್ಷ ಸರಾಸರಿ ₹20 ಕೋಟಿಗೂ ಅಧಿಕ ಆದಾಯ ಬರುತ್ತಿತ್ತು. 2019ರಲ್ಲಿ ₹27 ಕೋಟಿ ಸಂಗ್ರಹವಾಗಿತ್ತು. ಕೋವಿಡ್ ಕಾರಣ ವಾರ್ಷಿಕ ಆದಾಯ ಸಂಗ್ರಹ ಸರಾಸರಿ ₹20 ಕೋಟಿಯಷ್ಟು ಕಡಿಮೆಯಾಗಿದೆ.

ಏಷ್ಯಾದ ಮೊದಲ ಕೇಂದ್ರ • ತುಮಕೂರು ಜಿಲ್ಲೆಯ ಕುಣಿಗಲ್ ಬಳಿ ಕಾರ್ಯಾರಂಭ

ಜೋಳದ ತಳಿ ಅಭಿವೃದ್ಧಿಗೆ ವಿಶೇಷ ಕೇಂದ್ರ

• ಮನೋಹರ್ ಎಂ.



'ಡಬಲ್ಡ್ ಹ್ಯಾಪ್ಲಾಯ್ಡ್' ಉತ್ಪಾದನಾ ಕೇಂದ್ರದ ಲ್ಯಾಬ್



ಪೋಷಕ ಸಾಲುಗಳನ್ನು ಉತ್ಪಾದಿಸುವ ಹಸಿರುಮನೆ (ಪಾಲಿಹೌಸ್)

ಪ್ರಜಾವಾಣಿ ವಿಶೇಷ


ಬೆಂಗಳೂರು: 'ಡಬಲ್ಡ್ ಹ್ಯಾಪ್ಲಾಯ್ಡ್' ವಿಧಾನದ ಮೂಲಕ ಮೆಕ್ಕೆ ಜೋಳದ ಹೈಬ್ರಿಡ್ ತಳಿಗಳ ಅಭಿವೃದ್ಧಿಗೆ ಅಗತ್ಯ ಪೋಷಕ ಸಾಲುಗಳನ್ನು (ಪೇರೆಂಟಲ್ ಲೈನ್ಸ್) ಕೃತಕವಾಗಿ ಉತ್ಪಾದಿಸುವ ಕೇಂದ್ರವನ್ನು ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ವತಿಯಿಂದ ಕುಣಿಗಲ್‌ನಲ್ಲಿ ಆರಂಭಿಸಲಾಗಿದೆ.

ಕುಣಿಗಲ್‌ನ ರಂಗಸ್ವಾಮಿಗುಡ್ಡದ ಕಾವಲ್ ಬಳಿ ಇರುವ ವಿಶ್ವವಿದ್ಯಾಲಯದ ಕೃಷಿ ಸಂಶೋಧನಾ ಕೇಂದ್ರದ ವಿಶಾಲ ಪ್ರದೇಶದಲ್ಲಿ ಈ ಕೇಂದ್ರ ತೆರೆಯಲು ಮೆಕ್ಸಿಕೋದ ಅಂತರರಾಷ್ಟ್ರೀಯ ಮೆಕ್ಕೆ ಜೋಳ ಮತ್ತು ಗೋಧಿ ಸುಧಾರಣಾ ಕೇಂದ್ರ (ಸಿಐಎಂಎಂವೈಟಿ) ಹಾಗೂ ಬೆಂಗಳೂರು ಕೃಷಿ ಸಂಶೋಧನಾ ವಿಶ್ವವಿದ್ಯಾಲಯ (ಯುಎಎಸ್-ಬಿ) ನಡುವೆ ಒಪ್ಪಂದ ಆಗಿತ್ತು.

ಅದರಂತೆ ಈ ಕೇಂದ್ರ ನಿರ್ಮಾಣಕ್ಕೆ ಸಿಐಎಂಎಂವೈಟಿ ಆರ್ಥಿಕ ನೆರವು ನೀಡಿತ್ತು. ಮೂರು ವರ್ಷಗಳಲ್ಲಿ ಈ ಕೇಂದ್ರದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಕಳೆದ ಡಿಸೆಂಬರ್‌ನಿಂದ ಕಾರ್ಯಾರಂಭಗೊಂಡಿದೆ.

ಹ್ಯಾಪ್ಲಾಯ್ಡ್ ಕೋಶಗಳು ವರ್ಣತಂತು (ಕ್ರೋಮೋಸೋಮ್) ದ್ವಿಗುಣಗೊಂಡಾಗ ರೂಪುಗೊಂಡ ಜೀನೋಟೈಪ್. ಈ ದ್ವಿಗುಣಗೊಂಡ ಹ್ಯಾಪ್ಲಾಯ್ಡ್‌ಗಳ ಕೃತಕ ಉತ್ಪಾದನೆಯು ಸಸ್ಯಗಳ ಸಂತಾನೋತ್ಪತ್ತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಪ್ರಕ್ರಿಯೆಗೆ ಪೂರಕವಾದ ತಾಂತ್ರಿಕತೆ ಈ ಕೇಂದ್ರದಲ್ಲಿದೆ.

'ಮೆಕ್ಕೆಜೋಳದ ಬೆಳೆಯಲ್ಲಿ ಹ್ಯಾಪ್ಲಾಯ್ಡ್ ಸಂತತಿಯನ್ನು ಉತ್ಪಾದಿಸಿ, ನಂತರ 'ಕಾಲ್ಚಿಸಿನ್' ರಾಸಾಯನಿಕದ ಸಹಾಯದಿಂದ ದ್ವಿಗುಣಗೊಂಡ ಪೋಷಕ ಸಾಲುಗಳನ್ನು ಈ ಕೇಂದ್ರದಲ್ಲಿ ಉತ್ಪಾದಿಸಲಾಗುತ್ತದೆ. ಇವುಗಳ ಉತ್ಪಾದನೆಗೆ ಮೊದಲು 6 ವರ್ಷಗಳಷ್ಟು ಸಮಯ ಬೇಕಾಗಿತ್ತು. ಹ್ಯಾಪ್ಲಾಯ್ಡ್ ವಿಧಾನದ ಮೂಲಕ ಕೇವಲ ಎರಡೇ ವರ್ಷಗಳಲ್ಲಿ ಪೋಷಕ ಸಾಲುಗಳನ್ನು ಉತ್ಪಾದಿಸಬಹುದು' ಎಂದು ಈ ಕೇಂದ್ರದ ಸಂಯೋಜಕ ಹಾಗೂ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಧಾನ ವಿಜ್ಞಾನಿ ಎಚ್.ಸಿ.ಲೋಹಿತಾಶ್ವ 'ಪ್ರಜಾವಾಣಿ'ಗೆ ತಿಳಿಸಿದರು.



ಲೋಹಿತಾಶ್ವ

'ಹಸಿರುಮನೆಯಲ್ಲಿ (ಪಾಲಿಹೌಸ್) ಮೊದಲು ಪೋಷಕ ಸಾಲುಗಳ ಉತ್ಪಾದನೆ ನಡೆಯುತ್ತದೆ. ನಂತರ ಅದನ್ನು ಬಯಲು ಪ್ರದೇಶದ ಸಂಶೋಧನಾ ತಾಕುಗಳಲ್ಲಿ ಬೆಳೆಸುತ್ತೇವೆ. ತಳಿಗಳಿಗೆ ಬೇಕಿರುವ ಪೋಷಕ ಸಾಲುಗಳನ್ನು ತ್ವರಿತಗತಿಯಲ್ಲಿ ಉತ್ಪಾದಿಸಿ ಅವುಗಳನ್ನು ರಾಜ್ಯ ಹಾಗೂ ದೇಶದ ಎಲ್ಲ ಸರ್ಕಾರಿ ಮತ್ತು ಖಾಸಗಿ ಬೀಜೋತ್ಪಾದನಾ ಸಂಸ್ಥೆಗಳಿಗೆ ತಲುಪಿಸುವ ಕೆಲಸವನ್ನು ಈ ಕೇಂದ್ರ ಮಾಡಲಿದೆ. ಕೇಂದ್ರದಿಂದ ಸ್ಥಳೀಯರಿಗೆ ಉದ್ಯೋಗಾವಕಾಶಗಳು ಸಿಗಲಿದ್ದು, ರೈತರಿಗೂ ವರದಾನವಾಗಲಿದೆ' ಎಂದು ವಿವರಿಸಿದರು.

'ರಾಜ್ಯದಲ್ಲಿ ಹೆಚ್ಚಾಗಿ ಮೆಕ್ಕೆಜೋಳ ಬೆಳೆಯುತ್ತಿರುವುದರಿಂದ ವಿಶ್ವವಿದ್ಯಾಲಯದಲ್ಲಿ ಮೆಕ್ಕೆಜೋಳದ ಅಭಿವೃದ್ಧಿ ಕುರಿತು ಸಂಶೋಧನೆಗಳು ನಿರಂತರವಾಗಿ ನಡೆಯುತ್ತಿವೆ. ಕೀನ್ಯಾ ಹಾಗೂ ಮೆಕ್ಸಿಕೋಗಳಲ್ಲಿ ಮಾತ್ರ ಇಂತಹ ಉತ್ಪಾದನಾ ಕೇಂದ್ರಗಳಿದ್ದವು. ಕುಣಿಗಲ್‌ನ ಈ ಕೇಂದ್ರವು ಏಷ್ಯಾದಲ್ಲೇ ಮೊದಲ ಡಬಲ್ಡ್ ಹ್ಯಾಪ್ಲಾಯ್ಡ್ ಉತ್ಪಾದನಾ ಕೇಂದ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ದೇಶದ ಸರ್ಕಾರಿ ವಲಯದಲ್ಲೂ ಇಂತಹ ಪ್ರಯತ್ನ ನಡೆದಿದ್ದು ಇದೇ ಮೊದಲು' ಎಂದರು.

ಅಂಕಿ-ಅಂಶಗಳು

12 ಎಕರೆ
'ಡಬಲ್ಡ್ ಹ್ಯಾಪ್ಲಾಯ್ಡ್' ಉತ್ಪಾದನಾ ಕೇಂದ್ರದ ವಿಸ್ತೀರ್ಣ

45 ಸಾವಿರ
ಪೋಷಕ ಸಾಲುಗಳ ಉತ್ಪಾದನಾ ಸಾಮರ್ಥ್ಯ (ವಾರ್ಷಿಕ)

₹4 ಕೋಟಿ
ಕೇಂದ್ರದ ನಿರ್ಮಾಣಕ್ಕೆ ತಗುಲಿದ ಅಂದಾಜು ವೆಚ್ಚ


ಮೊಟ್ಟೆಯನ್ನೂ ಬಿಡದ ಮೂಢನಂಬಿಕೆ!

• ಆರ್.ಚೌಡರೆಡ್ಡಿ

ಶ್ರೀನಿವಾಸಪುರ (ಕೋಲಾರ ಜಿಲ್ಲೆ): ತಾಲ್ಲೂಕಿನ ಪನಸಮಾಕನಹಳ್ಳಿ ಗ್ರಾಮದ ರೈತರೊಬ್ಬರು ಸಾಕಿರುವ ನಾಟಿ ಕೋಳಿಯೊಂದು ವಿವಿಧ ಗಾತ್ರದ ಮೊಟ್ಟೆಗಳನ್ನು ಇಡುವುದರ ಮೂಲಕ ಜನರ ಗಮನ ಸೆಳೆದಿದೆ.

'ಈ ಕೋಳಿ ಮೊದಲ ಸಲ 11 ಮೊಟ್ಟೆ ಇಟ್ಟಿತ್ತು. ಮೊಟ್ಟೆಗಳ ಗಾತ್ರದಲ್ಲಿ ಯಾವುದೇ ವ್ಯತ್ಯಾಸ ಇರಲಿಲ್ಲ. ಎಂಟು ಮರಿಗಳನ್ನೂ ಮಾಡಿತ್ತು. ಮರಿಗಳನ್ನು ಬಿಟ್ಟ ಮೇಲೆ, ಎರಡನೇ ಸಲ ಮೊಟ್ಟೆ ಇಡುತ್ತಿದೆ. ಪ್ರಾರಂಭದಲ್ಲಿ ಮೊಟ್ಟೆಗಳು ಸಾಮಾನ್ಯ ಗಾತ್ರ ಹೊಂದಿದ್ದವು. ಮತ್ತೆ ಚಿಕ್ಕದಾದ, ಇನ್ನೂ ಚಿಕ್ಕದಾದ ಮೊಟ್ಟೆ ಇಡಲು ಪ್ರಾರಂಭಿಸಿತು. ಕೋಳಿ ಮೊಟ್ಟೆ ಗೌಜಿಗ ಹಕ್ಕಿ ಮೊಟ್ಟೆಯ ಗಾತ್ರದ ಮೊಟ್ಟೆ ಇಡುವುದನ್ನು ಕಂಡು ಆಶ್ಚರ್ಯವಾಯಿತು' ಎಂದು ರೈತ ಚಂದ್ರಶೇಖರ್ 'ಪ್ರಜಾವಾಣಿ'ಗೆ ತಿಳಿಸಿದರು.

ಇಂಥ ಅತಿ ಚಿಕ್ಕ ಕೋಳಿ ಮೊಟ್ಟೆಯನ್ನು 'ಕಲ್ಲು ಮೊಟ್ಟೆ' ಎಂದು ಕರೆಯುವುದು ರೂಢಿ. ಇಂಥ ಮೊಟ್ಟೆ ಇಡುವುದು ಅನಿಷ್ಟದ ಸಂಕೇತ ಎಂದು ಗ್ರಾಮೀಣ ಜನರು ಭಾವಿಸುತ್ತಾರೆ. ಇದನ್ನು ಬಲಿ ಕೊಡಬೇಕು ಎನ್ನುತ್ತಾರೆ.



ಪನಸಮಾಕನಹಳ್ಳಿ ಗ್ರಾಮದ ರೈತರೊಬ್ಬರು ಸಾಕಿರುವ ನಾಟಿ ಕೋಳಿಯೊಂದು ವಿವಿಧ ಗಾತ್ರದ ಮೊಟ್ಟೆ ಇಡುವುದರ ಮೂಲಕ ಜನರ ಗಮನ ಸೆಳೆದಿದೆ

ಕಲ್ಲು ಮೊಟ್ಟೆ ಇಟ್ಟ ಕೋಳಿಯನ್ನು ಬಲಿ ಕೊಡುವ ಮೊದಲು ಪೂಜೆ ಸಲ್ಲಿಸಲಾಗುತ್ತದೆ. ಮನೆಯ ಹಿರಿಯ ವ್ಯಕ್ತಿ ಹೊಸಿಲಿನ ಮೇಲೆ ಕತ್ತು ಕತ್ತರಿಸುತ್ತಾನೆ. ಆಗ ಮನೆ ಮಂದಿ ಬಂದ ಗ್ರಹಚಾರ ದೂರವಾಯಿತು ಎಂದು ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ. ಇದು ಪಾರಂಪರಿಕವಾಗಿ ನಡೆದು ಬಂದಿರುವ ಆಚರಣೆ.

'ಕೋಳಿ ಸಾಕಣೆ ಮಾಡುವ ರೈತರು ಮೂಢನಂಬಿಕೆ ಬಿಡಬೇಕು. ಕೋಳಿಯ ದೇಹದಲ್ಲಿ ಕ್ಯಾಲ್ಸಿಯಂ ಕೊರತೆ ಆದಾಗ ಕಡಿಮೆ ಗಾತ್ರದ ಮೊಟ್ಟೆ ಇಡುತ್ತದೆ. ಅದಕ್ಕೆ ಚಿಕಿತ್ಸೆ ನೀಡಬೇಕಾದ ಅಗತ್ಯವಿಲ್ಲ. ತಾನೇ ತಾನಾಗಿ ಸರಿಹೋಗುತ್ತದೆ' ಎಂದು ಪಶು ವೈದ್ಯಾಧಿಕಾರಿ ಡಾ. ಆರ್. ನಾಗಭೂಷಣರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

ಫೈನಾನ್ಸ್ ಕಂಪನಿ ಸಿಬ್ಬಂದಿ ಸುಲಿಗೆ: ರೌಡಿ ಬಂಧನ

ಬೆಂಗಳೂರು: ಫೈನಾನ್ಸ್ ಕಂಪನಿ ಸಿಬ್ಬಂದಿ ಬೆದರಿಸಿ ಸುಲಿಗೆ ಮಾಡಿದ್ದ ಆರೋಪದಡಿ ರೌಡಿ ತಬ್ರೇಜ್ ಪಾಷಾ ಅಲಿಯಾಸ್ ಚೋಟಾ ಟೈಗರ್ ಎಂಬಾತನನ್ನು ಜೆ.ಸಿ. ನಗರ ಪೊಲೀಸರು ಬಂಧಿಸಿದ್ದಾರೆ.

'ಗೋಕುಲಂ ಚೀಟ್ ಮತ್ತು ಫೈನಾನ್ಸ್ ಕಂಪನಿ ಸಿಬ್ಬಂದಿ ಬಳಿ ಹಣ ಸುಲಿಗೆ ಮಾಡಿದ್ದ. ಬಂಧಿತನಿಂದ ₹ 10 ಸಾವಿರ ನಗದು ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದರೋಡೆ, ಸುಲಿಗೆ, ಹಲ್ಲೆ, ಕೊಲೆ ಯತ್ನ ಸೇರಿದಂತೆ ಈತ ವಿರುದ್ಧ 16 ಪ್ರಕರಣಗಳಿವೆ. ರೌಡಿ ಪಟ್ಟಿಯಲ್ಲಿದ್ದಾನೆ. ಮಾರಕಾಸ್ತ್ರ ಹಿಡಿದು, ಸಾರ್ವಜನಿಕರನ್ನು ಅಡ್ಡಗಟ್ಟಿ ಬೆದರಿಸಿ ಸುಲಿಗೆ ಮಾಡುವುದನ್ನೇ ವೃತ್ತಿ ಮಾಡಿಕೊಂಡಿದ್ದ.'

'ಫೈನಾನ್ಸ್ ಸಿಬ್ಬಂದಿ 2021ರ ಡಿಸೆಂಬರ್ 17ರಂದು ಬೇಕರಿಗೆ ಹಣ ಸಂಗ್ರಹಿಸಲು ಹೋಗಿದ್ದರು. ಅದೇ ವೇಳೆ ರೌಡಿ, ಮಾರಕಾಸ್ತ್ರ ತೋರಿಸಿ ಕೊಲೆ ಬೆದರಿಕೆಯೊಡ್ಡಿದ್ದ. ನಗದು ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದ. ಘಟನಾ ಸ್ಥಳದಲ್ಲಿ ಸಿಕ್ಕ ಪುರಾವೆಗಳನ್ನು ಆಧರಿಸಿ ರೌಡಿಯನ್ನು ಬಂಧಿಸಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

ಗ್ಯಾಸ್ ಗೀಸರ್ ಅನಿಲ ಸೋರಿಕೆ ತಾಯಿ – ಮಗಳು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಾಣಾವರದ ಮನೆಯೊಂದರ ಸ್ನಾನದ ಕೊಠಡಿಯಲ್ಲಿ ಗ್ಯಾಸ್ ಗೀಸರ್‌ನಿಂದ ಕಾರ್ಬನ್ ಮೊನಾಕ್ಸೈಡ್ ಸೋರಿಕೆಯಾಗಿ ತಾಯಿ–ಮಗಳು ಮೃತಪಟ್ಟಿದ್ದಾರೆ.

ಸ್ಥಳೀಯ ನಿವಾಸಿ ಮಂಗಳಮ್ಮ (35) ಹಾಗೂ ಅವರ ಮಗಳು ಗೌತಮಿ (7) ಮೃತರು. ಘಟನೆ ಬಗ್ಗೆ ಸೋಲದೇವನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೆಲ ವರ್ಷದ ಹಿಂದೆ ನಗರಕ್ಕೆ ಬಂದಿದ್ದ ರಾಮನಗರದ ನರಸಿಂಹಮೂರ್ತಿ -ಮಂಗಳಮ್ಮ ದಂಪತಿ, ಚಿಕ್ಕಬಾಣಾವರದಲ್ಲಿ ಬಾಡಿಗೆಮನೆಯಲ್ಲಿದ್ದರು. ದಂಪತಿಯ ಮಗಳು ಗೌತಮಿ, 1ನೇ ತರಗತಿಯಲ್ಲಿ ಓದುತ್ತಿದ್ದಳು.'

'ವೆಲ್ಡಿಂಗ್ ಕೆಲಸ ಮಾಡುತ್ತಿದ್ದ ನರಸಿಂಹಮೂರ್ತಿ, ಭಾನುವಾರ ಬೆಳಿಗ್ಗೆ 9 ಗಂಟೆಗೆ ಮನೆಯಿಂದ ಕೆಲಸದ ಸ್ಥಳಕ್ಕೆ ಹೋಗಿದ್ದ ಸಂದರ್ಭದಲ್ಲೇ ಈ ಅವಘಡ ಸಂಭವಿಸಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕಿಟಕಿ, ಬಾಗಿಲು ಬಂದ್: 'ಮಂಗಳಮ್ಮ, ಗೌತಮಿ ಸ್ನಾನಕ್ಕೆ ಹೋಗಿದ್ದರು. ಸ್ನಾನದ ಕೊಠಡಿ ಬಾಗಿಲು, ಕಿಟಕಿ ಬಂದ್ ಮಾಡಿದ್ದರು. ಬಿಸಿನೀರಿಗೆ ಗ್ಯಾಸ್ ಗೀಸರ್ ಆನ್ ಮಾಡಿದ್ದರು. ಕಾರ್ಬನ್ ಮೋನಾಕ್ಸೈಡ್ ಸೋರಿ ಕೊಠಡಿ ಆವರಿಸಿತ್ತು. ಉಸಿರಾಡಲಾಗದೇ ಇಬ್ಬರು ಕೊಠಡಿಯಲ್ಲೇ ಮೃತಪಟ್ಟಿದ್ದಾರೆ' ಎಂದೂ ಮೂಲಗಳು ವಿವರಿಸಿವೆ.

ಕರೆ ಸ್ವೀಕರಿಸದಿದ್ದರಿಂದ ಅನುಮಾನ: 'ಕೆಲಸಕ್ಕೆ ಹೋಗಿದ್ದ ಪತಿ ನರಸಿಂಹಮೂರ್ತಿ, ಮಂಗಳಮ್ಮ ಅವರ ಮೊಬೈಲ್‌ಗೆ ಮಧ್ಯಾಹ್ನ ಹಲವು ಬಾರಿ ಕರೆ ಮಾಡಿದ್ದರು. ಪ್ರತಿಕ್ರಿಯೆ ಬಂದಿರಲಿಲ್ಲ. ಆತಂಕಗೊಂಡ ಅವರು, ಮನೆ ಮಾಲೀಕರಿಗೆ ಕರೆ ಮಾಡಿದ್ದರು. ಮನೆಗೆ ಹೋಗಿ ನೋಡಲು ಕೋರಿದ್ದರು' ಎಂದು ಮೂಲಗಳು ಹೇಳಿವೆ.

'ಮಾಲೀಕರು ಮನೆಗೆ ಹೋದಾಗ, ಒಳಗಿನಿಂದ ಬಾಗಿಲು ಲಾಕ್ ಮಾಡಲಾಗಿತ್ತು. ಅದನ್ನು ಮುರಿದು ಒಳಹೋಗಿ ನೋಡಿದಾಗ ಸ್ನಾನದ ಕೊಠಡಿಯಲ್ಲಿ ತಾಯಿ– ಮಗಳ ಮೃತದೇಹ ಕಂಡಿದ್ದವು' ಎಂದೂ ತಿಳಿಸಿವೆ.

'ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಿ ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ. ಗ್ಯಾಸ್ ಗೀಸರ್‌ನಿಂದ ಅನಿಲ ಸೋರಿಕೆ ಆಗಲು ಕಾರಣವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಚಿಂದಿ ಆಯುವ ವಿಚಾರಕ್ಕೆ ಗಲಾಟೆ: ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಚಿಂದಿ ಆಯುವ ವಿಚಾರಕ್ಕಾಗಿ ಗಲಾಟೆ ನಡೆದಿದ್ದು, ಮೋಹನ್‌ಕುಮಾರ್ (40) ಎಂಬುವರನ್ನು ಕೊಲೆ ಮಾಡಲಾಗಿದೆ.

'ಬೈರತಿ ನಿವಾಸಿ ಮೋಹನ್‌ಕುಮಾರ್, ಚಿಂದಿ ಆಯುವ ಕೆಲಸ ಮಾಡುತ್ತಿದ್ದರು. ಅವರ ಕೊಲೆ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಮೋಹನ್‌ಕುಮಾರ್ ಹಾಗೂ ಪರಿಚಯಸ್ಥನೇ ಆದ ಆರೋಪಿ, ಒಟ್ಟಿಗೆ ಚಿಂದಿ ಆಯುತ್ತಿದ್ದರು. ಚಿಂದಿ ಆಯುವ ವಿಚಾರಕ್ಕಾಗಿ ಅವರಿಬ್ಬರ ನಡುವೆ ಜಗಳ ಶುರುವಾಗಿತ್ತು. ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಅದೇ ವೇಳೆ ಆರೋಪಿ, ಚಾಕುವಿನಿಂದ ಮೋಹನ್ ಅವರ ಹೊಟ್ಟೆಗೆ ಇರಿದು ಪರಾರಿಯಾಗಿದ್ದಾನೆ.'

'ತೀವ್ರ ಗಾಯಗೊಂಡು ನರಳುತ್ತಿದ್ದ ಮೋಹನ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟಿದ್ದಾರೆ' ಎಂದೂ ತಿಳಿಸಿದರು.

ವಿಮಾನ ಇಂಧನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ವಿಮಾನ ಇಂಧನ ದರವನ್ನು ಭಾನುವಾರ ಶೇಕಡ 4.2ರಷ್ಟು ಹೆಚ್ಚಿಸಲಾಗಿದೆ. ಇದು ಈ ತಿಂಗಳಲ್ಲಿ ಮಾಡಿರುವ ಎರಡನೆಯ ಬೆಲೆ ಹೆಚ್ಚಳ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಏರಿಕೆ ಆಗಿರುವ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ.

ವಿಮಾನ ಇಂಧನ ದರವನ್ನು ಕಿಲೋ ಲೀಟರ್‌ಗೆ ₹ 3,232ರಷ್ಟು ಹೆಚ್ಚಿಸಲಾಗಿದೆ. ರಾಜಧಾನಿ ದೆಹಲಿಯಲ್ಲಿ ವಿಮಾನ ಇಂಧನ ಬೆಲೆಯು ಕಿಲೋ ಲೀಟರ್‌ಗೆ ₹ 79,294ಕ್ಕೆ ತಲುಪಿದೆ.

ಕರ್ಫ್ಯೂ ನಡುವೆಯೂ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಉತ್ತರ ಮತಕ್ಷೇತ್ರದ ಬಿಜೆಪಿ ಶಾಸಕ ಅನಿಲ ಬೆನಕೆ ನೇತೃತ್ವದಲ್ಲಿ ಮುಖಂಡರು ಮತ್ತು ಅಭಿಮಾನಿಗಳು ಧರ್ಮವೀರ ಸಂಭಾಜಿ ಮಹಾರಾಜರ ಪಟ್ಟಾಭಿಷೇಕ ದಿನದ ಸ್ಮರಣಾ ಕಾರ್ಯಕ್ರಮವನ್ನು ಇಲ್ಲಿನ ಸಂಭಾಜಿ ವೃತ್ತದಲ್ಲಿ ವಾರಾಂತ್ಯ ಕರ್ಫ್ಯೂ ನಡುವೆಯೂ ಭಾನುವಾರ ನಡೆಸಿದ್ದಾರೆ.

ಪ್ರತಿಮೆಗೆ ಮಾಲಾರ್ಪಣೆ, ಜಲಾಭಿಷೇಕ ಮಾಡಿ, ಪೂಜೆ ಸಲ್ಲಿಸಿದ್ದಾರೆ. ಮಾಸ್ಕ್ ಧರಿಸದೆ ಒಂದೇ ಕಡೆ 20ಕ್ಕೂ ಹೆಚ್ಚು ಜನರು ಸೇರಿ ಮಹಾಮಂಗಳರಾತಿಯನ್ನೂ ಮಾಡಿದ್ದಾರೆ.

ನಗರಪಾಲಿಕೆ ಸದಸ್ಯ ಜಯತೀರ್ಥ ಸವದತ್ತಿ, ಮುಖಂಡರಾದ ಸುನಿಲ ಜಾಧವ, ನಿಶಾಂತ ಕುಡೆ, ಶ್ರೀನಾಥ ಪವಾರ, ಆದಿತ್ಯ ಪವಾರ, ಓಂಕಾರ ಮೋಹಿತೆ, ಸೌರಭ ಬಾಮನೆ ಮತ್ತಿತರರು ಪಾಲ್ಗೊಂಡಿದ್ದರು. ಕೋವಿಡ್ ಮಾರ್ಗಸೂಚಿ ಉಲ್ಲಂಘನೆ ಹಿನ್ನೆಲೆಯಲ್ಲಿ ಪ್ರಕರಣ ದಾಖಲಾಗಿಲ್ಲ.ಶಾಸಕರಿಂದ ಪ್ರತಿಕ್ರಿಯೆಗೆ ಪ್ರಯತ್ನಿಸಲಾಯಿತು. ಆದರೆ, ಅವರು ಮೊಬೈಲ್ ಕರೆ ಸ್ವೀಕರಿಸಲಿಲ್ಲ. 'ಘಟನೆಯ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಡಿಸಿಪಿ ರವೀಂದ್ರ ಗಡಾದ ತಿಳಿಸಿದರು.



ಬೆಳಗಾವಿಯ ಧರ್ಮವೀರ ಸಂಭಾಜಿ ಮಹಾರಾಜರ ಪಟ್ಟಾಭಿಷೇಕ ದಿನದ ಸ್ಮರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕ ಅನಿಲ ಬೆನಕೆ ಮತ್ತಿತರರು ಮಾಸ್ಕ್ ಧರಿಸಿರಲಿಲ್ಲ

ಪಿಸ್ತೂಲ್, ಗುಂಡುಗಳಿದ್ದ ಬ್ಯಾಗ್ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಮೂರ್ತಿಯೊಬ್ಬರ ಅಂಗರಕ್ಷಕನ ಪಿಸ್ತೂಲ್, 10 ಜೀವಂತ ಗುಂಡುಗಳಿದ್ದ ಬ್ಯಾಗ್ ಕಳುವಾದ ಬಗ್ಗೆ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಬ್ಯಾಗ್‌ಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

'ಬ್ಯಾಗ್ ಕಳುವಾದ ಬಗ್ಗೆ ಅಂಗರಕ್ಷಕ ಕಲ್ಲಯ್ಯ ಮಠಪತಿ (42) ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಜಯಪುರದ ಕಲ್ಲಯ್ಯ, ನಿವೃತ್ತ ಸೈನಿಕ. 2019ರಲ್ಲಿ ಪೊಲೀಸ್ ಇಲಾಖೆ ಸೇರಿದ್ದರು. 2020ರಿಂದ ನ್ಯಾಯಮೂರ್ತಿಯೊಬ್ಬರ ಅಂಗರಕ್ಷಕರಾಗಿ ಸೇರಿಕೊಂಡಿದ್ದರು. ಕೆಲಸ ನಿಮಿತ್ತ ತಮ್ಮೂರಿಗೆ ಹೊರಟಿದ್ದ ಕಲ್ಲಯ್ಯ, ಡಿ.25ರಂದು ರಾತ್ರಿ ಮೆಜೆಸ್ಟಿಕ್‌ಗೆ ಬಂದಿದ್ದರು.'

'ಬಸ್ ಟಿಕೆಟ್ ಕಾಯ್ದಿರಿಸಲು ಮಳಿಗೆಯೊಂದಕ್ಕೆ ಹೋಗಿದ್ದರು. ಪಕ್ಕದಲ್ಲೇ ಬ್ಯಾಗ್ ಇಟ್ಟುಕೊಂಡಿದ್ದರು. ಟಿಕೆಟ್ ಕಾಯ್ದಿರಿಸುವುದರಲ್ಲಿ ಮಗ್ನರಾಗಿದ್ದಾಗ ಅಪರಿಚಿತರು, ಬ್ಯಾಗ್ ಒಯ್ದಿದ್ದಾರೆ. ಹುಡುಕಾಡಿದರೂ ಬ್ಯಾಗ್ ಸಿಕ್ಕಿಲ್ಲ' ಎಂದೂ ತಿಳಿಸಿವೆ.

'ಮೇಕೆದಾಟು: ತಜ್ಞರ ಅಭಿಪ್ರಾಯ ಆಧರಿಸಿ ಬಿಕ್ಕಟ್ಟು ಬಗೆಹರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ಯೋಜನೆ ಸಂಬಂಧ ವಿವಿಧ ಕ್ಷೇತ್ರಗಳ ತಜ್ಞರ ಜೊತೆ ಚರ್ಚಿಸಬೇಕು. ತಜ್ಞರ ಸಭೆಯ ಒಮ್ಮತ ಅಭಿಪ್ರಾಯದ ಆಧಾರದಲ್ಲಿ ಬಿಕ್ಕಟ್ಟು ಬಗೆಹರಿಸಲು ನಿರ್ಣಯ ಕೈಗೊಳ್ಳಬೇಕು' ಎಂದು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಕರ್ನಾಟಕ ರಾಜ್ಯ ಸಮಿತಿ ಸರ್ಕಾರಕ್ಕೆ ಒತ್ತಾಯಿಸಿದೆ.

'ಜನಪರ ಕಾಳಜಿಯ ಎಂಜಿನಿಯರ್‌ಗಳು, ನೀರಾವರಿ ತಜ್ಞರು, ಪರಿಸರ ತಜ್ಞರು, ಕಾನೂನು ತಜ್ಞರು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸಂಘಟನೆಗಳು ಹಾಗೂ ಇತರ ವಲಯದ ಪ್ರಮುಖರ ಜೊತೆ ಸಭೆ ನಡೆಸಿ ಅಭಿಪ್ರಾಯ ಆಲಿಸಬೇಕು. ಯೋಜನೆಗೆ ಪರ್ಯಾಯವಾಗಿ ಪರಿಸರಕ್ಕೆ ಮಾರಕವಾಗದ ಯೋಜನೆಗಳಿದ್ದರೆ ಆ ಕುರಿತು ಚಿಂತಿಸಬೇಕು' ಎಂದು ಎಸ್‌ಯುಸಿಐ (ಸಿ) ರಾಜ್ಯ ಘಟಕದ ಕಾರ್ಯದರ್ಶಿ ಕೆ.ಉಮಾ ತಿಳಿಸಿದ್ದಾರೆ.

'ಕಳಸಾ-ಬಂಡೂರಿ, ಕಾವೇರಿ ಕೊಳ್ಳ ವ್ಯಾಪ್ತಿಯಲ್ಲಿ ಬರುವ ಇನ್ನಿತರ ನದಿಗಳ ನೀರು ಹಂಚಿಕೆ ವಿವಾದಗಳನ್ನು ಶೀಘ್ರವೇ ಬಗೆಹರಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು. ಸಂಬಂಧಪಟ್ಟ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಚರ್ಚಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಪಕ್ಷಗಳು ರಾಜಕೀಯ ಲಾಭಕ್ಕಾಗಿ ನದಿ ನೀರಿನಂತಹ ಅತಿ ಸೂಕ್ಷ್ಮ ವಿಚಾರಗಳನ್ನು ಬಳಸಿಕೊಂಡು ಕೆಸರೆರಚಾಟ ನಡೆಸುತ್ತಿರುವುದು ಖಂಡನೀಯ. ಆರೋಪ-ಪ್ರತ್ಯಾರೋಪ ಬಿಟ್ಟು ಒಗ್ಗಟ್ಟು ಪ್ರದರ್ಶಿಸಬೇಕು. ಪ್ರಧಾನ ಮಂತ್ರಿಯವರು ಮಧ್ಯಪ್ರವೇಶಿಸಿ ಈ ವಿವಾದಗಳನ್ನು ಶಮನಗೊಳಿಸಲು ಯತ್ನಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಗಾಯಗೊಂಡಿದ್ದ ಕೃಷ್ಣಮೃಗ ಸಾವು

ಪ್ರಜಾವಾಣಿ ವಾರ್ತೆ

ಕೊಡಿಗೇನಹಳ್ಳಿ: ಪರಸ್ಪರ ಗುದ್ದಾಡಿಕೊಂಡು ಕಾಲಿಗೆ ಗಾಯ ಮಾಡಿಕೊಂಡಿದ್ದ ಕೃಷ್ಣಮೃಗವೊಂದಕ್ಕೆ ಸಕಾಲಕ್ಕೆ ಚಿಕಿತ್ಸೆ ಸಿಗದೆ ಸಾವನ್ನಪ್ಪಿದೆ.

ಐಡಿಹಳ್ಳಿ ಹೋಬಳಿ ಜನಕಲೋಟಿ ಗ್ರಾಮದ ಹೊರವಲಯದಲ್ಲಿ ಭಾನುವಾರ ಕೃಷ್ಣಮೃಗವೊಂದು ಎಡ ಭಾಗದ ಕಾಲಿಗೆ ತೀವ್ರಗಾಯ ಮಾಡಿಕೊಂಡು ರಕ್ತಸ್ರಾವವಾಗಿರುವುದನ್ನು ಗಮನಿಸಿದ ದೊಡ್ಡಯಲ್ಲೂರು ಗ್ರಾಮದ ಪ್ರಮುಖರು ಅರಣ್ಯ ಇಲಾಖಾಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ .

ಅಧಿಕಾರಿಗಳು ಬರುವುದು ವಿಳಂಬವಾಗಿದೆ. ಸಕಾಲಕ್ಕೆ ಚಿಕಿತ್ಸೆ ಸಿಗದೇ ಸಾವನ್ನಪ್ಪಿದೆ ಎಂದು ಐಡಿಹಳ್ಳಿ ಜಲಾಲ್ ಬಾಷಾ ಮತ್ತು ದೊಡ್ಡಯಲ್ಲೂರು ಲಕ್ಷ್ಮಿಪತಿ ತಿಳಿಸಿದ್ದಾರೆ.

ಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮ್ಯಾಚ್ ಫಿಕ್ಸಿಂಗ್; ಆಟಗಾರನಿಗೆ ₹ 40 ಲಕ್ಷ ಆಮಿಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ಮ್ಯಾಚ್ ಫಿಕ್ಸಿಂಗ್‌ನಲ್ಲಿ ಭಾಗಿಯಾಗುವಂತೆ ಆಟಗಾರರೊಬ್ಬರಿಗೆ ₹ 40 ಲಕ್ಷ ಆಮಿಷವೊಡ್ಡಲಾಗಿದ್ದು, ಈ ಬಗ್ಗೆ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತಮಿಳುನಾಡು ರಣಜಿ ತಂಡದ ಆಟಗಾರ ಸತೀಶ್ ರಾಜಗೋಪಾಲ್ ಅವರಿಗೆ ಹಣದ ಆಮಿಷವೊಡ್ಡಲಾಗಿದ್ದು, ಈ ಬಗ್ಗೆ ಲೋಕೇಶ್ ಎಂಬುವರು ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ಬನ್ನಿ ಆನಂದ್ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಐಪಿಎಲ್ ಪಂದ್ಯಾವಳಿಯಲ್ಲಿ ಕಿಂಗ್ಸ್ ಇಲೆವೆನ್ ಪಂಜಾಬ್, ಮುಂಬೈ ಇಂಡಿಯನ್ಸ್ ಹಾಗೂ ಕೊಲ್ಕತ್ತಾ ನೈಟ್ ರೈಡರ್ಸ್ ತಂಡಗಳಲ್ಲಿ ಸತೀಶ್ ಆಟವಾಡಿದ್ದರು. ಮುಂಬರುವ 'ತಮಿಳುನಾಡು ಪ್ರೀಮಿಯರ್ ಲೀಗ್ (ಟಿಎನ್‌ಪಿಎಲ್)' ಪಂದ್ಯಾವಳಿಯ 'ಚೆಪಾಕ್ ಸೂಪರ್ ಗಿಲ್ಲೀಸ್' ತಂಡದ ಪರ ಆಡಲು ತಯಾರಿ ನಡೆಸುತ್ತಿದ್ದಾರೆ'

'ಆಲ್‌ರೌಂಡರ್‌ಗಳಾದ ಸತೀಶ್, ಇನ್‌ಸ್ಟಾಗ್ರಾಂ ಆ್ಯಪ್‌ನಲ್ಲಿ ಖಾತೆ ಹೊಂದಿದ್ದಾರೆ. ಅವರಿಗೆ ಜ.3ರಂದು ಸಂದೇಶ ಕಳುಹಿಸಿದ್ದ ಆರೋಪಿ, 'ಟಿಎನ್‌ಪಿಎಲ್ ಪಂದ್ಯಾವಳಿ ಸಂದರ್ಭದಲ್ಲಿ ಮ್ಯಾಚ್ ಫಿಕ್ಸಿಂಗ್ ಮಾಡುತ್ತೇನೆ. ನೀವೂ ಭಾಗಿಯಾಗಬೇಕು. ಅದಕ್ಕಾಗಿ ₹ 40 ಲಕ್ಷ ನೀಡುತ್ತೇನೆ' ಎಂದಿದ್ದ. ಅದಕ್ಕೆ ಒಪ್ಪದ ಸತೀಶ್, ಬಿಸಿಸಿಐ ಭ್ರಷ್ಟಾಚಾರ ನಿಗ್ರಹ ಘಟಕಕ್ಕೆ ಇತ್ತೀಚೆಗಷ್ಟೇ ದೂರು ನೀಡಿದ್ದರು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಬಿಸಿಸಿಐ ಸೂಚನೆ ಮೇರೆಗೆ ಲೋಕೇಶ್ ಎಂಬುವರು ಜಯನಗರ ಠಾಣೆಗೆ ದೂರು ನೀಡಿದ್ದಾರೆ. ಆಟಗಾರ ಸತೀಶ್ ಅವರಿಗೆ ಸಂದೇಶ ರವಾನೆಯಾಗಿದ್ದ ಇನ್‌ಸ್ಟಾಗ್ರಾಂ ಖಾತೆಯನ್ನು ಆರೋಪಿ ಬನ್ನಿ ಆನಂದ್ ನಿರ್ವಹಣೆ ಮಾಡುತ್ತಿರುವುದು ಗೊತ್ತಾಗಿದೆ. ಆತ ಬೆಂಗಳೂರಿನಲ್ಲಿ ವಾಸವಿರುವ ಸಂಗತಿಯೂ ಪತ್ತೆಯಾಗಿದೆ. ಆತನ ಬಂಧನಕ್ಕೆ ವಿಶೇಷ ತಂಡ ತನಿಖೆ ಮುಂದುವರಿಸಿದೆ' ಎಂದೂ ಹೇಳಿವೆ.

'ಮ್ಯಾಚ್ ಫಿಕ್ಸಿಂಗ್‌ಗೆ ಇಬ್ಬರ ಒಪ್ಪಿಗೆ'

'ಆರೋಪಿ ಬನ್ನಿ ಆನಂದ್, ಸತೀಶ್ ರಾಜಗೋಪಾಲ್ ರೀತಿಯಲ್ಲೇ ಮತ್ತಷ್ಟು ಆಟಗಾರರಿಗೆ ಸಂದೇಶ ಕಳುಹಿಸಿದ್ದಾನೆ. ಆ ಪೈಕಿ ಕೆಲವರು, ಮ್ಯಾಚ್ ಫಿಕ್ಸಿಂಗ್‌ಗೆ ಒಪ್ಪಿರುವ ಮಾಹಿತಿಯೂ ಇದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು. 'ಟಿಎನ್‌ಪಿಎಲ್ ಪಂದ್ಯಾವಳಿಯಲ್ಲಿ ಮ್ಯಾಚ್ ಫಿಕ್ಸಿಂಗ್‌ನಲ್ಲಿ ಭಾಗಿಯಾಗಲು ಇಬ್ಬರು ಆಟಗಾರರು ಈಗಾಗಲೇ ಒಪ್ಪಿದ್ದಾರೆ' ಎಂಬುದಾಗಿ ಆರೋಪಿಯೇ ಸಂದೇಶದಲ್ಲಿ ಪ್ರಸ್ತಾಪಿಸಿದ್ದಾನೆ. ಆ ಆಟಗಾರರು ಯಾರು ಎಂಬುದು ತಿಳಿಯಬೇಕಿದೆ' ಎಂದೂ ಹೇಳಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಮೂಲ ಸ್ಥಳದಲ್ಲೇ ಫಲಕ ಅಳವಡಿಕೆ

ವರದಿ ಪರಿಣಾಮ

ಸಹಕಾರನಗರದ 20ನೇ ಅಡ್ಡರಸ್ತೆಯಲ್ಲಿ ಬೆಸ್ಕಾಂ ವತಿಯಿಂದ ವಿದ್ಯುತ್ ಪರಿವರ್ತಕ ಅಳವಡಿಕೆ ಕಾಮಗಾರಿ ವೇಳೆ ತೆರವು ಮಾಡಲಾಗಿದ್ದ ವಿಳಾಸದ ಫಲಕವನ್ನು ಮತ್ತೆ ಅದೇ ಜಾಗದಲ್ಲಿ ಅಳವಡಿಸಲಾಗಿದೆ.

ಬೆಸ್ಕಾಂ ವತಿಯಿಂದ ಆರು ತಿಂಗಳ ಹಿಂದೆ ಕಾಮಗಾರಿ ನಡೆದಿತ್ತು. ವಿದ್ಯುತ್ ಪರಿವರ್ತಕ ಅಳವಡಿಕೆಗಾಗಿ ಅಲ್ಲಿದ್ದ ಫಲಕವನ್ನು ತೆರವು ಮಾಡಿ, ಕಾಮಗಾರಿ ಪೂರ್ಣಗೊಳಿಸಿತ್ತು. ಆದರೆ, ಫಲಕವನ್ನು ಮತ್ತೆ ಅಳವಡಿಸದೆ ರಸ್ತೆಯಲ್ಲೇ ಬಿಟ್ಟಿದ್ದರು. ಫಲಕ ಇಲ್ಲದಿರುವುದರಿಂದ ರಸ್ತೆಯಲ್ಲಿನ ವಿಳಾಸ ತಿಳಿಯಲು ಹಾಗೂ ವಸ್ತುಗಳನ್ನು ಮನೆಗೆ ತಲುಪಿಸುವ ಡೆಲಿವರಿ ಸಿಬ್ಬಂದಿ ವಿಳಾಸ ಹುಡುಕಲು ಪರದಾಡುತ್ತಿದ್ದು, ಮಾಹಿತಿ ಫಲಕವನ್ನು ಮೂಲ ಸ್ಥಳದಲ್ಲಿ ಅಳವಡಿಸುವಂತೆ ಸ್ಥಳೀಯರು ಮನವಿ ಮಾಡಿಕೊಂಡಿದ್ದರು.

ಈ ಕುರಿತು 'ಪ್ರಜಾವಾಣಿ'ಯ 'ಕುಂದು ಕೊರತೆ' ಅಂಕಣದಲ್ಲಿ ವರದಿ ಪ್ರಕಟವಾಗಿತ್ತು. ವರದಿ ಬಳಿಕ ಎಚ್ಚೆತ್ತುಕೊಂಡ ಅಧಿಕಾರಿಗಳು ಫಲಕವನ್ನು ಅದೇ ಜಾಗದಲ್ಲಿ ಅಳವಡಿಸಲು ಕ್ರಮ ಕೈಗೊಂಡಿದ್ದಾರೆ.




ಸಹಕಾರನಗರದ 20ನೇ ಅಡ್ಡರಸ್ತೆ ವಿಳಾಸ ಫಲಕ ಅಳವಡಿಸಲಾಗಿದೆ.

ಗುಂಡಿ ಮುಚ್ಚದ ಬೆಸ್ಕಾಂ

ದೊಡ್ಡನೆಕ್ಕುಂದಿ ವ್ಯಾಪ್ತಿಯ ವಾಸ ಬಡಾವಣೆಯಲ್ಲಿರುವ 6ನೇ ಮುಖ್ಯರಸ್ತೆ ಬದಿಗಳಲ್ಲಿ ಬೆಸ್ಕಾಂ ವತಿಯಿಂದ ಮೂರು ತಿಂಗಳ ಹಿಂದೆ ಭೂಗತ ಕೇಬಲ್ ಅಳವಡಿಕೆ ಕೆಲಸ ನಡೆದಿತ್ತು. ಈ ವೇಳೆ ರಸ್ತೆಬದಿ ಆಳವಾದ ಗುಂಡಿಗಳನ್ನು ತೆಗೆದಿದ್ದರು. ಅಪೂರ್ಣ ಕಾಮಗಾರಿಯಿಂದಾಗಿ ಕೆಲವೆಡೆ ಈವರೆಗೆ ಗುಂಡಿಗಳನ್ನು ಮುಚ್ಚಿಲ್ಲ.

ಅಗೆದ ಮಣ್ಣನ್ನು ರಸ್ತೆಯಲ್ಲೇ ರಾಶಿ ಹಾಕಲಾಗಿದೆ. ಕೆಲವೆಡೆ ರಸ್ತೆಯಲ್ಲೇ ಗುಂಡಿಗಳಿದ್ದು, ರಾತ್ರಿ ಸಂಚಾರದ ವೇಳೆ ಜನ ಗುಂಡಿಗೆ ಬೀಳುವಂತಹ ಅಪಾಯದ ಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಬೆಸ್ಕಾಂಗೆ ದೂರು ನೀಡಿದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ವಾಹನ ಸವಾರರಿಗೂ ಈ ಗುಂಡಿಗಳು ಮೃತ್ಯುಕೂಪವಾಗಲಿದ್ದು, ಆದಷ್ಟು ಬೇಗ ಗುಂಡಿ ಮುಚ್ಚುವ ಕೆಲಸ ಮಾಡಿದರೆ ಒಳ್ಳೆಯದು.

ಜಾನಕಿರಾಮ್ ಗೌಡ, ದೊಡ್ಡನೆಕ್ಕುಂದಿ ನಿವಾಸಿ



ದೊಡ್ಡನೆಕ್ಕುಂದಿಯ ವಾಸ ಬಡಾವಣೆ ರಸ್ತೆಯಲ್ಲಿರುವ ಗುಂಡಿ

ಅರ್ಧದಲ್ಲೇ ನಿಂತ ಚರಂಡಿ ಕಾಮಗಾರಿ

ವಿದ್ಯಾರಣ್ಯಪುರದ ಆಕಾಶವಾಣಿ ಬಡಾವಣೆ ಹಾಗೂ ವೇಣುಗೋಪಾಲ ಬಡಾವಣೆಗಳಲ್ಲಿ ಬಿಬಿಎಂಪಿ ವತಿಯಿಂದ ಚರಂಡಿ ನಿರ್ಮಾಣ ಕಾಮಗಾರಿ ಆರಂಭದಲ್ಲಿ ಚುರುಕಾಗಿ ನಡೆಯಿತು. ಚರಂಡಿ ಮೇಲ್ಭಾಗದಲ್ಲಿ ಕಾಂಕ್ರೀಟ್ ಚಪ್ಪಡಿಗಳನ್ನು ಕೂರಿಸಿದ್ದಾರೆ. ಆದರೆ, ಪೂರ್ಣಗೊಳ್ಳುವ ಹಂತದಲ್ಲೇ ಕೆಲಸ ನಿಲ್ಲಿಸಲಾಗಿದೆ.

ಈ ಅಪೂರ್ಣ ಕಾಮಗಾರಿಯಿಂದಾಗಿ ಇಲ್ಲಿನ ರಸ್ತೆಗಳಲ್ಲಿ ಸಂಚರಿಸಲು ಬಡಾವಣೆಯ ಜನರಿಗೆ ಸಮಸ್ಯೆಯಾಗಿದೆ. ಚರಂಡಿ ನಿರ್ಮಾಣದ ವೇಳೆ ತೆಗೆದಿದ್ದ ಮಣ್ಣಿನ ರಾಶಿಗಳಿಂದ ದೂಳಿನ ಸಮಸ್ಯೆ ಹೆಚ್ಚಾಗಿದೆ. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಿ, ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡಿ.

ರಾಮಚಂದ್ರ, ವಿದ್ಯಾರಣ್ಯಪುರ



ವಿದ್ಯಾರಣ್ಯಪುರದಲ್ಲಿ ಅರ್ಧಕ್ಕೆ ನಿಂತ ಚರಂಡಿ ಕಾಮಗಾರಿ

ಲಿಫ್ಟ್ ಅಳವಡಿಸಿ

ಕೆಂಗೇರಿ ರೈಲು ನಿಲ್ದಾಣದಿಂದ ಪ್ರತಿನಿತ್ಯ ಸಾವಿರಾರು ಪ್ರಯಾಣಿಕರು ಸಂಚರಿಸುತ್ತಾರೆ. ಇಲ್ಲಿನ 2, 3 ಮತ್ತು 4ನೇ ಪ್ಲಾಟ್‌ಫಾರ್ಮ್‌ಗಳಿಗೆ ಮೆಟ್ಟಿಲುಗಳ ಮೂಲಕವೇ ತಲುಪಬೇಕಾಗಿದ್ದು, ಹಿರಿಯರು, ಮಕ್ಕಳು ಹಾಗೂ ಅಂಗವಿಕಲರಿಗೆ ಬಹಳ ಸಮಸ್ಯೆಯಾಗಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಲಿಫ್ಟ್ ಅಥವಾ ಎಲಿವೇಟರ್ ಅಳವಡಿಸಿದರೆ ಅನುಕೂಲ. ಈ ಕೆಲಸವನ್ನು ಹೆಚ್ಚು ಪ್ರಯಾಣಿಕರನ್ನು ಹೊಂದಿರುವ ಎಲ್ಲ ರೈಲು ನಿಲ್ದಾಣಗಳಲ್ಲಿ ಮಾಡಬೇಕು.

ಮಾರುತಿ, ಮಲ್ಲತ್ತಹಳ್ಳಿ

ರಸ್ತೆಯಲ್ಲಿ ನಿಲ್ಲುವ ಚರಂಡಿ ನೀರು

ಕೆ.ಆರ್.ಪುರದ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಆಂಧ್ರ ಬ್ಯಾಂಕ್ ಮುಂಭಾಗದಲ್ಲಿ ಚರಂಡಿಯ ನೀರು ರಸ್ತೆ ಮೇಲೆ ನಿಲ್ಲುತ್ತಿದೆ. ಒಂದು ವರ್ಷದಿಂದ ಈ ಸಮಸ್ಯೆ ಬಗೆಹರಿದಿಲ್ಲ. ಕೊಳಚೆ ನೀರಿನಿಂದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಬಹಳ ತೊಂದರೆಯಾಗಿದ್ದು, ಆಗಾಗ ದಟ್ಟಣೆಗೂ ಕಾರಣವಾಗುತ್ತದೆ. ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಚರಂಡಿ ನೀರು ರಸ್ತೆಗೆ ಬರುವುದನ್ನು ತಡೆಯಬೇಕು.

ಎನ್.ಮಾದೇಶ್, ಕೆ.ಆರ್.ಪುರ ನಿವಾಸಿ

ನಿಧಾನಗತಿಯಲ್ಲಿ ಯೋಗ ಕೇಂದ್ರದ ನಿರ್ಮಾಣ

ದೊಡ್ಡಬಿದರಕಲ್ಲು ವಾರ್ಡ್‌ನ ಬೃಂದಾವನ ನಗರದ ಪಾಲಿಕೆ ಕಚೇರಿ ಎದುರಲ್ಲೇ ನಿರ್ಮಾಣವಾಗುತ್ತಿರುವ ಯೋಗ ಕೇಂದ್ರವು ಎರಡು ವರ್ಷಗಳು ಕಳೆದರೂ ಪೂರ್ಣಗೊಂಡಿಲ್ಲ. ಈ ಕೇಂದ್ರ ಆರಂಭಗೊಳ್ಳುವ ಸಮಯಕ್ಕಾಗಿ ಸ್ಥಳೀಯರು ಕಾತರದಿಂದ ಕಾದಿದ್ದಾರೆ. ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದ್ದರೂ ನಿಧಾನಗತಿಯಲ್ಲಿ ಸಾಗಿದೆ.

ಇದರ ರಕ್ಷಣೆಗಾಗಿ ಅಳವಡಿಸಿರುವ ಕಬ್ಬಿಣದ ಪ್ರವೇಶದ್ವಾರ ಮುರಿದು ಬಿದ್ದಿದೆ. ಕೆಲವರು ಕಟ್ಟಡ ತ್ಯಾಜ್ಯವನ್ನು ತಂದು ಕೇಂದ್ರದ ಒಳಗೆ ಸುರಿಯುತ್ತಿದ್ದಾರೆ. ಪಕ್ಕದಲ್ಲೇ ಇರುವ ಪಾಲಿಕೆ ಕಣ್ಣುಮುಚ್ಚಿ ಕುಳಿತಿದೆ. ಆದಷ್ಟು ಬೇಗ ಈ ಕೇಂದ್ರದ ಕೆಲಸಗಳನ್ನು ಪೂರ್ಣಗೊಳಿಸಿ, ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಿ.

ಮಂಜುನಾಥ್, ಸ್ಥಳೀಯ



ಬೃಂದಾವನ ನಗರದಲ್ಲಿರುವ ಯೋಗ ಕೇಂದ್ರದ ಪ್ರವೇಶದ್ವಾರ ಮುರಿದಿರುವುದು

ಸಂಕ್ಷಿಪ್ತ ಸುದ್ದಿ

ಕೊಲೆ ಪ್ರಕರಣ: ಜಾಮೀನು ಅರ್ಜಿ ಸಂಬಂಧ ನೋಟಿಸ್

ನವದೆಹಲಿ: ತುಮಕೂರಿನ ಮಾಜಿ ಮೇಯರ್, ನಗರಪಾಲಿಕೆ ಸದಸ್ಯ ಎಚ್. ರವಿಕುಮಾರ್ ಕೊಲೆ ಪ್ರಕರಣದಲ್ಲಿ ಸಲ್ಲಿಸಿದ್ದ ಜಾಮೀನು ಅರ್ಜಿ ಸಂಬಂಧ ಸುಪ್ರೀಂ ಕೋರ್ಟ್ ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಕೃತ್ಯ 2018ರಲ್ಲಿ ನಡೆದಿತ್ತು. ಮಹೇಶ್ ವಿ ಅಲಿಯಾಸ್ ಅಮಾಸೆ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ನಾಲ್ಕು ವಾರದಲ್ಲಿ ಉತ್ತರಿಸಲು ನ್ಯಾಯಮೂರ್ತಿಗಳಾದ ವಿನೀತ್ ಸರಣ್ ಮತ್ತು ಬಿ.ವಿ.ನಾಗರತ್ನ ಅವರಿದ್ದ ಪೀಠ ತಿಳಿಸಿದೆ.

ಹೈಕೋರ್ಟ್ ಇವರ ಜಾಮೀನು ಅರ್ಜಿಯನ್ನು ಸೆಪ್ಟೆಂಬರ್ 10, 2020ರಲ್ಲಿ ವಜಾ ಮಾಡಿತ್ತು. ಈ ಆದೇಶದ ಸಿಂಧುತ್ವವನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿದೆ.

ಕಡಿಮೆ ಅಂಕ: ವಿದ್ಯಾರ್ಥಿ ಆತ್ಮಹತ್ಯೆ

ಹೆಬ್ರಿ: ಇಲ್ಲಿನ ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಯೊಂದರಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿ ಅನ್ವಿತ್ ಶೆಟ್ಟಿ (14) ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದಿರುವುದಕ್ಕೆ ಮನನೊಂದು ಮರಣ ಪತ್ರ ಬರೆದಿಟ್ಟು ನೇಣು ಹಾಕಿಕೊಂಡಿರುವ ಘಟನೆ ಭಾನುವಾರ ನಡೆದಿದೆ. ಬಾಲಕ ಕೆರೆಬೆಟ್ಟು ನಿವಾಸಿ ಸತೀಶ ಶೆಟ್ಟಿ - ಮಮತಾ ಶೆಟ್ಟಿ ದಂಪತಿ ಪುತ್ರ. ಮನೆ ಸ್ನಾನದ ಕೋಣೆ ಕಬ್ಬಿಣದ ರಾಡ್‌ಗೆ ಚೂಡಿದಾರದ ವೇಲ್‌ನಿಂದ ನೇಣು ಹಾಕಿಕೊಂಡಿದ್ದಾನೆ. ಹೆಬ್ರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಶಸ್ತಿಗೆ ಕಥಾಸಂಕಲನ ಆಹ್ವಾನ

ಕಾರವಾರ: ಭಟ್ಕಳದ ಡಾ.ಸೈಯದ್ ಝಮೀರುಲ್ಲಾ ಷರೀಫ್ ಸಾಹಿತ್ಯ ಪ್ರತಿಷ್ಠಾನದಿಂದ ರಾಜ್ಯಮಟ್ಟದ ಪ್ರಶಸ್ತಿಗೆ ಕಥಾಸಂಕಲವನ್ನು ಆಹ್ವಾನಿಸಲಾಗಿದೆ. ಪ್ರಶಸ್ತಿಯು ₹ 5 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.

2019–20ನೇ ಸಾಲಿನಲ್ಲಿ ಮೊದಲ ಮುದ್ರಣವಾದ ಕೃತಿಗಳನ್ನು ಕಳುಹಿಸಬಹುದು. ಸಂಕಲನದ ನಾಲ್ಕು ಪ್ರತಿಗಳನ್ನು ಜ.25ರ ಒಳಗಾಗಿ ಕಳುಹಿಸಬೇಕು.

ವಿಳಾಸ: ಪಿ.ಆರ್.ನಾಯ್ಕ, ಅಧ್ಯಕ್ಷರು, ಸೈಯದ್ ಝಮೀರುಲ್ಲಾ ಷರೀಫ್ ಸಾಹಿತ್ಯ ಪ್ರತಿಷ್ಠಾನ, ಅಂಚೆ: ಹೊಳೆಗದ್ದೆ, ಕುಮಟಾ ತಾಲ್ಲೂಕು, ಉತ್ತರ ಕನ್ನಡ 581327. ಹೆಚ್ಚಿನ ಮಾಹಿತಿಗೆ **ಮೊಬೈಲ್ ದೂರವಾಣಿ:** 99024 26956 ಸಂಪರ್ಕಿಸಬಹುದು ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ಬಿಯಾಂಡ್ ಬೆಂಗಳೂರು ಯೋಜನೆಯಡಿ ಕ್ರಮ: ಮುಖ್ಯಮಂತ್ರಿ ಬೊಮ್ಮಾಯಿ

'ಜಿಲ್ಲೆಗಳಲ್ಲೂ ನವೋದ್ಯಮಗಳಿಗೆ ಉತ್ತೇಜನ'


ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದ ನವೋದ್ಯಮಗಳ ಸ್ಥಾಪನೆಗೆ ಉತ್ತೇಜನ ನೀಡಲಾಗುವುದು. 'ಬಿಯಾಂಡ್ ಬೆಂಗಳೂರು' ಯೋಜನೆಯಡಿ ನವೋದ್ಯಮಿಗಳಿಗೆ ನೆರವು ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ನವೋದ್ಯಮ ದಿನಾಚರಣೆ' ಪ್ರಯುಕ್ತ ಭಾನುವಾರ ಆನ್‌ಲೈನ್ ಮೂಲಕ ಸಂದೇಶ ನೀಡಿದ ಅವರು, 'ಬೆಂಗಳೂರಿಗೆ ಸೀಮಿತವಾಗಿರುವ ನವೋದ್ಯಮಗಳ ಚಟುವಟಿಕೆಗಳನ್ನು ಇತರ ಜಿಲ್ಲೆಗಳಿಗೆ ವಿಸ್ತರಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆ' ಎಂದು ಅವರು ಹೇಳಿದರು.

ಸಣ್ಣ ಗ್ಯಾರೇಜಿನಿಂದ ದೊಡ್ಡ ಕೈಗಾರಿಕೆಗಳವರೆಗೆ ಎಲ್ಲ ಹಂತದ ಸಂಶೋಧನೆಗಳಿಗೆ ಸರ್ಕಾರ ಸಹಕಾರ ನೀಡಲಿದೆ. ಇದಕ್ಕಾಗಿ ನೂತನ 'ಅಭಿವೃದ್ಧಿ ಮತ್ತು ಸಂಶೋಧನಾ ನೀತಿ' ರೂಪಿಸಿ, ಅನುಷ್ಠಾನಕ್ಕೆ ತರಲಾಗುವುದು. ಶಾಲಾ ಶಿಕ್ಷಣದ ಹಂತದಿಂದಲೇ ಸಂಶೋಧನೆಗೆ ಒತ್ತು ನೀಡಲಾಗುವುದು. ನವೋದ್ಯಮಗಳ ಬೆಳವಣಿಗೆಗೆ ಪೂರಕವಾದ ಚಟುವಟಿಕೆಗಳನ್ನು ಶಾಲೆಗಳಲ್ಲೇ ಆರಂಭಿಸಲಾಗುವುದು ಎಂದೂ ಅವರು ತಿಳಿಸಿದರು.

ದೇಶದಲ್ಲಿ ಒಟ್ಟು 54,000 ನವೋದ್ಯಮಗಳಿವೆ. ಅವುಗಳಲ್ಲಿ 13,000 ಕರ್ನಾಟಕದಲ್ಲಿವೆ. ಭವಿಷ್ಯದ ದಿನಗಳಲ್ಲಿ ದೇಶದ ಆರ್ಥಿಕತೆಗೆ ನವೋದ್ಯಮಗಳ ಕೊಡುಗೆ ಅಗಾಧವಾಗಿರಲಿದೆ. ಹೆಚ್ಚಿನ ನವೋದ್ಯಮಗಳನ್ನು ಹೊಂದಿರುವ ಕರ್ನಾಟಕ ರಾಜ್ಯವು ದೇಶದ ಆರ್ಥಿಕತೆಗೆ ಗಣನೀಯ ಕೊಡುಗೆ ನೀಡಲಿದೆ ಎಂದರು.



ವಿವಿಧ ಯೋಜನೆಗಳ ಅಡಿಯಲ್ಲಿ ನವೋದ್ಯಮಿಗಳಿಗೆ ನೆರವು ನೀಡಲಾಗುತ್ತಿದೆ. ಈವರೆಗೆ ರಾಜ್ಯದಲ್ಲಿ ಒಟ್ಟು 482 ನವೋದ್ಯಮಗಳಿಗೆ ₹120 ಕೋಟಿ ನೆರವು ಒದಗಿಸಲಾಗಿದೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ



ಬೆಳಕಿನ ಚಿತ್ತಾರ ವಾರಾಂತ್ಯ ಕರ್ಫ್ಯೂ ಜಾರಿಯಿಂದಾಗಿ ನಗರದ ನಾಗರಬಾವಿ ಹೊರ ವರ್ತುಲ ರಸ್ತೆಯು ಭಾನುವಾರ ಸಂಜೆ ಬೀದಿ ದೀಪಗಳಿಂದ ಕಂಗೊಳಿಸುತ್ತಿರುವುದು

ಪ್ರಜಾವಾಣಿ ಚಿತ್ರ:ಎಂ.ಎಸ್.ಮಂಜುನಾಥ್

ವಿನಯ ಕುಲಕರ್ಣಿ ಜಾಮೀನು ಷರತ್ತು ಸಡಿಲಿಕೆ

ಬೆಂಗಳೂರು: ಧಾರವಾಡ ಜಿಲ್ಲಾ ಪಂಚಾಯಿತಿಯ ಮಾಜಿ ಸದಸ್ಯ ಯೋಗೇಶ್ ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ 15ನೇ ಆರೋಪಿಯಾಗಿರುವ ಮಾಜಿ ಸಚಿವ ವಿನಯ ಆರ್. ಕುಲಕರ್ಣಿ ಅವರ ಜಾಮೀನು ಷರತ್ತು ಸಡಿಲಿಸಿರುವ ಚುನಾಯಿತ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಸಿಬಿಐ ಅಧಿಕಾರಿಗಳಿಗೆ ಮಾಹಿತಿ ನೀಡಿ ವಿಚಾರಣಾ ನ್ಯಾಯಾಲಯದ ವ್ಯಾಪ್ತಿಯಿಂದ ಹೊರ ಹೋಗಲು ಅನುಮತಿ ನೀಡಿದೆ.

ಕೊಲೆ ಪ್ರಕರಣದಲ್ಲಿ ಸಿಬಿಐ ವಿನಯ ಅವರನ್ನು ಬಂಧಿಸಿತ್ತು. 2021ರ ಆಗಸ್ಟ್ 11ರಂದು ಜಾಮೀನು ಮಂಜೂರು ಮಾಡಿದ್ದ ಸುಪ್ರೀಂಕೋರ್ಟ್, ಷರತ್ತುಗಳನ್ನು ವಿಧಿಸಿ, ಜಾಮೀನು ಪ್ರಕ್ರಿಯೆ ಪೂರ್ಣಗೊಳಿಸುವಂತೆ ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶನ ನೀಡಿತ್ತು. ಆ.13ರಂದು ಜಾಮೀನು ಪ್ರಕ್ರಿಯೆ ಪೂರ್ಣಗೊಳಿಸಿದ್ದ ಚುನಾಯಿತ ಪ್ರತಿನಿಧಿಗಳ ವಿಶೇಷ ನ್ಯಾಯಾಲಯ, 'ಆರೋಪಿಯು ಈ ನ್ಯಾಯಾಲಯದ ಅನುಮತಿ ಇಲ್ಲದೇ ನ್ಯಾಯಾಲಯದ ವ್ಯಾಪ್ತಿಯನ್ನು ಬಿಟ್ಟು ಹೊರ ಹೋಗುವಂತಿಲ್ಲ' ಎಂಬ ಷರತ್ತು ವಿಧಿಸಿತ್ತು.

ಧಾರವಾಡದಲ್ಲಿರುವ ಡೇರಿ ವ್ಯವಹಾರದ ಕಾರಣ ನೀಡಿ ನವೆಂಬರ್ 30ರಿಂದ ಡಿಸೆಂಬರ್ 30ರವರೆಗೂ ನ್ಯಾಯಾಲಯದ ವ್ಯಾಪ್ತಿ ಬಿಟ್ಟು ಹೊರ ಹೋಗಲು ವಿನಯ ಅನುಮತಿ ಪಡೆದಿದ್ದರು. ಬಳಿಕ ಮತ್ತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ ಅವರು, ಈ ಷರತ್ತನ್ನೇ ಕೈಬಿಡುವಂತೆ ಕೋರಿದ್ದರು.

ಸಿಬಿಐ ಪರ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್, ಈ ಅರ್ಜಿಯನ್ನು ವಿರೋಧಿಸಿದ್ದರು. 'ಆರೋಪಿಯು ಈ ಹಿಂದೆ ವಿನಾಯಿತಿ ಪಡೆದು ಧಾರವಾಡ ಜಿಲ್ಲೆಯ ಹಲವೆಡೆ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಇದರಿಂದ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ' ಎಂದು ವಾದಿಸಿದ್ದರು.

ವಿಚಾರಣೆಯನ್ನು ಪೂರ್ಣಗೊಳಿಸಿ ಜನವರಿ 14ರಂದು ಆದೇಶ ಪ್ರಕಟಿಸಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ. ಜಯಂತ್ ಕುಮಾರ್, 'ನ್ಯಾಯಾಲಯದ ಅನುಮತಿ ಇಲ್ಲದೇ ಹೊರ ಹೋಗುವಂತಿಲ್ಲ' ಎಂಬ ಷರತ್ತನ್ನು ಮಾರ್ಪಾಡು ಮಾಡಿದ್ದಾರೆ. 'ಆರೋಪಿಯು ಸಿಬಿಐ ಅಧಿಕಾರಿಗಳಿಗೆ ಮುಂಚಿತವಾಗಿ ಮಾಹಿತಿ ನೀಡಿ ನ್ಯಾಯಾಲಯದ ವ್ಯಾಪ್ತಿಯಿಂದ ಹೊರ ಹೋಗಬಹುದು' ಎಂದು ಆದೇಶದಲ್ಲಿ ತಿಳಿಸಿದ್ದಾರೆ.



ವಿನಯ ಕುಲಕರ್ಣಿ

ಹರಳೂರು ಕೆಳಸೇತುವೆಗೆ ಸ್ಥಳೀಯರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಹರಳೂರು-ಸರ್ಜಾಪುರ ರಸ್ತೆಯ ಟಿ ಜಂಕ್ಷನ್ ಬಳಿ ನಿರ್ಮಿಸುತ್ತಿರುವ ಕೆಳಸೇತುವೆಗೆ ಸ್ಥಳೀಯರಿಂದ ವಿರೋಧ ವ್ಯಕ್ತವಾಗಿದೆ.

'ಈ ಸೇತುವೆಯಿಂದ ಅನುಕೂಲಕ್ಕಿಂತ ಅನಾನುಕೂಲವೇ ಅಧಿಕ. ಈಗಾಗಲೇ ಇಕ್ಕಟ್ಟಿನಿಂದ ಕೂಡಿರುವ ಇಬ್ಲೂರು ವೃತ್ತದಲ್ಲಿ ಮತ್ತಷ್ಟು ದಟ್ಟಣೆ ಏರ್ಪಡಲಿದ್ದು ವಾಹನ ಸಂಚಾರವೂ ಸವಾಲಾಗಲಿದೆ. ಕಾರ್ಮೆಲ್‌ರಾಮ್‌ನಿಂದ ಇಬ್ಲೂರು ಜಂಕ್ಷನ್‌ಗೆ ಸಂಪರ್ಕ ಬೆಸೆಯುವ ಉದ್ದೇಶಿತ ಮೆಟ್ರೊ ಮಾರ್ಗಕ್ಕೂ ತೊಂದರೆಯಾಗಲಿದೆ' ಎಂದು ಬೆಳ್ಳಂದೂರ ಅಭಿವೃದ್ಧಿ ಫೋರಂ, ಇಬ್ಲೂರು ಎನ್ವಿರಾನ್ಸ್ ಟ್ರಸ್ಟ್ ಹಾಗೂ ಕಸವನಹಳ್ಳಿ ಅಭಿವೃದ್ಧಿ ಫೋರಂ ಟೀಕಿಸಿವೆ.

ಕೆಳ ಸೇತುವೆ ಕಾಮಗಾರಿ ಕೈಗೆತ್ತಿಕೊಳ್ಳುವ ಮುನ್ನ ಬಿಬಿಎಂಪಿ ಅಧಿಕಾರಿಗಳು ಬಿಎಂಆರ್‌ಸಿಎಲ್ ಜೊತೆ ಸಮಾಲೋಚನೆ ನಡೆಸಬೇಕು ಎಂದು ಆಗ್ರಹಿಸಿವೆ.

'ಬಿಬಿಎಂಪಿಯು ಉದ್ದೇಶಿತ ಮಾರ್ಗದಲ್ಲಿ ಕೆಳಸೇತುವೆ ನಿರ್ಮಾಣ ಮಾಡಲು ₹23 ಕೋಟಿ ಮೊತ್ತದ ಗುತ್ತಿಗೆ ನೀಡಿದೆ. ಈ ಯೋಜನೆಯಿಂದ ಹೊಸ ಸಮಸ್ಯೆಗಳು ತಲೆದೋರಲಿವೆ' ಎಂದು ಕಸವನಹಳ್ಳಿ ಹಾಗೂ ಬೆಳ್ಳಂದೂರು ಅಭಿವೃದ್ಧಿ ಫೋರಂ ಹೇಳಿವೆ.

'ಹೊರ ವರ್ತುಲ ರಸ್ತೆ-ಕಾರ್ಮೆಲ್‌ರಾಮ್ ನಡುವಣ ಮೆಟ್ರೊ ಮಾರ್ಗ ನಿರ್ಮಾಣ ಕಾಮಗಾರಿ ಆರಂಭವಾದ ಕೂಡಲೇ ಕೆಳ ಸೇತುವೆಯನ್ನು ಕೆಡವ ಬೇಕಾಗುತ್ತದೆ. ಈ ಕಾಮಗಾರಿಯಿಂದ ಹಣ ಹಾಗೂ ಸಮಯ ವ್ಯರ್ಥವಾಗುತ್ತದೆಯೇ ಹೊರತು ಯಾರಿಗೂ ಲಾಭವಿಲ್ಲ' ಎಂದು ಇಬ್ಲೂರು ಎನ್ವಿರಾನ್ಸ್ ಟ್ರಸ್ಟ್‌ನ ಮುಕುಂದ್ ಕುಮಾರ್ ದೂರಿದರು.

'ಬಿಬಿಎಂಪಿಗೆ ಹಲವು ಬಾರಿ ಮನವಿ ಮಾಡಿದರೂ ಕೂಡ ಬಿಎಂಆರ್‌ಸಿಎಲ್ ಜೊತೆ ಚರ್ಚಿಸಿಲ್ಲ. ಕೆಳ ಸೇತುವೆ ನಿರ್ಮಾಣ ಯೋಜನೆಯಿಂದ ಯಾವುದೇ ಪ್ರಯೋಜನವಿಲ್ಲ. ವಾಹನ ಸವಾರರಿಗೂ ಅನುಕೂಲವಾಗುವುದಿಲ್ಲ' ಎಂದು ವಿಷ್ಣು ಪ್ರಸಾದ್ ತಿಳಿಸಿದರು.

'ಈ ಯೋಜನೆಯಿಂದ ನಾಗರಿಕರಿಗೆ ತೊಂದರೆಯಾಗುತ್ತದೆ ಎಂದು ಹಲವರು ದೂರಿದ್ದಾರೆ. ಈ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ' ಎಂದು ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ತಿಳಿಸಿದರು.

'ವಿಜ್ಞಾನ ಉಪನ್ಯಾಸಕರ ತರಬೇತಿ ರದ್ದುಪಡಿಸಿ'

ಬೆಂಗಳೂರು: ಮೈಸೂರು ವಿಭಾಗದ (ಮೈಸೂರು, ಮಂಡ್ಯ, ಮಡಿಕೇರಿ, ಚಾಮರಾಜನಗರ ಜಿಲ್ಲೆ) ವಿಜ್ಞಾನ ಉಪನ್ಯಾಸಕರಿಗೆ ಆಯೋಜಿಸಿರುವ ತರಬೇತಿಯನ್ನು ಕೋವಿಡ್ ಕಾರಣ ಮುಂದೂಡಬೇಕು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಮೇಲ್ಮನೆ ಸದಸ್ಯ ದಿನೇಶ್ ಗೂಳಿಗೌಡ ಕೋರಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕಿನ (ಮೈಸೂರು) ಸಿಎಸ್‌ಆರ್ ಕಾರ್ಯಕ್ರಮದಡಿ ಚಿತ್ರದುರ್ಗದ ಚಳ್ಳಕೆರೆ ಬಳಿ, ಭಾರತೀಯ ವಿಜ್ಞಾನ ಸಂಸ್ಥೆಯ ಕೌಶಲ ಅಭಿವೃದ್ಧಿ ಕೇಂದ್ರವು ಇದೇ 20ರಿಂದ 30ರವರೆಗೆ ತರಬೇತಿ ನಡೆಸಲಿದೆ.

'ಕೋವಿಡ್ ಪರಿಸ್ಥಿತಿ ತಿಳಿಗೊಂಡ ಬಳಿಕ ತರಬೇತಿ ಹಮ್ಮಿಕೊಂಡರೆ ಉತ್ತಮ ಎಂಬ ಅಭಿಪ್ರಾಯ ಕೇಳಿಬರುತ್ತಿದೆ. ಜೊತೆಗೆ, ಈ ಉಪನ್ಯಾಸಕರ ಕುಟುಂಬಸ್ಥರಲ್ಲೂ ಆತಂಕ ಮನೆಮಾಡಿದೆ' ಎಂದು ಹೇಳಿದ್ದಾರೆ.

ಪರಿಶಿಷ್ಟರ ಮೇಲೆ ಹಲ್ಲೆ ಪ್ರಕರಣ– ಗ್ರಾಮಕ್ಕೆ ಎಸ್‌ಪಿ ಭೇಟಿ

ಅರಸಿನಕೆರೆ ಗ್ರಾಮ ಉದ್ವಿಗ್ನ

ಪ್ರಜಾವಾಣಿ ವಾರ್ತೆ

ಜಯಪುರ(ಮೈಸೂರು): ಹೋಬಳಿಯ ಅರಸಿನಕೆರೆ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ನೆಲೆಸಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಭಾನುವಾರ ಭೇಟಿ ನೀಡಿ ಮಾಹಿತಿ ಕಲೆಹಾಕಿದರು. ಪಾನಿಪುರಿ ತಿನ್ನಲು ಸವರ್ಣೀಯರ ಕೇರಿಗೆ ಬಂದರು ಎಂಬ ಕಾರಣದಿಂದ ಗ್ರಾಮದ ಪರಿಶಿಷ್ಟರ ಮನೆಗೆ ನುಗ್ಗಿ ಯುವಕರ ಮೇಲೆ ಹಲ್ಲೆ ನಡೆಸಲಾಗಿತ್ತು.

ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿ, ಶನಿವಾರ ಆರು ಮಂದಿಯನ್ನು ಬಂಧಿಸಿದ್ದರು. ಪರಿಶಿಷ್ಟರ ಕೇರಿಗೆ ನುಗ್ಗಿ ಹಲ್ಲೆ ನಡೆಸುತ್ತಿದ್ದದ್ದನ್ನು ತಡೆಯಲು ಮುಂದಾದ ಶಿವು, ಮಧು, ಗಂಗಾ, ದಿಲೀಪ್ ಮತ್ತು ಸೋಮೇಶ್ ಎಂಬ ಐವರು ಪರಿಶಿಷ್ಟ ಯುವಕರ ವಿರುದ್ಧ ಸವರ್ಣೀಯರು ಪ್ರತಿ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಪರಸ್ಪರರ ವಿರುದ್ಧ ದೂರು ದಾಖಲಾಗಿದ್ದು, ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಹಲ್ಲೆಗೊಳಗಾದವರು ಮತ್ತು ಘಟನೆಗೆ ಕಾರಣರಾದವರನ್ನು ಚೇತನ್ ಅವರು ಪ್ರತ್ಯೇಕವಾಗಿ ಭೇಟಿ ಮಾಡಿ ಘಟನೆಯ ಮಾಹಿತಿ ಪಡೆದರು. ಎರಡೂ ಸಮುದಾಯದ ಮುಖಂಡರನ್ನು ಕರೆದು ಮಾತನಾಡಿದರು.

'ಘಟನೆಯಿಂದ ದಲಿತರಿಗೆ ರಕ್ಷಣೆಯಿಲ್ಲದಾಗಿದೆ. ಸೂಕ್ತ ರಕ್ಷಣೆ ಮತ್ತು ನ್ಯಾಯ ಒದಗಿಸಬೇಕು. ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಪರಿಶಿಷ್ಟರ ಮುಖಂಡ ಶಿವಣ್ಣ ಮನವಿ ಮಾಡಿಕೊಂಡರು.

'ಕಿಡಿಗೇಡಿ ಯುವಕರಿಂದ ಅಹಿತಕರ ಘಟನೆ ನಡೆದಿದ್ದು, ಈಗಾಗಲೇ ದಲಿತ ಸಮುದಾಯದವರ ಕ್ಷಮೆಯಾಚಿಸಿದ್ದೇವೆ. ಗ್ರಾಮದಲ್ಲಿ ಸೌಹಾರ್ದಯುತ ವಾತಾವರಣ ನೆಲೆಸಲು ಅವಕಾಶ ಮಾಡಿಕೊಡಬೇಕು' ಎಂದು ಗ್ರಾಮದ ಮುಖಂಡ ಸೋಮಣ್ಣ ಕೋರಿದರು.



ಜಯಪುರ ಹೋಬಳಿಯ ಅರಸಿನಕೆರೆ ಗ್ರಾಮಕ್ಕೆ ಭಾನುವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಭೇಟಿ ನೀಡಿ ಮುಖಂಡರಿಂದ ಮಾಹಿತಿ ಪಡೆದರು

ರಕ್ಷಿಸುವ ಮಾತಿಲ್ಲ: ಆರ್.ಚೇತನ್

'ಘಟನೆಯ ಮಾಹಿತಿ ಪಡೆದಿದ್ದು, ಪ್ರಾಥಮಿಕ ಮಾಹಿತಿ ಆಧರಿಸಿ ಹಲವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಘಟನೆಯಲ್ಲಿ ಭಾಗಿಯಾದವರನ್ನು ರಕ್ಷಿಸುವ ಮಾತೇ ಇಲ್ಲ. ಎರಡೂ ಸಮುದಾಯದವರು ಸೌಹಾರ್ದದಿಂದ ಇರಬೇಕು. ಅಹಿತಕರ ಘಟನೆಗೆ ಅವಕಾಶ ಮಾಡಿಕೊಡಬಾರದು' ಎಂದು ಚೇತನ್ ಸೂಚನೆ ನೀಡಿದರು.

ಕಂದಾಯ ವಂಚನೆ ಪ್ರಕರಣ: ಕೋರ್ಟ್‌ಗೆ ಆರೋಪಿ ಶರಣಾಗತಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಚಿತ್ರದುರ್ಗ ಉಪನೋಂದಣಿ ಕಚೇರಿಯ ₹ 1.67 ಕೋಟಿ ಕಂದಾಯ ಹಣವನ್ನು ಸರ್ಕಾರಕ್ಕೆ ವಂಚಿಸಿದ್ದ ಆರೋಪಿ ಜಾಮೀನು ಸಿಗದೇ ನ್ಯಾಯಾಲಯಕ್ಕೆ ಶರಣಾಗಿದ್ದಾನೆ.

ಶ್ರೀರಾಯ್ ಅಸೋಸಿಯೇಟ್ ಮಾಲೀಕ ಹಾಗೂ ದಸ್ತಾವೇಜು ಬರಹಗಾರ (ಸ್ಟಾಂಪ್ ವೆಂಡರ್) ಸಿ. ಮಂಜುನಾಥ ಯಾದವ್ (36) ಕೆ-2 ಚಲನ್ ತಿದ್ದಿ ಸರ್ಕಾರಕ್ಕೆ ₹ 1,67,71,170 ಕಂದಾಯ ವಂಚಿಸಿದ್ದರು. ಕೋರ್ಟ್‌ಗೆ ಶರಣಾದ ಆರೋಪಿಯನ್ನು ಜ. 14ರಂದು ಚಿತ್ರದುರ್ಗ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಆರೋಪಿಯಿಂದ 1 ಲ್ಯಾಪ್‌ಟಾಪ್, 1 ಸಿಪಿಯು, 1 ಮೊಬೈಲ್ ಹಾಗೂ ಹೆಚ್ಚಿನ ತನಿಖೆಗಾಗಿ ಚಿತ್ರದುರ್ಗ ಜಿಲ್ಲಾ ಉಪನೋಂದಣಾಧಿಕಾರಿ ಕಚೇರಿಯ 3 ಸಿಪಿಯುಗಳನ್ನು ವಶಪಡಿಸಿಕೊಂಡಿದ್ದಾರೆ. ಇವುಗಳನ್ನು ಹೆಚ್ಚಿನ ಪರಿಶೀಲನೆಗಾಗಿ ಎಫ್.ಎಸ್.ಎಲ್. ಕೇಂದ್ರಕ್ಕೆ ಕಳಹಿಸಿ ತನಿಖೆ ಮುಂದುವರಿಸಿದ್ದಾರೆ.

ಐಷಾರಾಮಿ ಕಚೇರಿ: ಅಧಿಕೃತ ದಸ್ತಾವೇಜು ಬರಹಗಾರನಾದ ಮಂಜುನಾಥ್ ಯಾದವ್ ಚಿತ್ರದುರ್ಗ ನಗರದ ಸಬ್ ರಿಜಿಸ್ಟ್ರಾರ್ ಕಚೇರಿಯ ಹಿಂಭಾಗದಲ್ಲಿರುವ ಚಿತ್ರದುರ್ಗ ಸಹಕಾರಿ ಕೋ ಆಪರೇಟಿವ್ ಬ್ಯಾಂಕ್‌ನ ಆವರಣದಲ್ಲಿಯ ಬಾಡಿಗೆ ಕೋಣೆಯನ್ನು ಐಷಾರಾಮಿ ಕಚೇರಿಯಾಗಿ ಮಾರ್ಪಡಿಸಿಕೊಂಡಿದ್ದ.



ಮಂಜುನಾಥ ಯಾದವ್

ದಂಡ ವಿಧಿಸಲು ಪುರಸಭೆ ಕ್ರಮ

ಚಂದಾಪುರದ ಚಂದ ಕೆಡಿಸುತ್ತಿರುವ ಕಸ

ಪ್ರಜಾವಾಣಿ ವಾರ್ತೆ

ಆನೇಕಲ್: ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವುದಕ್ಕೆ ಕಡಿವಾಣ ಹಾಕುವ ದೃಷ್ಟಿಯಿಂದ ಚಂದಾಪುರ ಪುರಸಭೆ ಮುಖ್ಯಾಧಿಕಾರಿ ರಮೇಶ್ ನೇತೃತ್ವದ ತಂಡ ಬೆಳ್ಳಂ ಬೆಳಗ್ಗೆ ಕಾರ್ಯಚರಣೆಗೆ ಇಳಿದಿತ್ತು. ಎಲ್ಲೆಂದರಲ್ಲಿ ಕಸ ಎಸೆಯುತ್ತಿದ್ದವರಿಗೆ ದಂಡ ಹಾಕುವ ಮೂಲಕ ತಂಡ ಸಾರ್ವಜನಿಕರಿಗೆ ಬಿಸಿ ಮುಟ್ಟಿಸಿತು.

ರಾಷ್ಟ್ರೀಯ ಹೆದ್ದಾರಿ 7ರಲ್ಲಿರುವ ಚಂದಾಪುರ ಪುರಸಭೆ ವ್ಯಾಪ್ತಿಯ ಇಗ್ಗಲೂರು ಕೆರೆಯ ಏರಿಯ ಮೇಲೆ ಮತ್ತು ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ತ್ಯಾಜ್ಯವನ್ನು ಎಸೆಯಲಾಗುತ್ತಿದೆ. ಕೋಳಿಯ ತ್ಯಾಜ್ಯವನ್ನು ಏರಿಯ ಮೇಲೆಯೇ ಎಸೆದು ಹೋಗುತ್ತಿದ್ದಾರೆ. ಇದರಿಂದ ನಾಯಿಗಳು ಮಾಂಸದ ತುಂಡುಗಳಿಗಾಗಿ ಕೆರೆಯ ಸುತ್ತಮುತ್ತ ಜಮಾಯಿಸಿ ವಾಹನ ಸವಾರರಿಗೆ ತೊಂದರೆ ಉಂಟು ಮಾಡುತ್ತಿದ್ದವು.

ಇಗ್ಗಲೂರು ಕೆರೆ ಮತ್ತು ಕೆರೆಯ ಸುತ್ತಮುತ್ತ ಕಸ ಹಾಕುವುದಕ್ಕೆ ಕಡಿವಾಣ ಹಾಕಬೇಕೆಂದು ತೀರ್ಮಾನ ಮಾಡಿದ ಪುರಸಭೆಯ ಮುಖ್ಯಾಧಿಕಾರಿ ಮತ್ತು ಸಿಬ್ಬಂದಿ ತಂಡ ಕೆರೆಯ ಏರಿಯ ಮೇಲೆ ಮುಂಜಾನೆಯೇ ಕಾದು ಕುಳಿತಿದ್ದರು. ಕಸ ಹಾಕಲು ಬಂದವರಿಗೆ ದಂಡ ಹಾಕಿದರು. ಒಂದೇ ದಿನ ₹5 ಸಾವಿರ ದಂಡ ವಸೂಲಾಯಿತು.

ಚಂದಾಪುರ ಪುರಸಭೆ ಮುಖ್ಯಾಧಿಕಾರಿ ರಮೇಶ್ ಮಾತನಾಡಿ, ಮನೆಗಳ ಬಳಿಯೇ ಕಸ ಸಂಗ್ರಹಿಸಲು ವಾಹನಗಳು ತೆರಳಿದಾಗ ಕಸ ಹಾಕುವುದಿಲ್ಲ. ನಂತರ ಕಸದ ಕವರ್‌ಗಳನ್ನು ಮುಖ್ಯ ರಸ್ತೆಯ ಡಿವೈಡರ್‌ಗಳ ಬಳಿ ಇಟ್ಟು ಹೋಗುವ ಪರಿಪಾಠವನ್ನು ಹಲವಾರು ಮಂದಿ ಮಾಡಿಕೊಂಡಿದ್ದಾರೆ. ಹಾಗಾಗಿಯೇ, ದಂಡ ವಸೂಲಿಗಾಗಿ ಮುಂಜಾನೆಯೇ ಹೋಗಿದ್ದೆವು ಎಂದರು.

ಸಾರ್ವಜನಿಕರು, ಅಂಗಡಿಗಳವರು ಪ್ರತಿದಿನ ಬರುವ ಪುರಸಭೆಯ ಕಸ ಸಂಗ್ರಹಣ ವಾಹನಗಳಿಗೆ ಕಸ ಹಾಕದೇ ಆನೇಕಲ್-ಚಂದಾಪುರ ರಸ್ತೆಯ ಡಿವೈಡರ್‌ಗಳಲ್ಲಿ ಕಸದ ಕವರ್‌ಗಳನ್ನು, ತ್ಯಾಜ್ಯವನ್ನು ಸುರಿಯುತ್ತಿದ್ದಾರೆ. ಇದರಿಂದ ಪಟ್ಟಣದ ಅಂದ ಹಾಳಾಗಿದೆ ಎಂದು ಚಂದಾಪುರದ ಮಾದೇಶ್ ತಿಳಿಸಿದರು.

ಪ್ರಕರಣ ದಾಖಲು: ಎಚ್ಚರಿಕೆ ನೀಡಿದರೂ ಜನರು ಕೆರೆ ಮತ್ತು ರಸ್ತೆ ಡಿವೈಡರ್ ಬಳಿ ಹಾಕುವ ಕಸ ಹಾಕುವುದನ್ನು ಬಿಡುತ್ತಿಲ್ಲ. ಅನಿವಾರ್ಯವಾಗಿ ದಂಡ ಹಾಕಲು ಕ್ರಮಕೈಗೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕಸ ಎಸೆಯುವವರ ವಿರುದ್ಧ ಪ್ರಕರಣ ದಾಖಲು ಮಾಡಲಾಗುವುದು ಎಂದು ಮುಖ್ಯಾಧಿಕಾರಿ ರಮೇಶ್ ತಿಳಿಸಿದರು.



ಚಂದಾಪುರ ಮುಖ್ಯ ರಸ್ತೆಯ ಡಿವೈಡರ್ ಮೇಲೆ ಹಾಕಲಾಗಿರುವ ಕಸದ ಕವರ್‌ಗಳು

ಹುಣಸೆ ಕೀಳಲು ಬೇಕು ಸರಳವಾದ ಉಪಕರಣ

ಪ್ರಜಾವಾಣಿ ವಾರ್ತೆ

ತೋವಿನಕೆರೆ: ತುಮಕೂರು ಜಿಲ್ಲೆಯಲ್ಲಿ ಹುಣಸೆ ಬೆಳೆ 15 ವರ್ಷದಿಂದ ವಾಣಿಜ್ಯ ಬೆಳೆಯಾಗಿದೆ. ಉತ್ತಮ ಆದಾಯದ ಮೂಲವೂ ಆಗಿದೆ. ಮರ ಹತ್ತಿ ಬಡಿಯುವವರು ಜಾರಿ ನೆಲಕ್ಕೆ ಬೀಳುವವರ ಸಂಖ್ಯೆಯೂ ಹೆಚ್ಚಿದ್ದು ಆತಂಕಕ್ಕೆ ಕಾರಣವಾಗಿದೆ.

ಕಳೆದ ವರ್ಷ ತೋವಿನಕೆರೆ ಸುತ್ತಮುತ್ತ ಹುಣಸೆ ಹಣ್ಣು ಬಡಿಯಲು ಮರ ಹತ್ತಿದ್ದ 8 ಜನರಲ್ಲಿ ಮೂವರು ಬಿದ್ದು ಸಾವನ್ನಪ್ಪಿದ್ದಾರೆ. ಹತ್ತು ವರ್ಷಗಳಲ್ಲಿ ಇಪ್ಪತ್ತಕ್ಕೂ ಹೆಚ್ಚು ಜನರು ಶಾಶ್ವತವಾಗಿ ಅಂಗವಿಕಲರಾಗಿದ್ದಾರೆ.

5-6 ವರ್ಷಗಳಿಂದ ದೊಡ್ಡ ಹುಣಸೆ ಮರಗಳ ಬೆಳೆ ಬಡಿಯುವ ಕಾರ್ಮಿಕರ ಕೊರತೆಯಿಂದ ಖರೀದಿಸುವವರ ಇಲ್ಲದೇ ಮರದಲ್ಲೇ ಹಾಳಾಗಿದೆ. ಪ್ರತಿವರ್ಷ ಮರದಲ್ಲಿ ಹಣ್ಣುಗಳು ಹಾಳು ಗುತ್ತಿರುವುದು ಹೆಚ್ಚುತ್ತಿದೆ. ಕೆಲ ಮರಗಳು 60 ಅಡಿಗೂ ಹೆಚ್ಚು ಎತ್ತರವಿದ್ದು ಮರದಿಂದ ಜಾರಿ ಬಿದ್ದರೆ ಚೇತರಿಸಿಕೊಳ್ಳುವುದು ಸುಲಭವಲ್ಲ.

ತುಮಕೂರು ಜಿಲ್ಲೆಯಲ್ಲಿ ಎರಡು ಕೃಷಿ ವಿಜ್ಞಾನ ಕೇಂದ್ರಗಳಿದ್ದು ಸರಳ ಯಂತ್ರ ಅಭಿವೃದ್ಧಿಪಡಿಸಿದರೆ ಅನುಕೂಲವಾಗುತ್ತದೆ ಎನ್ನುತ್ತಾರೆ ಬೆಳೆಗಾರರು.

ಹುಣಸೆ ಮರದಿಂದ ಬಿದ್ದರೆ ಪರಿಹಾರ ಸಿಗುವುದಿಲ್ಲ. ಇದಕ್ಕಾಗಿ ಯೋಜನೆ ರೂಪಿಸಬೇಕೆಂದು ಶ್ರಮಿಕ ಸಿರಿ ಸಂಘದ ಖಜಾಂಚಿ ಜುಂಜರಾಮನಹಳ್ಳಿ ಜನಾರ್ದನಯ್ಯ ಮನವಿ ಮಾಡಿದ್ದಾರೆ.

ಐದು ವರ್ಷಗಳ ಹಿಂದೆ ಹುಣಸೆ ಮರದಿಂದ ಬಿದ್ದು ಕೃಷಿ ಕೆಲಸ ಮಾಡಲಾಗುತ್ತಿಲ್ಲ

ಸಿದ್ಧಗಂಗಯ್ಯ ದೊಡ್ಡೆಗೌಡನ ಪಾಳ್ಯ

ಹುಣಸೆ ಹಣ್ಣು ಮರದಿಂದ ನೆಲದ ಮೇಲೆ ನಿಂತು ಬೀಳಿಸಲು ಸರಳ ಉಪಕರಣ ಶೀಘ್ರವಾಗಿ ಅಭಿವೃದ್ಧಿಪಡಿಸಿ ಬೇಕು

ಕಂಬಳಿ ಸಿದ್ಧಪ್ಪ, ಗುತ್ತಿಗೆದಾರ, ಸಿವಿಡಿ ಪಾಳ್ಯ



ಕೊಯಿರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬೀಗ ಹಾಕಿರುವ ದೃಶ್ಯ

ಆರೋಗ್ಯ ಕೇಂದ್ರಕ್ಕೆ ಬೀಗ ಜಡಿದ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೋವಿಡ್-19 ಹಾಗೂ ಓಮೈಕ್ರಾನ್ ಸೋಂಕು ದಿನದಿಂದ ದಿನಕ್ಕೆ ಜಿಲ್ಲೆಯಾದ್ಯಂತ ಹೆಚ್ಚಾಗುತ್ತಿದೆ. ಈ ಹೊತ್ತಿನಲ್ಲಿ ವಾರಾಂತ್ಯದ ಕರ್ಫ್ಯೂ ಕಾರಣ ನೀಡಿ ತಾಲ್ಲೂಕಿನ ಕೊಯಿರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಿಬ್ಬಂದಿ ಬೀಗ ಜಡಿದಿದ್ದಾರೆ.

ಗ್ರಾಮೀಣ ಜನತೆಗೆ ಶೀಘ್ರವಾಗಿ ವೈದ್ಯಕೀಯ ಸೌಲಭ್ಯ ದೊರೆಕಿಸುವ ಸಲುವಾಗಿ ಆಯುಷ್ಮಾನ್ ಭಾರತ ಯೋಜನೆಯಡಿಯಲ್ಲಿ ಆರೋಗ್ಯ ಮತ್ತು ಕ್ಷೇಮ ಕೇಂದ್ರವನ್ನು ಸರ್ಕಾರ ಸ್ಥಾಪನೆ ಮಾಡಿತ್ತು.

ಇದರಲ್ಲಿ ಕರ್ನಾಟಕ ರಾಜ್ಯ ನಂ.01 ಶ್ರೇಯಾಂಕವು ಪಡೆದಿತ್ತು. ಆದರೆ ಇದಕ್ಕೆ ಅಪಮಾನ ಮಾಡುವ ರೀತಿಯಲ್ಲಿ ಕೊಯಿರ ಪ್ರಾಥಮಿಕ ಆರೋಗ್ಯ ಕೇಂದ್ರ, ಆರೋಗ್ಯ ಮತ್ತು ಕ್ಷೇಮ ಕೇಂದ್ರ ಭಾನುವಾರ ಕಾರ್ಯನಿರ್ವಹಣೆ ಮಾಡದೆ ಬೀಗ ಹಾಕಿದೆ.

ಗ್ರಾಮೀಣ ಭಾಗದಲ್ಲಿ ಹೆರಿಗೆ ಮತ್ತು ಮಕ್ಕಳ ಆರೋಗ್ಯದ ಸಂಬಂಧ ದಿನದ 24 ಗಂಟೆಯೂ ಕಾರ್ಯನಿರ್ವಹಣೆ ಮಾಡಬೇಕಿರುವುದು ಆರೋಗ್ಯ ಕೇಂದ್ರಗಳ ಕರ್ತವ್ಯವಾಗಿದ್ದರೂ ಸಿಬ್ಬಂದಿಗಳ ಬೇಜವಾಬ್ದಾರಿತನದಿಂದ ಸರ್ಕಾರದ ಯೋಜನೆ ತಲುಪುವಲ್ಲಿ ವಿಫಲವಾಗಿದೆ.

ಈ ಸಂಬಂಧ ತಾಲ್ಲೂಕು ವೈದ್ಯಾಧಿಕಾರಿ ಮತ್ತು ಜಿಲ್ಲಾ ವೈದ್ಯಾಧಿಕಾರಿಯನ್ನು ಫೋನ್ ಮೂಲಕ ಸಂಪರ್ಕ ಮಾಡಲು ಪ್ರಯತ್ನ ಮಾಡಲಾದರೂ ಕರೆಗೆ ಉತ್ತರ ನೀಡಲಿಲ್ಲ.

ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ, ಮುಖ್ಯ ಆರೋಗ್ಯಾಧಿಕಾರಿ ಸಹಿತ ಅನೇಕ ಅಧಿಕಾರಿಗಳಿಗೂ ಸೋಂಕು

ಸೋಂಕಿತರಾಗುತ್ತಿರುವ ಕೋವಿಡ್ ಯೋಧರು

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಒಂದೆಡೆ ನಗರದಲ್ಲಿ ನಿತ್ಯವೂ 20 ಸಾವಿರಕ್ಕೂ ಅಧಿಕ ಕೋವಿಡ್ ಪ್ರಕರಣಗಳು ನಗರದಲ್ಲಿ ದೃಢಪಡುತ್ತಿವೆ. ಇನ್ನೊಂದೆಡೆ ಸೋಂಕು ನಿಯಂತ್ರಣ ಕಾರ್ಯದಲ್ಲಿ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ವಿಭಾಗದ ಸಿಬ್ಬಂದಿಯೂ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್‌ಗೆ ಒಳಗಾಗುತ್ತಿರುವುದು ಬಿಬಿಎಂಪಿಗೆ ತಲೆನೋವಾಗಿ ಪರಿಣಮಿಸಿದೆ.

ಬಿಬಿಎಂಪಿ ಆರೋಗ್ಯ ವಿಭಾಗದಲ್ಲಿ ವೈದ್ಯರು, ಕಿರಿಯ ಆರೋಗ್ಯ ಸಹಾಯಕರು, ಆಶಾ ಕಾರ್ಯಕರ್ತೆಯರು ಸೇರಿ 3500ಕ್ಕೂ ಅಧಿಕ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ತಳ ಹಂತದಲ್ಲಿ ಕೋವಿಡ್ ಪರೀಕ್ಷೆಗಾಗಿ ಗಂಟಲ ದ್ರವದ ಮಾದರಿ ಸಂಗ್ರಹಿಸುವ ಸಿಬ್ಬಂದಿ, ಕಿರಿಯ ಆರೋಗ್ಯ ಸಹಾಯಕರು, ಆಶಾ ಕಾರ್ಯಕರ್ತೆಯರು, ಡೇಟಾ ಎಂಟ್ರಿ ಸಿಬ್ಬಂದಿ ಸೇರಿದಂತೆ ನಿತ್ಯವೂ ನೂರಾರು ಮಂದಿ ಸೋಂಕಿಗೆ ಒಳಗಾಗುತ್ತಿದ್ದಾರೆ.

ಸ್ವತಃ ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ, ಮುಖ್ಯ ಆರೋಗ್ಯಾಧಿಕಾರಿ ಡಾ.ಬಾಲಸುಂದರ್, ಪಶ್ಚಿಮ ವಲಯದ ಆರೋಗ್ಯಾಧಿಕಾರಿ ಡಾ.ಮನೋರಂಜನ್ ಹೆಗ್ಡೆ ಹಾಗೂ ಇದೇ ವಲಯದ ನಾಲ್ವರು ಆರೋಗ್ಯ ವೈದ್ಯಾಧಿಕಾರಿಗಳೂ ಸೇರಿದಂತೆ ಈ ನಿಯಂತ್ರಣ ಕಾರ್ಯದ ಉಸ್ತುವಾರಿ ನೋಡಿಕೊಳ್ಳುವ ಅಧಿಕಾರಿಗಳೂ ಕೋವಿಡ್ ಸೋಂಕಿನಿಂದ ಬಳಲುತ್ತಿದ್ದಾರೆ.

'ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರದ (ಪಿಎಚ್‌ಸಿ) ವ್ಯಾಪ್ತಿಯಲ್ಲಿ 10 ಕ್ಕೂ ಅಧಿಕ ಸಿಬ್ಬಂದಿ ಕೋವಿಡ್ ಸೋಂಕಿಗೆ ಒಳಗಾದರು. ಅವರು ಮನೆಯಲ್ಲೇ ಪ್ರತ್ಯೇಕವಾಸದಲ್ಲಿರುವುದರಿಂದ ಉಳಿದ ಸಿಬ್ಬಂದಿ ಮೇಲೆ ಕೆಲಸದ ಹೊರೆ ಹೆಚ್ಚುತ್ತಿದೆ. ಇನ್ನೊಂದೆಡೆ ಸೋಂಕಿಗೆ ಒಳಗಾಗುವ ಸಾರ್ವಜನಿಕರ ಸಂಖ್ಯೆಯೂ ದಿನೇ ದಿನೇ ಹೆಚ್ಚುತ್ತಿದೆ. ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸಿಬ್ಬಂದಿ ಮತ್ತು ಅಧಿಕಾರಿಗಳ ಮೇಲೆ ವಿಪರೀತ ಕೆಲಸದ ಒತ್ತಡ ಸೃಷ್ಟಿಯಾಗುತ್ತಿದೆ. ವಾರದ ರಜೆಯನ್ನೂ ಪಡೆಯಲಾಗದ ಸ್ಥಿತಿ ನಿರ್ಮಾಣವಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ವೈದ್ಯರೊಬ್ಬರು 'ಪ್ರಜಾವಾಣಿ' ಜೊತೆ ಅಳಲು ತೋಡಿಕೊಂಡರು.

'ಕೆಲವು ಸಿಬ್ಬಂದಿ ಎರಡು ವರ್ಷದಲ್ಲಿ ನಾಲ್ಕೈದು ಬಾರಿ ಸೋಂಕಿತರಾಗಿದ್ದು ಉಂಟು. ಪದೇ ಪದೇ ಕೋವಿಡ್ ದೃಢಪಟ್ಟಾಗ ಸಿಬ್ಬಂದಿ ಸ್ಥೈರ್ಯ ಕಳೆದುಕೊಳ್ಳುವುದು ಸಹಜ. ಸೋಂಕಿತರ ಸಂಪರ್ಕಕ್ಕೆ ಬಂದ ಕಾರಣಕ್ಕೆ ಪರೀಕ್ಷೆ ಮಾಡಿಸಿಕೊಂಡ ಸಿಬ್ಬಂದಿಯಲ್ಲಿ ಬಹುತೇಕರಿಗೆ ಸೋಂಕು ದೃಢಪಡುತ್ತಿದೆ. ಅವರಲ್ಲಿ ಹೆಚ್ಚಿನವರಿಗೆ ಸೋಂಕಿನ ಲಕ್ಷಣಗಳಿಲ್ಲ. ಆಸ್ಪತ್ರೆಗೆ ದಾಖಲಾಗುವ ಸ್ಥಿತಿ ಬಹುತೇಕ ಸಿಬ್ಬಂದಿಗೆ ಎದುರಾಗಿಲ್ಲ. ಹಾಗಾಗಿ ಪರಿಸ್ಥಿತಿಯನ್ನು ಹೇಗೋ ನಿಭಾಯಿಸುತ್ತಿದ್ದೇವೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಮತ್ತೊಬ್ಬ ಅಧಿಕಾರಿ ವಿವರಿಸಿದರು.

'ಕೋವಿಡ್ ನಿಯಂತ್ರಣದಲ್ಲಿ ನಮ್ಮ ವಿಭಾಗದ ಪಾತ್ರವೇ ಮಹತ್ತರವಾದುದು. ಹಾಗಾಗಿ ಸೋಂಕಿತ ಸಿಬ್ಬಂದಿ ಒಂದು ವಾರ ಮನೆಯಲ್ಲೇ ಪ್ರತ್ಯೇಕ ವಾಸಕ್ಕೆ ಒಳಗಾಗುವಂತೆ ನಿರ್ದೇಶನ ನೀಡಿದ್ದೇವೆ. ನಂತರ ಪರೀಕ್ಷೆ ಮಾಡಿಸಿಕೋಡು ಸೋಂಕಿಲ್ಲ ಎಂಬುದು ದೃಢಪಟ್ಟರೆ ಕರ್ತವ್ಯಕ್ಕೆ ಮರಳುವಂತೆ ಸೂಚಿಸಿದ್ದೇವೆ' ಎಂದು ಡಾ.ಕೆ.ವಿ.ತ್ರಿಲೋಕಚಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋವಿಡ್‌ನಿಂದ ಗುಣಮುಖರಾದವರು ಕರ್ತವ್ಯಕ್ಕೆ ಮರಳುತ್ತಿದ್ದಾರೆ. ಪರಿಸ್ಥಿತಿ ನೋಡಿಕೊಂಡು ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ಅಧಿಕಾರವನ್ನು ತಳಮಟ್ಟದ ಅಧಿಕಾರಿಗಳಿಗೆ ನೀಡಿದ್ದೇವೆ. ಹಾಗಾಗಿ ಸದ್ಯಕ್ಕೆ ಸೋಂಕು ನಿಯಂತ್ರಣಕ್ಕೆ ಸಿಬ್ಬಂದಿ ಕೊರತೆ ಎದುರಾಗುವಷ್ಟು ಪರಿಸ್ಥಿತಿ ಹದಗೆಟ್ಟಿಲ್ಲ' ಎಂದು ಅವರು ತಿಳಿಸಿದರು.

ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಾಲಸುಂದರ್, 'ಆರೋಗ್ಯ ಸಿಬ್ಬಂದಿ ಸೋಂಕಿತರ ಸಂಪರ್ಕಕ್ಕೆ ಬರುವ ಪ್ರಮೇಯ ಹೆಚ್ಚು. ಹಾಗಾಗಿ ಸಹಜವಾಗಿಯೇ ನಮ್ಮವರು ಸೋಂಕಿಗೆ ಒಳಗಾಗುವ ಅಪಾಯ ಜಾಸ್ತಿ. ಹಾಗಾಗಿ ಮೊದಲಿನಿಂದಲೂ ಶೇ 10ರಷ್ಟು ಹೆಚ್ಚುವರಿ ಸಿಬ್ಬಂದಿ ಕರ್ತವ್ಯಕ್ಕೆ ಸನ್ನದ್ಧರಾಗಿರುವಂತೆ ವ್ಯವಸ್ಥೆ ಮಾಡಿಕೊಂಡಿದ್ದೆವು. ಈಗಂತೂ ನಿತ್ಯವೂ 1 ಲಕ್ಷಕ್ಕೂ ಅಧಿಕ ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ. ಇದನ್ನು ನಿಭಾಯಿಸಲು ಹೆಚ್ಚುವರಿ ಸಿಬ್ಬಂದಿಯ ನೇಮಕಕ್ಕೆ ಕ್ರಮ ಕೈಗೊಂಡಿದ್ದೇವೆ' ಎಂದು ತಿಳಿಸಿದರು.

'ಎಲ್ಲ ಸಿಬ್ಬಂದಿಯೂ ಕೋವಿಡ್ ಲಸಿಕೆಯ ಎರಡು ಡೋಸ್‌ಗಳನ್ನು ಈಗಾಗಲೇ ಪಡೆದಿದ್ದಾರೆ. ಹೆಚ್ಚಿನ ಸಿಬ್ಬಂದಿ ಮುನ್ನೆಚ್ಚರಿಕೆ (ಬೂಸ್ಟರ್) ಡೋಸ್ ಪಡೆದಿದ್ದಾರೆ. ಹಾಗಾಗಿ ಆಸ್ಪತ್ರೆಗೆ ದಾಖಲಾಗುವ ಪ್ರಮೇಯ ಕಡಿಮೆ' ಎಂದರು.

'ಎನ್–95 ಮಾಸ್ಕ್ ವಿತರಿಸದ ಸರ್ಕಾರ'

'ಮೊದಲ ಎರಡು ಕೋವಿಡ್ ಅಲೆಗಳಲ್ಲಿ ಆರೋಗ್ಯ ಸಿಬ್ಬಂದಿಗೆ ಸಿಬ್ಬಂದಿಗೆ ಬಿಬಿಎಂಪಿಯಿಂದಲೇ ಎನ್–95 ಮಾಸ್ಕ್ ವಿತರಿಸಲಾಗಿತ್ತು. ಈ ಬಾರಿ ಬಹುತೇಕ ಪಿಎಚ್‌ಸಿಗಳಿಗೆ ಸರ್ಕಾರದಿಂದ ಎನ್–95 ಮಾಸ್ಕ್ ಪೂರೈಕೆ ಆಗಿಲ್ಲ. ಈ ಮಾಸ್ಕನ್ನು ಒಂದಕ್ಕಿಂತ ಹೆಚ್ಚು ದಿನ ಧರಿಸಲಾಗದು. ಡೇಟಾ ಎಂಟ್ರಿ ಸಿಬ್ಬಂದಿ, ಆಶಾ ಕಾರ್ಯಕರ್ತೆಯರೆಲ್ಲ ಎನ್–95 ಮಾಸ್ಕ್‌ಗಾಗಿ ನಿತ್ಯ ₹ 25ರಿಂದ ₹ 50 ವ್ಯಯಿಸುವುದು ಕಷ್ಟಸಾಧ್ಯ. ಹಾಗಾಗಿ ಬಿಬಿಎಂಪಿಯವರು ಕನಿಷ್ಠ ಪಕ್ಷ ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನಾದರೂ ಬಳಸಿಕೊಂಡು, ತಳ ಹಂತದಲ್ಲಿ ಕರ್ತವ್ಯ ನಿರ್ವಹಿಸುವ ಕೋವಿಡ್ ಯೋಧರಿಗೆ ಎನ್–95 ಮಾಸ್ಕ್ ಪೂರೈಸಬೇಕು' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಯೊಬ್ಬರು ಕೋರಿದರು.

'ಕೋವಿಡ್ ನಿಯಂತ್ರಣ–ಮನೆಯಿಂದಲೇ ನಿಗಾ'

'ಆರೋಗ್ಯ ವೈದ್ಯಾಧಿಕಾರಿಗಳೂ ಸೇರಿದಂತೆ ಆರೋಗ್ಯ ವಿಭಾಗದ ಅನೇಕ ಅಧಿಕಾರಿಗಳಿಗೂ ಕೋವಿಡ್ ದೃಢಪಟ್ಟಿದೆ. ಸೋಂಕಿತ ಅಧಿಕಾರಿಗಳು ಕರ್ತವ್ಯ ನಿರ್ವಹಣೆ ಮುಂದುವರಿಸಿದ್ದು, ಕೋವಿಡ್ ನಿಯಂತ್ರಣ ಕಾರ್ಯಗಳ ಮೇಲೆ ಮನೆಯಿಂದಲೇ ನಿಗಾ ಇಡುತ್ತಿದ್ದಾರೆ' ಎಂದು ಡಾ.ಬಾಲಸುಂದರ್ ತಿಳಿಸಿದರು.

ಮಾಸ್ಕ್: ದಂಡಾಸ್ತ್ರಕ್ಕೂ ಬಗ್ಗದ ನಾಗರಿಕರು

ಮುಖಗವಸು ಧರಿಸದೇ ಓಡಾಟ: 2020ರ ಮೇ ನಿಂದ ಈವರೆಗೆ 6.18 ಲಕ್ಷ ಮಂದಿಗೆ ದಂಡ

• ಜಿ.ಶಿವಕುಮಾರ

ಬೆಂಗಳೂರು: ನಗರದಲ್ಲಿ ಕೋವಿಡ್ ಹಾಗೂ ಓಮೈಕ್ರಾನ್ ಪ್ರಕರಣಗಳು ಏರುಗತಿಯಲ್ಲಿವೆ. ಕೋವಿಡ್ ನಿಯಂತ್ರಣಕ್ಕೆ ಸಾರ್ವಜನಿಕ ಸ್ಥಳಗಳಲ್ಲಿ ಮುಖಗವಸು ಧರಿಸುವುದನ್ನು ಕಡ್ಡಾಯಗೊಳಿಸಿರುವ ಸರ್ಕಾರ, ಧರಿಸದವರಿಗೆ ದಂಡ ವಿಧಿಸುತ್ತಿದೆ. ಹೀಗಿದ್ದರೂ ನಾಗರಿಕರು ನಿಯಮ ಉಲ್ಲಂಘಿಸುವುದು ಸಾಮಾನ್ಯವಾಗಿದೆ.

ಮಾರುಕಟ್ಟೆ, ಬಸ್ ಹಾಗೂ ರೈಲು ನಿಲ್ದಾಣ, ಉದ್ಯಾನ, ಮಳಿಗೆಗಳಿಗೆ ಭೇಟಿ ನೀಡುವವರ ಮೇಲೆ ಬಿಬಿಎಂಪಿ ಮಾರ್ಷಲ್‌ಗಳು ಹದ್ದಿನ ಕಣ್ಣು ಇಟ್ಟಿದ್ದಾರೆ. ನಗರದಲ್ಲಿ 15 ದಿನಗಳಲ್ಲೇ (ಜ.1 ರಿಂದ 15) ಮುಖಗವಸು ಧರಿಸದ 14,273 ಮಂದಿ ವಿರುದ್ಧ ಪ್ರಕರಣ ದಾಖಲಿಸಿ ₹35.68 ಲಕ್ಷ ದಂಡವನ್ನೂ ಸಂಗ್ರಹಿಸಿದ್ದಾರೆ.

'ಪ್ರಯಾಣಿಕರ ಅನುಕೂಲಕ್ಕಾಗಿ ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಒಟ್ಟು ಆಸನ ಸಾಮರ್ಥ್ಯದ ಶೇ 100ರಷ್ಟು ಮಂದಿಯನ್ನು ಕರೆದೊಯ್ಯಲು ಸರ್ಕಾರ ಅನುಮತಿ ನೀಡಿದೆ. ಸಂಜೆ ಹಾಗೂ ಬೆಳಿಗ್ಗೆ ಸಮಯದಲ್ಲಿ ಬಸ್‌ಗಳು ಪ್ರಯಾಣಿಕರಿಂದ ತುಂಬಿರುತ್ತವೆ. ಈ ಅವಧಿಯಲ್ಲಿ ಸೋಂಕು ಪರಸ್ಪರರಿಗೆ ಹರಡುವ ಅಪಾಯ ಹೆಚ್ಚು' ಎಂದು ಬಿಎಂಟಿಸಿ ನಿರ್ವಾಹಕರೊಬ್ಬರು ಹೇಳಿದರು.



ಬಿಬಿಎಂಪಿ ಮಾರ್ಷಲ್‌ಗಳು ಮುಖಗವಸು ಧರಿಸದೆ ಓಡಾಡುತ್ತಿದ್ದ ಯುವಕನೊಬ್ಬನಿಗೆ ದಂಡ ವಿಧಿಸಿದರು —ಸಂಗ್ರಹ ಚಿತ್ರ

'ಕೋವಿಡ್ ಎರಡನೇ ಅಲೆಯನ್ನು ಜನರು ಲಘುವಾಗಿ ಪರಿಗಣಿಸಿದ್ದರು. ಅದರ ಪರಿಣಾಮ ಏನು ಎಂಬುದು ಎಲ್ಲರಿಗೂ ಗೊತ್ತಿದೆ. ಅಂತಹ ಆರೋಗ್ಯ ತುರ್ತುಪರಿಸ್ಥಿತಿ ಈಗ ಸೃಷ್ಟಿಯಾದರೆ ಅದನ್ನು ಎದುರಿಸಲು ರಾಜ್ಯದ ಯಾವ ಆಸ್ಪತ್ರೆಗಳೂ ಸಿದ್ಧವಾಗಿಲ್ಲ. ಹೀಗಾಗಿ ಜನ ನಿರ್ಲಕ್ಷ್ಯ ಬಿಟ್ಟು ಸುರಕ್ಷತೆಗೆ ಒತ್ತು ನೀಡಬೇಕು' ಎಂದು ರೀಗಲ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ವಿ. ಸೂರಿ ರಾಜು ತಿಳಿಸಿದರು.



ಡಾ.ಸೂರಿರಾಜು

'ಓಮೈಕ್ರಾನ್ ಪ್ರಕರಣಗಳು ಬೆಂಗಳೂರಿನಲ್ಲೇ ಅಧಿಕವಾಗಿವೆ. ನಿರ್ಲಕ್ಷ್ಯ ವಹಿಸಿದರೆ ಮುಂದಿನ ದಿನಗಳಲ್ಲಿ ಇದು ರಾಜ್ಯದ ಇತರ ಜಿಲ್ಲೆಗಳಿಗೂ ವ್ಯಾಪಿಸಬಹುದು. ಹೀಗಾಗಿ ಪ್ರತಿಯೊಬ್ಬರೂ ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಜಿಗಣಿಯ ಎಸಿಇ ಸುಹಾಸ್ ಆಸ್ಪತ್ರೆಯ ಮುಖ್ಯಸ್ಥ ಡಾ.ಜಗದೀಶ್ ಹಿರೇಮಠ್ ಹೇಳಿದರು.



ಡಾ.ಜಗದೀಶ್ ಹಿರೇಮಠ್

ಮಾಸ್ಕ್ ಧರಿಸದವರಿಗೆ ದಂಡ– ವಿವರ

6,18,724 2020ರ ಮೇ 30ಗಳಿಂದ 2022ರ ಜ.15ರ ಅವಧಿಯಲ್ಲಿ ಮಾರ್ಷಲ್‌ಗಳು ದಂಡ ವಿಧಿಸಿದ ಪ್ರಕರಣಗಳು

₹14.96 ಕೋಟಿ ಈ ಅವಧಿಯಲ್ಲಿ ವಿಧಿಸಿರುವ ದಂಡದ ಮೊತ್ತ

31,439 2021ರ ನವೆಂಬರ್‌ನಿಂದ 2022ರ ಜ.10ರ ಅವಧಿಯಲ್ಲಿ ಪೊಲೀಸರು ದಂಡ ವಿಧಿಸಿದ ಪ್ರಕರಣಗಳು

₹80.28 ಲಕ್ಷ ಈ ಅವಧಿಯಲ್ಲಿ ಪೊಲೀಸರು ಸಂಗ್ರಹಿಸಿರುವ ದಂಡ ಮೊತ್ತ

ನಾನು ಆರೋಗ್ಯವಾಗಿದ್ದೇನೆ. ನನಗೆ ಏನೂ ಆಗದು ಎಂಬ ಮನಸ್ಥಿತಿ ಬಹುತೇಕರಲ್ಲಿದೆ. ಇಂಥವರು ಮಾಡುವ ತಪ್ಪಿಗೆ ಅವರ ಕುಟುಂಬದ ಸದಸ್ಯರು ಪರಿತಪಿಸಬೇಕಾಗುತ್ತದೆ

ಡಾ.ಬಾಲಸುಂದರ್, ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ)

ಮುಖಗವಸು ಧರಿಸದೆ ಇರುವವರ ವಿರುದ್ಧ ಜ.15ರಂದು ವಿವಿಧ ವಲಯಗಳಲ್ಲಿ ದಾಖಲಾದ ಪ್ರಕರಣ

ವಲಯ	ಪ್ರಕರಣ	ದಂಡ ಮೊತ್ತ (₹ಗಳಲ್ಲಿ)
ಪೂರ್ವ	108	27,000
ಪಶ್ಚಿಮ	162	40,500
ದಕ್ಷಿಣ	90	22,500
ಮಹದೇವಪುರ	37	9,250
ಆರ್.ಆರ್.ನಗರ	44	11,000
ಯಲಹಂಕ	21	5,250
ದಾಸರಹಳ್ಳಿ	20	5,000
ಬೊಮ್ಮನಹಳ್ಳಿ	51	12,750

ಬೆಳ್ಳಂದೂರು ವಾರ್ಡ್: ಪ್ರತಿದಿನ 400ಕ್ಕೂ ಅಧಿಕ ಮಂದಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಬೆಳ್ಳಂದೂರು ವಾರ್ಡ್‌ನಲ್ಲಿ ಕೋವಿಡ್ ಹರಡುವಿಕೆ ಪ್ರಮಾಣ ಗರಿಷ್ಠ ಮಟ್ಟದಲ್ಲಿದೆ. ಇಲ್ಲಿ ನಿತ್ಯವೂ 400ಕ್ಕೂ ಅಧಿಕ ಮಂದಿಯಲ್ಲಿ ಕೋವಿಡ್ ಕಾಣಿಸಿಕೊಳ್ಳುತ್ತಿದೆ. ಒಟ್ಟು ಏಳು ವಾರ್ಡ್‌ಗಳಲ್ಲಿ ದೈನಂದಿನ ಸೋಂಕು ಪತ್ತೆ ಪ್ರಮಾಣ 200ರ ಗಡಿ ದಾಟಿದೆ.

ಮಹದೇವಪುರ ವಲಯದಲ್ಲಿ, ಅಪಾರ್ಟ್‌ಮೆಂಟ್ ಸಮುಚ್ಚಯಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಬೆಳ್ಳಂದೂರು ವಾರ್ಡ್‌ನಲ್ಲಿ ನಿತ್ಯ ಸರಾಸರಿ 403 ಮಂದಿ ಕೊರೊನಾ ಸೋಂಕಿಗೆ ಒಳಗಾಗುತ್ತಿದ್ದಾರೆ. ಇದೇ ವಲಯದ ಹೊರಮಾವು, ದೊಡ್ಡ ನೆಕ್ಕುಂದಿ, ಬೊಮ್ಮನಹಳ್ಳಿ ವಲಯದ ಬೇಗೂರು, ಎಚ್‌ಎಸ್‌ಆರ್ ಬಡಾವಣೆ, ಪೂರ್ವ ವಲಯದ ಹೊಸ ತಿಪ್ಪಸಂದ್ರ, ರಾಜರಾಜೇಶ್ವರಿನಗರ ವಲಯದ ರಾಜರಾಜೇಶ್ವರಿನಗರ ವಾರ್ಡ್‌ಗಳಲ್ಲಿ ನಿತ್ಯ ಸರಾಸರಿ 200ಕ್ಕೂ ಅಧಿಕ ಪ್ರಕರಣಗಳು ಪತ್ತೆಯಾಗುತ್ತಿವೆ.

ಪೂರ್ವವಲಯದ ಕೋರಮಂಗಲ ವಾರ್ಡ್‌ನಲ್ಲಿ ಹಾಗೂ ಆರ್.ಆರ್.ನಗರ ವಲಯದ ಹೆಮ್ಮಿಗೆಪುರ ವಾರ್ಡ್‌ನಲ್ಲಿ ನಿತ್ಯ ಸರಾಸರಿ 198 ಪ್ರಕರಣಗಳು ವರದಿಯಾಗುತ್ತಿವೆ. ಬೊಮ್ಮನಹಳ್ಳಿ ವಲಯದ ವಸಂತಪುರ ವಾರ್ಡ್‌ನಲ್ಲಿ ಸರಾಸರಿ 194 ಕೋವಿಡ್ ಪ್ರಕರಣಗಳು ಕಂಡು ಬರುತ್ತಿವೆ.

ಕೋವಿಡ್ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣವೂ ನಿಧಾನಗತಿಯಲ್ಲಿ ಹೆಚ್ಚುತ್ತಿದೆ. ಬಿಬಿಎಂಪಿ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರವಾರದ ಹಿಂದೆ ಪ್ರತಿ ಮೂರು ದಿನಗಳಲ್ಲಿ ಸರಾಸರಿ 23 ಮಂದಿ ಕೋವಿಡ್ ಚಿಕಿತ್ಸೆಗೆ ದಾಖಲಾಗುತ್ತಿದ್ದರು. ಈಗ ಈ ಪ್ರಮಾಣವು 100ಕ್ಕೆ ಹೆಚ್ಚಳವಾಗಿದೆ.

ನಗರದಲ್ಲಿ ಪ್ರಸ್ತುತ ಸರ್ಕಾರಿ ಕೋಟಾದಡಿ ಕೋವಿಡ್ ಚಿಕಿತ್ಸೆಗೆ 7,694 ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ. ಅವುಗಳಲ್ಲಿ 553 ಹಾಸಿಗೆಗಳು ರೋಗಿಗಳ ಬಳಕೆಯಾಗುತ್ತಿದ್ದು, ಒಟ್ಟು 7,141 ಹಾಸಿಗೆಗಳು ಚಿಕಿತ್ಸೆಗಾಗಿ ಲಭ್ಯ ಇವೆ. ತೀವ್ರ ನಿಗಾ ಘಟಕದಲ್ಲಿ (ಐಸಿಯು) ವೆಂಟಿಲೇಟರ್ ವ್ಯವಸ್ಥೆ ಹೊಂದಿರುವ 441 ಹಾಸಿಗೆಗಳಲ್ಲಿ 415 ಖಾಲಿ ಇವೆ. ಐಸಿಯುಗಳಲ್ಲಿನ 442 ಸಾಮಾನ್ಯ ಹಾಸಿಗೆಗಳಲ್ಲಿ 385 ಖಾಲಿ ಇವೆ.

ಸೋಂಕು ಪತ್ತೆ ದರ ಹೆಚ್ಚಳ: ದೈನಂದಿನ ಕೋವಿಡ್ ಪ್ರಕರಣಗಳ ಸಂಖ್ಯೆ ಶನಿವಾರ ತುಸು ಕಡಿಮೆ ಯಾಗಿದ್ದರೂ ಸೋಂಕು ಪತ್ತೆ ದರ ಶೇ 22.16ಕ್ಕೆ ಹೆಚ್ಚಳವಾಗಿದೆ. ಶುಕ್ರವಾರ 22,284 ಮಂದಿಯಲ್ಲಿ ಕೋವಿಡ್ ಕಾಣಿಸಿಕೊಂಡಿತ್ತು. ಶನಿವಾರ 21,071 ಮಂದಿಯಲ್ಲಿ ಕೋವಿಡ್ ಕಾಣಿಸಿಕೊಂಡಿದೆ.

ಕೋವಿಡ್ ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದ್ದರೂ ಈ ಸೋಂಕಿನಿಂದ ಸಾವಿಗೀಡಾಗುವವರ ದರವು ಗಣನೀಯವಾಗಿ ಇಳಿಕೆ ಕಂಡಿದೆ. ಪ್ರಸ್ತುತ ಸೋಂಕಿತರ ಸಾವಿನ ದರವು ಶೇ 0.03ಕ್ಕೆ ಇಳಿದಿದೆ. 2021ರ ಡಿಸೆಂಬರ್ ಅಂತ್ಯದಲ್ಲಿ ಈ ದರವು ಶೇ 0.77ರಷ್ಟಿತ್ತು.

ಬೆಂಗಳೂರು ನಗರ ಜಿಲ್ಲಾ
ಕೋವಿಡ್ ಅಂಕಿ–ಅಂಶ

14,16,807 ಒಟ್ಟು ಸೋಂಕಿತರು (13,95,736 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
1,46,200	12,54,153	16,453

ದಿನದ ಏರಿಕೆ

ಹೊಸ ಪ್ರಕರಣ	21,071
ಗುಣಮುಖ	3,978
ಸಾವು	05

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಚೊಕ್ಕನಹಳ್ಳಿ ಗ್ರಾಮದಲ್ಲಿ ₹1 ಕೋಟಿ ವೆಚ್ಚದ, ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಪಾಲಿಕೆ ಮಾಜಿ ಸದಸ್ಯ ಎ.ಸಿ.ಹರಿಪ್ರಸಾದ್, ಕಾಂಗ್ರೆಸ್ ಮುಖಂಡರಾದ ಎ.ಸಿ. ಶ್ರೀನಿವಾಸ್, ಎಚ್.ಎ.ಶಿವಕುಮಾರ್, ಟಿ. ವೆಂಕಟರಾಮರೆಡ್ಡಿ, ರಾಜಣ್ಣ ಇದ್ದರು

ಕೋವಿಡ್ ನಡುವೆಯೂ ಎಮ್ಮೆಗಳ ಓಟ: ಎಫ್‌ಐಆರ್ ದಾಖಲು

ಬೆಳಗಾವಿ: 'ಮಕರ ಸಂಕ್ರಾಂತಿ ಅಂಗವಾಗಿ ಇಲ್ಲಿನ ಚವಾಟ ಗಲ್ಲಿಯಲ್ಲಿ ಶುಕ್ರವಾರ ಎಮ್ಮೆಗಳ ಓಟದ ಸ್ಪರ್ಧೆ ಆಯೋಜಿಸಿದ್ದವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ' ಎಂದು ಡಿಸಿಪಿ ರವೀಂದ್ರ ಗಡಾದ ತಿಳಿಸಿದರು.

'ಕೋವಿಡ್ ಮಾರ್ಗಸೂಚಿ ಉಲ್ಲಂಘನೆ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಕಾರ್ಯಕ್ರಮದ ವಿಡಿಯೊ ಚಿತ್ರೀಕರಣ ಮಾಡಲಾಗಿದ್ದು, ಮಾರ್ಗಸೂಚಿ ಉಲ್ಲಂಘಿಸಿದ ಎಲ್ಲರ ವಿರುದ್ಧವೂ ಪ್ರಕರಣ ದಾಖಲಾಗಲಿದೆ. ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಗಲ್ಲಿಯ ಚವಾಟ ಯುವಕ ಸಂಘಟನೆ, ಪಂಚ ಸಮಿತಿ ವತಿಯಿಂದ ಆಯೋಜಿಸಿದ್ದ ಸ್ಪರ್ಧೆಗೆ ಶಾಸಕ ಅನಿಲ ಬೆನಕೆ ಚಾಲನೆ ನೀಡಿದ್ದರು. ಸ್ಥಳೀಯರೊಂದಿಗೆ ಕೊಲ್ಹಾಪುರ ಹಾಗೂ ಸಾಂಗ್ಲಿಯವರು ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು. ವಿಜೇತರಿಗೆ ಬಹುಮಾನ ವಿತರಣೆ ಸಹ ನಡೆದಿತ್ತು. ಪಾಲ್ಗೊಂಡಿದ್ದ ಬಹುತೇಕರು ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಸೇರಿದಂತೆ ಕೋವಿಡ್ ಮಾರ್ಗಸೂಚಿ ಪಾಲಿಸಿರಲಿಲ್ಲ ಎನ್ನಲಾಗಿದೆ.

ಕೋವಿಡ್ ಅಂಕಿ–ಅಂಶ
ಆಧಾರ: ಮೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	32.76 ಕೋಟಿ ▲	3.71 ಕೋಟಿ ▲
ಸಕ್ರಿಯ ಪ್ರಕರಣ	5.50 ಕೋಟಿ ▲	15.50 ಲಕ್ಷ ▼
ಗುಣಮುಖ	26.69 ಕೋಟಿ ▲	3.50 ಕೋಟಿ ▲
ಸಾವು	55.56 ಲಕ್ಷ ▲	4.86 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	24.26 ಲಕ್ಷ ▼	2.71 ಲಕ್ಷ ▲
ಗುಣಮುಖ	10.84 ಲಕ್ಷ ▼	1.38 ಲಕ್ಷ ▲
ಸಾವು	5,778 ▼	314 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 8.48 ಲಕ್ಷ ಅಮೆರಿಕ ▲; 3.24 ಲಕ್ಷ ಫ್ರಾನ್ಸ್ ▼; 81,458 ಬ್ರಿಟನ್ ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು: 2.27 ಕೋಟಿ ಅಮೆರಿಕ ▲; 44.78 ಲಕ್ಷ ಫ್ರಾನ್ಸ್ ▼; 36.95 ಲಕ್ಷ ಬ್ರಿಟನ್ ▼

ಎಲ್ಲಿ ಹೆಚ್ಚು ಸಾವು (ಒಟ್ಟು): 1.41 ಲಕ್ಷ ಮಹಾರಾಷ್ಟ್ರ; 50,674 ಕೇರಳ ▲; 36,967 ತಮಿಳುನಾಡು ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 71.70 ಮಹಾರಾಷ್ಟ್ರ ▲; 53.60 ಕೇರಳ ▲; 29.15 ತಮಿಳುನಾಡು ▲

ಭಾರತದ ಕೋವಿಡ್ ಸಂಖ್ಯೆ ವಿವರ: ಭಾನುವಾರ ಬೆಳಿಗ್ಗೆ 8ರವರೆಗಿನ ಮಾಹಿತಿ
ಪ್ರಜಾವಾಣಿ ಗ್ರಾಫಿಕ್ಸ್

ಅತಿಥಿ ಉಪನ್ಯಾಸಕರಿಗೆ ಕಹಿ: ಎಐಡಿಎಸ್‌ಒ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಥಮದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಸಂಕ್ರಾಂತಿಯ ಸಿಹಿ ನೀಡಿರುವುದಾಗಿ ಹೇಳಿ ರಾಜ್ಯ ಸರ್ಕಾರ ಬರೀ ಕಹಿ ಕೊಟ್ಟಿದೆ' ಎಂದು ಎಐಡಿಎಸ್‌ಒ ಆರೋಪಿಸಿದೆ.

'ಸೇವಾ ಭದ್ರತೆ, ವೇತನ ಹಾಗೂ ಇನ್ನಿತರ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ ಅತಿಥಿ ಉಪನ್ಯಾಸಕರು ರಾಜ್ಯದಾದ್ಯಂತ ತರಗತಿಗಳನ್ನು ಬಹಿಷ್ಕರಿಸಿ ಹೋರಾಟ ಮಾಡುತ್ತಿದ್ದಾರೆ. ಅವರ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದ ರಾಜ್ಯ ಸರ್ಕಾರ, ಗೌರವಧನ ಹೆಚ್ಚಳ ಮಾಡುವ ಮೂಲಕ ಸಂಕ್ರಾಂತಿಯಂದು ಸಿಹಿ ಸುದ್ದಿ ಪ್ರಕಟಿಸಿರುವುದಾಗಿ ಹೇಳಿತ್ತು. ಒಡೆದು ಆಳುವ ನೀತಿ ಅನುಸರಿಸುವ ಮೂಲಕ 14,500 ಅತಿಥಿ ಉಪನ್ಯಾಸಕರಿಗೆ ದ್ರೋಹ ಬಗೆದಿದೆ' ಎಂದು ರಾಜ್ಯ ಘಟಕದ ಕಾರ್ಯದರ್ಶಿ ಅಜಯ್ ಕಾಮತ್ ಟೀಕಿಸಿದ್ದಾರೆ.

'ಅತಿಥಿ ಉಪನ್ಯಾಸಕರ ಕಾರ್ಯಭಾರವನ್ನು ವಾರಕ್ಕೆ 8–10 ಗಂಟೆಯಿಂದ 15 ಗಂಟೆಗಳಿಗೆ ಹೆಚ್ಚಿಸಲಾಗಿದೆ. ಅದಕ್ಕೆ ಅನುಗುಣವಾಗಿ ವೇತನ ಏರಿಕೆ ಮಾಡಲಾಗಿದೆ. ಇದರಲ್ಲಿ ವಿಶೇಷತೆ ಏನೂ ಇಲ್ಲ. ಕಾರ್ಯಭಾರ ಹೆಚ್ಚಿಸುವುದರಿಂದ ಈಗಿರುವ ಅತಿಥಿ ಉಪನ್ಯಾಸಕರಲ್ಲಿ ಅರ್ಧದಷ್ಟು ಜನ ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾಗಲಿದ್ದಾರೆ. ಸರ್ಕಾರ ಈಗ ಅನುಸರಿಸಿರುವುದು ಒಡೆದು ಆಳುವ ನೀತಿ' ಎಂದು ತಿಳಿಸಿದ್ದಾರೆ.

'ಫೆಬ್ರುವರಿಯಲ್ಲಿ ಸರ್ಕಾರಿ ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪರೀಕ್ಷೆ ನಿಗದಿಯಾಗಿದೆ. ಉಪನ್ಯಾಸಕರ ಪ್ರತಿಭಟನೆಯಿಂದಾಗಿ ತರಗತಿಗಳೇ ನಡೆದಿಲ್ಲ. ಇಂತಹ ಸ್ಥಿತಿಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವುದು ಹೇಗೆ. ಈಗಲಾದರೂ ಎಚ್ಚೆತ್ತುಕೊಂಡು ಅತಿಥಿ ಉಪನ್ಯಾಸಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಮುಂದಾಗಬೇಕು. ಆ ಮೂಲಕ ವಿದ್ಯಾರ್ಥಿಗಳ ಹಿತ ಕಾಯಬೇಕು' ಎಂದು ಒತ್ತಾಯಿಸಿದ್ದಾರೆ.

ಪುನರ್ವಸತಿ ಕೇಂದ್ರದಲ್ಲಿ ಸೌಲಭ್ಯ ಇಲ್ಲ

ಒಕ್ಕಲೆಬ್ಬಿಸಿದರೆ ಆತ್ಮಹತ್ಯೆ ಮಾಡಿಕೊಳ್ಳುವ ಬೆದರಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆರ್‌ಟಿಸಿ ನೀಡಿಲ್ಲವೆಂದು ಆಕ್ರೋಶ
- ಪಟ್ಟುಬಿಡದ ಆದಿವಾಸಿಗಳು
- ಸ್ಥಳಕ್ಕೆ ತಹಶೀಲ್ದಾರ್ ಭೇಟಿ

ಎಚ್.ಡಿ.ಕೋಟೆ: ಪುನರ್ವಸತಿ ಕಲ್ಪಿಸಿರುವ ಶೆಟ್ಟಹಳ್ಳಿಯಲ್ಲಿ ವಾಸ್ತವ್ಯಕ್ಕೆ ಸರಿಯಾದ ಸೌಲಭ್ಯ ಕಲ್ಪಿಸಿಲ್ಲ ಎಂದು ಆರೋಪಿಸಿ 43 ಆದಿವಾಸಿ ಕುಟುಂಬಗಳು ಮೂಲಸ್ಥಳಕ್ಕೆ ವಾಪಸಾಗಿ ಭಾನುವಾರ ಪ್ರತಿಭಟನೆ ನಡೆಸಿವೆ. ಒಕ್ಕಲೆಬ್ಬಿಸಿದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿವೆ.

ತಾಲ್ಲೂಕಿನ ಡಿ.ಬಿ.ಕುಪ್ಪೆ ಪಂಚಾಯಿತಿ ವ್ಯಾಪ್ತಿಯ ಮಚ್ಚೂರು ಗ್ರಾಮದ ಸಮೀಪವಿರುವ ಬೋಗಾಪುರ ಹಾಡಿಯಿಂದ ಹತ್ತು ವರ್ಷದ ಹಿಂದೆ ಈ ಕುಟುಂಬಗಳನ್ನು ಹುಣಸೂರು ತಾಲ್ಲೂಕಿನ ಶೆಟ್ಟಹಳ್ಳಿ (ಲಕ್ಕಪಟ್ಟಣ) ಬಳಿ ಮನೆ ನಿರ್ಮಿಸಿ, ಜಮೀನು ನೀಡಿ ಸ್ಥಳಾಂತರಿಸಲಾಗಿತ್ತು. ಮಾಡಲಾಗಿತ್ತು. ಆದರೆ, ಅಲ್ಲಿ ಸೌಲಭ್ಯ ಇಲ್ಲವೆಂದು ವಾಪಸ್ ಮೂಲ ಸ್ಥಳಕ್ಕೆ ಬಂದಿದ್ದಾರೆ.

'ಹತ್ತು ವರ್ಷ ಕಳೆದರೂ ನಮಗೆ ಸರ್ಕಾರ ಸೌಲಭ್ಯ ಕಲ್ಪಿಸಿಲ್ಲ. ಜಮೀನಿನ ಆರ್‌ಟಿಸಿ ನೀಡಿಲ್ಲ. ಆಧಾರ್ ಸಂಖ್ಯೆ, ರೇಷನ್ ಕಾರ್ಡ್ ವ್ಯವಸ್ಥೆಯೂ ಇಲ್ಲ. ನಮಗೆ ಅಲ್ಲಿ ಸರಿಯಾದ ಸೌಲಭ್ಯ ಇಲ್ಲದಿರುವುದರಿಂದ ಜೀವನ ನಡೆಸಲು ತೊಂದರೆಯಾಗಿದೆ. ಹೀಗಾಗಿ, ಮೂಲ ಸ್ಥಳದಲ್ಲಿಯೇ ಜೀವನ ನಡೆಸುತ್ತೇವೆ. ಇಲ್ಲಿಂದ ನಮ್ಮನ್ನು ಹೊರ ಹಾಕಿದರೆ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ' ಎಂದು ಪ್ರತಿಭಟನಾನಿರತರು ಬೆದರಿಕೆ ಹಾಕಿದ್ದಾರೆ.

ಸ್ಥಳಕ್ಕೆ ತಹಶೀಲ್ದಾರ್ ಎನ್.ಎಸ್. ನರಗುಂದ, ಎಸಿಎಫ್ ಮಹದೇವ್, ಸಿಪಿಐ ಆನಂದ್ ಭೇಟಿ ನೀಡಿದ್ದರು. 'ಅರಣ್ಯ ಪ್ರದೇಶಕ್ಕೆ ಅಕ್ರಮ ಪ್ರವೇಶ ಮಾಡಿದ್ದು, ಇಲ್ಲಿಂದ ಹೊರಡಿ' ಎಂದು ಸೂಚಿಸಿದರು. ಅಲ್ಲದೇ, ಆದಿವಾಸಿಗಳು ಸಿದ್ಧಪಡಿಸಿದ್ದ ಆಹಾರವನ್ನು ಕಿತ್ತುಕೊಂಡರು.



ಪ್ರತಿಭಟನಾನಿರತ ಆದಿವಾಸಿಗಳನ್ನು ತಹಶೀಲ್ದಾರ್ ಮತ್ತು ಅಧಿಕಾರಿಗಳು ಭಾನುವಾರ ಭೇಟಿ ಮಾಡಿ ಪುನರ್ವಸತಿ ಕೇಂದ್ರಕ್ಕೆ ತೆರಳುವಂತೆ ಸೂಚಿಸಿದರು

ಪಟ್ಟು ಬಿಡದ ಆದಿವಾಸಿಗಳು, 'ನಾವು ಸತ್ತರೂ, ಬದುಕಿದರೂ ಇಲ್ಲಿಯೇ. ಎಲ್ಲಿಗೂ ಹೋಗುವುದಿಲ್ಲ. ನಮಗೆ ಸರ್ಕಾರವೇ ಮೋಸ ಮಾಡಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ನಾವು ದೇವರ ಪೂಜೆಗೆಂದು ಇಲ್ಲಿಗೆ ಬಂದೆವು. ಆದರೆ, ನಮಗೆ ಅಲ್ಲಿನ ಕಿರುಕುಳ ನೆನಪಿಸಿಕೊಂಡರೆ ವಾಪಸ್ ಹೋಗುವುದೇ ಬೇಡ ಎನಿಸುತ್ತಿದೆ. ಇಲ್ಲಿ ಗೆಡ್ಡೆ ಗೆಣಸು ತಿಂದು ಬದುಕುತ್ತೇವೆ' ಎಂದು ಬೋಗಾಪುರ ಹಾಡಿಯಿಂದ ಸ್ಥಳಾಂತರಗೊಂಡ ತಿಮ್ಮಮ್ಮ ಹೇಳಿದರು.

'₹10 ಲಕ್ಷ ನೀಡುವ ಭರವಸೆಯನ್ನು ಸರ್ಕಾರ ಈಡೇರಿಸಿಲ್ಲ. ನಮ್ಮಲ್ಲಿಯೇ ಇನ್ನೂ 5 ಕುಟುಂಬದವರಿಗೆ ಮನೆ ಮತ್ತು ಭೂಮಿ ಸಿಕ್ಕಿಲ್ಲ. ಸ್ಥಳೀಯರು ಕಿರುಕುಳ ನೀಡುತ್ತಿದ್ದು, ಜೀವನ ನಡೆಸುವುದು ದುಸ್ತರವಾಗಿದೆ' ಎಂದು ಡಿ.ಬಿ.ಕುಪ್ಪೆ ಪಂಚಾಯಿತಿ ಸದಸ್ಯ ರಮೇಶ್ ತಿಳಿಸಿದರು.

ಚಿತ್ರಾವಳಿ



ವಾರಾಂತ್ಯ ಕರ್ಫ್ಯೂ ಜಾರಿಯಲ್ಲಿದ್ದರಿಂದ ವಾಹನ ಸಂಚಾರವಿಲ್ಲದೆ ಬಿಕೊ ಎನ್ನುತ್ತಿದ್ದ ಅವೆನ್ಯೂ ರಸ್ತೆಯಲ್ಲಿ ಬಾಲಕನೊಬ್ಬ ಸೈಕಲ್ ಸವಾರಿ ಮಾಡುತ್ತಿದ್ದ ದೃಶ್ಯ ಭಾನುವಾರ ಕಂಡುಬಂತು —ಪ್ರಜಾವಾಣಿ ಚಿತ್ರ



ಕೆ.ಆರ್‌ಮಾರುಕಟ್ಟೆ ಬಳಿ ಆರೋಗ್ಯ ಇಲಾಖೆಯ ಸಿಬ್ಬಂದಿಯೊಬ್ಬರು ಕೋವಿಡ್ ಸೋಂಕು ಪರೀಕ್ಷೆಗಾಗಿ ಯುವಕನ ಮೂಗಿನ ದ್ರವವನ್ನು ಭಾನುವಾರ ಸಂಗ್ರಹಿಸಿದರು —ಪ್ರಜಾವಾಣಿ ಚಿತ್ರ



ಕಾಂಗ್ರೆಸ್ ಪಕ್ಷದ ಮುಖಂಡರಾದ ಎಚ್ ಕುಸುಮಾ ಮತ್ತು ಜಯಕರ್ನಾಟಕ ರಾಜೀವ್‌ಗಾಂಧಿನಗರ ಘಟಕದ ವತಿಯಿಂದ ಸುಂಕದಕಟ್ಟೆ, ಭೈರವೇಶ್ವರನಗರ, ರಾಜೀವ್‌ಗಾಂಧಿನಗರ, ಕೆಬ್ಬೆಹಳ್ಳದ ಬಡಕುಟುಂಬಗಳಿಗೆ ಸೀರೆ, ಬೆಡ್‌ಶೀಟ್, ಬೀದಿ ಬದಿಯ ವ್ಯಾಪಾರಿಗಳಿಗೆ ಕೊಡೆ ಹಾಗೂ ಆರೋಗ್ಯ ಕಿಟ್‌ಗಳನ್ನು ವಿತರಿಸಲಾಯಿತು. ಜಯಕರ್ನಾಟಕ ಸಂಘಟನೆಯ ಕೆ.ವಿ.ಮಧು, ರಮೇಶ್ ಬಿ.ಎನ್, ನಗರಸಭೆ ಮಾಜಿ ಅಧ್ಯಕ್ಷ ಹನುಮಂತರಾಯಪ್ಪ ಇದ್ದಾರೆ

ಅಂಗಾಂಗ ದಾನ; ಐವರ ಬಾಳಿಗೆ ಬೆಳಕು

ಪ್ರಜಾವಾಣಿ ವಾರ್ತೆ

ಮೈಸೂರು/ಮಳವಳ್ಳಿ: ಮಿದುಳಿನಲ್ಲಿ ಗೆಡ್ಡೆ (ಬ್ರೇನ್ ಟ್ಯೂಮರ್) ಬೆಳೆದು, ಮಿದುಳು ನಿಷ್ಕ್ರಿಯಗೊಂಡಿದ್ದ ಮಹಿಳೆಯ ಅಂಗಾಂಗಗಳನ್ನು ಕುಟುಂಬದವರು ದಾನ ಮಾಡಿ ಐವರ ಬಾಳಿನಲ್ಲಿ ಬೆಳಕು ಮೂಡಿಸಿದ್ದಾರೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಕೋರೇಗಾಲ ಗ್ರಾಮದ ಪುಟ್ಟರಾಮೇಗೌಡ ಅವರ ಪತ್ನಿ ನಾಗಮ್ಮ (45) ಸಾವಿನಲ್ಲೂ ಸಾರ್ಥಕತೆ ಮೆರೆದ ದಾನಿ. ಅವರ ಅಂಗಾಂಗಗಳನ್ನು ಶನಿವಾರ ಮೈಸೂರಿನಿಂದ ಬೆಂಗಳೂರಿಗೆ ಸಾಗಿಸಲಾಯಿತು.

ಅಂಗಾಂಗ ಹೊತ್ತ ಆಂಬುಲೆನ್ಸ್ ಇಲ್ಲಿನ ಅಪೋಲೊ–ಬಿಜಿಎಸ್ ಆಸ್ಪತ್ರೆಯಿಂದ ಬೆಂಗಳೂರಿಗೆ ಪ್ರಯಾಣಿಸಲು 'ಗ್ರೀನ್ ಕಾರಿಡಾರ್' (ಸಿಗ್ನಲ್ ಮುಕ್ತ ಸಂಚಾರ ವ್ಯವಸ್ಥೆ) ನಿರ್ಮಿಸಲಾಗಿತ್ತು. ಯಕೃತ್ ಹಾಗೂ ಹೃದಯ ಕವಾಟಗಳನ್ನು ಬೆಂಗಳೂರಿನ ಮಣಿಪಾಲ ಆಸ್ಪತ್ರೆಗೆ ಸಾಗಿಸಲಾಗಿದೆ. 2 ಕಿಡ್ನಿಗಳನ್ನು ಅಪೋಲೊ–ಬಿಜಿಎಸ್ ಆಸ್ಪತ್ರೆಯಲ್ಲೇ ರೋಗಿಗಳಿಗೆ ಕಸಿ ಮಾಡಲಾಗಿದೆ. ಕಾರ್ನಿಯಾವನ್ನು ಮೈಸೂರಿನ ಕಣ್ಣಿನ ಬ್ಯಾಂಕ್‌ಗೆ ರವಾನಿಸಲಾಗಿದೆ.


ನಾಗಮ್ಮ

'ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ನಾಗಮ್ಮ ಅವರನ್ನು ಮಳವಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಜ.13ರಂದು ಅಪೋಲೊ ಆಸ್ಪತ್ರೆಗೆ ಕರೆತರಲಾಗಿತ್ತು. ಎರಡು ದಿನ 'ಜೀವ ರಕ್ಷಕ ವ್ಯವಸ್ಥೆ' ನೆರವು ನೀಡಲಾಗಿತ್ತು. ಅವರ ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ಜ.15ರಂದು ಬೆಳಿಗ್ಗೆ ವೈದ್ಯರು ಘೋಷಿಸಿದರು. ಅವರ ಕುಟುಂಬದ ಒಪ್ಪಿಗೆ ಪಡೆದು ಸಂಜೆ ವೇಳೆಗೆ ಅಂಗಾಂಗ ಪಡೆಯಲಾಯಿತು' ಎಂದು ಅಪೋಲೊ–ಬಿಜಿಎಸ್ ಆಸ್ಪತ್ರೆ ಉಪಾಧ್ಯಕ್ಷ (ಆಡಳಿತ ವಿಭಾಗ) ಎನ್.ಜಿ.ಭರತೀಶ ರೆಡ್ಡಿ ಅವರು ತಿಳಿಸಿದ್ದಾರೆ.

ನಾಗಮ್ಮ ಅವರ ಪುತ್ರ ಚರಣ್, ತಂದೆಯ ಸಮ್ಮತಿಯೊಂದಿಗೆ ಅಂಗಾಂಗ ದಾನ ಮಾಡಲು ಒಪ್ಪಿಗೆ ಸೂಚಿಸಿದ್ದಾರೆ.

ಆಸ್ಪತ್ರೆಯಲ್ಲಿ ಭಾವುಕ ವಾತಾವರಣ ನಿರ್ಮಾಣವಾಗಿತ್ತು. ಆಸ್ಪತ್ರೆ ವೈದ್ಯರು, ಸಿಬ್ಬಂದಿ ಕಾರಿಡಾರ್‌ನಲ್ಲಿ ಸಾಲಾಗಿ ನಿಂತು, ಕೈ ಮುಗಿಯುತ್ತಾ ನಾಗಮ್ಮ ಅವರ ಪಾರ್ಥಿವ ಶರೀರವನ್ನು ಊರಿಗೆ ಕಳುಹಿಸಿಕೊಟ್ಟರು.

ಪ್ರಧಾನಿ ಪ್ರಮಾಣ: ವೆಚ್ಚದ ವಿವರ ಒದಗಿಸಲು ಆದೇಶ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಪ್ರಮಾಣವಚನ ಸಮಾರಂಭ ವೆಚ್ಚದ ವಿವರವನ್ನು ಕೋರಿ ವಕೀಲ ಟಿ. ನರಸಿಂಹಮೂರ್ತಿ ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ್ದ ಅರ್ಜಿಯನ್ನು ಮೂರು ಪ್ರತ್ಯೇಕ ಇಲಾಖೆಗಳಿಗೆ ವರ್ಗಾಯಿಸಿದ್ದ ರಾಷ್ಟ್ರಪತಿಯವರ ಸಚಿವಾಲಯದ ನಿರ್ಧಾರವನ್ನು ಅನೂರ್ಜಿತಗೊಳಿಸಿರುವ ಕೇಂದ್ರ ಮಾಹಿತಿ ಆಯೋಗ, ಅರ್ಜಿದಾರರಿಗೆ ಸಮಗ್ರ ಮಾಹಿತಿ ಒದಗಿಸುವಂತೆ ಆದೇಶಿಸಿದೆ. 2019ರ ಮೇ 30ರಂದು ಮೋದಿಯವರು ಎರಡನೇ ಬಾರಿ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಈ ಸಮಾರಂಭದಲ್ಲಿ ವಿದೇಶಿ ಆಹ್ವಾನಿತರ ಟಿಕೆಟ್ ಸೇರಿದಂತೆ ಉಂಟಾದ ಇತರ ವೆಚ್ಚದ ಬಗ್ಗೆ ವಿವರ ಕೇಳಿ 2019ರ ಮೇ 31 ರಂದು ಅರ್ಜಿ ಸಲ್ಲಿಸಿದ್ದರು.

ವಿಷಾದ

16.01.2022ರ ಸಂಚಿಕೆಯಲ್ಲಿ 'ರಾಘವೇಶ್ವರ ಶ್ರೀಗಳ ವಿರುದ್ಧದ ಅರ್ಜಿಗಳ ವಜಾ' ಎಂಬ ಶೀರ್ಷಿಕೆಯಡಿ ಪ್ರಕಟವಾಗಿರುವ ವರದಿಯಲ್ಲಿ, ಶ್ರೀಗಳ ವಿರುದ್ಧ ದೂರು ನೀಡಿದ ಅತ್ಯಾಚಾರ ಸಂತ್ರಸ್ತೆಯ ಮಗಳ ಹೆಸರೊಂದಿಗೆ, ಸಂತ್ರಸ್ತೆಯ ಹೆಸರೂ ಪ್ರಕಟವಾಗಿದೆ. ಈ ಪ್ರಮಾದಕ್ಕೆ ವಿಷಾದಿಸುತ್ತೇವೆ.

ನಾರಾಯಣ ಗುರು ಸ್ತಬ್ಧಚಿತ್ರಕ್ಕೆ ಅವಕಾಶ ನಿರಾಕರಣೆ


ಕೇಂದ್ರ ಕ್ಷಮೆ ಕೇಳಲಿ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಸಮಾಜ ಸುಧಾರಕ ನಾರಾಯಣ ಗುರುಗಳ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಅವಕಾಶ ನಿರಾಕರಿಸಿ ಅವಮಾನ ಮಾಡಿರುವ ಕೇಂದ್ರ ಸರ್ಕಾರ, ದೇಶದ ಕ್ಷಮೆ ಕೇಳಬೇಕು. ಅಷ್ಟೇ ಅಲ್ಲ, ನಾರಾಯಣ ಗುರುಗಳ ಸ್ತಬ್ಧಚಿತ್ರಕ್ಕೆ ಅವಕಾಶ ನೀಡಬೇಕು' ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ನಾರಾಯಣ ಗುರುಗಳ ಸ್ತಬ್ಧಚಿತ್ರಕ್ಕೆ ಅವಕಾಶ ನಿರಾಕರಿಸಿರುವುದು ತಳಸಮುದಾಯದ ಮಹಾಪುರುಷರ ಬಗ್ಗೆ ಬಿಜೆಪಿ ಮತ್ತು ಕೇಂದ್ರ ಸರ್ಕಾರಕ್ಕೆ ಇರುವ ಪೂರ್ವಗ್ರಹ


ಸಿದ್ದರಾಮಯ್ಯ


ಹರಿಪ್ರಸಾದ್

ಮತ್ತು ತಿರಸ್ಕಾರಕ್ಕೆ ಸಾಕ್ಷಿ. ಯಾವ ಕಾರಣಕ್ಕಾಗಿ ಅವಕಾಶ ನಿರಾಕರಿಸಲಾಗಿದೆ? ನಾರಾಯಣ ಗುರುಗಳು ಹಿಂದೂ ಧರ್ಮಕ್ಕೆ ಸೇರಿದವರಲ್ಲವೇ? ಅಂಥ ಅಭಿಪ್ರಾಯವನ್ನು ಬಿಜೆಪಿ ಹೊಂದಿದ್ದರೆ, ಮುಕ್ತವಾಗಿ ಹೇಳುವ ಧೈರ್ಯ ತೋರಲಿ' ಎಂದಿದ್ದಾರೆ.

'ನಾರಾಯಣ ಗುರುಗಳ ಸ್ತಬ್ಧ ಚಿತ್ರಕ್ಕೆ ಅವಕಾಶ ನಿರಾಕರಿಸಿರುವುದು 'ಹಿಂದೂ ಹೃದಯ ಸಾಮ್ರಾಟ' ಎಂದು ಕರೆಸಿಕೊಳ್ಳುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಗಮನಕ್ಕೆ ಇನ್ನೂ ಬಂದಿಲ್ಲವೇ? ಅಸ್ಪೃಶ್ಯತೆ ಮತ್ತು ಪುರೋಹಿತಶಾಹಿ ವ್ಯವಸ್ಥೆ ವಿರುದ್ಧ ಸಿಡಿದೆದ್ದು ಹಿಂದೂ ಧರ್ಮದ ಸುಧಾರಣೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದ ನಾರಾಯಣ ಗುರುಗಳಿಗೆ ಅವಮಾನಿಸಿರುವ ಬಿಜೆಪಿ ಮತ್ತು ಕೇಂದ್ರ ಸರ್ಕಾರಕ್ಕೆ ಹಿಂದೂ ಧರ್ಮದ ಬಗ್ಗೆ ಮಾತನಾಡುವ ಯಾವ ನೈತಿಕತೆ ಇದೆ? ತಮ್ಮ ಮೂಗಿನಡಿಯಲ್ಲಿಯೇ ನಾರಾಯಣ ಗುರುಗಳಿಗೆ ಮಾಡಿರುವ ಅವಮಾನದ ಬಗ್ಗೆ ಪ್ರಧಾನಿ ಇನ್ನೂ ಪ್ರತಿಕ್ರಿಯಿಸದೆ ಇರುವುದು ಆಶ್ಚರ್ಯಕರ. ಇದನ್ನು ಹೇಗೆ ಅರ್ಥೈಸಬೇಕು?' ಎಂದೂ ಕೇಳಿದ್ದಾರೆ.

ಶೋಷಿತ ಸಮಾಜಕ್ಕೆ ಅವಮಾನ: 'ಕೇರಳ ಕಳುಹಿಸಿದ್ದ ತನ್ನ ನೆಲದ ಹೆಮ್ಮೆಯನ್ನು ಪ್ರತಿಬಿಂಬಿಸುವ ಕ್ರಾಂತಿಕಾರಿ ಸಮಾಜ ಸುಧಾರಕ ನಾರಾಯಣ ಗುರುಗಳ ಸ್ತಬ್ಧ ಚಿತ್ರವನ್ನು ತಿರಸ್ಕರಿಸುವ ಮೂಲಕ ಶೋಷಿತ ಸಮಾಜಕ್ಕೆ ಕೇಂದ್ರ ಸರ್ಕಾರ ಅವಮಾನ ಮಾಡಿದೆ' ಎಂದು ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರ ತಕ್ಷಣ ತನ್ನ ತಪ್ಪಿಗೆ ಕ್ಷಮೆ ಕೋರಿ, ಸ್ತಬ್ಧಚಿತ್ರವನ್ನು ಮೆರವಣಿಗೆಯಲ್ಲಿ ಸೇರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

'ರವೀಂದ್ರನಾಥ ಠ್ಯಾಗೋರ್, ಮಹಾತ್ಮಾಗಾಂಧಿ ಮತ್ತು ಬಿ. ಆರ್. ಅಂಬೇಡ್ಕರ್ ಅವರಿಂದ ಗೌರವಿಸಲ್ಪಟ್ಟ ನಾರಾಯಣ ಗುರುಗಳನ್ನು ಸಂಘ ಪರಿವಾರ ನಿಯಂತ್ರಿತ ಕೇಂದ್ರ ಸರ್ಕಾರ ಅಪಮಾನಿಸಿದೆ' ಎಂದಿದ್ದಾರೆ.

ಮೂವರಿಗೆ ಕೋವಿಡ್

ದೇವನಹಳ್ಳಿ: ಭಾನುವಾರ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ 3 ಪ್ರಯಾಣಿಕರಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ.

ಯುಕೆಯಿಂದ ಬಂದಿದ್ದ ಇಬ್ಬರು ಹಾಗೂ ಸ್ವೀಡನ್‌ನಿಂದ ಬಂದಿದ್ದ ಒಬ್ಬರು ಪ್ರಯಾಣಿಕನಲ್ಲಿ ಸೋಂಕು ದೃಢಪಟ್ಟಿದೆ.

ಮೂರು ಮಕ್ಕಳ ಸಾವು

ಒಂದನೇ ಪುಟದಿಂದ

ಜ.11 ಮತ್ತು 1 2ರಂದು 21 ಶಿಶುಗಳಿಗೆ ವಿವಿಧ ಲಸಿಕೆಗಳನ್ನು ನೀಡಲಾಗಿತ್ತು. ಅವರಲ್ಲಿ ನಾಲ್ವರಿಗೆ 'ರುಬೆಲ್ಲಾ' ಲಸಿಕೆ ಕೊಡಲಾಗಿತ್ತು. ಐವರಲ್ಲಿ ವಾಂತಿ–ಭೇದಿ ಕಾಣಿಸಿಕೊಂಡಿತ್ತು. ಒಂದು ಮಗು ಗುಣಮುಖವಾಗಿದೆ. ಉಳಿದವರು ಅಸ್ವಸ್ಥರಾಗಿದ್ದರು.

'ಮಕ್ಕಳಿಗೆ ವಿವಿಧ ಚುಚ್ಚುಮದ್ದನ್ನು ಒಂದೇ ಕಡೆ ನೀಡಿದ್ದಾರೆ. 15ರಿಂದ 18 ವರ್ಷದವರಿಗೆ ಕೋವಿಡ್ ಲಸಿಕೆಯನ್ನೂ ಆಗಲೇ ಕೊಡಲಾಗುತ್ತಿತ್ತು. ಆಗ ಬಹಳ ಜನರು ಸೇರಿದ್ದರು. ಇದರಿಂದ ಸಿಬ್ಬಂದಿಗೆ ಗೊಂದಲ ಉಂಟಾಗಿರುವ ಸಾಧ್ಯತೆಯೂ ಇದೆ. ಜಾಗೃತಿ ವಹಿಸಬೇಕಿತ್ತು' ಎಂದು ಬೋಚಬಾಳದ ಮುಖಂಡ ಭೀಮಶಿ ವಾರಿಮನಿ ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಡಿಎಚ್‌ಒ ಡಾ.ಎಸ್.ವಿ. ಮುನ್ಯಾಳ, 'ಕೋವಿಡ್ ಹಾಗೂ ಇತರ ಲಸಿಕೆಗಳನ್ನು ಪ್ರತ್ಯೇಕ ಕೇಂದ್ರಗಳಲ್ಲಿ ಕೊಡಲಾಗಿದೆ. ರುಬೆಲ್ಲಾ ಲಸಿಕೆ ಪಡೆದಿದ್ದ ನಾಲ್ಕು ಮಕ್ಕಳು ಅಸ್ವಸ್ಥರಾಗಿದ್ದರು. ಹಿಂದೆ ಇಂತಹ ಅಡ್ಡಪರಿಣಾಮ ಬೀರಿದ್ದು ನಾವು ನೋಡಿಲ್ಲ. ಯಾವುದೇ ಲಸಿಕೆ ಪ್ರತಿಕೂಲ ಪರಿಣಾಮ ಬೀರಿದರೆ, ಆ ಬಗ್ಗೆ ಜಿಲ್ಲಾ ಮಟ್ಟದ ತಜ್ಞರ ಸಮಿತಿ ಪರಿಶೀಲಿಸಲಿದೆ. ನೀಡಲಾದ ಲಸಿಕೆ, ಮಕ್ಕಳ ಮಲ–ಮೂತ್ರ, ರಕ್ತದ ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಲಾಗಿದೆ' ಎಂದು ಹೇಳಿದರು.

ರಾಮದುರ್ಗ ಟಿಎಚ್‌ಒ ಡಾ.ಸತೀಶ ಪೋತದಾರ, 'ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಕ್ಕಳಿಗೆ ವಿವಿಧ ಲಸಿಕೆಗಳನ್ನು ನೀಡಲಾಗುತ್ತಿದೆ. ಸಾಲಹಳ್ಳಿ ಕೇಂದ್ರದಲ್ಲಿ ಪಡೆದ ಕೆಲವು ಮಕ್ಕಳು ಮಾತ್ರ ಅಸ್ವಸ್ಥಗೊಂಡಿದ್ದರು. ಚುಚ್ಚುಮದ್ದಿನ ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿದೆ. ಒಂದು ಮಗುವಿನ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ವಿಧಿ ವಿಜ್ಞಾನ ಪ್ರಯೋಗಾಲಯದಿಂದ ವರದಿ ಬಂದ ಬಳಿಕವಷ್ಟೇ ಸ್ಪಷ್ಟ ಕಾರಣ ಗೊತ್ತಾಗಲಿದೆ' ಎಂದರು.

'ಆಸ್ಪತ್ರೆಗೆ ಬಂದಾಗಲೇ ಇಬ್ಬರು ಮಕ್ಕಳು ತೀವ್ರ ಅಸ್ವಸ್ಥರಾಗಿದ್ದರು. ಒಂದು ಮಗು ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ವೈದ್ಯರು ಮಾಹಿತಿ ಕೊಟ್ಟಿದ್ದಾರೆ. ಇನ್ನೊಂದು ಮಗುವಿಗೆ ಐಸಿಯುನಲ್ಲಿ ಚಿಕಿತ್ಸೆ ಮುಂದುವರಿದಿದ್ದು, ಚೇತರಿಸಿಕೊಳ್ಳುತ್ತಿದೆ' ಎಂದು ಬಿಮ್ಸ್ ನಿರ್ದೇಶಕ ಡಾ.ಆರ್.ಜಿ. ವಿವೇಕಿ ಪ್ರತಿಕ್ರಿಯಿಸಿದರು.


ಶೋಕತಪ್ತರಾದ ಮಗು ಮಧು ಕರಗುಂದಿ ಪೋಷಕರು

> ಮಕ್ಕಳ ಸಾವಿನ ಬಗ್ಗೆ ವೈದ್ಯಕೀಯ ತಪಾಸಣೆ ನಡೆಸಬೇಕು. ಮರಣೋತ್ತರ ಪರೀಕ್ಷೆ ಬಳಿಕ ನಿಖರ ಕಾರಣ ತಿಳಿಯಲಿದೆ.
> **ಡಾ.ಸಿ.ಎನ್. ಅಶ್ವತ್ಥನಾರಾಯಣ,** ಉನ್ನತ ಶಿಕ್ಷಣ ಸಚಿವ

> ರುಬೆಲ್ಲಾ ಲಸಿಕೆ ಪಡೆದ ಬಳಿಕ ಮಕ್ಕಳು ಮೃತಪಟ್ಟಿರುವ ಬಗ್ಗೆ ಆರೋಪ ಕೇಳಿ ಬಂದಿದೆ. ಈ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿಯಿಂದ ವರದಿ ಪಡೆದು, ಕ್ರಮವಹಿಸಲಾಗುವುದು.
> **ಡಾ.ಕೆ. ಸುಧಾಕರ್,** ಆರೋಗ್ಯ ಸಚಿವ

> ಈ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ವರದಿ ಬಂದ ನಂತರ ಮುಂದಿನ ಕ್ರಮ ವಹಿಸಲಾಗುವುದು. ಲಸಿಕೆ ಕಾರ್ಯಕ್ರಮ ಮುಂದುವರಿಯಲಿದೆ
> **ಡಾ.ಎಸ್.ವಿ. ಮುನ್ಯಾಳ** ಡಿಎಚ್‌ಒ, ಬೆಳಗಾವಿ

> ಚಿಕಿತ್ಸೆಯಲ್ಲಿ ಲೋಪವಾಗಿಲ್ಲ. ಮಕ್ಕಳಿಗೆ ಕೊಟ್ಟಿದ್ದ ಚುಚ್ಚುಮದ್ದಿನ ಬಗ್ಗೆ ತನಿಖೆ ನಡೆಸಬೇಕಾಗುತ್ತದೆ
> **ಡಾ.ಆರ್.ಜಿ. ವಿವೇಕಿ,** ಬಿಮ್ಸ್ ನಿರ್ದೇಶಕ

'ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಸಾಧ್ಯವಿಲ್ಲ'

ಬೆಂಗಳೂರು: 'ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ನೀಡಲು ಸಾಧ್ಯ ಇಲ್ಲ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದರು.


ಅಶ್ವತ್ಥನಾರಾಯಣ

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಅತಿಥಿ ಉಪನ್ಯಾಸಕರ ಸಂಘಟನೆಗಳ ಜೊತೆ ಚರ್ಚಿಸಿದ ಬಳಿಕವೇ ಗೌರವಧನ ಘೋಷಿಸಲಾಗಿದೆ. ಈಗ ಕೆಲವು ಸಂಘಟನೆಗಳು ಈ ವಿಚಾರಕ್ಕೆ ಅನಗತ್ಯವಾಗಿ ರಾಜಕೀಯ ಬಣ್ಣ ಬಳಿಯುತ್ತಿರುವುದು ಸರಿಯಲ್ಲ' ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರ ಗೌರವಧನವನ್ನು ಹೆಚ್ಚಿಸಿ ರಾಜ್ಯ ಸರ್ಕಾರ ಶುಕ್ರವಾರ (ಜ. 14) ಆದೇಶ ಹೊರಡಿಸಿದೆ.


ಗೌರವಧನ ಹೆಚ್ಚಿಸಿದ ಬಳಿಕವೂ ಮುಷ್ಕರದಿಂದ ಹಿಂದೆಸರಿಯುವುದಿಲ್ಲವೆಂದು ಅತಿಥಿ ಉಪನ್ಯಾಸಕರು ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯದಲ್ಲಿ 14 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರಿದ್ದಾರೆ. ಈ ಪೈಕಿ, 4,500 ಮಂದಿ ಮಾತ್ರ ಯುಜಿಸಿ ನಿಗದಿಪಡಿಸಿದ ಶೈಕ್ಷಣಿಕ ಅರ್ಹತೆ ಹೊಂದಿದ್ದಾರೆ. ಸರ್ಕಾರ ಅವರ ವೇತನವನ್ನು ಗೌರವಾರ್ಹವಾಗಿ ಹೆಚ್ಚಿಸಬೇಕೆಂದು ಮುಷ್ಕರನಿರತ ಸಂಘಟನೆಗಳೇ ಹೇಳಿದ್ದವು. ಅದಕ್ಕೆ ಸ್ಪಂದಿಸಿ, ದುಪ್ಪಟ್ಟಿಗಿಂತಲೂ ಹೆಚ್ಚು ವೇತನ ಏರಿಸಲಾಗಿದೆ. ಇಷ್ಟಾದ ಮೇಲೆಯೂ ಅತಿಥಿ ಉಪನ್ಯಾಸಕರು ಹಠ ಹಿಡಿದಿರುವುದು ಬೇಸರದ ಸಂಗತಿ' ಎಂದರು.

ಒಳನೋಟ

'ಮಳೆಯಲ್ಲಿ ಕರಗುವ 'ಮಾಲಿನ್ಯ'

ಬೆಂಗಳೂರು: 'ಮಳೆಯಲ್ಲಿ ಕರಗುವ 'ಮಾಲಿನ್ಯ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಜ.16) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.


ಜಲಚರಗಳೂ ಬದುಕಲಿ



ಪರಿಸರದೊಂದಿಗೆ ಜನರ ಬದುಕು ಹೇಗೆ ಹದಗೆಡುತ್ತಿದೆ ಎಂಬುದಕ್ಕೆ ಫಲ್ಗುಣಿ ನದಿ ಒಂದು ನಿದರ್ಶನ. ಒಂದೆಡೆ ಅಂತರ್ಜಲ ಮಟ್ಟ ಕುಸಿದಿದ್ದರೆ, ಮತ್ತೊಂದೆಡೆ ಕುಡಿಯುವ ನೀರಿಗೆ ರಾಸಾಯನಿಕಗಳು ಸೇರಿಕೊಂಡು, ಜಲಚರಗಳ ಜೀವಹಿಂಡುತ್ತಿವೆ. ಶುದ್ಧ ನೀರು ನಮ್ಮಂತೆಯೇ ಜಲಚರಗಳ ಹಕ್ಕು ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು. ಒಂದು ನಾಗರಿಕತೆಯ ಹುಟ್ಟಿಗೆ ಕಾರಣವಾದ ನದಿ, ಅದೇ ನಾಗರಿಕತೆಯ ನಾಶಕ್ಕೂ ಕಾರಣವಾಗಿವೆ ಎಂಬ ಇತಿಹಾಸದ ಪಾಠವನ್ನು ಮರೆಯಬಾರದು.

ಎಸ್.ಪ್ರವೀಣ್, ಚಿಕ್ಕಮಗಳೂರು

ಮಲಿನಗೊಂಡ ಜಲ



ಕರಾವಳಿ ಭಾಗದ ಜಿಲ್ಲೆಗಳಲ್ಲಿ ಎಲ್ಲೆಂದರಲ್ಲಿ ಕಸ ಬಿಸಾಡುತ್ತಿರುವುದರಿಂದ ದಿನೇ ದಿನೇ ಹಾಳು ಕೊಂಪೆಯಾಗುತ್ತಿದೆ. ಕಲುಷಿತ ನೀರನ್ನು ನದಿಗಳಿಗೆ ಬಿಡುತ್ತಿರುವುದರಿಂದ ಜನರಿಗೆ ಶುದ್ಧ ಕುಡಿಯುವ ನೀರಿಗೆ ಪರದಾಟ ಶುರುವಾಗಿದೆ. ಕಲುಷಿತ ನೀರು ಕುಡಿವ ಜನ ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಹಸಿರಿನಿಂದ ಸಮೃದ್ಧವಾಗಿದ್ದ ಮಂಗಳೂರು ಈಗ 'ಸ್ಮಾರ್ಟ್ ಸಿಟಿ'ಯ ಅಭಿವೃದ್ಧಿ ನೆಪದಲ್ಲಿ ಹಾಳಾಗುತ್ತಿದೆ. ಈಗಿನ ವಾತಾವರಣ ಮುಂದಿನ ದಿನಗಳಲ್ಲಿ ಸುಡಲಿದೆ

ರಾಕೇಶ್ ಬೋಳಾರ್, ಮಂಗಳೂರು

ಜಲವೆಂದರೆ ತಾತ್ಸಾರವೇಕೆ?



ಮನೆಯಲ್ಲಿ ಸ್ವಲ್ಪ ಕಸವಿದ್ದರೂ ಅದನ್ನು ತೆಗೆದು, ಸ್ವಚ್ಛತೆ ಕಾಪಾಡಿಕೊಳ್ಳುತ್ತೇವೆ. ಆದರೆ, ನದಿಗಳ ಸ್ವಚ್ಛತೆ ವಿಚಾರದಲ್ಲಿ ನಿರ್ಲಕ್ಷ್ಯ ಯಾಕೆಂದು ಅರ್ಥವಾಗುತ್ತಿಲ್ಲ. ಜಲಮೂಲಗಳ ಬಳಿಗೆ ತೆರಳುವ ಜನರು ಕಸ ಬಿಸಾಡಿ ಅಲ್ಲಿನ ಪರಿಸರ ಹಾಳು ಮಾಡುತ್ತಾರೆ. ಸರ್ಕಾರ ಜಲಸಂರಕ್ಷಣೆ ಹೆಸರಲ್ಲಿ ಎಷ್ಟೇ ಯೋಜನೆಗಳನ್ನು ಹಾಕಿಕೊಂಡರೂ ಜಲಮೂಲಗಳ ಸ್ಥಿತಿ ಬದಲಾಗಿಲ್ಲ. 'ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆ' ಎನ್ನುವುದು ಕೇವಲ ಘೋಷವಾಕ್ಯವಾಗದೆ, ಅದಕ್ಕೆ ಅರ್ಥ ಬರುವಂತೆ ಜನ ರಕ್ಷಣೆಯ ಹೊಣೆ ಹೊರಲಿ.

ಮಂಜುಳಾ, ಬೆಂಗಳೂರು


ಭವಿಷ್ಯಕ್ಕಾಗಿ ಪರಿಸರ ಉಳಿಸಿ



ಮೊದಲು ನಾವು ಬದಲಾಗೋಣ, ನಂತರ ಬದಲಾಯಿಸೋಣ. ಹಾಳಾಗುತ್ತಿರುವ ನಮ್ಮ ಪರಿಸರವನ್ನು ನಾವೇ ಕಾಪಾಡಿಕೊಳ್ಳಬೇಕು. ಫಲ್ಗುಣಿ ನದಿಯ ಸ್ಥಿತಿ ನಮಗೆಲ್ಲ ಎಚ್ಚರಿಕೆಯ ಗಂಟೆ. ಜನರೇ ಬಳಸುತ್ತಿರುವ ರಾಸಾಯನಿಕಗಳು ಮುಂದೆ ಅವರಿಗೆ ವಿಷವಾಗಿ ಪರಿಣಮಿಸುತ್ತಿರುವುದು ತಿಳಿಯುತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯೂ ಕಣ್ಣು ಮುಚ್ಚಿ ಕುಳಿತಿವೆ. ಜಲಮೂಲಗಳು ಉಳಿದರೆ ಮಾತ್ರ ಜನರಿಗೆ ಭವಿಷ್ಯ ಎನ್ನುವುದನ್ನು ಮರೆಯಬಾರದು.

ರಮ್ಯಾ, ತುಮಕೂರು

ನಿಯಂತ್ರಕರೇ ಶಾಮೀಲು



ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೆ, ಗ್ರಾಮೀಣ ಭಾಗದ ಜಲಮೂಲಗಳೂ ವಿಪರೀತವಾಗಿ ಮಲಿನಗೊಂಡಿವೆ. ತ್ಯಾಜ್ಯವನ್ನು ಜಲಮೂಲಗಳಿಗೆ ಬಿಸಾಡುವ ಜನರಿಗೆ ಬುದ್ಧಿ ಹೇಳಬೇಕಿದ್ದ ಅಧಿಕಾರಿಗಳು, ಜನಪ್ರತಿನಿಧಿಗಳೇ ಈ ಕೃತ್ಯಗಳಲ್ಲಿ ಭಾಗಿಯಾಗಿರುವುದು ವಿಪರ್ಯಾಸ. ಇವರ ನಿರ್ಲಕ್ಷ್ಯದಿಂದ ಜಲಮೂಲಗಳು ಕೆಡುತ್ತಿದ್ದು, ಇವರನ್ನು ಸರಿ ದಾರಿಗೆ ತಂದರೆ, ಸಮಸ್ಯೆಗಳೂ ತುಸು ತಗ್ಗಲಿವೆ.

ರವಿ ಎನ್.ಮುಕ್ರಿ, ಹೊನ್ನಾವರ



ಪರೀಕ್ಷೆಯ ಯಶಸ್ಸಿಗೆ ಪುನರಾವರ್ತನೆಯ ತಂತ್ರ

ಆರ್.ಬಿ.ಗುರುಬಸವರಾಜ

ಜನವರಿಯಲ್ಲಿ ಹೊಸ ವರ್ಷ ಮತ್ತು ಸಂಕ್ರಾತಿ ಹಬ್ಬದ ಸಂಭ್ರಮದ ಬೆನ್ನಲ್ಲೇ ಪರೀಕೆಯ ಕಾವು ವಿದ್ಯಾರ್ಥಿಗಳನ್ನು ಆವರಿಸಿಕೊಳ್ಳಲು ಆರಂಭಿಸುತ್ತದೆ. ಪರೀಕ್ಷಾ ವೇಳಾಪಟ್ಟಿಗಳು ಪ್ರಕಟವಾಗುತ್ತಿದ್ದಂತೆ ವಿದ್ಯಾರ್ಥಿಗಳೂ ಪರೀಕ್ಷೆ ಸಿದ್ದತೆಯಲ್ಲಿ ತೊಡಗಿಕೊಳ್ಳುತ್ತಾರೆ. ಉಳಿದಿರುವ ಸಮಯದಲ್ಲಿ ಯಾವುದನ್ನು ಓದಬೇಕು? ಎಷ್ಟು ಓದಬೇಕು? ಹೇಗೆ ಓದಬೇಕು? ಯಾವಾಗ ಓದಬೇಕು? ಎಂಬಿತ್ಯಾದಿ ಪ್ರಶ್ನೆಗಳು ಉದ್ಭವಿಸುತ್ತವೆ. ಈ ಪ್ರಶ್ನೆಗಳಿಗೆ ಉತ್ತಮ ಪರಿಹಾರವೇ ಓದಿರುವ ವಿಷಯಗಳನ್ನು ಮೆಲಕು ಹಾಕುವ 'ಪುನರಾವರ್ತನೆ'(ರಿವಿಷನ್) ಪ್ರಕ್ರಿಯೆ.

ಪುನರಾವರ್ತನೆ ಎಂದರೆ?


ಪುನರಾವರ್ತನೆ ಎಂಬುದು ವಿಷಯದ ಕುರಿತ ಜ್ಞಾನವನ್ನು ವಿಸ್ತರಿಸಲು ಅಥವಾ ಸುಧಾರಿಸಲು ಈ ಹಿಂದೆ ಓದಿದ ಪಾಠಗಳನ್ನು ಮರು ಓದುವ ಹಾಗೂ ಅದರಲ್ಲಿನ ಪ್ರಮುಖಾಂಶಗಳನ್ನು ಪುನರ್ ಮನನ ಮಾಡಿಕೊಳ್ಳುವ ಪ್ರಕ್ರಿಯೆ.

ಶಾಲಾ-ಕಾಲೇಜುಗಳಲ್ಲಿ ಡಿಸೆಂಬರ್ ಅಂತ್ಯ ಅಥವಾ ಜನವರಿ ಪ್ರಾರಂಭದ ವೇಳೆಗೆ ದ್ವಿತೀಯ ಪಿ.ಯು.ಸಿ ಹಾಗೂ ಹತ್ತನೇ ತರಗತಿ ಪಾಠಗಳು ಮುಗಿದಿರುತ್ತವೆ. ಇಲ್ಲಿಂದ ಪರೀಕ್ಷೆ ಆರಂಭದವರೆಗಿನ ಅವಧಿಯು ವಿದ್ಯಾರ್ಥಿಗಳಿಗೆ ತುಂಬಾ ಮಹತ್ವದ್ದು. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಓದಿರುವ ವಿಷಯಗಳನ್ನು ಪುನರಾವರ್ತನೆ ಮಾಡುವುದು ಸೂಕ್ತ. ಅದಕ್ಕೆ ಶಿಕ್ಷಕರು ಮಾರ್ಗದರ್ಶನವೂ ಅಗತ್ಯ.

> ಪರೀಕ್ಷಾ ಸಮಯದಲ್ಲಿ ಈ ಹಿಂದೆ ಓದಿರುವ ವಿಷಯಗಳನ್ನು ಪುನರಾವರ್ತನೆ ಮಾಡಿಕೊಳ್ಳುವುದು ಮುಖ್ಯವಾದ ಕೆಲಸ. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕರ ಮಾರ್ಗದರ್ಶನವೂ ಅಗತ್ಯ.

ಪ್ರಯೋಜನಗಳೇನು ?

- ವಿದ್ಯಾರ್ಥಿಗಳು ತಮ್ಮ ಕಲಿಕೆ ಮತ್ತು ಬರವಣಿಗೆ ವೇಗವನ್ನು ಉತ್ತಮಪಡಿಸಿಕೊಳ್ಳಲು, ಪರೀಕ್ಷಾ ಆತಂಕ ಮತ್ತು ಒತ್ತಡವನ್ನು ಕಡಿಮೆ ಮಾಡುವ ಮೂಲಕ ಉತ್ತಮ ಶ್ರೇಣಿ ಪಡೆಯಲು ನೆರವಾಗುತ್ತದೆ.
- ವಿದ್ಯಾರ್ಥಿಗಳನ್ನು ಕೇವಲ ಪರೀಕ್ಷೆಗೆ ಮಾತ್ರ ಅಣಿಗೊಳಿಸದೇ ವಿಷಯ ಜ್ಞಾನವನ್ನು ವಿಸ್ತರಿಸುತ್ತದೆ.
- ಪರಿಕಲ್ಪನೆಗಳನ್ನು ಸ್ಪಷ್ಟಗೊಳಿಸುತ್ತದೆ.
- ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಭಯ, ಆತಂಕ ಮತ್ತು ಒತ್ತಡಗಳನ್ನು ನಿವಾರಿಸುತ್ತದೆ.
- ಪರೀಕ್ಷಾ ಸಿದ್ದತೆಗೆ ವಿವಿಧ ತಂತ್ರಗಳನ್ನು ಪರಿಚಯಿಸುತ್ತದೆ.
- ಸಮಯದ ಸದುಪಯೋಗವನ್ನು ಕಲಿಸುತ್ತದೆ.
- ಕಲಿತ ಅಂಶಗಳನ್ನು ಮನದಲ್ಲಿ ಉಳಿಸುತ್ತದೆ ಮತ್ತು ಕಲಿಕೆಯ ವೇಳೆ ಬಿಟ್ಟು ಹೋದ ಅಂಶಗಳ ಮನನ ಮಾಡಿಕೊಳ್ಳಲು ಸಹಾಯಕವಾಗುತ್ತದೆ.
- ಕಲಿಕಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುತ್ತದೆ.
- ನಿಗದಿತ ಬೋಧನೆ/ಕಲಿಕಾ ವೇಳೆಯಲ್ಲಿ ಕಲಿಯಲಾಗದ ಅಂಶಗಳನ್ನು ಕಲಿಯುವ ಅವಕಾಶ ದೊರೆಯುತ್ತದೆ.



ತಂತ್ರಗಾರಿಕೆ

ಪುನರಾವರ್ತನೆ ಹೀಗೆ ಮಾಡಬೇಕು ಎಂದು ಹೇಳಲಾಗದು. ಆದರೆ, ಈ ಪ್ರಕ್ರಿಯೆ ವಿದ್ಯಾರ್ಥಿಗಳ ಕಲಿಕಾಮಟ್ಟವನ್ನು ಉನ್ನತೀಕರಿಸುವ ಉದ್ದೇಶ ಹೊಂದಿರಬೇಕು. ಹಾಗಾಗಿ ಬೋಧಕ ಮತ್ತು ಕಲಿಕಾರ್ಥಿ ಇಬ್ಬರೂ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡರೆ ಉತ್ತಮ. ಅದಕ್ಕಾಗಿ ವಿವಿಧ ತಂತ್ರಗಳನ್ನು ಅನುಸರಿಸಬಹುದು. ಅವು ಹೀಗಿವೆ;

- **ಪ್ರಮುಖಾಂಶ ಪದ್ಧತಿ:** ಪುನರಾವರ್ತನೆಯಲ್ಲಿ ಇದೊಂದು ಜನಪ್ರಿಯ ತಂತ್ರ. ಪರಿಕಲ್ಪನೆ ಅಥವಾ ಘಟಕದಲ್ಲಿನ ಪ್ರಮುಖಾಂಶಗಳನ್ನು ಮನನ ಮಾಡಿಕೊಳ್ಳುವುದು. ಪ್ರಮುಖಾಂಶಗಳ ಕೆಳಗೆ ಅಡ್ಡಗೆರೆ ಹಾಕುವುದು ಅಥವಾ ಹೈಲೈಟ್ ಮಾಡುವುದು, ಅವುಗಳನ್ನು ಟಿಪ್ಪಣಿ ಮಾಡಿಕೊಳ್ಳುವುದು, ಟಿಪ್ಪಣಿ ಮಾಡಿಕೊಂಡ ಅಂಶಗಳನ್ನು ಮತ್ತೊಬ್ಬರಿಗೆ ಹೇಳುವುದು. ಇದರ ಜೊತೆಗೆ, ಶಿಕ್ಷಕರ ನೆರವಿನಿಂದ ಮುಖ್ಯಾಂಶಗಳನ್ನು ಮೈಂಡ್ ಮ್ಯಾಪ್ ಮತ್ತು ಫ್ಲೋಚಾರ್ಟ್ ಮಾಡಿಕೊಳ್ಳಬಹುದು.
- **ಪ್ರಶ್ನಾ ಪದ್ಧತಿ:** ನಿಗದಿತ ಪಠ್ಯ ಅಥವಾ ಪರಿಕಲ್ಪನೆಗೆ ಪೂರಕವಾಗಿ ಪ್ರಶ್ನೆಗಳನ್ನು ರೂಪಿಸಿಕೊಳ್ಳಬೇಕು. ಇದನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಮಾಡಿದರೆ ಕಲಿಕೆ ಹೆಚ್ಚು ಸ್ಥಿರಗೊಳ್ಳುತ್ತದೆ. ಜೊತೆಗೆ ಪ್ರಶ್ನೆಗಳಿಗೆ ಉತ್ತರ ಪಡೆಯುವ ಚಟುವಟಿಕೆಯನ್ನೂ ಮಾಡಿಸಿದರೆ ಕಲಿಕೆ ಇನ್ನಷ್ಟು ಗಟ್ಟಿಗೊಳ್ಳುತ್ತದೆ.
- **ಸೆಮಿನಾರ್ ಪದ್ಧತಿ:** ಇದು ಕಲಿಕೆಗೆ ಪೂರಕವಾಗಿ ಹೆಚ್ಚು ಬಳಕೆಯಲ್ಲಿರುವ ಚಟುವಟಿಕೆಯಾಗಿದ್ದು, ಪುನರಾವರ್ತನೆಗೆ ಬಳಸಿಕೊಳ್ಳಬಹುದು. ಈಗಾಗಲೇ ಶಿಕ್ಷಕರು ಬೋಧಿಸಿದ ಪಠ್ಯ/ಪರಿಕಲ್ಪನೆಯಲ್ಲಿನ ಪ್ರಮುಖಾಂಶಗಳನ್ನು ವಿದ್ಯಾರ್ಥಿಗಳು ಮತ್ತೊಮ್ಮೆ ಪಾಠ ಮಾಡುವುದು. ಇಲ್ಲಿ ಪಠ್ಯದ ಆಚೆಗಿನ ಮಾಹಿತಿಯನ್ನು ಬಳಸಲು ವಿದ್ಯಾರ್ಥಿಗಳಿಗೆ ಶಿಕ್ಷಕರು ಮಾರ್ಗದರ್ಶನ ಮಾಡಿದರೆ ಉತ್ತಮ.
- **ಪ್ರಮುಖಾಂಶ ಪ್ರದರ್ಶನ:** ಪಠ್ಯ/ಪರಿಕಲ್ಪನೆಯಲ್ಲಿ ಪ್ರಮುಖಾಂಶಗಳನ್ನು ಡ್ರಾಯಿಂಗ್ ಹಾಳೆಯಲ್ಲಿ ದೊಡ್ಡದಾಗಿ ಬರೆದು ತರಗತಿಯಲ್ಲಿ ಪ್ರದರ್ಶನ ಮಾಡುವುದು. ಇದನ್ನು ವಿದ್ಯಾರ್ಥಿಗಳು ಗುಂಪುವಾರು ತಯಾರಿಸಿ ಪ್ರದರ್ಶಿಸಿದರೆ ಉತ್ತಮ. ಪದ್ಯದ ಸಾಲುಗಳು, ಸಾರಾಂಶ, ವಿಜ್ಞಾನದ ಚಿತ್ರಗಳು, ಸೂತ್ರಗಳು, ಪ್ರಮುಖ ಇಸ್ವಿಗಳು, ಸರಣಿ ಘಟನಾವಳಿಗಳು ಮುಂತಾದವುಗಳನ್ನು ಈ ತಂತ್ರಗಾರಿಕೆಯಲ್ಲಿ ಬಳಸಬಹುದು.
- **ಪ್ರಶ್ನೋತ್ತರ ಪದ್ಧತಿ:** ನಿಗದಿತ ಘಟಕಕ್ಕೆ ಪೂರಕವಾದ ಪ್ರಶ್ನೆಗಳನ್ನು ತರಗತಿಯಲ್ಲಿ ಕೇಳುವ ಮತ್ತು ಸೂಕ್ತ ಉತ್ತರ ಪಡೆಯುವ ವಿಧಾನ ಇದು. ಇದಕ್ಕೆ ಈ ಹಿಂದೆ ಪರೀಕ್ಷೆಗಳಲ್ಲಿ ಕೇಳಲಾದ ಹಾಗೂ ಸಂಭಾವ್ಯ ಪ್ರಶ್ನೆಗಳನ್ನು ವಿದ್ಯಾರ್ಥಿಗಳೆ ಕೇಳಿ, ಉತ್ತರಿಸುವಂತಾದರೆ ಕಲಿಕೆ ಹೆಚ್ಚು ದೃಢಗೊಳ್ಳುತ್ತದೆ. ಇಲ್ಲೂ ಶಿಕ್ಷಕರ ಮಾರ್ಗದರ್ಶನ ಅವಶ್ಯಕ.
- **ಅನ್ಯ ಸಂಪನ್ಮೂಲ ಬಳಕೆ:** ಪಠ್ಯದ ಹೊರತಾಗಿ ವಿವಿಧ ವಿಡಿಯೊ, ಆಡಿಯೊ, ಚಿತ್ರಗಳನ್ನು ಬಳಸಬಹುದು. ಯೂಟ್ಯೂಬ್‌ನಲ್ಲಿ ಈ ಪಠ್ಯಗಳಿಗೆ ಸಂಬಂಧಿಸಿದ ಲಭ್ಯವಿರುವ ವಿಡಿಯೊಗಳ ನೆರವು ಪಡೆಯಬಹುದು. ಸಂಪನ್ಮೂಲ ಶಿಕ್ಷಕರು ತಯಾರಿಸಿದ ವಿಡಿಯೊ ಪಾಠಗಳನ್ನು ಪ್ರಸ್ತುತಪಡಿಸಲು ಅವಕಾಶವಿದೆ.
- **ವರ್ಕ್‌ಶೀಟ್ ಬಳಕೆ:** ಕಲಿಕಾಂಶ/ಪರಿಕಲ್ಪನೆಗೆ ಪೂರಕವಾದ ವರ್ಕ್‌ಶೀಟ್‌ನ್ನು(ಅಭ್ಯಾಸ ಪತ್ರಿಕೆ) ಮಕ್ಕಳಿಗೆ ನೀಡಿ, ಅಭ್ಯಾಸ ಮಾಡಿಸಬಹುದು. ಈ ಚಟುವಟಿಕೆಯು ಕಲಿಕೆಯ ದೃಢೀಕರಣ ಮಾಡುತ್ತದೆ.

ಕೋರ್ಸ್ ಕಾರ್ನರ್

ಮೈಕ್ರೊ ಸೆನ್ಸರ್ ತಂತ್ರಜ್ಞಾನ ಕಲಿಕೆಗೆ ಆನ್‌ಲೈನ್ ಕೋರ್ಸ್

ಗುರುರಾಜ್ ಎಸ್ ದಾವಣಗೆರೆ

ನಾವು ದಿನ ನಿತ್ಯ ಬಳಸುವ ಬಹುತೇಕ ಎಲೆಕ್ಟ್ರಾನಿಕ್ಸ್ ಉಪಕರಣಗಳಲ್ಲಿ ಮೈಕ್ರೊ ಸೆನ್ಸರ್ (ಸಣ್ಣ ಸಂವೇದಕ)ಗಳಿರುತ್ತವೆ. ಆಯಾ ನೈಸರ್ಗಿಕ ಪ್ರದೇಶಗಳಲ್ಲಿರುವ ಬಿಸಿ, ತಂಪು, ಅನಿಲ ಸಾಂದ್ರತೆ, ವಿದ್ಯುದಂಶಗಳನ್ನು ಅಳೆಯಬಲ್ಲ ಸಂವೇದಕಗಳೂ ಇವೆ. ಕಿವಿ ಕೇಳಿಸದವರು ಬಳಸುವ ಹಿಯರಿಂಗ್ ಏಯ್ಡ್ ಮತ್ತು ಅಂಧರು ಬಳಸುವ ಕೇನ್‌ಸ್ಟಿಕ್‌ನಲ್ಲೂ ಇಂಥ ಸಂವೇದಕಗಳಿರುತ್ತವೆ.

ನಮ್ಮ ಸ್ಮಾರ್ಟ್ ಫೋನ್‌ಗಳ ಕ್ಯಾಮೆರಾಗಳು ಕ್ಲಿಕ್ ಆಗುವುದಕ್ಕೂ ಮುಂಚೆ ಚಿತ್ರ ಚೆನ್ನಾಗಿ ಮೂಡಿಬರಲು ಸೂಕ್ತ 'ವಾತಾವರಣ' ಇದೆಯೇ ಎಂದು ಪರೀಕ್ಷಿಸಿ ನಿರ್ಧರಿಸುವ ಸೆನ್ಸರ್‌ಗಳಿರುತ್ತವೆ. ಇತ್ತೀಚೆಗೆ ರಸ್ತೆಗಿಳಿಯುತ್ತಿರುವ ಐಷಾರಾಮಿ ಕಾರುಗಳಲ್ಲಿ ರೇನ್ ಸೆನ್ಸಿಂಗ್ ವೈಪರ್‌ಗಳು, ಕತ್ತಲು ಕವಿಯುತ್ತಿದ್ದಂತೆ ಬೆಳಗುವ ಹೆಡ್‌ಲೈಟುಗಳು, ಒಳಗಿನ ಏರ್ ಕಂಡೀಶನರ್‌ನ ಉಷ್ಣಾಂಶವನ್ನು ಹೆಚ್ಚು ಕಡಿಮೆ ಮಾಡುವ ಆಧುನಿಕ ಮೈಕ್ರೊ ಸೆನ್ಸರ್‌ಗಳಿರುತ್ತವೆ. ಈ ಸಾಧನಗಳಿಗೆ ಮೈಕ್ರೊಸೆನ್ಸರ್‌ಗಳನ್ನು ಅಳವಡಿಸಿ ವಿನ್ಯಾಸಗೊಳಿಸುವ ದೊಡ್ಡ ದೊಡ್ಡ ಉದ್ಯಮಗಳು ಎಲ್ಲೆಲ್ಲೂ ಇವೆ. ವಿಶ್ವದಾದ್ಯಂತವಿರುವ ಇಂಥ ಕಂಪನಿಗಳಿಗೆ ಪರಿಣತ ಕೆಲಸಗಾರರ – ತರಬೇತಿ ಹೊಂದಿದ ಜನರ ಅವಶ್ಯಕತೆ ಇದೆ.

ಸೆನ್ಸರ್ ತಂತ್ರಜ್ಞಾನ, ಉತ್ಪಾದನೆ, ಅಳವಡಿಕೆ, ಬಳಕೆ, ರಿಪೇರಿ, ರೀಸೈಕ್ಲಿಂಗ್ ಕಲಿಸುವ ಅನೇಕ ಆನ್‌ಲೈನ್ ಕೋರ್ಸ್‌ಗಳು ಶುರುವಾಗಿವೆ. ಖಾಸಗಿಯಾಗಿ ಕಲಿಯಲು ತುಂಬಾ ಖರ್ಚಾಗುತ್ತದೆ. ಕೇಂದ್ರ ಸರ್ಕಾರದ 'ಸ್ವಯಂ'(SWAYAM– Study Webs of Active – Learning for Young Aspiring Minds) ಯೋಜನೆಯಡಿಯಲ್ಲಿ ಅತ್ಯಂತ ಕಡಿಮೆ ಖರ್ಚು ಮತ್ತು ಅವಧಿಯಲ್ಲಿ ಸೆನ್ಸರ್ ಅಳವಡಿಕೆ ತಂತ್ರಜ್ಞಾನ ಕಲಿತು ಕೆಲಸ ಸಂಪಾದಿಸಿಕೊಳ್ಳಬಹುದು.

ಈ ಕೋರ್ಸ್ ಕಲಿಯಲು ಇಂಥದೇ ವಿದ್ಯಾರ್ಹತೆ ಬೇಕೆಂಬ ನಿಯಮವಿಲ್ಲ. ಆದರೆ ಮೂಲಭೂತ ಭೌತ ವಿಜ್ಞಾನ, ಎಲೆಕ್ಟ್ರಾನಿಕ್ ಮತ್ತು ಯಂತ್ರವಿಜ್ಞಾನದ (ಮೆಕ್ಯಾನಿಕ್ಸ್) ತಿಳುವಳಿಕೆ ಇರಬೇಕು. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಒಂದು ಕ್ರೆಡಿಟ್ ಪಾಯಿಂಟ್ ಸಿಗುತ್ತದೆ.

- **ಕೋರ್ಸ್ ಅವಧಿ:** ನಾಲ್ಕು ವಾರಗಳು
- **ದಾಖಲಾತಿಗೆ ಕೊನೆಯ ದಿನಾಂಕ:** 31 ಜನವರಿ 2022
- **ತರಗತಿ ಪ್ರಾರಂಭದ ದಿನಾಂಕ :** 24 ಜನವರಿ 2022
- **ಕೋರ್ಸ್ ಮುಕ್ತಾಯದ ದಿನಾಂಕ:** 18 ಫೆಬ್ರವರಿ 2022
- **ಪರೀಕ್ಷೆ ದಿನಾಂಕ:** 27 ಮಾರ್ಚ್ 2022
- **ಪರೀಕ್ಷಾ ಶುಲ್ಕ:** ₹1,000

ನಾಲ್ಕು ಮಾಡ್ಯೂಲ್‌ಗಳಲ್ಲಿ ಕಲಿಸಲಾಗುವ ಈ ಕೋರ್ಸ್‌ನಲ್ಲಿ 'ಮೆಮ್ಸ್' (MEMS– ಮೈಕ್ರೊ ಎಲೆಕ್ಟ್ರೋಕೆಮಿಕಲ್ ಸಿಸ್ಟಮ್ಸ್) ಮತ್ತು 'ನೆಮ್ಸ್'(NEMS – ನ್ಯಾನೊ ಎಲೆಕ್ಟ್ರೋಕೆಮಿಕಲ್ ಸಿಸ್ಟಮ್ಸ್) ಗಳ ತತ್ವ – ಕಾರ್ಯವೈಖರಿಗಳ ಕುರಿತು ಪ್ರಾಥಮಿಕ ತಿಳುವಳಿಕೆ ದೊರಕು ತ್ತದೆ. ಇವುಗಳ ತಯಾರಿಕೆಯ ಬಗ್ಗೆಯೂ ಪ್ರಾತ್ಯಕ್ಷಿಕೆ ಮೂಲಕ ಹೇಳಿಕೊಡಲಾಗು ತ್ತದೆ. ವಿದ್ಯಾರ್ಥಿಗಳು 4 ಅಸೈನ್‌ಮೆಂಟ್‌ಗಳನ್ನು ಸಲ್ಲಿಸಬೇಕು.

ಪ್ರಮಾಣ ಪತ್ರವನ್ನು ಐಐಟಿ ಮದ್ರಾಸ್ ಮತ್ತು ಎನ್‌ಪಿಟಿಇಎಲ್(NPTEL- National Program on Technology Enhanced Learning) ಗಳು ಜಂಟಿಯಾಗಿ ನೀಡುತ್ತವೆ. ತರಗತಿಗಳನ್ನು ಭೋಪಾಲ್‌ನ ಐಐಎಸ್‌ಇಆರ್ (IISER) ಅಧ್ಯಾಪಕರು ನಡೆಸುತ್ತಾರೆ. ಕೋರ್ಸ್ ಕುರಿತ ಹೆಚ್ಚಿನ ಮಾಹಿತಿಗೆ https://onlinecourses.nptel.ac.in ನೋಡಿ.

ಶಿಕ್ಷಣ ಶುಲ್ಕ ಮರುಪಾವತಿಗೆ ಇಲ್ಲ ಆದಾಯ ಮಿತಿ


ವಿದ್ಯಾರ್ಥಿ ವೇತನ ಕೈಪಿಡಿ

ಬಸವರಾಜ ದಳವಾಯಿ

ಹಲವು ಸರ್ಕಾರಿ ಸೇವೆಗಳನ್ನು ಪಡೆಯಲು ಇಂತಿಷ್ಟು ಆದಾಯ ಮಿತಿ ಹೊಂದಿರಬೇಕಾದುದು ನಿಯಮ. ಆದರೆ ಕ್ರೀಡಾಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳ ಶೈಕ್ಷಣಿಕ ಶುಲ್ಕ(ಶಾಲಾ-ಕಾಲೇಜುಗಳಿಗೆ ಪಾವತಿಸಿದ್ದ ಶುಲ್ಕ) ಮರುಪಾವತಿಗೆ ಇದರ ಅವಶ್ಯಕತೆ ಈಗಿಲ್ಲ. ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಯಲ್ಲೂ ಸಾಮರ್ಥ್ಯ ತೋರುವ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಸರ್ಕಾರ ಇಂತಹದ್ದೊಂದು ಅವಕಾಶವನ್ನು ಮಾಡಿಕೊಟ್ಟಿದೆ. ಆದಾಯ ಮಿತಿಯ ಕಾರಣದಿಂದ ಯೋಜನೆಯ ಫಲಾನುಭವಿ ಆಗುವ ಅವಕಾಶದಿಂದ ವಂಚಿತರಾಗುತ್ತಿದ್ದ ಹಲವು ಪ್ರತಿಭೆಗಳಿಗೆ ಇದರಿಂದ ಅನುಕೂಲವಾಗಬಹುದು.

ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುವಿನ ಒಟ್ಟು ಆದಾಯ ಮಿತಿ ವಾರ್ಷಿಕ ₹ 2.50 ಲಕ್ಷ ಇದ್ದರೆ ಮಾತ್ರ ಶೈಕ್ಷಣಿಕ ಶುಲ್ಕವನ್ನು ಮರುಪಾವತಿ ಮಾಡಲಾಗುತ್ತಿತ್ತು. ಅದೂ ಕೂಡ ಗರಿಷ್ಠ ₹ 50 ಸಾವಿರದವರೆಗೆ ಮಾತ್ರ. ಆದರೆ ಈ ಶೈಕ್ಷಣಿಕ ವರ್ಷದಿಂದ ಈ ನಿಯಮದಲ್ಲಿ ಸಂಪೂರ್ಣ ಬದಲಾವಣೆ ಮಾಡಲಾಗಿದೆ. ವಾರ್ಷಿಕವಾಗಿ ಎಷ್ಟೇ ಆದಾಯ ಇದ್ದರೂ ಸಂಪೂರ್ಣ ಶೈಕ್ಷಣಿಕ ಶುಲ್ಕವನ್ನು ಸರ್ಕಾರ ಮರುಪಾವತಿಸಲಿದೆ.

ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ವಿಜೇತರಾದ ಕ್ರೀಡಾಪಟುಗಳು ಶುಲ್ಕ ಮರುಪಾವತಿಯ ಪ್ರಯೋಜನ ಪಡೆಯಬಹುದು. ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವಿಕೆ ಮತ್ತು ಪದಕಗಳನ್ನು ಜಯಿಸುವ ವಿದ್ಯಾರ್ಥಿಗಳ ಸಾಧನೆಯನ್ನು ಪರಿಗಣಿಸಲಾಗುತ್ತದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ನಡೆಸಿದ ಗ್ರಾಮೀಣ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿ ರಾಜ್ಯ ತಂಡವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದವರೂ ಅರ್ಜಿ ಹಾಕಬಹುದಾಗಿದೆ.



ಅಂಗವಿಕಲ ಕ್ರೀಡಾಪಟುಗಳಿಗೂ ಇದೇ ಮಾನದಂಡಗಳು ಅನ್ವಯವಾಗುತ್ತವೆ. ಆದರೆ ಇವರು ಸರ್ಕಾರಿ ವೈದ್ಯರಿಂದ ನಿಗದಿತ ವೈದ್ಯಕೀಯ ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯವಾಗಿದೆ.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸಲಾಗುವ ಆಹ್ವಾನಿತ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಮತ್ತು ಇಂತಹ ಕೂಟಗಳಲ್ಲಿ ನೇರ ಪ್ರವೇಶ ಪಡೆದ ಕ್ರೀಡಾಪಟುಗಳು ಶುಲ್ಕ ಮರುಪಾವತಿಗೆ ಅರ್ಹರಾಗಿರುವುದಿಲ್ಲ.


ಶುಲ್ಕ ಮರುಪಾವತಿ; 321 ಫಲಾನುಭವಿಗಳು: ಶುಲ್ಕ ಮರುಪಾವತಿಯಂತಹ ಯೋಜನೆಗಳಿಂದ ಹಲವು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹಳಷ್ಟು ಅನುಕೂಲವಾಗಿದೆ. 2020-21ರ ಶೈಕ್ಷಣಿಕ ವರ್ಷದಲ್ಲಿ ಕ್ರೀಡೆಯ ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿದ 321 ಮಂದಿ ಈ ಯೋಜನೆಯ ಲಾಭ ಪಡೆದಿದ್ದಾರೆ ಎಂದು ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ರೋಹಿತ್ ಗಂಗಾಧರ್ ಟಿ.ಆರ್. ಮಾಹಿತಿ ನೀಡಿದರು.

ಬಹಳಷ್ಟು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುತ್ತಾರೆ. ಅರ್ಹತೆ ಇರುವ ಎಲ್ಲರಿಗೂ ಸರ್ಕಾರ ಶುಲ್ಕವನ್ನು ಮರುಪಾವತಿ ಮಾಡುತ್ತಿದೆ. ಕ್ರೀಡೆಯಲ್ಲಿ ಸಾಧನೆ ಮಾಡುವವರಿಗೆ ಪ್ರೋತ್ಸಾಹ ನೀಡಿದರೆ ನಮ್ಮಲ್ಲೂ ಸಾರ್ಥಕ ಭಾವ ಮೂಡುತ್ತದೆ ಎಂದು ರೋಹಿತ್ ಹೇಳುತ್ತಾರೆ.

(ಮುಂದಿನವಾರ: ಕ್ರೀಡಾ ವಿದ್ಯಾರ್ಥಿವೇತನ ಪಡೆದವರ ಪ್ರತಿಕ್ರಿಯೆಗಳು)

ಬಿ.ಇ. ಮುಂದುವರಿಸಬಹುದೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

- ಸರ್, ನಾನು ಮೆಕ್ಯಾನಿಕಲ್ ಎಂಜಿನಿಯರಿಂಗ್ ಮೊದಲ ವರ್ಷದ ವಿದ್ಯಾರ್ಥಿ. ಎಸ್‌ಡಿಎ ಪರೀಕ್ಷೆ ಬರೆದಿದ್ದು ಎಸ್‌ಡಿಎ ಗೆ ಆಯ್ಕೆಯಾದರೆ, ಎಂಜಿನಿಯರಿಂಗ್ ಕೋರ್ಸ್ ಮುಂದುವರಿಸಲು ಸಾಧ್ಯವೇ?

ಹೆಸರು, ಊರು ತಿಳಿಸಿಲ್ಲ.

ಮೆಕ್ಯಾನಿಕಲ್ ಎಂಜಿನಿಯರಿಂಗ್ ನಾಲ್ಕು ವರ್ಷದ ಪೂರ್ಣಾವಧಿ ಕೋರ್ಸ್. ಹಾಗಾಗಿ, ನಮಗಿರುವ ಮಾಹಿತಿಯಂತೆ, ಎಸ್‌ಡಿಎ ವೃತ್ತಿಯಲ್ಲಿದ್ದುಕೊಂಡು ಎಂಜಿನಿಯರಿಂಗ್ ಕೋರ್ಸ್ ಮುಂದುವರಿಸಲು ಸಾಧ್ಯವಿಲ್ಲ. ಹಾಗೆಯೇ ಎಸ್‌ಡಿಎ ವೃತ್ತಿ ಮತ್ತು ಎಂಜಿನಿಯರಿಂಗ್ ವೃತ್ತಿಗಳ ಯಶಸ್ಸಿಗೆ ಬೇಕಾಗುವ ಜ್ಞಾನ, ಕೌಶಲ ಮತ್ತು ಅಭಿರುಚಿಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಆದ್ದರಿಂದ, ನಿಮ್ಮ ಸ್ವಾಭಾವಿಕ ಪ್ರತಿಭೆ, ಅಭಿರುಚಿ ಮತ್ತು ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ವೃತ್ತಿಯೋಜನೆಯನ್ನು ತಯಾರಿಸಿ, ಅದರಂತೆ ನಿರ್ಧರಿಸುವುದು ಸೂಕ್ತ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Prose-1: A Hero

English

ಎಸ್ಸೆಸ್ಸೆಲ್ಸಿ

1. How did Swami become a hero overnight though he was not courageous? OR A report about a boy in the newspaper was an unexpected event in Swami's life. Justify. OR Swami became unexpectedly a hero. Justify.

As the news paper report, a village boy who had fought bravely against a tiger while he was returning home by the jungle path. Swami argued that a boy could not fight against a tiger. He must have been a strong, grown-up person. His father said that courage was more important than the strength and age. When Swami was not ready to accept it, his father challenged him to prove his courage by sleeping alone in the office room. While he was sleeping, saw a dark figure believed to be the devil. Swami dug his teeth into its leg. It turned out to be a notorious burglar. Thus, Swami became unexpectedly a hero.

2. What desperate attempts did Swami make to escape from his father?

Swami tried to change the subject. He said with great spirit that the cricket club would buy new brand bats and balls. He requested his father that he would sleep from the first of next month. He also gave many excuses that the office room was dusty and filled with scorpions behind the law books.

3. Narrate Swami's dreadful experience when he was lying under the bench.

Swami crouched under the bench because he thought that was safe. He shut his eyes tight and fell asleep with nightmares. A tiger was chasing him, he desperately tried to escape but could not move. He stared into the darkness something was moving down, he hugged it and bit with all his might. The burglar screamed and fell amidst the furniture. By hearing the cry father, cook, servant came and caught him.

II. Read the following extracts and answer the questions that follow.

1. "I think he must have been a very strong and grown-up person, not a boy at all."

a) Who does 'he' refer to?

'He' refers to the boy who fought against the tiger.

b) When did he say this?

When his father argued that a boy was able to fight against a tiger.

c) Why did he think so?

He thought that a boy could not have fought against a tiger.

2. "If you do it, I will make you the laughing stock of your school."

a) Who said this to whom?

Swami's father said to his son.

b) What does 'it' refer to?

'It' refers to the habit that Swami was sleeping beside granny.

c) How would the speaker make him the laughing stock?

His father would tell about Swami to all his friends at school.

Annappa Shetty, SRP in English,Hassan

ವಿದ್ಯುದಾವೇಶಗಳು ಮತ್ತು ಕ್ಷೇತ್ರಗಳು

ಭೌತಶಾಸ್ತ್ರ

ದ್ವಿತೀಯ ಪಿಯುಸಿ

- ಪ್ರಾಚೀನ ದಿನಗಳಲ್ಲಿ ವಿದ್ಯುಚ್ಛಕ್ತಿ ಮತ್ತು ಕಾಂತೀಯತೆಯನ್ನು ಪ್ರತ್ಯೇಕ ವಿಷಯಗಳಂತೆ ಪರಿಗಣಿಸಲಾಗುತ್ತಿತ್ತು. 1820ರಲ್ಲಿ ಡ್ಯಾನಿಶ್ ವಿಜ್ಞಾನಿ ಒಯಿರ್‌ಸ್ಟೆಡ್(Oersted) ಅವರು 'ಒಂದು ದಿಕ್ಸೂಚಿಯ ಬಳಿ ವಿದ್ಯುತ್ ಪ್ರವಹಿಸುತ್ತಿರುವ ತಂತಿಯನ್ನು ಇಟ್ಟಾಗ ದಿಕ್ಸೂಚಿಯ ಸೂಚಿಯು ಓರೆಯಾಗುತ್ತದೆ ಎಂಬುದನ್ನು ತೋರಿಸಿದರು. ಅಂಪೇರ್ ಮತ್ತು ಫ್ಯಾರಡೆ ಇದನ್ನು ಬೆಂಬಲಿಸಿ ಚಲನೆಯಲ್ಲಿರುವ ವಿದ್ಯುದಾವೇಶಗಳು ಕಾಂತಕ್ಷೇತ್ರವನ್ನು ಮತ್ತು ಚಲಿಸುತ್ತಿರುವ ಆಯಸ್ಕಾಂತವು ವಿದ್ಯುತ್ ಶಕ್ತಿಯನ್ನು ಉತ್ಪಾದಿಸುತ್ತದೆ ಎಂದು ಹೇಳಿದರು. ಮುಂದೆ ಸ್ಕಾಟಿಷ್ ಭೌತಶಾಸ್ತ್ರಜ್ಞ ಮ್ಯಾಕ್ಸವೆಲ್ ಮತ್ತು ಡಚ್ ಭೌತಶಾಸ್ತ್ರಜ್ಞ ಲೋರೆಂಟ್ ಈ ಎರಡು ವಿಷಯಗಳ ಪರಸ್ಪರಾವಲಂಬನೆಯನ್ನು ತೋರಿಸಿಕೊಟ್ಟರು.
- ವಿದ್ಯುತ್ ಮತ್ತು ಕಾಂತೀಯತೆ ವಿಜ್ಞಾನವು ಆಧುನಿಕ ತಾಂತ್ರಿಕ ನಾಗರಿಕತೆಗೆ ಬುನಾದಿ. ವಿದ್ಯುತ್ ದೂರಸಂಪರ್ಕ ರೇಡಿಯೊ, ಟೆಲಿವಿಷನ್ ಮತ್ತು ದೈನಂದಿನ ಜೀವನದಲ್ಲಿ ಬಳಸುವ ವೈವಿಧ್ಯಮಯ ಪ್ರಾಯೋಗಿಕ ವಸ್ತುಗಳು ಈ ವಿಜ್ಞಾನದ ತತ್ವಗಳನ್ನು ಆಧರಿಸಿವೆ.

ವಾಹಕಗಳು ಮತ್ತು ಅವಾಹಕಗಳು

ಒಂದು ಲೋಹದ ಸರಳನ್ನು ಕೈಯಲ್ಲಿ ಹಿಡಿದು ಮತ್ತು ಉಣ್ಣೆಯೊಂದಿಗೆ ಉಜ್ಜಿದಾಗ ಆವೇಶಗೊಂಡ ಯಾವುದೇ ಗುರುತನ್ನು ತೋರಿಸುವುದಿಲ್ಲ. ಆದರೆ ಒಂದು ವೇಳೆ ಕಟ್ಟಿಗೆ ಅಥವಾ ಪ್ಲಾಸ್ಟಿಕ್ ಹಿಡಿಕೆ ಹೊಂದಿರುವ ಒಂದು ಲೋಹದ ಸರಳನ್ನು ಅದರ ಲೋಹದ ಭಾಗವನ್ನು ಮುಟ್ಟದೇ ಉಜ್ಜಿದರೆ ಇದು ಆವೇಶಗೊಳ್ಳುತ್ತಿರುವ ಗುರುತುಗಳನ್ನು ತೋರಿಸುತ್ತದೆ.

ಕೆಲವು ವಸ್ತುಗಳು ಸುಲಭವಾಗಿ ಅವುಗಳ ಮೂಲಕ ವಿದ್ಯುತ್ ಸಾಗಾಣಿಕೆಗೆ ಅವಕಾಶ ಮಾಡಿ ಕೊಡುತ್ತವೆ ಬೇರೆಯವು ಮಾಡಿಕೊಡುವುದಿಲ್ಲ. ಸುಲಭವಾಗಿ ವಿದ್ಯುತ್ತನ್ನು ತನ್ನ ಮೂಲಕ ಹಾದು ಹೋಗಲು ಬಿಡುವುದನ್ನು ವಾಹಕಗಳೆನ್ನುವರು. ಅವುಗಳು ವಸ್ತುವಿನ ಒಳಭಾಗದಲ್ಲಿ ತುಲನಾತ್ಮಕವಾಗಿ ಸುಲಭವಾಗಿ ಚಲಿಸುವ ವಿದ್ಯುತ್ ಆವೇಶಗಳನ್ನು (ಎಲೆಕ್ಟ್ರಾನ್‌ಗಳು) ಹೊಂದಿರುತ್ತದೆ. ಲೋಹಗಳು, ಮಾನವ ಮತ್ತು ಪ್ರಾಣಿಗಳ ದೇಹ ಮತ್ತು ಭೂಮಿ ವಾಹಕಗಳಾಗಿವೆ.

ಅಲೋಹಗಳಾದ ಗಾಜು, ಪಿಂಗಾಣಿ, ಪ್ಲಾಸ್ಟಿಕ್, ನೈಲಾನ್, ಕಟ್ಟಿಗೆ ಅವುಗಳ ಮೂಲಕ ವಿದ್ಯುತ್ ತನ್ನ ಮೂಲಕ ಹಾದು ಹೋಗಲು ಹೆಚ್ಚಿನ ಪ್ರತಿರೋಧವನ್ನು ನೀಡುತ್ತದೆ. ಅವುಗಳನ್ನು ನಿರೋಧಕಗಳು ಎನ್ನುವರು.

ಕೆಲವು ಆವೇಶವನ್ನು ಒಂದು ವಾಹಕಕ್ಕೆ ವರ್ಗಾಯಿಸಿದರೆ ಅದು ಸರಾಗವಾಗಿ ವಾಹಕದ ಸಂಪೂರ್ಣ ಮೇಲ್ಮೈ ಮೇಲೆ ಹಂಚಿಕೆಯಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಒಂದುವೇಳೆ ಕೆಲವು ಆವೇಶವನ್ನು ಅರೆವಾಹಕದ ಮೇಲೆ ಹಾಕಿದಾಗ ಅದು ಅದೇ ಸ್ಥಳದಲ್ಲಿ ಇರುತ್ತದೆ.

ವಿದ್ಯುದಾವೇಶಿತ ವಸ್ತುವನ್ನು ಭೂಮಿಯ ಸಂಪರ್ಕಕ್ಕೆ ತಂದಾಗ ವಸ್ತುವಿನ ಎಲ್ಲಾ ಹೆಚ್ಚುವರಿ ಆವೇಶಗಳು ಸಂಪರ್ಕ ವಾಹಕದ ಮೂಲಕ ನೆಲಕ್ಕೆ ರವಾನಿಸಿ ಒಂದು ಅಲ್ಪಕಾಲಿಕ ಪ್ರವಾಹದ ಮೂಲಕ ಕಣ್ಮರೆಯಾಗುತ್ತದೆ. ಭೂಮಿಯ ಜೊತೆ ಆವೇಶವನ್ನು ಹಂಚಿಕೊಳ್ಳುವ ಈ ಪ್ರಕ್ರಿಯೆಯನ್ನು ಗ್ರೌಂಡಿಂಗ್ ಅಥವಾ ಅರ್ಥಿಂಗ್ ಎನ್ನುವರು. ವಿದ್ಯುತ್ ಮಂಡಲ ಮತ್ತು ಸಾಮಗ್ರಿಗಳಿಗೆ ಒಂದು ಸುರಕ್ಷತೆಯನ್ನು ಅರ್ಥಿಂಗ್ ಒದಗಿಸುತ್ತದೆ. ಒಂದು ದಪ್ಪ ಲೋಹದ ಫಲಕವನ್ನು ಭೂಮಿಯೊಳಕ್ಕೆ ಆಳವಾಗಿ ಹುದುಗಿಸಿ ಮತ್ತು ಒಂದು ದಪ್ಪ ತಂತಿಯನ್ನು ಈ ಫಲಕದಿಂದ ಎಳೆಯುವರು. ಇವುಗಳನ್ನು ಕಟ್ಟಡಗಳಲ್ಲಿ ಅರ್ಥಿಂಗ್ ಉದ್ದೇಶಕ್ಕಾಗಿ ಮುಖ್ಯ ವಿದ್ಯುತ್ ಪೂರೈಕೆಯ ಬಳಿ ಉಪಯೋಗಿಸುತ್ತಾರೆ.

ಮನೆಗಳಲ್ಲಿ ವಿದ್ಯುತ್ ವೈರಿಂಗ್ ಮೂರು ತಂತಿಗಳನ್ನು ಹೊಂದಿರುತ್ತದೆ. ಲೈವ್, ತಟಸ್ಥ, ಮತ್ತು ಅರ್ಥ್. ಮೊದಲ ಎರಡು ಶಕ್ತಿ ಕೇಂದ್ರದಿಂದ ವಿದ್ಯುತ್ ಪ್ರವಾಹವನ್ನು ಹೊತ್ತೊಯ್ಯುತ್ತದೆ ಮತ್ತು ಮೂರನೆಯದು ಭೂಮಿಯಲ್ಲಿ ಹುಗಿದಿರುವ ಲೋಹದ ತಗಡಿನೊಂದಿಗೆ ಸಂಪರ್ಕಿಸಲ್ಪಟ್ಟಿರುತ್ತದೆ. ಇಸ್ತ್ರಿಪೆಟ್ಟಿಗೆ, ರೆಫ್ರಿಜಿರೇಟರ್, ಟಿವಿಗಳಂತಹ ವಿದ್ಯುತ್ ಸಾಮಗ್ರಿಗಳ ಲೋಹೀಯ ವಸ್ತುಗಳನ್ನು ಭೂಗತ ತಂತಿಯೊಡನೆ ಸಂಪರ್ಕಿಸಿರುತ್ತಾರೆ, ಯಾವುದೇ ದೋಷ ಉಂಟಾದಾಗ ಅಥವಾ ಲೈವ್ ಲೋಹಿಯ ಭಾಗವನ್ನು ಸ್ಪರ್ಶಿಸಿದಾಗ ಸಾಮಗ್ರಿಗಳಿಗೆ ಹಾನಿವುಂಟಾಗದೇ ಮತ್ತು ಮನುಷ್ಯರಿಗೆ ಯಾವುದೇ ತೊಂದರೆಯನ್ನುಂಟು ಮಾಡದೇ ಆವೇಶ ಭೂಮಿಯೊಳಗೆ ಹರಿದು ಹೋಗುತ್ತದೆ. ಇದು ಇಲ್ಲದಿದ್ದರೆ ಮಾನವನ ದೇಹದಲ್ಲಿ ವಿದ್ಯುತ್ ಪ್ರವಹಿಸುವುದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ.

ಕೂಲಂಬ್ ನಿಯಮ

ಕೂಲಂಬ್ ನಿಯಮ ಎರಡು ಆವೇಶಗಳ ನಡುವಿನ ಬಲದ ಬಗ್ಗೆ ಪರಿಮಾಣಾತ್ಮಕ ಹೋಲಿಕೆಯಾಗಿದೆ. ಆವೇಶ ಕಾಯಗಳನ್ನು ಸೇರ್ಪಡಿಸುವ ಅಂತರಕ್ಕಿಂತ ಅವುಗಳ ರೇಖಿಯ ಗಾತ್ರ ಚಿಕ್ಕದಾದಾಗ ಅವುಗಳ ಗಾತ್ರ ನಿರ್ಲಕ್ಷಿಸಲಾಗುವುದು ಮತ್ತು ಆವೇಶ ಕಾಯಗಳನ್ನು ಬಿಂದು ಆವೇಶಗಳೆಂದು ಪರಿಗಣಿಸಲಾಗುವುದು. ಕೂಲಂಬ್‌ನು ಎರಡು ಬಿಂದು ಆವೇಶಗಳ ನಡುವಿನ ಬಲವನ್ನು ಅಳತೆ ಮಾಡಿದನು ಮತ್ತು ಇದು ಆವೇಶಗಳ ನಡುವಿನ ಅಂತರದ ವರ್ಗಕ್ಕೆ ವಿಲೋಮವಾಗಿ, ಆವೇಶಗಳ ಗುಣಲಬ್ಧದ ಪ್ರಮಾಣಕ್ಕೆ ನೇರ ಅನುಪಾತವಾಗಿಯೂ ಮತ್ತು ಎರಡು ಆವೇಶಗಳನ್ನು ಸೇರಿಸುವ ರೇಖೆಯ ನೇರದಲ್ಲಿರುತ್ತದೆ ಎಂದು ಕಂಡುಹಿಡಿದನು. ಹಾಗಾಗಿ ನಿರ್ವಾತದಲ್ಲಿ q1 ಮತ್ತು q2 ಗಳು ಎರಡು ಆವೇಶಗಳು r ಬೇರ್ಪಡಿಸುವ ಅಂತರವು ಆದರೆ ಅವುಗಳ ನಡುವಿನ ಬಲ (F) ದ ಪ್ರಮಾಣವು

$$F = k\frac{|q_1 \quad q_2|}{r^2} \quad \ldots\ldots\ldots\ldots (1)$$

ಒಂದು ವೇಳೆ ಒಂದು ಲೋಹದ ಗೋಳದ ಮೇಲಿನ ಆವೇಶ q ಆದಾಗ ಈ ಗೋಳವನ್ನು ಅವಿದ್ಯುದಾವೇಶ ಗೋಳದೊಂದಿಗೆ ಸಂಪರ್ಕ ಮಾಡಿದಾಗ ಆವೇಶವು ಎರಡೂ ಗೋಳದ ಮೇಲ್ಮೈ ಮೇಲೆ ಹರಡಿಕೊಳ್ಳುತ್ತದೆ. ಸಮಮಿತಿಯಾಗಿ ಪ್ರತಿ ಗೋಳದ ಆವೇಶ q/2 ಆಗಿರುತ್ತದೆ. ಈ ಪ್ರಕ್ರಿಯೆಯನ್ನು ಪುನರಾವರ್ತಿಸಿದಾಗ ನಾವು ಪಡೆಯಬಹುದಾದ ಆವೇಶ q/2, q/4, ಇತ್ಯಾದಿ. ಕೂಲಂಬ್ ಸ್ಥಿರ ಜೋಡಿಗಳ ಅಂತರವನ್ನು ಬದಲಾಯಿಸಿದನು ಮತ್ತು ಬೇರೆ ಬೇರೆ ಅಂತರದಲ್ಲಿ ಬಲವನ್ನು ಅಳತೆಮಾಡಿದನು. ನಂತರ ಅವನು ಜೋಡಿಗಳಲ್ಲಿನ ಆವೇಶವನ್ನು ಬದಲಾಯಿಸಿದನು ಮತ್ತು ಪ್ರತಿ ಜೋಡಿಗಳ ದೂರವನ್ನು ಸ್ಥಿರವಾಗಿಟ್ಟನು. ವಿವಿಧ ದೂರದಲ್ಲಿ ವಿವಿಧ ಜೋಡಿ ಆವೇಶಗಳ ಬಲವನ್ನು ಹೋಲಿಸಿ ಸಮೀಕರಣ (1) ಸಂಬಂಧವನ್ನು ತಲುಪಿದನು.

ಕೂಲಂಬ್‌ನ ನಿಯಮ ಒಂದು ಸಾಮಾನ್ಯ ಗಣಿತ ವ್ಯಾಖ್ಯೆ. ಆರಂಭದಲ್ಲಿ ಪ್ರಾಯೋಗಿಕವಾಗಿ ಮೇಲೆ ವಿವರಿಸುವ ರೀತಿಯಲ್ಲಿ ಅಂಗೀಕರಿಸಲಾಯಿತು. ಪ್ರಾಯೋಗಿಕವಾಗಿ ಸ್ಥೂಲ ಮಟ್ಟದಲ್ಲಿ ಧೃಡ ಪಡಿಸುವಾಗ ಉಪ ಪರಮಾಣು ಮಟ್ಟದಲ್ಲೂ $(r \sim 10^{-10}\ \text{m})$ ಧೃಡಪಡಿಸಲಾಯಿತು.

ಸಮೀಕರಣ (1.)ರ k ಸಂಬಂಧದಲ್ಲಿ ನಾವು k ಗೆ ಯಾವುದೇ ಧನಾತ್ಮಕ ಬೆಲೆಯನ್ನು ಆಯ್ಕೆ ಮಾಡಬಹುದು. kಯ ಆಯ್ಕೆಯು ಆವೇಶದ ಮಾನದ ಗಾತ್ರವನ್ನು ನಿರ್ಧರಿಸುತ್ತದೆ. ಈ ಮಾನದಲ್ಲಿ k ಯ ಬೆಲೆಯು ಸುಮಾರು 9×10^9 ಈ ಆಯ್ಕೆಯ ಆವೇಶದ ಗಾತ್ರವನ್ನು ನಿರ್ಧರಿಸುತ್ತದೆ ಇದನ್ನು ಒಂದು ಕೂಲಂಬ್ ಎನ್ನುವರು. ಸಮೀಕರಣ (1)ರಲ್ಲಿ k ಯ ಈ ಬೆಲೆಯನ್ನು ಹಾಕಿದಾಗ

$$q_1 = q_2 = 1\ \text{C}, \quad r = 1\ \text{m} \text{ ಆದಾಗ } \quad F = 9 \times 10^9\ \text{N}$$

ಅದೇನಂದರೆ ನಿರ್ವಾತದಲ್ಲಿ 1 C ಆವೇಶವು ಅದೇ ಪ್ರಮಾಣದ ಮತ್ತೊಂದು ಆವೇಶದಿಂದ 1 m ದೂರದಲ್ಲಿ ಇರಿಸಿದಾಗ ಅನುಭವಿಸುವ ವಿದ್ಯುತ್ ಶಕ್ತಿಯ ವಿಕರ್ಷಣಾ ಬಲದ ಪ್ರಮಾಣ 9×10^9N. ಒಂದು ಕೂಲಂಬ್ ಅತಿ ದೊಡ್ಡ ಮಾನವಾಗಿದೆ ಸಾಂಪ್ರದಾಯವಾಗಿ ಸ್ಥಾಯಿ ವಿದ್ಯುತ್‌ನಲ್ಲಿ ಸಣ್ಣ ಮಾನದಂತಹ 1mCರಲ್ಲಿ ಒಂದನ್ನು ಬಳಸುತ್ತಾರೆ. ಸಮೀಕರಣ(1)ರಲ್ಲಿ ಸ್ಥಿರಾಂಕ k ಯನ್ನು ನಂತರದ ಅನುಕೂಲಕ್ಕಾಗಿ ಸಾಮಾನ್ಯವಾಗಿ $k = 1/4\pi\varepsilon_0$ ಎಂದು ಹಾಕಲಾಗುತ್ತದೆ.

$$F = \frac{1}{4\pi\varepsilon_0} \frac{|q_1 \quad q_2|}{r^2} \quad \ldots\ldots\ldots\ldots (2)$$

Σ_0 ಅನ್ನು ನಿರ್ವಾತ ಪ್ರದೇಶದ ವಿದ್ಯುತ್‌ಶೀಲತೆ ಎಂದು ಹೇಳುವರು.

SI ಮಾನದಲ್ಲಿ ε_0ನ ಬೆಲೆಯು $\varepsilon_0 = 8.854 \times 10^{-12}\ C^2 N^{-1} m^{-2}$

(ಮುಂದುವರಿಯುವುದು...)

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರಿಕ್ ಚಾರ್ಜಸ್ ಅಂಡ್ ಫೀಲ್ಡ್ಸ್' ಅಧ್ಯಾಯದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪ್ರಜಾವಾಣಿ ನೋಡಿಯೊ https://bit.ly/3A4esxE

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್: editpage@prajavani.co.in



ಸುಭಾಷಿತ

ಸಾವನ್ನು ಅರ್ಥಮಾಡಿಕೊಳ್ಳದ ವ್ಯಕ್ತಿಗೆ ಜೀವನವು ತುಂಬಾ ಗೊಂದಲಮಯ ಎನಿಸಬಹುದು.

–ಅಜನ್ ಚಾ

ನಾಯಕತ್ವಕ್ಕೆ ವಿರಾಟ್ ವಿದಾಯ ಬಿಸಿಸಿಐ ಮುಂದಿದೆ ಕಠಿಣ 'ಟೆಸ್ಟ್'

ಭಾರತ ಕ್ರಿಕೆಟ್ ಕಂಡ ಅತ್ಯಂತ ಆಕ್ರಮಣಶೀಲ ಸ್ವಭಾವದ ನಾಯಕ ಮತ್ತು ಆಟಗಾರ ವಿರಾಟ್ ಕೊಹ್ಲಿ. ಟೆಸ್ಟ್ ತಂಡದ ನಾಯಕತ್ವಕ್ಕೆ ಅವರು ರಾಜೀನಾಮೆ ನೀಡಿರುವ ಸುದ್ದಿಯು ಅಚ್ಚರಿ ಮೂಡಿಸಿದೆ. ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಯಲ್ಲಿ 1-2ರಿಂದ ಸೋತ ಮರುದಿನವೇ ಅವರು ಈ ನಿರ್ಧಾರ ಪ್ರಕಟಿಸಿದ್ದಾರೆ. ಮೂರು- ನಾಲ್ಕು ತಿಂಗಳುಗಳಿಂದ ನಡೆದ ಬೆಳವಣಿಗೆಗಳನ್ನು ಅವಲೋಕಿಸಿದರೆ ಬಿಸಿಸಿಐ ಮತ್ತು ವಿರಾಟ್ ನಡುವಣ ಸಂಬಂಧ ಸೌಹಾರ್ದದಿಂದ ಇರಲಿಲ್ಲ ಎಂಬುದು ಮನವರಿಕೆಯಾಗುತ್ತದೆ. ಆ ವಿರಸದ ಮುಂದುವರಿದ ಭಾಗವೇ ಈ ತೀರ್ಮಾನ. ಅಕ್ಟೋಬರ್‌ನಲ್ಲಿ ಟಿ20 ವಿಶ್ವಕಪ್ ನಂತರ ಚುಟುಕು ಕ್ರಿಕೆಟ್ ತಂಡದ ನಾಯಕತ್ವ ಬಿಟ್ಟುಕೊಟ್ಟಿದ್ದರು. ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕತ್ವದಿಂದ ಹೊರಬರುವುದಾಗಿಯೂ ಘೋಷಿಸಿದ್ದರು. ಅದರ ಹೊರತಾಗಿ ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳುವ ಕೆಲವೇ ದಿನಗಳ ಮುನ್ನ ಕೊಹ್ಲಿಯನ್ನು ಏಕದಿನ ಮಾದರಿಯ ಕ್ರಿಕೆಟ್ ತಂಡದ ನಾಯಕತ್ವದಿಂದ ಕೆಳಗಿಳಿಸಿದ್ದ ಬಿಸಿಸಿಐ, ರೋಹಿತ್ ಶರ್ಮಾಗೆ ಪಟ್ಟ ಕಟ್ಟಿತ್ತು. ಬಿಳಿಬಣ್ಣದ ಕ್ರಿಕೆಟ್ ಮಾದರಿಗೆ ಒಬ್ಬರೇ ನಾಯಕರಿರಬೇಕೆಂಬ ಉದ್ದೇಶದಿಂದ ಈ ಬದಲಾವಣೆ ಮಾಡಲಾಗಿದೆ, ವಿರಾಟ್‌ಗೂ ಮೊದಲೇ ತಿಳಿಸಲಾಗಿತ್ತು ಎಂದು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದರು. ಆದರೆ, ಏಕದಿನ ಕ್ರಿಕೆಟ್ ನಾಯಕತ್ವ ಬದಲಾವಣೆಗೆ ಸಂಬಂಧಿಸಿ 90 ನಿಮಿಷಗಳ ಮೊದಲಷ್ಟೇ ತಮಗೆ ಮಾಹಿತಿ ನೀಡಿದ್ದರು ಎಂದು ಕೊಹ್ಲಿ ದಕ್ಷಿಣ ಆಫ್ರಿಕಕ್ಕೆ ತೆರಳುವ ಮುನ್ನದಿನ ಹೇಳಿದ್ದರು. ಇದು ಬಿಸಿಸಿಐ ಮತ್ತು ಚೇತನ್ ಶರ್ಮಾ ನೇತೃತ್ವದ ರಾಷ್ಟ್ರೀಯ ಆಯ್ಕೆ ಸಮಿತಿಗೆ ಮುಜುಗರ ಮೂಡಿಸಿದ್ದು ಸುಳ್ಳಲ್ಲ. ಅಲ್ಲದೇ ಕೇಪ್‌ಟೌನ್ ಟೆಸ್ಟ್‌ನಲ್ಲಿ ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ (ಯುಡಿಆರ್‌ಎಸ್) ನಿರ್ಣಯಕ್ಕೆ ಸಂಬಂಧಿಸಿದಂತೆ ಸ್ಟಂಪ್ ಮೈಕ್ ಮುಂದೆ ತೋರಿದ್ದ ನಡವಳಿಕೆಯೂ ಕ್ರಿಕೆಟ್ ವಲಯದಲ್ಲಿ ಟೀಕೆಗಳಿಗೆ ಒಳಗಾಗಿತ್ತು. ಎರಡು ವರ್ಷಗಳಿಂದ ವೈಯಕ್ತಿಕವಾಗಿ ಅವರ ಬ್ಯಾಟಿಂಗ್ ಫಾರ್ಮ್ ಕುಸಿದಿತ್ತು. ಅದಕ್ಕೂ ಹಿಂದಿನವರೆಗೂ ಅತ್ಯಂತ ಬಲಿಷ್ಠ ನಾಯಕ ಎಂಬ ವರ್ಚಸ್ಸು ಹೊಂದಿದ್ದ ವಿರಾಟ್, ಈ ಅವಧಿಯಲ್ಲಿ ಒಂದೂ ಶತಕವನ್ನು ದಾಖಲಿಸಿಲ್ಲ. ಈ ಹಿನ್ನೆಲೆಯಲ್ಲಿ ಅವರನ್ನು ನಾಯಕತ್ವದಿಂದ ಕೆಳಗಿಳಿಸುವ ಕುರಿತು ಮಂಡಳಿಯಲ್ಲಿ ನಡೆಯುತ್ತಿದ್ದ ಪಿಸುಮಾತುಗಳು ಕೊಹ್ಲಿ ಕಿವಿಗೆ ಬಿದ್ದಿರಬೇಕು. ಆದ್ದರಿಂದ ತಾವೇ ನಾಯಕ ಪಟ್ಟದಿಂದ ಇಳಿಯುವ ನಿರ್ಧಾರಕ್ಕೆ ಬಂದಿರಬಹುದು.



ವಿರಾಟ್ ಕೊಹ್ಲಿ ಅವರ ಅನುಭವ ಮತ್ತು ಪ್ರತಿಭೆಯನ್ನು ತಂಡದ ಒಳಿತಿಗೆ ಬಳಸಿಕೊಳ್ಳುವ ಸಮರ್ಥ ನಾಯಕತ್ವ ತಂಡಕ್ಕೆ ಸಿಗಬೇಕಿದೆ

ಅಪಾರ ದುಡ್ಡು, ಕೀರ್ತಿ ಮತ್ತು ವರ್ಚಸ್ಸನ್ನು ತಂದುಕೊಡುವ ಭಾರತ ಕ್ರಿಕೆಟ್ ತಂಡದ ನಾಯಕತ್ವ ಮೊದಲಿನಿಂದಲೂ ಮುಳ್ಳಿನ ಸಿಂಹಾಸನ. ಜೊತೆಗೆ ಮಂಡಳಿಯ ಒಳರಾಜಕೀಯ, ಗುಂಪುಗಾರಿಕೆ ಹೊಸದೇನಲ್ಲ. ಅನೇಕರು ಈ ಬಿಸಿ ಅನುಭವಿಸಿದ್ದಾರೆ. ಆದರೆ, ಈ ಹಿಂದಿನ ಬಹುತೇಕ ನಾಯಕರು ತಮ್ಮ ಸ್ಥಾನ ತೊರೆದಾಗ, ಮುಂದಿನ ಸಾರಥಿ ಯಾರೆಂಬುದು ಸ್ಪಷ್ಟವಾಗಿ ಗೊತ್ತಿತ್ತು. ಇದೀಗ ಆ ಸ್ಪಷ್ಟತೆ ಇಲ್ಲ. ಏಕದಿನ, ಟಿ20 ತಂಡಗಳ ನಾಯಕತ್ವ ವಹಿಸಿಕೊಂಡಿರುವ ರೋಹಿತ್ ಶರ್ಮಾ ಫಿಟ್‌ನೆಸ್ ಮತ್ತು ಗಾಯದ ಸಮಸ್ಯೆಯಿಂದ ಹೊರಬರಲು ಹರಸಾಹಸ ಪಡುತ್ತಿದ್ದಾರೆ. ಅದರಿಂದಾಗಿ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಟೂರ್ನಿಯಲ್ಲಿ ಕೆ.ಎಲ್. ರಾಹುಲ್ ತಂಡವನ್ನು ಮುನ್ನಡೆಸಬೇಕಿದೆ. ಟೆಸ್ಟ್ ತಂಡಕ್ಕೆ ಪ್ರತ್ಯೇಕ ನಾಯಕತ್ವ ನೀಡಲು ಮಂಡಳಿ ಯೋಚಿಸಿದರೆ ರಾಹುಲ್, ರಿಷಭ್ ಪಂತ್ ಮತ್ತು ಜಸ್‌ಪ್ರೀತ್ ಬೂಮ್ರಾ ಅವರತ್ತ ನೋಡಬೇಕಾಗುತ್ತದೆ. ಏಕೆಂದರೆ ಅನುಭವಿಗಳಾದ ಅಜಿಂಕ್ಯ ರಹಾನೆ, ಚೇತೇಶ್ವರ ಪೂಜಾರ ಸತತ ವೈಫಲ್ಯಗಳಿಂದ ಸ್ಥಾನ ಉಳಿಸಿಕೊಳ್ಳುವುದೇ ಅನುಮಾನ ಎನ್ನುವ ಪರಿಸ್ಥಿತಿ ಇದೆ. ಸಶಕ್ತ ನಾಯಕನನ್ನು ನೇಮಿಸಲು ಕೆಲವು ಪ್ರಯೋಗಗಳಿಗೆ ಮುಂದಾಗಲೇಬೇಕಾದ ಅನಿವಾರ್ಯವು ಮಂಡಳಿಗೆ ಇದೆ.

ವಿರಾಟ್ ನಾಯಕತ್ವದಲ್ಲಿ ತಂಡವು ಮಾಡಿರುವ ಸಾಧನೆಯನ್ನು ಮುಂದುವರಿಸುವ ಸಮರ್ಥರ ಅಗತ್ಯವಿದೆ. ಏನೇ ಟೀಕೆಗಳಿದ್ದರೂ ಕೊಹ್ಲಿ ಭಾರತ ಟೆಸ್ಟ್ ಕ್ರಿಕೆಟ್ ಕಂಡ ಶ್ರೇಷ್ಠ ನಾಯಕರಲ್ಲೊಬ್ಬರು ಎನ್ನುವುದರಲ್ಲಿ ಎರಡು ಮಾತಿಲ್ಲ. 2014ರಲ್ಲಿ ತಂಡವು ಆಸ್ಟ್ರೇಲಿಯಾದಲ್ಲಿ ಆಡುತ್ತಿದ್ದ ಸರಣಿಯ ಮಧ್ಯದಲ್ಲಿಯೇ ಮಹೇಂದ್ರಸಿಂಗ್ ಧೋನಿ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದರು. ಆ ಸಂದರ್ಭದಲ್ಲಿ ಕೊಹ್ಲಿ ನಾಯಕತ್ವ ವಹಿಸಿಕೊಂಡರು. ಅಲ್ಲಿಂದ ಇಲ್ಲಿಯವರೆಗೆ 68 ಪಂದ್ಯಗಳಲ್ಲಿ ತಂಡವು 40ರಲ್ಲಿ ಗೆಲುವು ದಾಖಲಿಸಿದೆ, 11ರಲ್ಲಿ ಡ್ರಾ ಮಾಡಿಕೊಂಡಿದೆ. 17ರಲ್ಲಿ ಸೋತಿದೆ. ಅಲ್ಲದೇ ಆಸ್ಟ್ರೇಲಿಯಾದಲ್ಲಿ ಮೊದಲ ಬಾರಿ ಟೆಸ್ಟ್ ಸರಣಿ ಜಯಿಸಿದ್ದು, ಇಂಗ್ಲೆಂಡ್‌ನಲ್ಲಿ 2-1ರ ಮುನ್ನಡೆ ಸಾಧಿಸಿದ್ದು ಮತ್ತು ಈಚೆಗೆ ದಕ್ಷಿಣ ಆಫ್ರಿಕಾದ ಸೆಂಚುರಿಯನ್‌ನಲ್ಲಿ ಮೊದಲ ಸಲ ಭಾರತಕ್ಕೆ ಜಯ ಒಲಿದಿದ್ದು ಅವರ ನಾಯಕತ್ವದಲ್ಲಿ. ಕಳೆದ ಐದು ವರ್ಷಗಳಿಂದ ಐಸಿಸಿ ರ‍್ಯಾಂಕಿಂಗ್‌ನಲ್ಲಿ ಗೌರವಯುತ ಸ್ಥಾನ ಕಾಪಾಡಿಕೊಂಡಿದೆ. ಹೋದ ಬಾರಿ ಚೊಚ್ಚಲ ಟೆಸ್ಟ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡವು ಫೈನಲ್ ಪ್ರವೇಶಿಸಿತ್ತು. ಇಂತಹ ಸಾಧನೆಗೆ ಕಾರಣರಾದ ವಿರಾಟ್ ಈಗ ಆಟಗಾರನಾಗಿ ಮುಂದುವರಿಯಲಿದ್ದಾರೆ. ಅವರ ಅನುಭವ ಮತ್ತು ಪ್ರತಿಭೆಯನ್ನು ತಂಡದ ಒಳಿತಿಗೆ ಬಳಸಿಕೊಳ್ಳುವ ಸಮರ್ಥ ನಾಯಕತ್ವ ತಂಡಕ್ಕೆ ಸಿಗಬೇಕಿದೆ. ಮಂಡಳಿಯ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಈ ಸವಾಲನ್ನು ಸಮರ್ಪಕವಾಗಿ ನಿಭಾಯಿಸಬೇಕು. ದೇಶದ ಕ್ರಿಕೆಟ್‌ನ ಬೆಳವಣಿಗೆಗೆ ಮತ್ತು ಗೌರವಕ್ಕೆ ಧಕ್ಕೆ ತರದಂತೆ ನೋಡಿಕೊಳ್ಳಬೇಕು. ಇನ್ನಷ್ಟು ವರ್ಷಗಳ ಕಾಲ ಆಡುವ ಸಾಮರ್ಥ್ಯವಿರುವ 33 ವರ್ಷ ವಯಸ್ಸಿನ ಕೊಹ್ಲಿ ಮುಂಬರುವ ನಾಯಕ ಮತ್ತು ಸಹ ಆಟಗಾರರೊಂದಿಗೆ ಸಾಮರಸ್ಯದಿಂದ ಬೆರೆತು ತಂಡದ ಗೆಲುವಿಗೆ ನೆರವಾಗಬೇಕು. ಸಚಿನ್ ತೆಂಡೂಲ್ಕರ್ ಅವರು ಧೋನಿಯೊಂದಿಗೆ ಕೈಜೋಡಿಸಿದಂತೆ ಕೊಹ್ಲಿ ಕೂಡ ಸಹಕಾರಹಸ್ತ ಚಾಚಬೇಕು. ಅದರಿಂದ ಅವರಿಗೂ ದೇಶದ ಕ್ರಿಕೆಟ್‌ಗೂ ಒಳಿತಾಗುವುದರಲ್ಲಿ ಅನುಮಾನವಿಲ್ಲ.

ದಿನದ ಟ್ವೀಟ್




ದುರ್ಬಳಕೆ ಆಗದಿರಲಿ

ಪಿಎಂ ಕೇರ್ಸ್ ಅಡಿಯಲ್ಲಿ 2,871 ವೆಂಟಿಲೇಟರ್‌ಗಳನ್ನು ರಾಜ್ಯವು ಪಡೆದುಕೊಂಡಿದೆ. ಚಿಕಿತ್ಸೆಗೆ ಒಳಗಾಗುವವರಿಗೆ ಉಚಿತವಾಗಿ ವೆಂಟಿಲೇಟರ್ ಸೇವೆಯನ್ನು ನೀಡಬೇಕೆಂಬ ನಿಯಮದಡಿಯಲ್ಲಿ ಅರ್ಧಕ್ಕೂ ಹೆಚ್ಚು ವೆಂಟಿಲೇಟರ್‌ಗಳನ್ನು ಖಾಸಗಿ ಆಸ್ಪತ್ರೆಗಳಿಗೆ ನೀಡಲಾಗಿದೆ. ಈ ಸೌಲಭ್ಯವನ್ನು ಖಾಸಗಿ ಆಸ್ಪತ್ರೆಗಳು ದುರ್ಬಳಕೆ ಮಾಡಿಕೊಳ್ಳದಂತೆ ಕಟ್ಟೆಚ್ಚರ ವಹಿಸಲಿ.

ಕೆ.ಬಿ.ಕೆ.ಸ್ವಾಮಿ, ವಕೀಲ

ಕಿಡಿನುಡಿ



ಮಾರ್ಕ್ಸ್‌ವಾದಿಗಳು, ಅಂಬೇಡ್ಕರ್‌ವಾದಿಗಳು ಹಾಗೂ ಇಸ್ಲಾಂನ ಮೂಲಭೂತವಾದಿಗಳು ಸಂಸ್ಕೃತದ ಬಗೆಗಿನ ತಮ್ಮ ಅಜ್ಞಾನವನ್ನು ಮತ್ತು ಅದರ ಬಗೆಗಿನ ಹೇವರಿಕೆಯನ್ನು ಮೊದಲು ಬಿಡಬೇಕು. ಭಾರತದ ನಾಗರಿಕತೆಯ ಪುನರುಜ್ಜೀವನಕ್ಕಾಗಿ ಸಂಸ್ಕೃತ ಅಧ್ಯಯನ ಮಾಡುವುದನ್ನು (ಜೊತೆಗೆ ಉರ್ದು, ಇಂಗ್ಲಿಷ್ ಮತ್ತು ಎಲ್ಲಾ ಭಾರತೀಯ ಭಾಷೆಗಳು) ದೊಡ್ಡ ಮಟ್ಟದಲ್ಲಿ ಉತ್ತೇಜಿಸಬೇಕು. #SayNoToSanskrit ಎಂಬುದಕ್ಕೆ ಇಲ್ಲ ಎಂದು ಹೇಳಬೇಕು.

ಸುಧೀಂದ್ರ ಕುಲಕರ್ಣಿ, ಲೇಖಕ

25 ವರ್ಷಗಳ ಹಿಂದೆ

ಶುಕ್ರವಾರ, 17-1-1997

• ರಾಮನಗರ, ಚಿ.ನಾ.ಹಳ್ಳಿ - ನಾಲ್ಕು ನಾಮಪತ್ರ

ಬೆಂಗಳೂರು, ಜ. 16– ರಾಮನಗರ ಹಾಗೂ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಇದುವರೆಗೆ ನಾಲ್ವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆಯುವ ಉಪ ಚುನಾವಣೆಗೆ ಇನ್ನೂ ಯಾರೂ ನಾಮಪತ್ರ ಸಲ್ಲಿಸಿಲ್ಲ.

ಪಕ್ಷಗಳ ಲೆಕ್ಕಾಚಾರ: ರಾಮನಗರ ಕ್ಷೇತ್ರದಿಂದ ನಟ ಅಂಬರೀಷ್ ಅವರನ್ನು ದಳ ಸ್ಪರ್ಧಿಯಾಗಿ ಕಣಕ್ಕೆ ಇಳಿಸುವ ಸಾಧ್ಯತೆ ಇದೆ. ಪ್ರಧಾನಿ ಎಚ್.ಡಿ.ದೇವೇಗೌಡರು ತೆರವು ಮಾಡಿರುವ ಈ ಕ್ಷೇತ್ರಕ್ಕೆ ಅಂತಿಮವಾಗಿ ದೇವೇಗೌಡರೇ ಸೂಚಿಸುವವರು ಇಲ್ಲಿ ಅಭ್ಯರ್ಥಿಯಾಗುತ್ತಾರೆ ಎನ್ನುವ ಮೂಲಕ ಅಲ್ಲಿಯ ಆಯ್ಕೆ ಅಷ್ಟು ಸುಲಭವಾಗಿಲ್ಲ ಎಂದು ದಳದ ಮೂಲವೊಂದು ತಿಳಿಸಿದೆ.

50 ವರ್ಷಗಳ ಹಿಂದೆ

ಸೋಮವಾರ, 17-1-1972

• ಅಧ್ಯಕ್ಷ ಸ್ಥಾನಕ್ಕೆ ಅರಸು ರಾಜೀನಾಮೆಗೆ ವಿರೋಧಿಗಳ ಸನ್ನಾಹ

ನವದೆಹಲಿ, ಜ. 16– ಮೈಸೂರು ಪ್ರದೇಶ ಆಡಳಿತ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ. ದೇವರಾಜ ಅರಸು ಮತ್ತು ಇತರ ಅಧಿಕಾರ ವರ್ಗದವರು ಬರಲಿರುವ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿರುವುದರಿಂದ ಇವರುಗಳನ್ನು ಸಂಸ್ಥೆಯ ಅಧಿಕಾರ ಸ್ಥಾನದಿಂದ ತೆಗೆದು ಅವರ ಜಾಗಕ್ಕೆ ಬೇರೆಯವರನ್ನು ನೇಮಕ ಮಾಡುವಂತೆ ನಾಳೆ ಮೈಸೂರು ಪ್ರದೇಶ ಕಾಂಗ್ರೆಸ್ ಚುನಾವಣೆ ಸಮಿತಿ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರನ್ನು ಒತ್ತಾಯಪಡಿಸುವ ಸಂಭವವಿದೆ. ಮಾರ್ಚ್‌ನಲ್ಲಿ ನಡೆಯಲಿರುವ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ ನಿರ್ದೇಶನ ಸೂತ್ರಗಳನ್ನು ಸಲಹೆ ಮಾಡಲು ಇಂದಿರಾ ಗಾಂಧಿಯವರು ನಾಳೆ ಮೈಸೂರು ಪ್ರದೇಶ ಕಾಂಗ್ರೆಸ್ ಚುನಾವಣೆ ಸಮಿತಿ ಸಭೆ ಕರೆದಿದ್ದಾರೆ.

ಕತ್ತಲೆಯೊಳಗೆ ಬೆಳಕು ತೋರಿದ ತಲೆಮಾರಿಗೆ ಕೊನೆ ನಮಸ್ಕಾರ...

ಸತ್ತವರ ನೆರಳಾದರೂ ಕಾಡಲಿ– ಪೊರೆಯಲಿ



ಗತಿಬಿಂಬ

ವೈ.ಗ. ಜಗದೀಶ್

ಮಾತು– ಕೃತಿಗಳಿಂದ ಜನರನ್ನು ಸದಾ ಎಚ್ಚರದಲ್ಲಿಟ್ಟು ಪೊರೆಯುತ್ತಿದ್ದ ಕನ್ನಡ ನಾಡಿನ ತಲೆಮಾರೊಂದು ತನ್ನ ಕಾಯಕದಿಂದ ವಿರಮಿಸಿದೆ. ದಶಕಗಳ ಕಾಲ ಹೀಗೆ ತಮ್ಮ ಮಾತುಗಳಿಂದಲೇ ಕಾಡುತ್ತಿದ್ದ, ಮಲಗಿದಾಗೆಲ್ಲ ಕುಟುಕುತ್ತಿದ್ದ ಪ್ರಜ್ಞಾವಂತರ ಸಮೂಹದ ಪ್ರಮುಖ ಕೊಂಡಿ ಎನ್ನಬಹುದಾದ ಪ್ರೊ. ಚಂದ್ರಶೇಖರ ಪಾಟೀಲರು (ಚಂಪಾ) ಹೋದ ಬಳಿಕ ಒಂದು ರೀತಿಯ ಖಾಲಿತನ ಸುಡಲಾರಂಭಿಸಿದೆ.

'ಆದಿ ಕವಿ ಪಂಪ–ಅಂತ್ಯ ಕವಿ ಚಂಪಾ' ಎಂದು ಸ್ವಯಂ ಘೋಷಿಸಿಕೊಂಡು ಒಂದರ್ಥದಲ್ಲಿ ಹೆಗ್ಗಳಿಕೆಯನ್ನೂ, ಮಗದೊಂದು ಅರ್ಥದಲ್ಲಿ ಸ್ವಯಂ ಗೇಲಿಯನ್ನೂ ಮಾಡಿಕೊಳ್ಳುತ್ತಿದ್ದ ಪಾಟೀಲರು, ಯಾರನ್ನೂ ಬಿಟ್ಟವರಲ್ಲ. ಕಸಾಪ ಚುನಾವಣೆ ವೇಳೆ, ಸಮ್ಮೇಳನದ ಅಧ್ಯಕ್ಷರಾಗಿದ್ದ ವೇಳೆ 'ಪಕ್ಷಪಾತ' ಧೋರಣೆಯನ್ನು ಚಂಪಾ ಅನುಸರಿಸಿದ್ದುಂಟು. ಯಡಿಯೂರಪ್ಪನವರು ಕರ್ನಾಟಕ ಜನತಾ ಪಕ್ಷ ಕಟ್ಟಿದಾಗ ಅವರ ಜತೆಗೂ ಸೇರಿಕೊಂಡಿದ್ದು ಉಂಟು. ಈ ಮಿತಿಗಳಾಚೆಗೂ ಪ್ರಜಾತಂತ್ರವಾದಿಯಾಗಿದ್ದ ಚಂಪಾ, ದೇಶಕ್ಕೆ ಅಪಾಯ ತಂದೊಡ್ಡುವ ಕೋಮುಶಕ್ತಿಗಳ ವಿರುದ್ಧದ ನಿಲುವಿನಲ್ಲಿ ಅಚಲರಾಗಿಯೇ ಇದ್ದರು.

ಕವಿ ಪಂಪನಾದಿಯಾಗಿ ನಾಡು ಕಂಡ ಪ್ರಜ್ಞಾವಂತರೆಲ್ಲರೂ ಸರ್ವಾಧಿಕಾರವನ್ನು ತಮ್ಮ ಧ್ವನಿ, ಕವಿತ್ವ, ಅಕ್ಷರದ ಮೂಲಕವೇ ವಿರೋಧಿಸಿದವರು. ಬಸವಣ್ಣ, ಕುಮಾರವ್ಯಾಸ, ಕುವೆಂಪು, ಬೇಂದ್ರೆಯವರನ್ನು ಸೇರಿಸಿಕೊಂಡಂತೆ ಈ ಮಾತು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಂತರದ ತಲೆಮಾರಿನಲ್ಲಿ ಪಿ.ಲಂಕೇಶ್, ಯು.ಆರ್. ಅನಂತಮೂರ್ತಿ, ಎಂ.ಡಿ.ನಂಜುಂಡಸ್ವಾಮಿ, ಗಿರೀಶ ಕಾರ್ನಾಡ, ಪೂರ್ಣಚಂದ್ರ ತೇಜಸ್ವಿ, ಕೆ.ರಾಮದಾಸ್, ಚಂಪಾ ಈ ಸಾಲಿನಲ್ಲಿ ಮೊದಲಿಗರು. ಇವರಲ್ಲದೆಯೂ ಅನೇಕ ಮಹನೀಯರು ತಮ್ಮ ಬರವಣಿಗೆಗಳ ಮೂಲಕ ನಿಷ್ಠುರ ಸತ್ಯವನ್ನು, ಆಳುವವರ ಕ್ರೌರ್ಯವನ್ನು ತಮ್ಮ ಕೃತಿಗಳಲ್ಲಿ ಹೇಳಿದ್ದಾರೆ. ಆದರೆ, ಏನಾದರೊಂದು ಘಟಿಸಿದಾಗ, ತಕ್ಷಣಕ್ಕೆ ಪ್ರತಿಕ್ರಿಯಿಸಲು ಸಾಧ್ಯವಾಗದೇ ಇರುವವರಿಗೆ ತಮ್ಮದೇ ಹೊಳಹುಗಳ ಮುಖೇನ ಸರಿದಾರಿ ತೋರಿದವರು ಕೆಲವರಷ್ಟೇ. ಇವರೆಲ್ಲರೂ ಪರಸ್ಪರರ ತಪ್ಪುಗಳನ್ನು ಮುಲಾಜಿಲ್ಲದೆ ಟೀಕಿಸುವ ಪರಿಪಾಟವನ್ನೂ ರೂಢಿಸಿಕೊಂಡಿದ್ದರು. ಇವರ ಜಗಳವು ಪ್ರಜಾತಾಂತ್ರಿಕ ಸಂವಾದವೊಂದಕ್ಕೆ, ಅದರ ಮುಖೇನ ಹೊಸ ಮಾರ್ಗವೊಂದರ ಬಾಗಿಲನ್ನು ತೆರೆಯುತ್ತಿತ್ತು.

ಆಂಧ್ರಪ್ರದೇಶದಲ್ಲಿ ಕ್ರಾಂತಿಕಾರಿ ಹೋರಾಟ ಮುಂಚೂಣಿಯಲ್ಲಿದ್ದ ಕಾಲದಲ್ಲಿ ಕವಿ–ಲೇಖಕರು ಜನರ ಜತೆಗೆ ನಿಂತಿದ್ದರು. ಆಗಿನ ಸರ್ಕಾರವು ತೆಲುಗಿನ ಕವಿಗಳ ತಲೆಗೆ (ಹಿಡಿದುಕೊಟ್ಟವರಿಗೆ) ₹ 10 ಲಕ್ಷದವರೆಗೂ ಬಹುಮಾನ ಘೋಷಿಸಿತ್ತು. ಇದನ್ನು ಉಲ್ಲೇಖಿಸಿದ್ದ ತೆಲುಗಿನ ಕ್ರಾಂತಿಕಾರಿ ಕವಿ ವರವರ ರಾವ್, 'ಆಂಧ್ರ ಸರ್ಕಾರ ಕವಿಗಳ ತಲೆಗೆ ದುಡ್ಡು ಕಟ್ಟಿದರೆ, ಕರ್ನಾಟಕ ಸರ್ಕಾರ ಬಹಳ ಬುದ್ಧಿವಂತಿಕೆಯಿಂದ ನಡೆದುಕೊಳ್ಳುತ್ತಿದೆ. ಲೇಖಕರ ತಲೆಗೆ ದುಡ್ಡು ಕಟ್ಟುವ ಬದಲು ಅವರಿಗೆ ನಿಗಮ, ಪ್ರಾಧಿಕಾರ, ವಿಧಾನಪರಿಷತ್ತಿನ ಆಸೆ ತೋರಿಸಿ ಅವರ 'ತಲೆ'ಯನ್ನೇ ಖರೀದಿಸುತ್ತಿದೆ' ಎಂದು ವ್ಯಂಗ್ಯವಾಡಿದ್ದರು. ರಾಜ್ಯವನ್ನು ಆಳಿದ ಎಲ್ಲ ಪಕ್ಷಗಳು ಈ ಅಸ್ತ್ರ ಬಳಸಿದ್ದುಂಟು. ಹಾಗಿದ್ದರೂ, ಜಾತಿ ದೌರ್ಜನ್ಯ, ಕೋಮು ಗಲಭೆ, ಸೌಹಾರ್ದ ಕೇಂದ್ರಗಳನ್ನು ಹಾಳುಗೆಡವಿ ಸಾಮರಸ್ಯವನ್ನೇ ಕೊಲ್ಲುವ ಪರಿಸ್ಥಿತಿಯನ್ನು ಕೋಮುವಾದಿಗಳು ಸೃಷ್ಟಿಸಿದಾಗಲೆಲ್ಲ ಮೇಲೆ ಉಲ್ಲೇಖಿಸಿದ ತಲೆಮಾರಿನವರು ನಿಷ್ಠುರ ಹಾಗೂ ಪ್ರಖರವಾಗಿ ಏರುಧ್ವನಿಯಲ್ಲಿ ಟೀಕಿಸಿ ಜನಪರತೆ ತೋರಿದ್ದರು.

2014ರ ಚುನಾವಣೆ ಹೊಸ್ತಿಲಿನಲ್ಲಿ 'ಮೋದಿ ಪ್ರಧಾನಮಂತ್ರಿಯಾದರೆ ನಾನು ದೇಶದಲ್ಲಿ ಇರ ಬಯಸುವುದಿಲ್ಲ' ಎಂದು ಯು.ಆರ್.ಅನಂತಮೂರ್ತಿ ಅವರು ನೀಡಿದ್ದ ಹೇಳಿಕೆ ವಿವಾದಕ್ಕೆ ಕಾರಣವಾಗಿತ್ತು. ಅವರ ಹೇಳಿಕೆಯನ್ನು ಬೀದಿಗೆ ತಂದು ನಿಲ್ಲಿಸಿದವರಿಗೆ ಮೂರ್ತಿಯವರ ಹೇಳಿಕೆಯ ಧ್ವನ್ಯಾರ್ಥವೇ ಗೊತ್ತಾಗದೆ ವಾಚ್ಯಾರ್ಥವೇ ಪ್ರಮುಖವಾಗಿ ಬಿಟ್ಟಿತ್ತು. ಆದರೆ, ಇಂದಿನ ದಿನಗಳಲ್ಲಿ ಬಡವರು, ಕೂಲಿಕಾರರು, ಮಧ್ಯಮ ವರ್ಗದ ಜನರು ಪಡುತ್ತಿರುವ ಪಾಡನ್ನು ನೋಡಿದರೆ ಅನಂತಮೂರ್ತಿಯವರು ಹೇಳಿದ ಮಾತು ಇವತ್ತು ಬಿಜೆಪಿಯವರಿಗೂ ಅಪಥ್ಯವೆನಿಸಲಾರದು.

ಈಗಿನ ಪರಿಸ್ಥಿತಿ ಮತ್ತಷ್ಟು ವಿಕೋಪಕ್ಕೆ ಹೋಗುತ್ತಿದೆ. ಒಂದೆಡೆ ನಮ್ಮೆಲ್ಲರ ಬದುಕಿನ ಆದರ್ಶ ಮಾರ್ಗಸೂಚಿಯಾಗಿ ಯಾವತ್ತೂ ಉಳಿಯಲೇಬೇಕಾದ ಸಂವಿಧಾನವನ್ನೇ ಬದಲಿಸಿ, ಪ್ರಜಾತಂತ್ರದ ಸಮಾಧಿ ಕಟ್ಟುವ ಹುನ್ನಾರಗಳು ನಡೆಯುತ್ತಿವೆ. ಸಹಿಷ್ಣುತೆ, ಶಾಂತಿ, ಸೌಹಾರ್ದದ ಪಾಠ ಹೇಳಬೇಕಾದ ಧರ್ಮ ಸಂಸತ್‌ಗಳು ಅಧರ್ಮದ ವರ್ತನೆಗೆ ಜನರನ್ನು ಪ್ರೇರೇಪಿಸುವ ಕೊಳ್ಳಿದೇವಗಳ ಆವಾಸಗಳಾಗುತ್ತಿವೆ. ಸರ್ವಾಧಿಕಾರದ ಕಡೆಗಿನ ಹೆಜ್ಜೆಯ ಸಪ್ಪಳ ಅಬ್ಬರದತ್ತ ಸಾಗುತ್ತಿದೆ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಪ್ರಥಮ ದರ್ಜೆ ಕಾಲೇಜೊಂದರಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಬ್ (ತಲೆಗವಸು) ಹಾಕಿಕೊಳ್ಳುವುದಕ್ಕೆ ನಿರ್ಬಂಧಿಸಬೇಕೆಂದು ತಗಾದೆ ತೆಗೆದ ಒಂದು ಗುಂಪು, ತಾವೂ ಕೇಸರಿ ಶಲ್ಯ ಹಾಕಿಕೊಂಡು ಬರುತ್ತೇವೆ ಎಂದು ಪಟ್ಟು ಹಿಡಿಯಿತು. ಕರಾವಳಿಗೆ ಸೀಮಿತವಾಗಿದ್ದ ಇಂತಹ ಘಟನೆ ಈಗ ಬೇರೆಡೆಗೂ ಹಬ್ಬುತ್ತಿದೆ. ಆರ್‌ಎಸ್‌ಎಸ್‌ನ ಸರಸಂಘ ಚಾಲಕ ಮೋಹನ್ ಭಾಗವತ್ ಅವರು ಮೊನ್ನೆ ಕಲಬುರಗಿಯ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದರು. ಆರ್‌ಎಸ್‌ಎಸ್‌ನ 'ಗಣವೇಷ' ಹಾಕಿಕೊಂಡು ಬಂದರಷ್ಟೇ ಒಳ ಪ್ರವೇಶಿಸಲು ಅವಕಾಶ ಎಂದು ಪತ್ರಕರ್ತರನ್ನು ನಿರ್ಬಂಧಿಸಲಾಯಿತು. ಸಂಘದ ಸಿದ್ಧಾಂತ, ವೇಷವನ್ನು ಒಪ್ಪದವರು ಕಾರ್ಯಕ್ರಮಕ್ಕೆ ಬೇಡ ಎನ್ನುವವರು ಮುಂದೆ ಯಾವ ರೀತಿ ನಡೆದುಕೊಳ್ಳಬಲ್ಲರು? ಹೀಗೆ ಹೇಳುವಾಗ, 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂದು ಕರೆ ಕೊಟ್ಟ ಕುವೆಂಪು ನೆನಪಾಗುತ್ತಾರೆ.

'ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ. ಮತಿಯೇ ಕತ್ತಲಲ್ಲಿ ದಾರಿ ತೋರುವ ರತ್ನದ ಕೈದೀವಿಗೆ. ಮತಿಯ ದೆಸೆಯಿಂದಲೇ, ಪ್ರಾಣಿಮಾತ್ರವಾಗುತ್ತಿದ್ದ ನರಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ... ಸ್ವಲ್ಪವಾಗಿಯೋ ಹೆಚ್ಚಾಗಿಯೋ ಮತಿ ಮನುಷ್ಯರೆಲ್ಲರಲ್ಲಿಯೂ ಇರುತ್ತದೆ. ಆದರೆ, ಮೌಢ್ಯದಿಂದಲೂ ಮತಾಚಾರಗಳಿಂದಲೂ ಸಮಾಜ ಭೀತಿಯಿಂದಲೂ... ಮತಿ ಈಗ ಸತ್ವರಹಿತವಾಗಿದೆ. ಮತಿಗೆ ಅಂಕುಶಗಳು ಅತಿಯಾಗಿ ಜೀವವೆ ನಿಸ್ತೇಜವಾಗಿದೆ. ಮತ ನಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಏಳ್ಗೆಯ ಕುತ್ತಿಗೆಗೆ ಉರುಳಾಗಿದೆ... ಈಗ ಅದು ಸಾಮಾಜಿಕವಾದ ಕಟ್ಟುಕಟ್ಟಲೆಗಳ ಕಾಡಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು; ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು; ನಾಮ ಹಾಕಿಕೊಳ್ಳುವುದು; ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಕೆಲವರನ್ನು ಸಾರ್ವಜನಿಕವಾದ ಬಾವಿ, ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು; ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು; ಕೆಲಸಕ್ಕೆ ಬಾರದ ನೂರಾರು ಆಚಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿದೆ... ಯುವಕರಾದವರು ಎಚ್ಚೆತ್ತುಕೊಂಡು ದೀರ್ಘದೃಷ್ಟಿ ಹಾಗೂ ವಿಶಾಲ ಹೃದಯದಿಂದ ಚಿರನವೀನವಾದ 'ದರ್ಶನ'ವನ್ನು ಪಡೆದು ತಮ್ಮನ್ನೂ ದೇಶವನ್ನೂ ಉದ್ಧಾರ ಮಾಡಿಕೊಳ್ಳಬೇಕಾಗಿದೆ...' ಎಂದು ಕುವೆಂಪು ಹೇಳುತ್ತಾರೆ. ಅದರ ಫಲವೇ, ಒಂದೆರಡು ತಲೆಮಾರು ಅಂತಹ ದರ್ಶನಗಳನ್ನು ನಮ್ಮೆದುರು ಕೊಟ್ಟಿತ್ತು.

ಈಗ ಹೀಗೆಲ್ಲ ಮಾತನಾಡಿದರೆ ದೇಶದ್ರೋಹದ ಪಟ್ಟ ಕಟ್ಟಿ ಸಮಾಜದಿಂದ ಒಂದರ್ಥದಲ್ಲಿ ಬಹಿಷ್ಕರಿಸುವ ಕೆಲಸ ಶುರುವಾಗುತ್ತದೆ. ಇಂದಿನ ದಿನಮಾನಗಳು ಇಂದಿರಾ ಗಾಂಧಿ ಹೇರಿದ್ದ ತುರ್ತು ಪರಿಸ್ಥಿತಿಯನ್ನು ನೆನಪಿಸುತ್ತಿವೆ. ಪ್ರೊ. ಚಂಪಾ ನಿಧನರಾದ ದಿನ, ಅವರು ತುರ್ತುಪರಿಸ್ಥಿತಿ ಕಾಲದಲ್ಲಿ ಬರೆದ ಕವನವನ್ನು ಉಲ್ಲೇಖಿಸಿ, ಸಂಸ್ಕೃತಿ ಚಿಂತಕ ರಹಮತ್ ತರೀಕೆರೆ ತಮ್ಮ ಫೇಸ್‌ಬುಕ್ ಪುಟದಲ್ಲಿ ನಮನ ಸಲ್ಲಿಸಿದ್ದರು. 'ಒಂದಾನೊಂದು ಕಾಲಕ್ಕೆ' ಎಂಬ ಶೀರ್ಷಿಕೆಯ ಕವನ ಹೀಗಿದೆ...

ಒಂದಾನೊಂದು ಕಾಲಕ್ಕೆ, ಗೆಳೆಯರೆ
ಈ ಬಾನಿಗೆ ಅಂಚೆಂಬುದು ಇರಲಿಲ್ಲ.
ಈ ನೆಲಕ್ಕೆ ಗಡಿಯೆಂಬುದು ಇರಲಿಲ್ಲ.
ನೀವು ಕೂಗಿದ್ದೇ ಆಗ ಕಾವ್ಯವಾಗಿತ್ತು.
ಕೇಳುವವರಿರಲಿಲ್ಲ
ನೀವು ಹಿಡಿದದ್ದೇ ಆಗ ಹಾದಿಯಾಗಿತ್ತು
ತುಳಿಯುವವರಿರಲಿಲ್ಲ
ನಿಮ್ಮ ಬಾಯಿಗೆ ಈಗ ಬಟ್ಟೆ ತುರುಕಿದ್ದಾರೆ.
ನಿಮ್ಮ ಕಾಲಿಗೆ ಈಗ ಬೇಡಿ ಬಿಗಿದಿದ್ದಾರೆ
ನೀವೀಗ ಸ್ವಲ್ಪ ಝಾಡಿಸಿದರೆ ಕಾಲು,
ಬೇಡಿ ಹರಿಯಲಿಕ್ಕಿಲ್ಲ; ಆದರೆ
ಬಾನಲ್ಲಿ ಹಾಲುಹಾದಿ ಮೂಡುತ್ತದೆ.
ಮೌನ ಮುರಿಯಲು ಸ್ವಲ್ಪ ಹೆಣಗಿದರೆ ನೀವು
ಶಬ್ದ ಹೊರಡಲಿಕ್ಕಿಲ್ಲ; ಆದರೆ
ನೆಲವೇ ಎದೆ ಬಿರಿದು ಹಾಡುತ್ತದೆ.



ಚುರುಮುರಿ



ಬೆಕ್ಕಣ್ಣನ ಪಾದಯಾತ್ರೆ

• ಸುಮಂಗಲಾ

'ಆನ್‌ಲೈನಿನಾಗೆ ಗಣವೇಷ ಸಿಕ್ಕರೆ ಆರ್ಡರು ಮಾಡು' ಎಂದು ಬೆಕ್ಕಣ್ಣ ಹೇಳಿದಾಗ ಗಾಬರಿಬಿದ್ದೆ.

'ಕಲಬುರಗಿವಳಗ ಕಮಲಕ್ಕನ ಮೂಲಮನಿಯವರು ಅದೇನೋ ಶಾಖಾ ಕಾರ್ಯಕ್ರಮ ಮಾಡಿದರಂತ. ವರದಿ ಮಾಡಾಕೆ ಹೋದ ಪೇಪರಿನವ್ರಿಗೆ ಗಣವೇಷ ಹಾಕ್ಕಂಡರಷ್ಟೇ ವಳಗ ಬಿಡತೀವಿ ಅಂದ್ರಂತ. ಅವ್ರು ಇಲ್ಲೇನಾರ ಸಭೆ ನಡೆಸಿದ್ರ, ನಾ ವರದಿ ಮಾಡಾಕೆ ಹೋಗೂಮುಂದ ಬೇಕಾಗತೈತಿ' ಎಂದಿತು.

'ಮಂಗ್ಯಾನಂಥವನೇ... ನಿನ್ನ ಎದಕ್ಕ ಕರೀತಾರ' ಎಂದು ಬೈದೆ.

'ಕ್ಷಣ ಚಿತ್ತ, ಕ್ಷಣ ಪಿತ್ತ' ಎಂಬಂತಿರುವ ಬೆಕ್ಕಣ್ಣ ಮರುಕ್ಷಣದಲ್ಲಿ 'ನಾ ರಾಮನಗರದಿಂದ ಡಿಕೇಶಣ್ಣನ ಪಾದಯಾತ್ರೆಗೆ ಸೇರೂಣು ಅಂದ್ಕಂಡಿದ್ದೆ, ಅಷ್ಟರಾಗೆ ನಿಲ್ಲಿಸಿಬಿಟ್ಟರು' ಎಂದು ಬೇಜಾರಿನಿಂದ ಹೇಳಿತು.

'ಮುಗಿದಮ್ಯಾಗೆ ಹೇಳತೀಯಲ್ಲ... ಮೊದಲೇ ಹ್ವಾಗಬೇಕಿತ್ತು' ಎಂದು ಮೊಟಕಿದೆ. 'ಕಮಲಕ್ಕನ ಮನಿಯವರೇ ಮೇಕೆದಾಟು ದಾಟಾಕೆ ಆಗದಂಗೆ ಮಾಡ್ಯಾರೆ. ಅವರೇ ಎಲ್ಲಾದಕ್ಕ ಅಡ್ಡಗಾಲು ಅಂತ ಕೈಮಂದಿ ಪೇಪರಿನಾಗೆ ಬರದ್ರು. ಅದೆಲ್ಲ ಸುಳ್ಳು, ನಾವೇ ಯೋಜನೆ ಮುಂದುವರೆಸೀವಿ, ತಾವು ಕುರ್ಚಿವಳಗ ಕುತ್ತಾಗ ಏನೂ ಮಾಡಿಲ್ಲ, ಈಗ ಜನರ ಕಣ್ಣಾಗೆ ಮಂಕುಬೂದಿ ಹಾಕಾಕೆ ಪಾದಯಾತ್ರೆ ನಡೆಸ್ಯಾರಂತ ಕಮಲಕ್ಕನ ಮನಿಯವರು ಇಷ್ಟುದ್ದ ಉತ್ತರ ಕೊಟ್ಟರು. ನಾ ಹೋಗೂ ಮದ್ಲು ಅದ್ರ ಬಗ್ಗೆ ತಿಳಕೋಬೇಕಂತ ಓದತಿದ್ದೆ...' ಬೆಕ್ಕಣ್ಣ ರಾಗವೆಳೆಯಿತು.

'ಕಾರ್ಖಾನೆಗಳ ತ್ಯಾಜ್ಯ, ಚರಂಡಿ ನೀರು, ಹತ್ತಾರು ರಾಸಾಯನಿಕಗಳೆಲ್ಲ ಸೇರಿ ಕಾವೇರಮ್ಮ ಬಸವಳಿದಾಳ, ಅರಣ್ಯ ನಾಶ ಆಗತೈತಿ, ಮೇಕೆದಾಟು ಬ್ಯಾಡಂತ ಪರಿಸರ ತಜ್ಞರು ಹೇಳ್ಯಾರ, ಮತ್ತ ಅದನ್ನ ಓದಲಿಲ್ಲೇನು?'

'ಪರಿಸರ ತಜ್ಞರಿಗೆ ಸರ್ಕಾರ ಉತ್ತರ ಕೊಡತೈತಿ, ನಾವು ಶ್ರೀಸಾಮಾನ್ಯರು ಎದಕ್ಕ ಓದೂಣೂ' ಅಸಡ್ಡೆಯಿಂದ ಹೇಳಿದ ಬೆಕ್ಕಣ್ಣ ಮರುಕ್ಷಣವೇ 'ನಾ ಜಾರ್ಕಂಡದ ಜಮ್ತಾರಕ್ಕೆ ಹೋಕ್ಕೀನಿ. ಅಲ್ಲಿ ರಸ್ತೆಗಳನ್ನ ಕಂಗನಾಳ ಕೆನ್ನೆ ಹಂಗ ಮಾಡತೀನಂತ ಶಾಸಕರು ಹೇಳ್ಯಾರ. ನುಣುಪು ಕೆನ್ನೆಯಂತಹ ರಸ್ತೆಗಳೆರೋದು ಕ್ಯಾಟ್‌ವಾಕ್ ಮಾಡಕೆ ಅಲ್ಲೇನು... ಪಾದಯಾತ್ರೆ ಅಲ್ಲೇ ಮಾಡತೀನಿ' ಎಂದು ಖೊಳ್ಳನೆ ನಕ್ಕಿತು!

ಚರ್ಚೆ

ಧಾರ್ಮಿಕ ಪರಿಭಾಷೆ ಮತ್ತು ನುಡಿಗಟ್ಟು

ಕೊಲ್ಲುವಂತೆ ಹೇಳುವುದು ಧರ್ಮವೇ? ಕೊಲ್ಲಿ ಎನ್ನುವವರು ಸಾಧು ಸಂತರೇ?

• ಡಿ.ಎಸ್.ನಾಗಭೂಷಣ

ಕಳೆದ ತಿಂಗಳ ಕೊನೆಯ ವಾರದಲ್ಲಿ, ಹಿಂದೂಗಳಿಗೆ ಪವಿತ್ರವೆನಿಸಿರುವ ಗಂಗಾ ನದಿಯ ತಟದ ಹರಿದ್ವಾರದಲ್ಲಿ 'ಧರ್ಮ ಸಂಸತ್' ಎಂಬ ಕಾರ್ಯಕ್ರಮ ನಡೆಯಿತು. ಅಲ್ಲಿ ವೇದಿಕೆಯಲ್ಲಿ 'ಸಾಧು-ಸಂತ'ರೆಂದು ಕರೆಯಲ್ಪಟ್ಟ ಹಲವು ಜನ ಹಾಜರಿದ್ದು, ಹಿಂದೂಗಳು ಶಸ್ತ್ರಧಾರಿಗಳಾಗಿ ಹಿಂದೂಯೇತರರ ಹತ್ಯೆಯ ಮೂಲಕ 'ಮತಶುದ್ಧಿ' ಮಾಡಿ ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಮುಂದಾಗಬೇಕೆಂದು ಅವರು ಬಹಿರಂಗ ಕರೆ ನೀಡಿದರು. ದೇಶದಲ್ಲಿ ಹಿಂದೆಂದೂ ಇಷ್ಟು ನಿರ್ಭೀತವಾಗಿ ನೀಡಲಾಗಿರದಿದ್ದ ಸಾಮೂಹಿಕ ಹತ್ಯೆಯ ಕರೆಯಿದು. ಇದಕ್ಕೆ ಸಂಬಂಧಿಸಿದಂತೆ ಪ್ರಸಕ್ತ ಸರ್ಕಾರ ಸಂವಿಧಾನವನ್ನು ರಕ್ಷಿಸಬೇಕಾದ ತನ್ನ ಕರ್ತವ್ಯದಿಂದ ಹೇಗೆ ವಿಮುಖವಾಗಿದೆ ಎಂಬುದನ್ನು ಎ.ನಾರಾಯಣ ತಮ್ಮ ಲೇಖನದಲ್ಲಿ (ಪ್ರ.ವಾ., ಜ. 14) ವಿವರವಾಗಿ ಬರೆದಿದ್ದಾರೆ.


ಆದರೆ ಪ್ರಸ್ತುತ ವಿಷಯ ಸಂವಿಧಾನ ಪಾಲನೆಯ 'ತಾಂತ್ರಿಕ' ಆಯಾಮದೊಂದಿಗೇ ಅದರ ಹೃದಯ ಭಾಗಕ್ಕೆ ತಾಗಿದಂತಿರುವ ಇನ್ನೊಂದು ಬಹುಮುಖ್ಯ ಆಯಾಮವನ್ನೂ ಹೊಂದಿದೆ ಎಂಬುದನ್ನು ನಾವು ಗಮನಿಸಬೇಕು. ಅದು, ಯಾವುದನ್ನು ಧರ್ಮ ಎಂದು ಮತ್ತು ಸಾಧು ಸಂತರು ಎಂದರೆ ಯಾರು ಎಂಬುದನ್ನು ಮರೆತಂತಿರುವುದು. ನಾವು ಹಿಂದೂ ಧರ್ಮದ ಬಗ್ಗೆ ಹೆಮ್ಮೆಪಡುತ್ತೇವೆ. ಆದರೆ ನಾವು ಹೆಮ್ಮೆಪಡುವ ಈ ಧರ್ಮ ಇನ್ನೊಬ್ಬರನ್ನು ಕೊಲ್ಲಲು ಹೇಳುತ್ತದೆಯೇ? ಕೊಲ್ಲಲು ಹೇಳುವವರನ್ನು ಈ ಧರ್ಮ ಸಾಧು ಸಂತರು ಎಂದು ಕರೆದಿದೆಯೇ?

ಕೆಲವರು ಹೇಳಬಹುದು, ಪುರಾಣಗಳಲ್ಲಿ ನಮ್ಮ ದೇವರುಗಳು ದುಷ್ಟರನ್ನು ಕೊಂದಿಲ್ಲವೇ? ಅವನ್ನೆಲ್ಲ ನಾವು ಹಬ್ಬಗಳಾಗಿ ಆಚರಿಸುವುದಿಲ್ಲವೇ? ನಮ್ಮ ಭಗವದ್ಗೀತೆಯೇ ಯುದ್ಧವನ್ನು ಸಮರ್ಥಿಸಿ, ಪ್ರೋತ್ಸಾಹಿಸುವುದಿಲ್ಲವೇ ಎಂದು. ಈ ಪ್ರಶ್ನೆಗಳನ್ನು ಸ್ವಾತಂತ್ರ್ಯ ಹೋರಾಟದ ಕಾಲದಲ್ಲೂ ಹಲವರು ಕೇಳಿದರು; ಕೆಲವರು ಅನುಷ್ಠಾನಕ್ಕೂ ತಂದರು. ಅದು ಮುಗ್ಧರ ರಕ್ತ ಚೆಲ್ಲಿ ಪರಿಸ್ಥಿತಿಯನ್ನು ಬಿಗಡಾಯಿಸಿತೇ ವಿನಾ ಉದ್ದೇಶ ಈಡೇರಲಿಲ್ಲ. ಇದಕ್ಕೆ ಕಾರಣ, ಪುರಾಣವು ಇತಿಹಾಸವಲ್ಲ; ವರ್ತಮಾನವಂತೂ ಅಲ್ಲ.

ಇನ್ನು ಮನುಷ್ಯರು ದೇವರುಗಳಲ್ಲ, ಹಾಗೆಂದು ಭಾವಿಸಿದವರೇ ಈ ಪುರಾಣಗಳಲ್ಲಿ 'ದುಷ್ಟ'ರೆಂದು ಕರೆಯಲ್ಪಟ್ಟು ಹತರಾದವರು. ಅದೇನೇ ಇರಲಿ, ಪುರಾಣಗಳ ಹಿಂದಿನ ಉದ್ದೇಶ ಮತ್ತು ಕಲ್ಪನಾಶೀಲತೆಯನ್ನು ರೂಪಿಸಿದ ಶಕ್ತಿಗಳೇ ಬೇರೆ. ಮುಖ್ಯ ಎಂದರೆ ಇವೆಲ್ಲ ಮನುಷ್ಯನ 'ರಚನೆ'ಗಳು. ಹಾಗಾಗಿಯೇ ಪುರಾಣವು ಧರ್ಮದ ಭಾಗವಾಗಿದೆಯೇ ವಿನಾ ಅದೇ ಧರ್ಮವೆನಿಸಿಕೊಂಡಿಲ್ಲ. ಜೊತೆಗೆ ನಮ್ಮ ಧರ್ಮ ಸನಾತನವೆನಿಸಿಕೊಂಡು ಆದಿ ಮಾತ್ರವಲ್ಲದೆ ಅಂತ್ಯವನ್ನೂ ನಿರಾಕರಿಸಿ ಬೆಳೆದಿದೆ. ಸದಾ ವಿಕಾಸವನ್ನು ಹೊಂದುತ್ತಿದೆ.

ಆಧುನಿಕತೆಯ ಪರಿಣಾಮವಾಗಿ ಹೆಚ್ಚೆಚ್ಚು ಜನರು ತಮ್ಮನ್ನು ಧರ್ಮಾತೀತರೆಂದು ಘೋಷಿಸಿಕೊಂಡು ಹೆಮ್ಮೆಪಡುತ್ತಿದ್ದಾಗ, ಅವರ ಮಧ್ಯೆ ಇದ್ದೂ ತಮ್ಮನ್ನು 'ಸನಾತನ ಹಿಂದೂ' ಎಂದು ಕರೆದುಕೊಳ್ಳಲು ಹಿಂಜರಿಯದ ಗಾಂಧೀಜಿ ಹೇಳಿದ ಒಂದು ಬಹುಮುಖ್ಯ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಅದೆಂದರೆ, ನಮ್ಮ ಧರ್ಮವು ಇತರ ಧರ್ಮಗಳಂತೆ ಶಾಸ್ತ್ರ ಗ್ರಂಥಗಳ ಧರ್ಮವಲ್ಲ. ಅದು ಋಷಿ ಮುನಿಗಳ, ಸಾಧು ಸಂತರ ಧರ್ಮ. ನಮ್ಮ ಧರ್ಮಕ್ಕೆ ಆಧಾರವಾಗಿವೆಯೆಂದು ಹೇಳಲಾಗುವ ವೇದೋಪನಿಷತ್ತು-ಪುರಾಣಗಳೂ ಸೇರಿದಂತೆ ಧರ್ಮ ಗ್ರಂಥಗಳೆಲ್ಲವೂ ಒಟ್ಟಿಗೇ ರೂಪುಗೊಂಡಂಥವಲ್ಲ. ಕಾಲಾನುಕಾಲಕ್ಕೆ ಒಂದಾದರ ಮೇಲೆ ಒಂದರಂತೆ- ನಂತರ ಬಂದುದು ಆ ಮೊದಲು ಬಂದುದನ್ನು ಪುನರ್‌ವ್ಯಾಖ್ಯಾನಿಸುತ್ತಾ ತಿದ್ದುತ್ತಾ ರೂಪಾಂತರಗೊಳಿಸುತ್ತಾ- ಬಂದಂಥವು.

ಇಲ್ಲದಿದ್ದರೆ ವೇದಗಳ ನಂತರ ವೇದಾಂತವೆಂಬುದು ಅಥವಾ ಉಪನಿಷತ್ತುಗಳು ಏಕೆ ಬರಬೇಕಿತ್ತು? ಅದ್ವೈತವೇಕೆ ಪ್ರಶ್ನಿತವಾಗಿ ನಾಲ್ಕಾರು ಆವೃತ್ತಿಗಳಾಗಿ ಬೆಳೆಯಬೇಕಿತ್ತು? ಬುದ್ಧ, ಮಹಾವೀರ, ನಾನಕರೂ ಮೂಡಿದ್ದು ಈ ನೆಲೆಯಲ್ಲಿಯೇ. ಇವೆಲ್ಲವೂ ನಂತರ ಜನಜೀವನದಲ್ಲಿ ಇಂಗುತ್ತಾ ದೇಶ ತಿರುಗುತ್ತಿದ್ದ ಸಾಧು ಸಂತರ ವಾಣಿಗಳ ಮೂಲಕ ಸಮಕಾಲೀನಗೊಳ್ಳುತ್ತ ಜನರ ಮಧ್ಯೆ ಧರ್ಮವೆನಿಸಿಕೊಳ್ಳುತ್ತಿದ್ದವು. ಹಾಗಾಗಿಯೇ ಬಲ್ಲವರು ಹಿಂದೂ ಧರ್ಮವನ್ನು ಒಂದು ಜೀವನರೀತಿ (a way of life) ಎಂದು ವರ್ಣಿಸುವರು. ಇನ್ನು ಕೆಲವರು ಹಲವು ಸಂಪ್ರದಾಯಗಳ ಒಕ್ಕೂಟ ಎನ್ನುವರು. ಆದರೆ ಇವರಾರೂ, ಇವರ ಯಾವ ಸಂಪ್ರದಾಯವೂ ಇನ್ನೊಬ್ಬರನ್ನು ಕೊಲ್ಲುವ ಮಾತಾಡಲಿಲ್ಲ. ಬದಲಿಗೆ ಗೆಲ್ಲುವ, ಸಹಬಾಳ್ವೆಯ ವಿದ್ಯೆ ಬೋಧಿಸಿದವು. ಇದರ ಮುಂದುವರಿಕೆಯಾಗಿಯೇ ನಮ್ಮ ಕಾಲದಲ್ಲಿ ಕಟ್ಟಾ ವೈಷ್ಣವರಾಗಿ ಬೆಳೆದರೂ ಕ್ರಿಸ್ತನಿಗೆ ಒಲಿದ, ಮಹಮ್ಮದರೊಡನೆ ಒಡನಾಡಿದ ಗಾಂಧಿ ಮೂಡಿದ್ದು, ಮಹಾತ್ಮರೆನಿಸಿದ್ದು.



ಇತಿಹಾಸವನ್ನು ವರ್ತಮಾನದ ಶಾಂತಿ-ನೆಮ್ಮದಿಗಳನ್ನು ಹೆಚ್ಚಿಸುವಂತೆ ವ್ಯಾಖ್ಯಾನಿಸುವುದು ಧರ್ಮವೆನಿಸಿಕೊಳ್ಳುತ್ತದೆಯೇ ವಿನಾ, ಹಳೆಯ ಹುಣ್ಣುಗಳನ್ನು ಮತ್ತೆ ತೆರೆಯ ಹೊರಡುವುದು ದುಷ್ಟ ರಾಜಕಾರಣ ಮಾತ್ರವೆನಿಸುತ್ತದೆ. ಒಳ್ಳೆಯದಕ್ಕೋ, ಕೆಟ್ಟದ್ದಕ್ಕೋ ರಾಜಕಾರಣ ಮಾಡುವವರು ಮಾಡಲಿ. ಆದರೆ ಅದನ್ನು ಧರ್ಮದ ಹೆಸರಲ್ಲಿ ಮಾಡುವುದು ಧರ್ಮಕ್ಕೆ ಮಾಡುವ ಅಪಚಾರ. ಅಂತಹ ಅಪಚಾರ ಮಾಡುವವರನ್ನು ಸಾಧು ಸಂತರೆಂದು ಕರೆಯುವುದು ನಮ್ಮ ಸಾಧು ಸಂತರ ಪರಂಪರೆಗೆ ಮಾಡುವ ಅಪಚಾರ. ಇದು ನಮ್ಮ ಧಾರ್ಮಿಕ ಪರಿಭಾಷೆಯನ್ನೇ, ನುಡಿಗಟ್ಟನ್ನೇ ತಲೆಕೆಳಗು ಮಾಡಿದರೂ ಗೊತ್ತಾಗದಷ್ಟು ಅಸೂಕ್ಷ್ಮರಾಗುವಂತಹ ಮಾಯಾ ರಾಜಕಾರಣ, ಇದಕ್ಕೆ ನಾವು ಮರುಳಾಗಿರುವುದೇ ನಮ್ಮ ಇಂದಿನ ದುರಂತವಾಗಿದೆ.

ನಾವು ಯಾವುದನ್ನಾದರೂ ದ್ವೇಷಿಸುತ್ತಾ ದ್ವೇಷಿಸುತ್ತಾ ನಾವೂ ಅದೇ ಆಗಿಬಿಡುತ್ತೇವಂತೆ. ನಾವೇ ನಮ್ಮ ಶತ್ರುಗಳಾಗಿ ಮಾರ್ಪಡುವ ಮಾಯಾಜಾಲಕ್ಕೆ ಇಂದು ಬಲಿಯಾದಂತಿದೆ.

ವಾಚಕರ ವಾಣಿ

ದ್ವಿಚಕ್ರ ವಾಹನ ಸವಾರರ ಹಿತ ಕಾಯಬೇಕಿದೆ

ದ್ವಿಚಕ್ರ ವಾಹನ ಸವಾರರಿಗೆ ಹೆಚ್ಚು ಆತಂಕ ತಂದೊಡ್ಡುವುದು ದೊಡ್ಡ ದೊಡ್ಡ ವಾಹನಗಳ, ಅದರಲ್ಲೂ ಟಿಪ್ಪರ್ ಲಾರಿಗಳ ಹಾವಳಿ. ಇದಕ್ಕೆ ಉದಾಹರಣೆ, ಇತ್ತೀಚೆಗೆ ಅಪಘಾತದಲ್ಲಿ ಮೃತಪಟ್ಟ ರಿಯಾಲಿಟಿ ಷೋ ಸ್ಪರ್ಧಿ, ಪುಟಾಣಿ ಸಮನ್ವಿ. ಸರ್ಕಾರ ಇನ್ನು ಮುಂದೆ ಇಂತಹ ದೊಡ್ಡ ವಾಹನಗಳಿಗೆ ಪ್ರತ್ಯೇಕ ದಾರಿಯ ವ್ಯವಸ್ಥೆ ಮಾಡಿದಲ್ಲಿ ದ್ವಿಚಕ್ರ ವಾಹನ ಸವಾರರು ನಿರಾತಂಕವಾಗಿ ವಾಹನ ಚಲಾಯಿಸಬಹುದು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಸಾರಿಗೆ ನೌಕರರಿಗೆ ಪೂರ್ತಿ ವೇತನ ನೀಡಿ

ಕೊರೊನಾ ಸಾಂಕ್ರಾಮಿಕದ ಕಾರಣದಿಂದ ರಾಜ್ಯ ಸಾರಿಗೆ ನಿಗಮಗಳ ನೌಕರರು ಕಳೆದ ಹಲವಾರು ತಿಂಗಳುಗಳಿಂದ ಅರ್ಧ ವೇತನದ ಶಿಕ್ಷೆ ಅನುಭವಿಸುತ್ತಿದ್ದಾರೆ. ಯಾರಿಗೂ ಇಲ್ಲದ ಅರ್ಧ ವೇತನವು ಸಾರಿಗೆ ನೌಕರರಿಗೆ ಮಾತ್ರ ಏಕೆ? ಇದಕ್ಕೆ ಸಂಸ್ಥೆ ನಷ್ಟದಲ್ಲಿದೆ ಎಂಬ ಕಾರಣವನ್ನು ಸರ್ಕಾರ ಕೊಡುತ್ತದೆ. ಉಚಿತ ಪ್ರಯಾಣದ ಯೋಜನೆಗಳ ಹಣವನ್ನು ಸರ್ಕಾರ ಮುಂಗಡವಾಗಿ ಸಂಸ್ಥೆಗೆ ಬಿಡುಗಡೆ ಮಾಡಿದರೆ ಸಂಸ್ಥೆ ನಷ್ಟ ಅನುಭವಿಸುವ ಪ್ರಮೇಯ ಬರುವುದಿಲ್ಲ. ವೇತನ ಪರಿಷ್ಕರಣೆ ಸೇರಿದಂತೆ ನೌಕರರ ಹಲವಾರು ಬೇಡಿಕೆಗಳು ಹಾಗೇ ಇವೆ. ಮಾರುಕಟ್ಟೆಯಲ್ಲಿ ದರಗಳು ಗಗನಕ್ಕೆ ಏರಿರುವುದರಿಂದ ಸಂಸ್ಥೆಯು ನೌಕರರಿಗೆ ಪೂರ್ತಿ ವೇತನವನ್ನು ಕೊಡಲು ಕ್ರಮ ಕೈಗೊಳ್ಳಬೇಕು. ಹಗಲಿರುಳು ದುಡಿಯುತ್ತಿರುವ ನೌಕರರ ಹಿತ ಕಾಯಲು ಬದ್ಧವಾಗಬೇಕು.

ಶೇಖರಾಜ ರಾಮಪ್ಪ ಧುತ್ತರಗಿ, ಸೂಳೇಭಾವಿ

ಜನತಂತ್ರದ ಆಶಯಕ್ಕೆ ಹಿಡಿದ ಕನ್ನಡಿ

ಭಾರತೀಯ ಮೂಲದ ಬ್ರಿಟನ್ ರಾಜಕಾರಣಿ ರಿಷಿ ಸುನಕ್ ಅವರು ಬ್ರಿಟನ್ ಪ್ರಧಾನಿಯಾಗುವ ಸಂಭವ ಇರುವ ಸುದ್ದಿ (ಪ್ರ.ವಾ., ಜ. 15) ಭಾರತೀಯರಿಗೆ ಹೆಮ್ಮೆಯ ವಿಚಾರ. ಕುತೂಹಲಕರ ಸಂಗತಿಯೆಂದರೆ, ಸದ್ಯ ಆ ದೇಶದ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಕೋವಿಡ್ ನಿಯಮಗಳನ್ನು ಮೀರಿ ಔತಣಕೂಟದಲ್ಲಿ ಭಾಗವಹಿಸಿದ್ದನ್ನು ಪ್ರಶ್ನಿಸಿ ರಾಜೀನಾಮೆಗೆ ಒತ್ತಾಯ ಕೇಳಿಬಂದಿರುವುದು. ಮತ್ತೊಂದು ಕುತೂಹಲದ ಅಂಶವೆಂದರೆ, ಈ ಘಟನೆಯಲ್ಲಿ ವಿರೋಧ ಪಕ್ಷಗಳು ಮಾತ್ರವಲ್ಲದೆ ಆಡಳಿತಾರೂಢ ಪಕ್ಷದ ಸದಸ್ಯರೂ ಪ್ರಧಾನಿಯವರ ನಡೆಯನ್ನು ಒಪ್ಪದೆ ರಾಜೀನಾಮೆಗೆ ಒತ್ತಾಯಿಸಿರುವುದು. ಇದು ಅದ್ಭುತವಾದ ಜನತಂತ್ರದ ಮೌಲ್ಯ ಮತ್ತು ಆಶಯಕ್ಕೆ ಹಿಡಿದ ಕನ್ನಡಿಯಾಗಿದೆ.

ಡಾ. ಜಿ.ಬೈರೇಗೌಡ, ಬೆಂಗಳೂರು

ಅತಿಥಿ ಉಪನ್ಯಾಸಕರಿಗೆ ಸಿಕ್ಕಿದ್ದು ಕಹಿ!

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸುಮಾರು 14,500 ಮಂದಿ ಅತಿಥಿ ಉಪನ್ಯಾಸಕರಾಗಿ ಸುಮಾರು 15-20 ವರ್ಷಗಳಿಂದ ಅತೀ ಕಡಿಮೆ ಪಗಾರಕ್ಕೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಇದೀಗ ಉನ್ನತ ಶಿಕ್ಷಣ ಇಲಾಖೆ, ಹಿರಿಯ ಅಧಿಕಾರಿಗಳು ಮತ್ತು ಇಲಾಖೆ ಆಯುಕ್ತರನ್ನೊಳಗೊಂಡ ಸಮಿತಿಯ ಅನ್ವಯ ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ ನಾರಾಯಣ ಅವರು ಅತಿಥಿ ಉಪನ್ಯಾಸಕರು ನಿರ್ವಹಿಸುತ್ತಿದ್ದ 8 ಗಂಟೆಗಳ ಕಾರ್ಯಭಾರವನ್ನು 15 ಗಂಟೆಗಳಿಗೇರಿಸಿ ಅರ್ಹತೆಗನುಸಾರ ವೇತನ ಹೆಚ್ಚಿಸಿ ಆದೇಶಿಸಿದ್ದಾರೆ. ಆದರೆ ಒಬ್ಬ ಅತಿಥಿ ಉಪನ್ಯಾಸಕನ 8 ಗಂಟೆಗಳ ಕಾರ್ಯಭಾರವನ್ನು ಕಿತ್ತು 15 ಗಂಟೆಗಳಿಗೆ ಹೆಚ್ಚಿಸಿದ್ದರಿಂದ ಸುಮಾರು 7,500 ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡು ಬೀದಿಗೆ ನಿಲ್ಲುವಂತೆ ಮಾಡಲಾಗಿದೆ.

ಸಂಕ್ರಾಂತಿಗೆ ಸಿಹಿ ಕೊಡುತ್ತೇವೆ ಎಂದು ಹೇಳಿ ಇವರಿಗೆ ಮತ್ತು ಇವರನ್ನೇ ನೆಚ್ಚಿಕೊಂಡಿರುವ ಕುಟುಂಬಗಳಿಗೆ ಕಹಿ ಕೊಟ್ಟಂತಾಗಿದೆ. ಸರ್ಕಾರ ದಯಮಾಡಿ ಈ ಆದೇಶವನ್ನು ಪುನರ್‌ಪರಿಶೀಲಿಸಿ, 14,500 ಅತಿಥಿ ಉಪನ್ಯಾಸಕರಿಗೆ ಈಗಿರುವ ಕಾರ್ಯಭಾರಕ್ಕೆ ವೇತನ ನಿಗದಿಪಡಿಸಬೇಕು. ಅತೀವ ನೋವು ಮತ್ತು ಉದ್ಯೋಗ ಅಭದ್ರತೆಯ ಆತಂಕದಲ್ಲಿರುವ ಅತಿಥಿ ಉಪನ್ಯಾಸಕರ ನೆರವಿಗೆ ಬರಬೇಕು.

ಮಧುಕುಮಾರ ಬಳ್ಳೇಕೆರೆ, ಹೊಸದುರ್ಗ

ಹೆಣ್ಣು ಮಕ್ಕಳ ಶಿಕ್ಷಣ: ಘೋಷಣೆ ಸಾಕೆ?

'ವಿ.ವಿ. ಶಿಕ್ಷಣ ಉಳ್ಳವರ ಸೊತ್ತೇ?' ಎಂಬ ಪತ್ರದಲ್ಲಿ (ವಾ.ವಾ., ಜ. 14) ಎನ್.ಎಂ.ಕುಲಕರ್ಣಿ ಅವರು ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ವಿಶ್ವವಿದ್ಯಾಲಯ ಹಾಗೂ ಸರ್ಕಾರ ಹೇಗೆ ತೊಡಕಾಗುತ್ತಿವೆ ಎನ್ನುವ ಸಂಗತಿಯನ್ನು ವಿವರಿಸಿದ್ದಾರೆ. ಇದು ಒಂದು ಉದಾಹರಣೆ ಮಾತ್ರ. ಶಾಲಾ ಕಾಲೇಜುಗಳು ಜೂನ್ ತಿಂಗಳಲ್ಲಿ ಆರಂಭವಾದರೆ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳ ಪ್ರವೇಶ ಪ್ರಕ್ರಿಯೆ ಆರಂಭವಾಗುವುದು ಸೆಪ್ಟೆಂಬರ್ ನಂತರ. ಆ ಮೂರು ತಿಂಗಳು ಮಕ್ಕಳಿಗೆ, ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಎಲ್ಲಿ ಉಳಿದುಕೊಳ್ಳಬೇಕು ಎನ್ನುವ ಸಮಸ್ಯೆ ಕಾಡುತ್ತದೆ. ಪಿ.ಜಿ.ಗಳಲ್ಲಿ ಉಳಿದುಕೊಳ್ಳಲು ಆರ್ಥಿಕ ತೊಂದರೆ ಕಾಡುತ್ತಿರುತ್ತದೆ. ಹೀಗಾಗಿ ಮಕ್ಕಳಿಗೆ ಶಿಕ್ಷಣ ಪಡೆಯಬೇಕೆಂಬ ಹಂಬಲ ಮತ್ತು ಅರ್ಹತೆ ಇದ್ದರೂ ಪಾಲಕರು ಶಿಕ್ಷಣ ಕೊಡಿಸಲು ಮುಂದಾಗುತ್ತಿಲ್ಲ.

ಈ ವರ್ಷ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ, ಧಾರವಾಡ ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದ ಹೆಣ್ಣು ಮಕ್ಕಳಲ್ಲಿ (ಕೋವಿಡ್ ಕಾರಣದಿಂದ ಶೇ 100 ಉತ್ತೀರ್ಣ) ಪಿಯುಗೆ ಎಷ್ಟು ಮಂದಿ ಪ್ರವೇಶ ಪಡೆದಿದ್ದಾರೆ, ಪ್ರವೇಶ ಪಡೆಯದಿರಲು ಕಾರಣವೇನು ಎಂಬ ಸಮೀಕ್ಷೆ ನಡೆಸಲಾಯಿತು. ಆಗ ಬಹಳ ಮುಖ್ಯವಾಗಿ ಗಮನಕ್ಕೆ ಬಂದ ಕಾರಣ ಎಂದರೆ, ಕಾಲೇಜು ಆರಂಭವಾದಾಗ ವಿದ್ಯಾರ್ಥಿ ನಿಲಯಗಳು ಆರಂಭವಾಗದೇ ಇರುವುದು. ಹಳ್ಳಿಗಳಿಂದ 30-35 ಕಿ.ಮೀ. ದೂರದಲ್ಲಿ ಕಾಲೇಜುಗಳಿವೆ, ನಿತ್ಯ ಪ್ರಯಾಣ ಮಾಡಿ ಹೋಗೋಣ ಎಂದರೆ ಸಾರಿಗೆ ವ್ಯವಸ್ಥೆ ಸಮರ್ಪಕವಾಗಿಲ್ಲ. ಬಸ್ಸಿನ ವ್ಯವಸ್ಥೆ ಇದ್ದರೂ ಸುರಕ್ಷತೆ ದೃಷ್ಟಿಯಿಂದ ಹೆಣ್ಣು ಮಕ್ಕಳನ್ನು ಬಸ್ಸುಗಳಲ್ಲಿ ಕಳುಹಿಸುವುದಕ್ಕೆ ಪಾಲಕರು ಹಿಂದೇಟು ಹಾಕುತ್ತಿದ್ದಾರೆ. ವಿದ್ಯಾರ್ಥಿ ನಿಲಯಗಳು ಆರಂಭವಾಗುವುದು ವಿಳಂಬವಾಗುವುದರಿಂದ, ಊರಲ್ಲೇ ಕಾಲೇಜುಗಳಿರುವಲ್ಲಿ ಹೆಣ್ಣು ಮಕ್ಕಳನ್ನು ಕಳುಹಿಸುತ್ತೇವೆ ಎಂದು ಹಲವು ಪಾಲಕರು ಅಭಿಪ್ರಾಯಪಟ್ಟರು. ಸರ್ಕಾರವು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವುದಾಗಿ ಘೋಷಿಸಿ ಬಜೆಟ್‌ನಲ್ಲಿ ಕೋಟ್ಯಂತರ ರೂಪಾಯಿ ಮೀಸಲಿಟ್ಟರಷ್ಟೇ ಸಾಲದು. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗಿರುವ ಸವಾಲುಗಳನ್ನು ಅರಿತು, ಯೋಜನೆ ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಬದ್ಧತೆ ತೋರಬೇಕು.

ಜಯಂತ ಕೆ.ಎಸ್., ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd. Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಯಾರಿಗೂ ಸಲೀಸಲ್ಲ ಮಣಿಪುರ ಅಧಿಕಾರ

ಬುಡಕಟ್ಟು ಜನರ ಪ್ರಾಬಲ್ಯದ ಈಶಾನ್ಯದ ರಾಜ್ಯ ಮಣಿಪುರವು ವಿಧಾನಸಭೆ ಚುನಾವಣೆಗೆ ಸಜ್ಜಾಗಿದೆ. ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಯ ಪ್ರಾಬಲ್ಯ ರಾಜ್ಯದಲ್ಲಿ ಇದೆ. ಜತೆಗೆ ರಾಜ್ಯದ ವಿವಿಧ ಭಾಗಗಳು ಮತ್ತು ಸಮುದಾಯಗಳಲ್ಲಿ ಪ್ರಭಾವಿ ಆಗಿರುವ ಹಲವು ಪ್ರಾದೇಶಿಕ ಪಕ್ಷಗಳೂ ಇವೆ. ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತದ ಸೂಚನೆ ಈಗ ಕಾಣಿಸುತ್ತಿಲ್ಲ. ಹಾಗಾಗಿ ಫಲಿತಾಂಶದ ಬಳಿಕ, ಪ್ರಾದೇಶಿಕ ಪಕ್ಷಗಳಿಗೆ, ಪಕ್ಷೇತರರಿಗೆ ಭಾರಿ ಬೇಡಿಕೆ ಸೃಷ್ಟಿ ಆಗಬಹುದು

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಬಿಜೆಪಿ ಹಾದಿ ಸುಗಮವಲ್ಲ

ಮಣಿಪುರ ವಿಧಾನಸಭಾ ಚುನಾವಣೆಯಲ್ಲಿ, ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯಲು ಬಿಜೆಪಿ ಸಿದ್ಧತೆ ನಡೆಸಿದೆ ಎಂದು ಪಕ್ಷದ ಮೂಲಗಳು ಭಾನುವಾರವಷ್ಟೇ ಹೇಳಿವೆ. 2017ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 21 ಸ್ಥಾನಗಳನ್ನು ಗೆದ್ದಿತ್ತು. ಹೀಗಿದ್ದೂ ಮೂರ್ನಾಲ್ಕು ಪ್ರಾದೇಶಿಕ ಪಕ್ಷಗಳ ಬೆಂಬಲ ಪಡೆದು ಸರ್ಕಾರ ರಚನೆ ಮಾಡಿತ್ತು. ಬಹುಮತಕ್ಕೆ 31 ಸ್ಥಾನಗಳ ಅವಶ್ಯಕತೆ ಇದ್ದಾಗ, ಪ್ರಾದೇಶಿಕ ಪಕ್ಷಗಳ ಬೆಂಬಲವಿಲ್ಲದೆ ಬಿಜೆಪಿಗೆ ಸರ್ಕಾರ ರಚಿಸಲು ಸಾಧ್ಯವಿರಲಿಲ್ಲ. ಆದರೆ ಈ ಬಾರಿ ಪಕ್ಷವು ಸ್ವತಂತ್ರವಾಗಿಯೇ ಕಣಕ್ಕೆ ಇಳಿಯಲು ನಿರ್ಧರಿಸಿದೆ ಎಂಬುದು, ರಾಜ್ಯದಲ್ಲಿ ಅದರ ನೆಲೆ ಗಟ್ಟಿಯಾಗಿದೆ ಎಂಬುದನ್ನು ಸೂಚಿಸುತ್ತದೆ ಎಂದು ಪಕ್ಷದ ನಾಯಕರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಆದರೆ ಮಣಿಪುರ ರಾಜಕೀಯ ಪರಿಸ್ಥಿತಿ, ಮುಖ್ಯವಾಗಿ ಬಿಜೆಪಿಯ ಸ್ಥಿತಿ ಅದೇ ಪಕ್ಷದ ನಾಯಕರು ಹೇಳುತ್ತಿರುವುದಕ್ಕಿಂತ ಭಿನ್ನವಾಗಿದೆ. ಬೇರೆ ರಾಜ್ಯಗಳಲ್ಲಿ ಮಾಡಿದಂತೆಯೇ ಬಿಜೆಪಿ ಮಿತ್ರಪಕ್ಷಗಳ ಜತೆಗೆ ದೊಡ್ಡಣ್ಣನಂತೆ ವರ್ತಿಸಿದೆ. ಬಿಜೆಪಿ ಶಾಸಕರಿಗಷ್ಟೇ ಆದ್ಯತೆ ನೀಡಲಾಗಿದೆ. ಪ್ರಭಾವಿ ಅಲ್ಲದವರನ್ನು ಮುಖ್ಯಮಂತ್ರಿ ಮಾಡಿದೆ. ಹೀಗಾಗಿ ಮಣಿಪುರದಲ್ಲಿಯೂ ಬಿಜೆಪಿಯ ವರ್ಚಸ್ಸು ಮತ್ತು ಆ ಪಕ್ಷದ ಬಗೆಗಿನ ವಿಶ್ವಾಸ ಕುಗ್ಗಿದೆ. ಮಿತ್ರಪಕ್ಷಗಳಿಗೇ ಹೆಚ್ಚಿನ ಸಚಿವ ಸ್ಥಾನ ಬಿಟ್ಟುಕೊಟ್ಟಿದ್ದಕ್ಕೆ, ಪಕ್ಷದೊಳಗೂ ಭಿನ್ನಮತ ಜೋರಾಗಿದೆ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

ಮುಖ್ಯಮಂತ್ರಿ ಬೀರೇನ್ ಸಿಂಗ್ ಆಡಳಿತದ ಬಗ್ಗೆ ರಾಜ್ಯದ ಜನರಲ್ಲಿ ಅಸಮಾಧಾನವಿದೆ. ಪಕ್ಷದ ಶಾಸಕರೇ ಮುಖ್ಯಮಂತ್ರಿಯ ಕಾರ್ಯವೈಖರಿಯ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಬೇರೆಡೆ ಮುಖ್ಯಮಂತ್ರಿ ಅಭ್ಯರ್ಥಿಗಳನ್ನು ಘೋಷಿಸುವಂತೆ ಪ್ರತಿಪಕ್ಷಗಳಿಗೆ ಸವಾಲು ಹಾಕಿರುವ ಬಿಜೆಪಿ, ಮಣಿಪುರದಲ್ಲಿ ಇನ್ನೂ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದನ್ನು ನಿರ್ಧರಿಸಿಲ್ಲ. ಪ್ರಚಾರಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನೇ ಬಿಜೆಪಿ ಅವಲಂಬಿಸಿದೆ.

ಕೇಂದ್ರ ಸರ್ಕಾರದ ನೀತಿಗಳು, ರಾಜ್ಯ ಸರ್ಕಾರದ ಆಡಳಿತದ ಸ್ವರೂಪ, ಸರ್ಕಾರಕ್ಕೆ ಶರಣಾದ ನಾಗಾ ಬಂಡುಕೋರರಿಗೆ ಸರಿಯಾದ ಪುನರ್ವಸತಿ ಒದಗಿಸದೇ ಇರುವುದು, ಬಿಜೆಪಿ ಬಗೆಗಿದ್ದ ಮಿತ್ರಪಕ್ಷಗಳ ವಿಶ್ವಾಸವನ್ನು ಕುಗ್ಗಿಸಿದೆ. ಬುಡಕಟ್ಟು ಜನರ ಹಕ್ಕುಗಳ ರಕ್ಷಣೆ ಹೋರಾಟದಲ್ಲಿ ರೂಪುಗೊಂಡ ನ್ಯಾಷನಲ್ ಪೀಪಲ್ಸ್ ಪಾರ್ಟಿ ಮತ್ತು ನಾಗಾ ಪೀಪಲ್ಸ್ ಫ್ರಂಟ್ ಪಕ್ಷಗಳು ಸಹ ಈ ಬಾರಿ ಸ್ವತಂತ್ರವಾಗಿಯೇ ಸ್ಪರ್ಧಿಸುವುದಾಗಿ ಘೋಷಿಸಿವೆ. ಹೀಗಾಗಿ ಚುನಾವಣೆ ಪೂರ್ವದಲ್ಲಿ ಯಾವುದೇ ಮಿತ್ರಪಕ್ಷಗಳನ್ನು ಸಂಭಾಳಿಸಬೇಕಾದ ಅನಿವಾರ್ಯ ಬಿಜೆಪಿಗೆ ಇಲ್ಲ. ಈ ಬಗ್ಗೆ ಬಿಜೆಪಿ ಈವರೆಗೆ ಯಾವ ಪಕ್ಷದ ಜತೆಗೆ ಮಾತುಕತೆಯನ್ನೂ ನಡೆಸಿಲ್ಲ.

ಈ ಎಲ್ಲಾ ಅಂಶಗಳು ಚುನಾವಣೆಯಲ್ಲೂ ಪರಿಣಾಮ ಬೀರುವ ಸಾಧ್ಯತೆ ಇದೆ. ಹೀಗಾಗಿ ಮೇಲ್ನೋಟಕ್ಕೆ ತೋರುತ್ತಿರುವಂತೆ ರಾಜ್ಯದಲ್ಲಿ ಬಿಜೆಪಿಯ ಹಾದಿ ಸುಗಮವಾಗಿಲ್ಲ.



ಇಂಫಾಲಾದಲ್ಲಿ ನಡೆದಿದ್ದ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಬೀರೇನ್ ಸಿಂಗ್

ಕಾಂಗ್ರೆಸ್‌ಗೆ ಈಗಲೂ ಇಬೋಬಿ ಆಸರೆ



ಇಬೋಬಿ ಸಿಂಗ್

ಈಶಾನ್ಯ ರಾಜ್ಯ ಮಣಿಪುರದಲ್ಲಿ ದೀರ್ಘಕಾಲದಿಂದ ನೆಲೆಯೂರಿದ್ದ ಕಾಂಗ್ರೆಸ್‌ನ ಸ್ಥಿತಿ ಈಗ ಅಷ್ಟೇನೂ ಚೆನ್ನಾಗಿಲ್ಲ. 60 ಸದಸ್ಯಬಲದ ವಿಧಾನಸಭೆಗೆ 2017ರಲ್ಲಿ ನಡೆದ ಚುನಾವಣೆಯಲ್ಲಿ 28 ಸೀಟುಗಳನ್ನು ಪಡೆದಿದ್ದರೂ 2022ರ ಚುನಾವಣೆಯ ಹೊತ್ತಿಗೆ ಈ ಸ್ಥಾನಗಳು ಕೇವಲ 13ಕ್ಕೆ ಕುಸಿದಿವೆ. ಇದು ರಾಜ್ಯದಲ್ಲಿ ಕಾಂಗ್ರೆಸ್‌ನ ವಾಸ್ತವವನ್ನು ಬಿಂಬಿಸುತ್ತದೆ.

ಮೂರು ಬಾರಿ ರಾಜ್ಯದ ಚುಕ್ಕಾಣಿ ಹಿಡಿದಿದ್ದ ಕಾಂಗ್ರೆಸ್ ನಾಯಕ ಒಕ್ರಮ್ ಇಬೋಬಿ ಸಿಂಗ್ ಅವರ ಮೇಲೆ ಪಕ್ಷ ಈಗಲೂ ಅವಲಂಬಿತವಾಗಿದೆ. ಅವರು ರಾಜಕೀಯವಾಗಿ ಸಕ್ರಿಯವಾಗಿಲ್ಲದಿರುವುದೂ, ಪಕ್ಷ ಅನುಭವಿಸುತ್ತಿರುವ ಹಿನ್ನಡೆಗೆ ಕಾರಣ ಎಂದು ವಿಶ್ಲೇಷಕರು ಹೇಳುತ್ತಾರೆ. ಹೊಸ ಮುಖಗಳು ಕಾಣಿಸದ ಮಣಿಪುರ ಕಾಂಗ್ರೆಸ್‌ನಲ್ಲಿ, 73 ವರ್ಷದ ಇಬೋಬಿ ಅವರೇ ಈಗಲೂ ಪಕ್ಷದ ಪ್ರಮುಖ ನಾಯಕ. ಅವರು ಅನಾರೋಗ್ಯದ ತೆರೆ ಹಿಂದೆ ಇದ್ದರೂ, ಅವರನ್ನೇ ಮುಂದಿಟ್ಟುಕೊಂಡು ಚುನಾವಣಾ ಕಣಕ್ಕೆ ಧುಮುಕಬೇಕಾದ ಅನಿವಾರ್ಯಕ್ಕೆ ಪಕ್ಷ ಸಿಲುಕಿದೆ.

ಅಂದರೆ, ಇಬೋಬಿ ಆಡಳಿತದಲ್ಲಿ ಎಲ್ಲವೂ ಸರಿಯಿತ್ತು ಎಂದಲ್ಲ. ಅವರು ಮೂರು ಬಾರಿ ಮುಖ್ಯಮಂತ್ರಿ ಆಗಿದ್ದಾಗಲೂ, ಕಾಂಗ್ರೆಸ್‌ನ ಗುಂಪುಗಾರಿಕೆ ಹಾಗೂ ಒಳಜಗಳಗಳು ನಡೆದೇ ಇದ್ದವು. ಇಬೋಬಿಗೆ ನಿಷ್ಠರಾಗಿರುವ ಶಾಸಕರು ಮತ್ತು ಭಿನ್ನಮತೀಯ ಗುಂಪಿನ ನಡುವೆ ಪಕ್ಷ ಹಂಚಿಹೋಗಿತ್ತು. 2016ರಲ್ಲಿ, ಇಬೋಬಿ ಅವರ ಪ್ರತಿಸ್ಪರ್ಧಿ ಎಂದು ಬಿಂಬಿತವಾಗಿದ್ದ ಯುಮ್ನಾಮ್ ಎರಾಬೋಟ್ ಅವರು ಬಿಜೆಪಿಗೆ ಸೇರುವ ಉದ್ದೇಶದಿಂದ ಕಾಂಗ್ರೆಸ್ ತೊರೆದಾಗ ಬಣ ವೈಷಮ್ಯ ತಾರಕಕ್ಕೇರಿತ್ತು. ಇದು ಬೀರೇನ್ ಸೇರಿದಂತೆ ಇತರ ನಾಯಕರೂ ಕಾಂಗ್ರೆಸ್‌ನಿಂದ ಹೊರನಡೆಯಲು ಕಾರಣವಾಯಿತು ಎನ್ನಲಾಗಿದೆ. ಎರಾಬೋಟ್ ಮತ್ತು ಬೀರೇನ್ ಅವರ ನಿರ್ಗಮನದ ನಂತರ, ಇತರ ನಾಯಕರು ಮತ್ತು ಶಾಸಕರು ಪಕ್ಷ ಬದಲಿಸಲು ಮುಂದಾದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚಿಸುವುದರೊಂದಿಗೆ ಪಕ್ಷಾಂತರದ ಪ್ರವೃತ್ತಿ ವೇಗ ಪಡೆದುಕೊಂಡಿತು.

ಕಾಂಗ್ರೆಸ್‌ಗೆ ದೊಡ್ಡ ಪೆಟ್ಟು ಕೊಟ್ಟಿದ್ದು ಪಕ್ಷಾಂತರ. 2021ರ ಆಗಸ್ಟ್‌ನಲ್ಲಿ ಆಗಿನ ಮಣಿಪುರ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿದ್ದ ಗೋವಿಂದದಾಸ್ ಕೊಂತೌಜಂ ಅವರೇ ಬಿಜೆಪಿ ಸೇರಿ ಅಚ್ಚರಿ ಮೂಡಿಸಿದ್ದರು. ಇಲ್ಲಿಂದ ಶುರುವಾದ ವಲಸೆ ನಿಲ್ಲಲೇ ಇಲ್ಲ. ಚಾಲ್ಟನ್ಲೀನ್ ಅಮೋ ಮತ್ತು ಕಕ್ಚಿಂಗ್ ವೈ ಸುರ್ಚಂದ್ರ ಅವರಂತಹ ಹಿರಿಯ ಮುಖಂಡರು ಕಾಂಗ್ರೆಸ್ ತೊರೆದು ಬಿಜೆಪಿ ಪಾಳಯ ಸೇರಿದ್ದಾರೆ. ಇದೇ 10ರಂದು ಶಾಸಕ ಚಾಲ್ಟನ್ಲಿನ್ ಅಮೋ ಅವರು ಕಾಂಗ್ರೆಸ್‌ಗೆ ವಿದಾಯ ಹೇಳಿದರು.

2020ರಲ್ಲಿ ಮಣಿಪುರದಲ್ಲಿ ಬಿಜೆಪಿ ಮಿತ್ರಪಕ್ಷವಾಗಿದ್ದ ನ್ಯಾಷನಲ್ ಪೀಪಲ್ಸ್ ಪಾರ್ಟಿಯ ಮೂವರು ಶಾಸಕರು ಬೀರೇನ್ ಸಿಂಗ್ ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ಪಡೆದಿದ್ದರು. ಈ ಸಮಯವನ್ನು ಕಾಂಗ್ರೆಸ್ ಬಳಸಿಕೊಂಡು ಅಧಿಕಾರಕ್ಕೆ ಬರಬಹುದು ಎನ್ನಲಾಗಿತ್ತು. ಸರ್ಕಾರ ರಚಿಸುವಲ್ಲಿ ವಿಫಲವಾಗಿದ್ದ ಕಾಂಗ್ರೆಸ್, ಈ ಅವಕಾಶವನ್ನೂ ಉಪಯೋಗಿಸಿಕೊಳ್ಳುವಲ್ಲಿ ಎಡವಿತ್ತು. ಈ ಬಾರಿ ಬಿಜೆಪಿಯ ಆಡಳಿತವಿರೋಧಿ ಅಲೆಯ ಲಾಭ ಕಾಂಗ್ರೆಸ್‌ಗೆ ಸಿಗಲಿದೆ ಎಂಬ ವಿಶ್ವಾಸದಲ್ಲಿ ಪಕ್ಷ ಕಣಕ್ಕೆ ಧುಮುಕಿದೆ.

ಪ್ರಾದೇಶಿಕ ಪಕ್ಷಗಳ ಕೈಯಲ್ಲಿ ಕೀಲಿ?

ಮಣಿಪುರದಲ್ಲಿ ಈ ಬಾರಿ ಪ್ರಾದೇಶಿಕ ಪಕ್ಷಗಳ ಕೈ ಮೇಲಾಗುವ ಸಾಧ್ಯತೆ ನಿಚ್ಚಳವಾಗಿದೆ ಎಂದು ವಿಶ್ಲೇಷಿಸಲಾಗಿದೆ. ಚುನಾವಣಾ ಪೂರ್ವ ಸಮೀಕ್ಷೆಗಳೂ ಇದೇ ಅಭಿಪ್ರಾಯ ವ್ಯಕ್ತಪಡಿಸಿವೆ.

2017ರ ಚುನಾವಣಾ ಫಲಿತಾಂಶವನ್ನು ಗಮನಿಸಿದರೆ, ಕಾಂಗ್ರೆಸ್ 28, ಬಿಜೆಪಿ 21 ಸ್ಥಾನಗಳನ್ನು ಗಳಿಸಿದ್ದವು. ಆದರೆ ಇಲ್ಲಿ ಕಿಂಗ್ ಮೇಕರ್ ಆಗಿದ್ದು ಪ್ರಾದೇಶಿಕ ಪಕ್ಷಗಳು ಹಾಗೂ ಪಕ್ಷೇತರರು. ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಕೆ. ಸಂಗ್ಮಾ ಅವರ ನೇತೃತ್ವದ ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ) ಈಗ ಮಣಿಪುರದ ಪ್ರಮುಖ ರಾಜಕೀಯ ಪಕ್ಷವಾಗಿ ತನ್ನ ನೆಲೆ ವಿಸ್ತರಿಸಿಕೊಂಡಿದೆ. ರಾಜ್ಯದ ನಾಗಾ ಬುಡಕಟ್ಟು ಜನಾಂಗದ ಮೇಲೆ ನಾಗಾ ಪೀಪಲ್ಸ್ ಫ್ರಂಟ್ (ಎನ್‌ಪಿಎಫ್) ಪ್ರಾಬಲ್ಯ ಹೊಂದಿದೆ. ಈ ಎರಡೂ ಪಕ್ಷಗಳ ತಲಾ ನಾಲ್ವರು ಶಾಸಕರು, ಟಿಎಂಸಿ, ಎಲ್‌ಜೆಪಿ ಹಾಗೂ ಒಬ್ಬ ಪಕ್ಷೇತರ ಶಾಸಕನ ಬೆಂಬಲದಿಂದ ಬೀರೇನ್ ಅವರು ಸರ್ಕಾರ ರಚಿಸಲು ಸಾಧ್ಯವಾಗಿತ್ತು. ಹೊರಗಿನಿಂದ ಬಂದವರಿಗೆ ಬೀರೇನ್ ಸರ್ಕಾರ ಮಹತ್ವದ ಖಾತೆಗಳನ್ನು ನೀಡಿತ್ತು. ಈ ಬಾರಿ ಲೆಕ್ಕಾಚಾರ ಸ್ವಲ್ಪ ಭಿನ್ನವಾಗಿದೆ. ಸಂಗ್ಮಾ ಅವರು ಮೇಘಾಲಯದಲ್ಲಿ ಬಿಜೆಪಿ ಜೊತೆ ಸೇರಿ ಸರ್ಕಾರ ಮುನ್ನಡೆಸುತ್ತಿದ್ದಾರೆ. ಆದರೆ, ಮಣಿಪುರದಲ್ಲಿ ಈ ಬಾರಿ ಏಕಾಂಗಿಯಾಗಿ ಸ್ಪರ್ಧಿಸುವ ಘೋಷಣೆ ಮಾಡಿದ್ದಾರೆ. ಹಿಂದಿನ ಬಾರಿ 9 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಎನ್‌ಪಿಪಿ 4ರಲ್ಲಿ ಗೆದ್ದಿತ್ತು. ಈ ಬಾರಿ 40 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಉದ್ದೇಶದಲ್ಲಿ ಸಂಗ್ಮಾ ಇದ್ದಾರೆ. ಇದು ನಿಜವಾದಲ್ಲಿ, ಬಿಜೆಪಿಗೆ ಎನ್‌ಪಿಪಿ ಪೆಟ್ಟು ನೀಡುವುದು ಖಚಿತ. ಹೀಗಾಗಿಯೇ, ಎನ್‌ಪಿಪಿ ಮನವೊಲಿಸಿ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳಲು ಬಿಜೆಪಿ ಭಾರಿ ಯತ್ನ ನಡೆಸಿದೆ.

ಎನ್‌ಪಿಎಫ್ ಕಳೆದ ಚುನಾವಣೆಯಲ್ಲಿ ನಾಲ್ಕು ಕ್ಷೇತ್ರಗಳಲ್ಲಿ ಜಯಗಳಿಸಿ, ಬಿಜೆಪಿ ಸರ್ಕಾರವನ್ನು ಬೆಂಬಲಿಸಿತ್ತು. ಈಗ ಬಿಜೆಪಿ ಜೊತೆ ಉತ್ತಮ ಸಂಬಂಧ ಇದೆಯಾದರೂ, ಈವರೆಗೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿಲ್ಲ. ಪಕ್ಷವು ಈ ಬಾರಿ 15 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಸಾಧ್ಯತೆಯಿದ್ದು, 8–10 ಸ್ಥಾನಗಳನ್ನು ಗೆಲ್ಲುವ ಲೆಕ್ಕಾಚಾರದಲ್ಲಿದೆ ಎನ್ನಲಾಗಿದೆ.

ಈ ಎರಡೂ ಪ್ರಾದೇಶಿಕ ಪಕ್ಷಗಳು ಬಿಜೆಪಿ ಹಾಗೂ ಕಾಂಗ್ರೆಸ್‌ನ ಮತಬ್ಯಾಂಕ್ ಅನ್ನು ವಿಭಜಿಸಲಿದ್ದು, ರಾಷ್ಟ್ರೀಯ ಪಕ್ಷಗಳಿಗೆ ಸ್ಪಷ್ಟ ಪೆಟ್ಟು ನೀಡುವ ಸಾಧ್ಯತೆಯಿದೆ. ಇವರೆಡೂ ತಲಾ 10 ಕ್ಷೇತ್ರಗಳನ್ನು ಬುಟ್ಟಿಗೆ ಹಾಕಿಕೊಂಡರೂ ಅಚ್ಚರಿಯಿಲ್ಲ ಎನ್ನುತ್ತಾರೆ ವಿಶ್ಲೇಷಕರು. ಕಾಂಗ್ರೆಸ್ ಅಥವಾ ಬಿಜೆಪಿಗೆ ಈ ಬಾರಿಯೂ ಸರಳ ಬಹುತಮ ಸಿಗದಿದ್ದಲ್ಲಿ, ಈ ಪಕ್ಷಗಳೇ ನಿರ್ಣಾಯಕ ಆಗುವ ಎಲ್ಲ ಸಾಧ್ಯತೆಗಳಿವೆ.



ಮಣಿಪುರದ ಎನ್‌ಪಿಪಿ ಮುಖಂಡ ಲೆಟ್ಪಾವೊ ಹಾಕಿಪ್ ಅವರು ನವದೆಹಲಿಯಲ್ಲಿ ಬಿಜೆಪಿಗೆ ಇತ್ತೀಚೆಗೆ ಸೇರ್ಪಡೆಯಾದರು–ಪಿಟಿಐ ಸಂಗ್ರಹ ಚಿತ್ರ

‘ಆಫ್‌ಸ್ಪಾ ವಿಸ್ತರಣೆ ಆಡಳಿತ ಪಕ್ಷಕ್ಕೆ ಮಾರಕ’

ಶಸಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆಯ (ಆಫ್‌ಸ್ಪಾ) ವಿರುದ್ಧ ಈಶಾನ್ಯ ಭಾರತದ ರಾಜ್ಯಗಳಲ್ಲಿ ವಿರೋಧವಿದ್ದೇ ಇದೆ. ಮಣಿಪುರವೂ ಇದಕ್ಕೆ ಹೊರತಲ್ಲ. ರಾಜಧಾನಿ ಇಂಫಾಲಾ ಹೊರತುಪಡಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಆಫ್‌ಸ್ಪಾಗೆ ಒಳಪಡಿಸಲಾಗಿದೆ. ನಾಗಾಲ್ಯಾಂಡ್‌ನಲ್ಲಿ ಈಚೆಗಷ್ಟೇ ನಾಗರಿಕರನ್ನು ಸೈನಿಕರು ಗುಂಡಿಟ್ಟು ಕೊಂದಿದ್ದರು. ಅದರ ವಿರುದ್ಧ ನಾಗಾಲ್ಯಾಂಡ್‌ನಲ್ಲಿ ಭಾರಿ ವಿರೋಧ ವ್ಯಕ್ತವಾಗಿತ್ತು. ಪಕ್ಕದ ಮಣಿಪುರದಲ್ಲೂ ಅಷ್ಟೇ ದೊಡ್ಡಮಟ್ಟದ ವಿರೋಧ ವ್ಯಕ್ತವಾಗಿತ್ತು.

ಈ ಮೊದಲು ರಾಜ್ಯದಲ್ಲಿ ಹೇರಲಾಗಿದ್ದ ಆಫ್‌ಸ್ಪಾದ ಅವಧಿ 2021ರ ಡಿಸೆಂಬರ್ 1ಕ್ಕೆ ಅಂತ್ಯವಾಗಿತ್ತು. ನಾಗಾಲ್ಯಾಂಡ್‌ನಲ್ಲಿ ನಾಗರಿಕರ ಹತ್ಯೆ ನಡೆದದ್ದು ಡಿಸೆಂಬರ್ 4ರಂದು. ಇದರ ವಿರುದ್ಧ ಪ್ರಬಲ ವಿರೋಧ ವ್ಯಕ್ತವಾಗುತ್ತಿದ್ದರೂ, ರಾಜ್ಯದ ಮೇಲೆ ಡಿಸೆಂಬರ್ 12ರಂದು ಆಫ್‌ಸ್ಪಾವನ್ನು ಮತ್ತೆ ಹೇರಲಾಯಿತು. ಅದು 2022ರ ಡಿಸೆಂಬರ್ 1ರವರೆಗೆ ಜಾರಿಯಲ್ಲಿ ಇರಲಿದೆ. ಇದು ರಾಜ್ಯದ ಜನರನ್ನು ಕೆರಳಿಸಿದೆ.

ಬುಡಕಟ್ಟು ಜನರೇ ನಿರ್ಣಾಯಕವಾಗಿರುವ 20 ಕ್ಷೇತ್ರಗಳಲ್ಲಿ ಈ ನಿರ್ಧಾರದ ವಿರುದ್ಧ ಭಾರಿ ಆಕ್ರೋಶ ವ್ಯಕ್ತವಾಗಿದೆ. ಈ ಪ್ರದೇಶದಲ್ಲಿ ಹೆಚ್ಚು ಪ್ರಭಾವ ಹೊಂದಿರುವ ನಾಗಾ ಪೀಪಲ್ಸ್ ಫ್ರಂಟ್ (ಎನ್‌ಪಿಎಫ್) ಈ ಬಾರಿ ಸ್ವತಂತ್ರವಾಗಿಯೇ ಕಣಕ್ಕೆ ಇಳಿಯುವುದಾಗಿ ಘೋಷಿಸಿದೆ. ಈ ಕ್ಷೇತ್ರಗಳಲ್ಲಿ ಗೆಲ್ಲುವ ಪಕ್ಷವು ಸರ್ಕಾರದ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಲಿದೆ.

ಭಾರಿ ಆಗ್ರಹದ ನಡುವೆಯೂ ಆಫ್‌ಸ್ಪಾವನ್ನು ಮತ್ತೆ ಹೇರುವಂತೆ ಶಿಫಾರಸು ಮಾಡಿದ ರಾಜ್ಯ ಬಿಜೆಪಿ ಸರ್ಕಾರ ಮತ್ತು ಅದನ್ನು ಅನುಮೋದಿಸಿದ ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಇಲ್ಲಿನ ಜನರಿಗೆ ಸಿಟ್ಟಿದೆ. ಅದು ಈ ಚುನಾವಣೆಯಲ್ಲಿ ಬಿಜೆಪಿಯ ಮತ ಪ್ರಮಾಣವನ್ನು ಕಡಿಮೆ ಮಾಡಲಿದೆ. ಬಿಜೆಪಿ ಈ ಹಿಂದಿಗಿಂತ ಕಡಿಮೆ ಕ್ಷೇತ್ರಗಳಲ್ಲಷ್ಟೇ ಗೆಲ್ಲಲಿದೆ. ಅದರ ಮತ ಪ್ರಮಾಣ ಮತ್ತು ಸ್ಥಾನಗಳು ಕಡಿಮೆಯಾಗಲಿವೆ.

ಆದರೆ ಇದರ ಲಾಭ ಕಾಂಗ್ರೆಸ್‌ಗೆ ದೊರೆಯುವ ಸಾಧ್ಯತೆ ಕಡಿಮೆ. ಆಫ್‌ಸ್ಪಾ ವಿರುದ್ಧ ಕಾಂಗ್ರೆಸ್ ನಾಯಕರು ದೊಡ್ಡ ದನಿಯಲ್ಲಿ ವಿರೋಧ ವ್ಯಕ್ತಪಡಿಸಿಲ್ಲ. ಜನರು ಇದನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಅದು ಕಾಂಗ್ರೆಸ್‌ಗೂ ಹೊಡೆತ ನೀಡಲಿದೆ. ಹೀಗಾಗಿ ಈ ಬಾರಿ ಪ್ರಾದೇಶಿಕ ಪಕ್ಷಗಳೇ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ ಎಂಬುದು ರಾಜಕೀಯ ವಿಶ್ಲೇಷಕರ ಲೆಕ್ಕಾಚಾರ.



ಕಾನ್ರಾಡ್ ಸಂಗ್ಮಾ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 20

ಸೃಷ್ಟಿರಹಸ್ಯ ಹೇಳಿದ ಬ್ರಹ್ಮ

ವ್ಯಾಸರ ಪರಮಶಿಷ್ಯ ಸೂತಮುನಿಯು ಹೇಳಿದ ಶಿವಪುರಾಣದ ಮಹಿಮೆಯನ್ನೆಲ್ಲ ಕೇಳಿದ ಪ್ರಯಾಗದ ಮಹಾಸತ್ರಯಾಗದ ಋಷಿಗಳಿಗೆಲ್ಲಾ ಸಂತೋಷವಾಗುತ್ತದೆ. ವೇದಾಂತಸಾರಯುಕ್ತವಾದ, ಅದ್ಭುತವಾದ ಶಿವಪುರಾಣವನ್ನು ತಮಗೆ ಶ್ರವಣಮಾಡಿಸಬೇಕೆಂದು ಸೂತಮುನಿಯನ್ನು ಕೇಳಿಕೊಳ್ಳುತ್ತಾರೆ. ಆಗ ಸೂತಮುನಿಯು ವೇದಸಾರಗಳಿಂದ ಕೂಡಿರುವ ಜಗತ್ತಿನಲ್ಲೆ ಉತ್ಕೃಷ್ಟವಾದ ಶಿವಪುರಾಣವನ್ನು ಹೇಳುತ್ತಾನೆ. ಶಿವಪುರಾಣದಲ್ಲಿ ಭಕ್ತಿ-ಜ್ಞಾನ-ವೈರಾಗ್ಯಗಳೆಂಬ ಮೂರು ವಿಧವಾದ ಮುಕ್ತಿಸಾಧನಗಳು ವರ್ಣಿತವಾಗಿವೆ. ವೇದಾಂತ ಪ್ರತಿಪಾದ್ಯವಾದ ಪರಬ್ರಹ್ಮವಸ್ತುವಿನ ಬಗ್ಗೆ ವಿಶೇಷವಾಗಿ ವರ್ಣಿತವಾಗಿದೆ. ಇದರಲ್ಲಿ ವೇದಗಳ ಸಾರವೂ ಇದೆ ಎಂದು ವಿವರಿಸುತ್ತಾನೆ.

ಬಹು ಪೂರ್ವಕಾಲದಲ್ಲಿ, ಅನೇಕ ಕಲ್ಪಗಳು ಕಳೆದು, ಈ ಶ್ವೇತವರಾಹಕಲ್ಪ ಬಂದಾಗ, ಸೃಷ್ಟಿಕಾರ್ಯ ನಡೆಯುತ್ತಿತ್ತು. ಆಗ ತ್ರಿವೇಣಿಸಂಗಮವಾದ ಪ್ರಯಾಗಕ್ಷೇತ್ರದಲ್ಲಿ ವಾಸಿಸುತ್ತಿದ್ದ ಋಷಿಗಳಲ್ಲಿ ಒಂದು ವಿವಾದ ಹುಟ್ಟಿತು. ಯಾವ ವಸ್ತು ಶ್ರೇಷ್ಠ? ಯಾರು ಪರಮಶ್ರೇಷ್ಠರು ಎಂಬಿತ್ಯಾದಿ ಚರ್ಚೆಗಳು ವಿಪರೀತವಾಗಿ ವಿವಾದದ ರೂಪ ಪಡೆದವು. ಪ್ರಯಾಗ ಅಂದರೆ ಮೂರು ನದಿಗಳ ಸಂಗಮ. ಈ ಮೂರು ನದಿಗಳ ಎರಡು ಕಡೆಯ ದಡಗಳು ಸೇರಿಸಿದರೆ ಒಟ್ಟು ಆರು ತೀರಗಳಾಗುತ್ತವೆ. ಇಂಥ ಆರು ತೀರ ಇರುವ ಪ್ರಯಾಗದಲ್ಲಿ ವಾಸಿಸುವ ಋಷಿಗಳಿಗೆ ಷಟ್ಕುಲೀನರೆಂದು ಕರೆಯುತ್ತಾರೆ. ಇಂಥ ಶ್ರೇಷ್ಠ ಯತಿಗಳಲ್ಲಿ ಹುಟ್ಟಿದ ಶ್ರೇಷ್ಠತೆಯ ವಿವಾದ ಬಗೆಹರಿಯದೆ, ಪರಿಹಾರಕ್ಕಾಗಿ ಬ್ರಹ್ಮನ ಬಳಿ ಹೋದರು.

ಷಟ್ಕುಲೀನ ಮುನಿಗಳೆಲ್ಲಾ ಸೃಷ್ಟಿಕರ್ತನಾದ ಬ್ರಹ್ಮನ ಬಳಿ ಹೋಗಿ ಕೈಮುಗಿದು ‘ಸಮಸ್ತ ತತ್ವಗಳಿಗಿಂತ ಮತ್ತು ಸಮಸ್ತ ವಸ್ತುಗಳಿಗಿಂತ ಶ್ರೇಷ್ಠನಾದ ಪುರುಷ ಯಾರು?’ ಎಂದು ಕೇಳುತ್ತಾರೆ. ಇಲ್ಲಿ ಸಮಸ್ತ ತತ್ವಗಳೂ ಅಂದರೆ, ಪ್ರಕೃತಿಯಿಂದ ಉಂಟಾದ ಮಹತ್ತಾದ ತತ್ವಗಳು ಅಂತ ಅರ್ಥ. ಸಮಸ್ತ ವಸ್ತುಗಳು ಅಂದರೆ, ಸೃಷ್ಟಿಯ ಚರಾಚರಜೀವಿಗಳಿಗಿಂತಲೂ ಅಂತ ಅರ್ಥ. ಮುನಿಗಳ ಪ್ರಶ್ನೆ ಏನೆಂದರೆ, ಸೃಷ್ಟಿಗೂ ಪೂರ್ವದಲ್ಲಿ ಇದ್ದ ಮತ್ತು ಈಗಿನ ಪ್ರಪಂಚಕ್ಕಿಂತಲೂ ಭಿನ್ನನಾದ ಶ್ರೇಷ್ಠನಾದವ ಯಾರು – ಎಂಬುದಾಗಿತ್ತು. ಸೃಷ್ಟಿಯ ಒಡೆಯನಾದ ಬ್ರಹ್ಮ ಎಲ್ಲಾ ರಹಸ್ಯ ಬಲ್ಲವನಾಗಿದ್ದರಿಂದ ಮುನಿಗಳು ತಮ್ಮ ಪ್ರಶ್ನೆಗೆ ಉತ್ತರ ಬಯಸಿ ಬ್ರಹ್ಮನಲ್ಲಿ ಬಂದಿದ್ದರು. ಆಗ ಬ್ರಹ್ಮ ಸೃಷ್ಟಿರಹಸ್ಯ ಹೇಳುತ್ತಾನೆ.

‘ಯಾವ ಪರಬ್ರಹ್ಮನನ್ನು ಮಾತುಗಳಿಂದ ವರ್ಣಿಸಲು, ಮನಸ್ಸಿನಿಂದ ಧ್ಯಾನಿಸಲೂ ಸಹ ಆಗುವುದಿಲ್ಲವೋ, ಮತ್ತು ಯಾವ ನಿತ್ಯವಸ್ತುವಾದ ಆ ಪರಬ್ರಹ್ಮದಿಂದ ಸೃಷ್ಟಿಕಾಲದಲ್ಲಿ ಬ್ರಹ್ಮ-ವಿಷ್ಣು-ರುದ್ರ-ಇಂದ್ರ ಮೊದಲಾದ ದೇವತೆಗಳೂ ಪಂಚಮಹಾಭೂತಗಳೂ ಇಂದ್ರಿಯಗಳೆಲ್ಲ ಉತ್ಪನ್ನವಾದವೋ, ಅಂತಹ ಜಗದೊಡೆಯನೂ ಸರ್ವಜ್ಞನೂ ಆದ ದೇವದೇವನಾದ ಪರಮೇಶ್ವರನು ಒಬ್ಬನಿದ್ದಾನೆ. ಇಲ್ಲಿ ನಿರ್ಗುಣ ಸ್ವರೂಪವಾದ ಪರಬ್ರಹ್ಮವು ನಿರ್ದೇಶಿಸಲ್ಪಟ್ಟಿದೆ. ಈ ನಿರ್ಗುಣ ಬ್ರಹ್ಮಸ್ವರೂಪವನ್ನು ಮಾತುಗಳಿಂದ ವರ್ಣಿಸುವುದಿರಲಿ, ಮನಸ್ಸಿನಲ್ಲಿ ಸಹ ಹೀಗೆಯೇ ಇರುವುದೆಂದು ಊಹಿಸಿ, ಧ್ಯಾನಮಾಡಲು ಸಹ ಸಾಧಾರಣ ಜನರಿಗೆ ಸಾಧ್ಯವಿಲ್ಲ. ತಪಸ್ವಿಗಳೂ ಸಹ ಪರಬ್ರಹ್ಮನನ್ನು ಸಾಕ್ಷಾತ್ಕರಿಸಲು ಬಹು ಶ್ರಮಪಡುವಷ್ಟು ಅಗಾಧ ಸ್ವರೂಪ ಅವನದು. ಈಗ ನಮಗೆ ಕಾಣುತ್ತಿರುವ ಪ್ರಪಂಚವು ಸೃಷ್ಟಿಪೂರ್ವದಲ್ಲಿ ಈ ಸ್ಥಿತಿಯಲ್ಲಿ ಇರಲಿಲ್ಲ.

‘ಸೃಷ್ಟಿಗೆ ಪೂರ್ವದಲ್ಲಿ ದೃಶ್ಯಪದಾರ್ಥಗಳು ಒಂದೂ ಇರಲಿಲ್ಲ. ಪರಬ್ರಹ್ಮವಸ್ತು ಒಂದೇ ತಾನೇ ತಾನಾಗಿ ಎಲ್ಲೆಲ್ಲಿಯೂ ವ್ಯಾಪಿಸಿತ್ತು. ನಿರ್ಗುಣಾತ್ಮಕವಾದ ಪರಬ್ರಹ್ಮನಲ್ಲಿ ಸೃಷ್ಟಿಮಾಡಬೇಕೆಂಬ ಇಚ್ಛೆ ಬಂದೊಡನೆಯೇ ಪ್ರಕೃತಿಗಳಲ್ಲಿ ರೂಪಾಂತರಗಳುಂಟಾಯಿತು. ಬಳಿಕ ಪ್ರಕೃತಿಯಿಂದ ಮಹದಾದಿತತ್ವಗಳೂ, ಅವುಗಳಿಂದ ಪಂಚಭೂತಾದಿಗಳೂ ಉದ್ಭವಿಸಿದವು. ಆ ಪಂಚಭೂತಗಳ ಪಂಚೀಕರಣಕ್ರಮದಿಂದ ನಾವು ಈಗ ಕಾಣುತ್ತಿರುವ ದೃಶ್ಯಪ್ರಪಂಚ ಸೃಷ್ಟಿಯಾಯಿತು. ಸತ್ವ–ರಜಸ್ಸು-ತಮೋಗುಣಗಳ ಸಮಾವಸ್ಥೆಯಲ್ಲಿ ಇರುವ ವಸ್ತುವೇ ನಿರ್ಗುಣಾತ್ಮಕ. ಈ ಮೂರು ಗುಣಗಳಲ್ಲಿ ಯಾವುದೊಂದು ಗುಣವೂ ಹೆಚ್ಚುಕಡಿಮೆ ಇಲ್ಲದ, ಸಮಾವಸ್ಥೆಯಲ್ಲಿ ಇರುತ್ತದೆ. ಸೃಷ್ಟಿಕಾಲದಲ್ಲಿ ಈ ಗುಣಗಳು ವ್ಯತ್ಯಸ್ತವಾಗಿ ವಿಷಮಾವಸ್ಥೆಗೆ ಬಂದಾಗ ಹೆಚ್ಚು ಕಡಿಮೆಯಾಗಿ ಮಾರ್ಪಡುವುದು. ಅದೇ ಸೃಷ್ಟಿ ಎಂದು ಸಾಂಖ್ಯದರ್ಶನದಲ್ಲಿ ಹೇಳಲಾಗಿದೆ’ ಅಂತ ಬ್ರಹ್ಮ ಹೇಳುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ


9606038256

✗ **ಮಹಿಳೆಯು ಕಾರು** ಓಡಿಸುತ್ತಿದ್ದಳು ಎಂಬ ಕಾರಣಕ್ಕೆ ತಾಲಿಬಾನಿಗಳು ತಾಯಿ ಹಾಗೂ ಮಗುವನ್ನು ಗುಂಡಿಟ್ಟು ಹತ್ಯೆ ಮಾಡಿದ್ದಾರೆ ಎನ್ನಲಾದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿದೆ. ವಿಡಿಯೊವನ್ನು ಹಂಚಿಕೊಂಡಿರುವ ಕೆಲವರು, ಇದನ್ನು ಭಾರತದ ಮುಸ್ಲಿಮರ ಜೊತೆ ಹೋಲಿಕೆ ಮಾಡುವ ಯತ್ನ ಮಾಡಿದ್ದಾರೆ. ‘ಭಾರತದಲ್ಲಿ ಮುಸ್ಲಿಮರು ಅಸುರಕ್ಷಿತ ಭಾವನೆ ಹೊಂದಿದ್ದಾರೆ. ಈ ಅಮಾಯಕರನ್ನು ಹೊಡೆದುರುಳಿಸಿದವರು ನಿಮ್ಮ ಮುಸ್ಲಿಂ ಸಹೋದರರೇ ಎನ್ನುವುದನ್ನು ತಿಳಿಯಬೇಕು’ ಎಂದು ಯೋಗಿ ಯೋಗೇಶ ಎಂಬುವರು ಟ್ವೀಟ್ ಮಾಡಿದ್ದಾರೆ.



✓ **ತಾಲಿಬಾನಿಯರು** ಮಹಿಳೆಯರ ಹಕ್ಕುಗಳನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ಆದರೆ ಈ ವಿಡಿಯೋಗೂ, ಅವರಿಗೂ ಸಂಬಂಧವಿಲ್ಲ ಎಂದು ಇಂಡಿಯಾಟುಡೇ ವರದಿ ಮಾಡಿದೆ. ಈ ಘಟನೆ ಪಾಕಿಸ್ತಾನದಲ್ಲಿ ನವೆಂಬರ್ ತಿಂಗಳಿನಲ್ಲಿ ನಡೆದಿದೆ. ಕಾರಿನಲ್ಲಿದ್ದ ಗಂಡ, ಹೆಂಡತಿ ಹಾಗೂ ಇಬ್ಬರು ಮಕ್ಕಳೂ ಹತರಾಗಿದ್ದಾರೆ. ಘಟನೆ ನಡೆದಾಗ ಗಂಡ ಕಾರು ಚಲಾಯಿಸುತ್ತಿದ್ದ ಎನ್ನಲಾಗಿದೆ. ಕಾರಿನ ನಂಬರ್ ಪ್ಲೇಟ್ ಗಮನಿಸಿದಾಗ, ಇದು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ್ದು ಎಂದು ತಿಳಿದುಬಂದಿದೆ. ಕುಟುಂಬದ ಹಗೆತನದ ಕಾರಣಕ್ಕೆ ಈ ಹತ್ಯೆ ನಡೆದಿದೆ. ಈ ಕುರಿತು ಡಾನ್ ನ್ಯೂಸ್ ಹಾಗೂ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಸುದ್ದಿಸಂಸ್ಥೆಗಳು ವಿವರವಾದ ವರದಿ ಮಾಡಿವೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಆಸೆಯ ವಿಷಗಾಳಿ

ಆಶೆ ಮಂಥರೆ, ನರವಿವೇಚನೆಯೆ ಕೈಕೇಯಿ |
ಬೀಸೆ ಮನದುಸಿರು ಮತಿದೀಪವಲೆಯುವುದು ||
ವಾಸನೆಗಳನುಕೂಲ ಸತ್ಯತರ್ಕಕೆ ಶೂಲ |
ಶೋಷಿಸಾ ವಾಸನೆಯ – ಮಂಕುತಿಮ್ಮ
|| 542 ||

ಪದ-ಅರ್ಥ: ನರವಿವೇಚನೆ = ಮನುಷ್ಯನ ವಿವೇಕ, ಮನದುಸಿರು = ಮನದ + ಉಸಿರು, ಮತಿದೀಪವಲೆಯುವುದು = ಮತಿದೀಪವು(ಬುದ್ಧಿಯೆಂಬ ದೀಪವು) + ಅಲೆಯುವುದು (ಹೊಯ್ದಾಡುವುದು), ವಾಸನೆಗಳನುಕೂಲ = ವಾಸನೆಗಳ + ಅನುಕೂಲ, ಶೂಲ = ಇರಿಯುವ ಉಪಕರಣ, ಶೋಷಿಸು = ಒಣಗಿಸು, ಇಂಗಿಸು.

ವಾಚ್ಯಾರ್ಥ: ಮಂಥರೆ ಆಸೆಯ ಪ್ರತೀಕ, ಕೈಕೇಯಿ ಮನುಷ್ಯನ ವಿವೇಚನೆಯ ಸಂಕೇತ. ಆಸೆಯ ಬಿಸಿಯ ಉಸಿರು ಬೀಸಿದಾಗ ತಿಳುವಳಿಕೆಯ ದೀಪ ಹೊಯ್ದಾಡುತ್ತದೆ. ಅದಕ್ಕೆ ಸರಿಯಾಗಿ ಪೂರ್ವಕರ್ಮದ ವಾಸನೆಗಳು ಅನುಕೂಲವಾಗಿ ಸತ್ಯಕ್ಕೆ ದಾರಿಯಾದ ತರ್ಕಕ್ಕೆ ಶೂಲವಾಗುತ್ತವೆ. ಆ ವಾಸನೆಗಳನ್ನು ಒಣಗಿಸು.

ವಿವರಣೆ: ರಾಮಾಯಣದ ಒಂದು ಪ್ರಸಂಗ ಮನುಷ್ಯ ಜೀವನಕ್ಕೆ ಹೇಗೆ ಮಾರ್ಗದರ್ಶಿಯಾದೀತು ಎಂಬುದನ್ನು ಈ ಕಗ್ಗ ತಿಳಿಸುತ್ತದೆ. ರಾಮಾಯಣದ ಮತ್ತು ನಮ್ಮ ಪುರಾಣದ ಕಥೆಗಳಲ್ಲಿ ಬರುವ ಪಾತ್ರಗಳು ಸಂಕೇತ ರೂಪದವು. ಕೈಕೇಯಿ ಸುಮನಸ್ಸಿನ, ವಿವೇಕದ ಪ್ರತೀಕ. ಆಕೆಗೆ ರಾಮನ ಮೇಲೆ ಅಪಾರ ಪ್ರೀತಿ. ಬಹುಶ: ಭರತನಿಗಿಂತಲೂ, ರಾಮನ ಮೇಲೆಯೇ ಅವಳ ವಾತ್ಸಲ್ಯ. ಆಕೆ ನಾಲ್ಕು ಮಕ್ಕಳನ್ನು ಆತ್ಯಂತಿಕವಾಗಿ ಪ್ರೀತಿಸಿದವಳು. ಅದು ಮನುಷ್ಯನ ಸಹಜ ಸ್ವಭಾವ. ಕೈಕೇಯಿ ಹಾಗೆಯೇ ಉಳಿದಿದ್ದರೆ ರಾಮಾಯಣವೆಲ್ಲಿ ಆಗುತ್ತಿತ್ತು? ಆಕೆಯೊಂದಿಗೇ ಅಯೋಧ್ಯೆಗೆ ಬಂದ ದಾದಿ ಮಂಥರೆಗೆ ಕೈಕೇಯಿಯ ಕಲ್ಯಾಣವೊಂದೇ ಮುಖ್ಯ. ಅದು ತಪ್ಪೂ ಅಲ್ಲ. ಯಾಕೆಂದರೆ ಕೈಕೇಯಿ ಮಂಥರೆಯ ಬದುಕಿನ ಕೇಂದ್ರಬಿಂದು. ಆಕೆಯ ಒಳಿತನ್ನು ಬಿಟ್ಟು ಮಂಥರೆಗೆ ಬೇರೆ ಯಾವ ಸ್ವಾರ್ಥ ಚಿಂತನೆಯೂ ಇಲ್ಲ. ಆಕೆಯ ಆಸೆಯೆಂದರೆ ತನ್ನ ಪ್ರೀತಿಯ ಕೈಕೇಯಿಯ ಮಗ ಭರತ ಚಕ್ರವರ್ತಿಯಾದರೆ ಕೈಕೇಯಿ ಭದ್ರವಾಗುತ್ತಾಳೆ, ಪ್ರಮುಖಳಾಗುತ್ತಾಳೆ. ಆಕೆಗೂ ರಾಮನ ಮೇಲೆ ದ್ವೇಷವಿಲ್ಲ. ಇದ್ದದ್ದು ಕೈಕೇಯಿಯ ಮತ್ತು ಭರತನ ಮೇಲಿನ ಅನನ್ಯ ಪ್ರೀತಿ. ಅದಕ್ಕಾಗಿ ಆಕೆ ಆಸೆಯ ಪ್ರತಿರೂಪವಾಗಿ ಕೈಕೇಯಿಯ ಮನಸ್ಸನ್ನು ಕೆಡಿಸುತ್ತಾಳೆ. ಅದನ್ನು ಕಗ್ಗ ಸುಂದರವಾಗಿ, “ಮನದುಸಿರು ಬೀಸೆ ಮತಿದೀಪವಲೆಯುವುದು” ಎನ್ನುತ್ತದೆ. ಆ ಆಸೆಯ ವಿಷಗಾಳಿ ಬೀಸಿದಾಗ ಕೈಕೇಯಿಯ ಸುಮನಸ್ಸು ಹೊಯ್ದಾಡುತ್ತದೆ, ಆಸೆಯ ಬಲೆಗೆ ಬೀಳುತ್ತದೆ.

ಈ ವಿಷಗಾಳಿಗೆ ಮತ್ತಷ್ಟು ಪುಷ್ಟಿ ದೊರೆತರೆ ಏನಾದೀತು? ಮತಿಯ ದೀಪವೇ ಆರಿಹೋಗುತ್ತದೆ. ಈ ಆಸೆಯ ಗಾಳಿಗೆ ಮತ್ತಷ್ಟು ವೇಗವನ್ನು ಕೊಡುವುದು ನಮ್ಮ ವಾಸನೆಗಳು. ಅವು ನಾವು ಹಿಂದೆ ಮಾಡಿದ ಕರ್ಮಗಳ ಪ್ರತಿಫಲ. ಹಿಂದೂಸಿದ್ಧಾಂತದ ಪ್ರಕಾರ, ಬಾಹ್ಯಪ್ರಪಂಚದಲ್ಲಿ, ಅದು ಈ ಜನ್ಮದಲ್ಲೂ ಆಗಬಹುದು ಅಥವಾ ಹಿಂದಿನ ಜನ್ಮಗಳಲ್ಲೂ ಆಗಿರಬಹುದು, ಮಾಡಿದ ಪ್ರತಿಯೊಂದು ಕರ್ಮವೂ ಪರಿಣಾಮವನ್ನು ಮಾಡಿಯೇ ತೀರುತ್ತದೆ. ವೃಕ್ಷವೊಂದನ್ನು ಕತ್ತರಿಸುವಾಗ ಕೊಡಲಿಯಿಂದ ಹಾಕುವ ಪ್ರತಿಯೊಂದು ಹೊಡೆತವೂ ಮರವನ್ನು ಹೇಗೆ ಅಸ್ಥಿರಗೊಳಿಸುವುದೋ ಹಾಗೆಯೇ ಅದು ನಮ್ಮ ಅಸ್ತಿತ್ವದ ಮೇಲೂ ತನ್ನ ಗುರುತನ್ನು ಉಳಿಸುತ್ತದೆ.

ಆಸೆ ಮತ್ತು ವಾಸನೆಗಳು ಸೇರಿ ಪ್ರಬಲವಾದಾಗ, ನಮ್ಮನ್ನು ಸತ್ಯದ ದಾರಿಯಲ್ಲಿ ಕರೆದೊಯ್ಯುವ ತರ್ಕಕ್ಕೆ ಅವು ತಡೆಗೋಡೆಯಾಗುತ್ತವೆ, ಶೂಲವಾಗುತ್ತವೆ. ಆಗ ಸತ್ಯ ಹೊಳಪನ್ನು ಕಳೆದುಕೊಂಡು ಮರೆಯಾಗುತ್ತದೆ. ಕೈಕೇಯಿಗೆ ಆದದ್ದು ಅದೇ. ಕಗ್ಗದ ಸಂದೇಶವೇ ಇದು. ವಾಸನೆಗಳನ್ನು ನಿಗ್ರಹಿಸಬೇಕು, ಅವುಗಳನ್ನು ಒಣಗಿಸಬೇಕು. ಬರೀ ಕುಡಿ ಚಿವುಟಿದರೆ ಸಾಲದು. ಅದು ಮತ್ತೆ ಚಿಗುರುತ್ತದೆ. ಅದನ್ನು ಬೇರುಸಹಿತ ಒಣಗಿಸಬೇಕು. ಆಗ ಮಾನವನ ವಿವೇಚನೆ ಸ್ಥಿರವಾಗುತ್ತದೆ, ಆಸೆಯ ಗಾಳಿಗೆ ನಲುಗಿ ಹೋಗುವುದಿಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜನವರಿ 17, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಹೇಮಂತ ಋತು ಮಕರ ಮಾಸದ 03 ನೇ ದಿನ ತಿಥಿ: (ಪೌಷ ಶುಕ್ಲ) ಪೂರ್ಣಿಮಾ ಗಂ. 29-18 ನಕ್ಷತ್ರ: ಪುನರ್ವಸು ಗಂ. 28-37 ಯೋಗ: ವೈಧೃತಿ ಗಂ. 15-52, ಕರಣ: ವಿಷ್ಟಿ ಗಂ. 16-22, ಬವ ಗಂ. 29-18.ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 07-01 ಸೂರ್ಯಾಸ್ತ : 06-20 ಮುಸ್ಲಿಂ ದಿನಾಂಕ : 22 ಜುಮಾದುಸ್ಸಾನಿ ದಿನ ವಿಶೇಷ : ಪೌಷಿ ಪೂರ್ಣಿಮಾ, ಪುಷ್ಯಾಭಿಷೇಕ ಯಾತ್ರೆ ಅದೃಷ್ಟ ಸಂಖ್ಯೆ : 21, 8

ಮೇಷ: ನಾಳೆಯ ಯೋಜನೆಗಳಿಗೆ ಇಂದು ಹೆಚ್ಚು ಗಮನ ಕೊಡುವುದರಿಂದ ಕೆಲಸ ಪೂರ್ಣಗೊಳ್ಳಲಿದೆ. ನಿಮ್ಮ ವ್ಯಾಪಾರ ವ್ಯವಹಾರಗಳಿಗೆ ಹೊಸ ತಿರುವು ಮೂಡಲಿದೆ.

ವೃಷಭ: ಪ್ರಸ್ತುತ ಕೆಲಸದಲ್ಲೇ ಮುಂದುವರೆಯುವುದರಿಂದ ಧನ ಮತ್ತು ಗೌರವ ಸಂಪಾದನೆಯ ಅವಕಾಶಗಳನ್ನು ಪಡೆಯುವಿರಿ. ನಿಮ್ಮ ಗೌರವ ಪ್ರತಿಷ್ಠೆ ಹೆಚ್ಚಲು ಇನ್ನೂ ಸಮಯ ಬೇಕಿದೆ.

ಮಿಥುನ: ಸದಾ ಕಾಲದಲ್ಲಿ ಸಕಾರಾತ್ಮಕ ನಡವಳಿಕೆಗಳಿಂದಾಗಿ ಲಾಭ ಕಂಡುಕೊಳ್ಳಲಿದ್ದೀರಿ. ನಿಮ್ಮ ಸಲಹೆ ಸೂಚನೆಗಳನ್ನು ಒಪ್ಪುವಂತೆ ವ್ಯಕ್ತಿಯ ಮನಃ ಪರಿವರ್ತನೆ ಮಾಡುವಲ್ಲಿ ಸಫಲರಾಗುತ್ತೀರಿ.

ಕರ್ಕಾಟಕ: ಆರಕ್ಷಕ ಸೇವೆಯವರಿಗೆ ಈ ದಿನ ಹೆಚ್ಚಿನ ಜವಬ್ದಾರಿ ಇರುವುದು. ರಫ್ತು ವ್ಯಾಪಾರಗಳು ಲಾಭ ತರಲಿದೆ. ಶ್ರೀಶನೈಶ್ಚರನ ಕೃಪೆಯನ್ನು ಸಂಪಾದಿಸಿದಲ್ಲಿ ಗೃಹದಲ್ಲಿ ನೆಮ್ಮದಿ, ಸುಖ ವೃದ್ಧಿಯಾಗುವುದು.

ಸಿಂಹ: ಇಂದು ಮೇಲಧಿಕಾರಿಯಿಂದಲೋ, ಗುರು-ಹಿರಿಯರಿಂದಲೋ ಉತ್ತಮವಾದ ಪ್ರಶಂಸೆಯ ಮಾತುಗಳು ಕೇಳಿಬರಲಿದೆ. ತಾಂತ್ರಿಕ ವಿದ್ಯಾರ್ಥಿಗಳಿಗೆ ಹುದ್ದೆಗಳು ಅರಸಿ ಬರಲಿದೆ.

ಕನ್ಯಾ: ಜನರನ್ನು ಆಕರ್ಷಿಸುವ ಕಲೆ ನಿಮ್ಮಲ್ಲಿ ಚೆನ್ನಾಗಿರುವುದರಿಂದ ಈ ದಿನ ನಿಮ್ಮೆಲ್ಲಾ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣುವಿರಿ. ವ್ಯಾಪಾರ ವಹಿವಾಟುಗಳಲ್ಲಿ ಮುನ್ನಡೆ ಇರುವುದು.

ತುಲಾ: ನಿಮ್ಮ ಹೆಚ್ಚಿನ ಕೆಲಸದ ಬಗ್ಗೆ ಪ್ರೀತಿ ಪಾತ್ರರೊಡನೆ ಸಮಾಲೋಚನೆಯನ್ನು ನಡೆಸುವಿರಿ. ಗೃಹ ನಿರ್ಮಾಣದಂತಹ ವಿಚಾರವನ್ನು ಅವಲೋಕಿಸಲು ಇದು ಒಳ್ಳೆಯ ದಿನವಾಗಿದೆ.

ವೃಶ್ಚಿಕ: ಅತಿಯಾದ ಖರ್ಚು ವೆಚ್ಚಗಳು ಈ ದಿನ ತಗ್ಗುವುದು. ನೆರೆಹೊರೆಯವರೊಂದಿಗೆ ಸೌಹಾರ್ದದಿಂದ ವರ್ತಿಸುವಿರಿ. ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ಹೆಚ್ಚಿನ ಬಂಡವಾಳ ತೊಡಗಿಸುರಿ. ಆರೋಗ್ಯ ಉತ್ತಮವಾಗಿರುವುದು.

ಧನು: ಮನಸ್ಸಿಗೆ ಶಾಂತಿ ಹಾಗೂ ಸಂತೋಷ ಇದ್ದು ವಸ್ತ್ರಾಭರಣಗಳನ್ನು ಖರೀದಿ ಮಾಡುವಿರಿ. ಮನೆಯಲ್ಲಿ ನಡೆಯುವ ಶುಭಕಾರ್ಯಗಳ ಬಗ್ಗೆ ಮನೆಯವರೊಂದಿಗೆ ಚರ್ಚೆ ನಡೆಯುವುದು.

ಮಕರ: ಚರ್ಮದ ವಸ್ತುಗಳ ಮಾರಾಟಗಾರರಿಗೆ ವಿದೇಶದಿಂದ ಹೆಚ್ಚಿನ ಕೆಲಸದ ಅವಕಾಶಗಳು ಬರುವುವು. ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹೆಚ್ಚಿನ ಅಧಿಕಾರವನ್ನು ಪಡೆದುಕೊಳ್ಳುವಲ್ಲಿ ಸಫಲರಾಗುವಿರಿ.


ಕುಂಭ: ವ್ಯವಹಾರಗಳಲ್ಲಿ ನಿರೀಕ್ಷೆಗೂ ಮೀರಿದ ಆದಾಯವಿದೆ. ಸಾಮಾಜಿಕ ಜೀವನದಲ್ಲಿ ಹೆಚ್ಚಿನ ಮನ್ನಣೆ ಪಡೆದುಕೊಳ್ಳುವಿರಿ. ತೆರಿಗೆ ಅಧಿಕಾರಿಗಳಿಗೆ ಪ್ರಶಂಸೆಯ ಮಾತುಗಳು ಕೇಳಲು ಸಿಗುವುದು.

ಮೀನ: ದಿನದ ಆರಂಭದಲ್ಲಿ ವಿಪರೀತ ಶ್ರಮ ಪಡಬೇಕಾಗಿ ಬರುವುದು. ನಿಮ್ಮ ಜೀವನ ಶೈಲಿಯಲ್ಲಿ ಕೆಲವೊಂದು ಬದಲಾವಣೆಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ.

ಪದಬಂಧ 4841 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಮೋಗುಣದಿಂದ ಕೂಡಿರುವುದು (3)
3.ಎರಡು ಹರಿದಾರಿಯನ್ನು ಹೀಗೆನ್ನುವರು (3)
5.ಅಭಿಪ್ರಾಯ ಭೇದ (5)
7.ನಾಕದಲ್ಲಿ ತೂರಿಸಿದ ಮೂಗು (3)
8.ಉದ್ದವಾಗಿ ಬಾಗಿರುವ ತುತ್ತೂರಿ (3)
9. ಕಲಾಬತ್ತು ಅಥವಾ ಜರಿ (3)
11.ಗರ ಬಡಿದಂತಿರುವ ಪತಿವ್ರತೆ (3)
13.ಧ್ಯಾನ ಮಾಡಲು ಸೂಕ್ತವಾದ ಕೈ ತೋಟ! (3)
15.ಲಾಭವಲ್ಲ! ಇದು ನಷ್ಟ ! (3)
16.ಲೋಹದ ಹಕ್ಕಿಯಲ್ಲಿನ ಪಯಣ (5)
17.ಬಿದಿರುಕೊಳವೆಯಿಂದಾದ ಊದುವ ವಾದ್ಯ (3)
18.ಕೆಲಸದಲ್ಲಿ ನಿಪುಣನಾದವನು (3)

ಮೇಲಿಂದ ಕೆಳಕ್ಕೆ
2.ಸಭೆಯಲ್ಲಿ ಕುಳಿತಿರುವವನು (3)
3.ಈತ ಹಾಡುಗಾರ (3)
6.ಭಿಕ್ಷುಕ ಇಲ್ಲಿದ್ದಾನೆ (3)
9.ಸಲೀಸು ಎಂದು ರಾಗವಾಗಿ ಹೇಳಿ! (3)
10.ಈಕೆ ಸ್ನೇಹಿತೆ (3)
12.ರಸ ಒಸರುವ ಜಿಹ್ವೆ (3)
14.ನಲಿಯುತ್ತಿರುವ ಕೇಕಿ (3)
15. ತಿರುಗಿ ಹೀಗೆ ಕೋಪಗೊಳ್ಳು (3)



4840ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಯೋಗ 6.ಬೇಜವಾಬ್ದಾರಿ
7.ಚರಕ 10.ದುರಭಿಮಾನಿ
15.ಸಂಪನ್ನ 16.ಭವಬಂಧನ
17.ಕಕ್ಕಶಿ

ಮೇಲಿಂದ ಕೆಳಕ್ಕೆ:
1.ಪ್ರವಚನ 2.ಗಣಕ
3.ಸೋಂಬೇರಿ
4.ಜೀವಾತ್ಮ 5.ಪರಿಣಾಮ
8.ಒರಟ 9.ಸಾಮಾನ್ಯ
11.ಪ್ರಲೋಭನ
12.ಭಿನ್ನರಾಶಿ 13.ಸಂಬಂಧ
14.ಜನತೆ 15.ಸಂದೂಕ

ಸುಡೊಕು 5227

	6			2		5		
5		4			7		2	3
	2		5			6		7
8		1		3		7		9
			9	7	8		1	
9		2		5		3		6
7		3		9				
	8		7		5	9	3	
		9		8				5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5226 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಕೋವಿಡ್ ಲಸಿಕೆ ವಿತರಣೆ ಅಭಿಯಾನಕ್ಕೆ ಒಂದು ವರ್ಷ • ಎರಡನೇ ಅಲೆ ಬಳಿಕ ಲಸಿಕೆ ನೀಡಿಕೆಗೆ ವೇಗ

2ನೇ ಡೋಸ್‌ನಲ್ಲಿ ಹಿಂದೆ ಬಿದ್ದ 18 ಜಿಲ್ಲೆಗಳು

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ಪ್ರಾರಂಭವಾಗಿ ಒಂದು ವರ್ಷ ಪೂರ್ಣಗೊಂಡಿದೆ. ಈ ಅವಧಿಯಲ್ಲಿ 18 ವರ್ಷಗಳು ಮೇಲ್ಪಟ್ಟವರಿಗೆ ಎರಡೂ ಡೋಸ್ ವಿತರಣೆಯಲ್ಲಿ ಬೆಂಗಳೂರು ನಗರ ಜಿಲ್ಲೆ ಮಾತ್ರ ಶೇ 100 ರಷ್ಟು ಸಾಧನೆ ಮಾಡಿದೆ. 18 ಜಿಲ್ಲೆಗಳು ಎರಡನೇ ಡೋಸ್ ವಿತರಣೆಯಲ್ಲಿ ಹಿಂದೆ ಬಿದ್ದಿದ್ದು, ಶೇ 85ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಗುರಿ ಸಾಧಿಸಿವೆ.

ರಾಜ್ಯದಲ್ಲಿ 2021 ಜ.16ರಂದು ಲಸಿಕೆ ವಿತರಣಾ ಅಭಿಯಾನಕ್ಕೆ ಚಾಲನೆ ದೊರೆತಿತ್ತು. ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಆಸ್ಪತ್ರೆಯ ವಾರ್ಡ್ ಸಿಬ್ಬಂದಿ ನಾಗರತ್ನಾ ಕೆ. ಅವರು ಮೊದಲಿಗರಾಗಿ 'ಕೋವಿಶೀಲ್ಡ್' ಲಸಿಕೆ ಪಡೆದುಕೊಂಡಿದ್ದರು. ಪ್ರಾರಂಭಿಕ ದಿನಗಳಲ್ಲಿ ಆರೋಗ್ಯ ಕಾರ್ಯಕರ್ತರು, ಕೋವಿಡ್ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಿದ್ದ ಸರ್ಕಾರ, ಬಳಿಕ ಲಸಿಕೆ ಲಭ್ಯತೆ ಅನುಸಾರ 60 ವರ್ಷಗಳು ಮೇಲ್ಪಟ್ಟವರಿಗೆ ಹಾಗೂ 18 ರಿಂದ 60 ವರ್ಷದೊಳಗಿನ ಎಲ್ಲರಿಗೂ ಲಸಿಕೆ ಒದಗಿಸಲಾರಂಭಿಸಿತು.

ಈ ವಯೋಮಿತಿಯವರಿಗೆ 2021ರ ಡಿಸೆಂಬರ್ ಅಂತ್ಯಕ್ಕೆ ಎರಡೂ ಡೋಸ್ ಲಸಿಕೆ ವಿತರಿಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿತ್ತು. ಆದರೆ, ಪ್ರಾರಂಭಿಕ ದಿನಗಳಲ್ಲಿ ಲಸಿಕೆ ಪೂರೈಕೆಯಲ್ಲಿ ವ್ಯತ್ಯಯ, ಲಸಿಕೆ ಪಡೆಯಲು ಜನರ ಹಿಂಜರಿಕೆ ಸೇರಿದಂತೆ ವಿವಿಧ ಕಾರಣಗಳಿಂದ ಈ ಗುರಿ ಸಾಕಾರವಾಗಲಿಲ್ಲ. ರಾಜ್ಯದಲ್ಲಿ 4.89 ಕೋಟಿ ಮಂದಿ 18 ವರ್ಷಗಳು ಮೇಲ್ಪಟ್ಟವರು ಎಂದು ಗುರುತಿಸಲಾಗಿದೆ. ಇವರಲ್ಲಿ ಶೇ 99 ರಷ್ಟು ಮಂದಿ ಮೊದಲ ಡೋಸ್ ಪಡೆದರೆ, ಶೇ 83 ರಷ್ಟು ಮಂದಿ ಎರಡನೆ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

ಇದೇ ತಿಂಗಳ 3 ರಿಂದ 15– 18 ವರ್ಷದೊಳಗಿನವರಿಗೂ ಲಸಿಕೆ ವಿತರಿಸಲಾಗುತ್ತಿದೆ. ಈ ವಯೋಮಾನದ 31.75 ಲಕ್ಷ ಮಂದಿಯನ್ನು ಗುರುತಿಸಲಾಗಿದ್ದು, ಅವರಲ್ಲಿ ಶೇ 60ಕ್ಕೂ ಅಧಿಕ ಮಂದಿ ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇದೇ 10 ರಿಂದ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ ಅಸ್ವಸ್ಥಗೊಂಡಿರುವ 60 ವರ್ಷಗಳು ಮೇಲ್ಪಟ್ಟವರಿಗೆ ಮೂರನೇ ಡೋಸ್ ನೀಡಲಾಗುತ್ತಿದೆ. ಎರಡನೇ ಡೋಸ್ ಪಡೆದು 9 ತಿಂಗಳಾದವರಿಗೆ ಸುರಕ್ಷತೆಯ ದೃಷ್ಟಿಯಿಂದ ಮತ್ತೊಂದು ಡೋಸ್ ಲಸಿಕೆ ಒದಗಿಸಲಾಗುತ್ತಿದೆ.

ದ್ವಿತೀಯಾರ್ಧದಲ್ಲಿ ವೇಗ: ರಾಜ್ಯದಲ್ಲಿ ಜನವರಿಯಲ್ಲಿ ಲಸಿಕೆ ವಿತರಣೆ ಪ್ರಾರಂಭವಾದರೂ, ದೈನಂದಿನ ಸರಾಸರಿ ಮಾರ್ಚ್ ತಿಂಗಳ ನಂತರ ಲಕ್ಷದ ಗಡಿ ದಾಟಿತ್ತು. ಬಳಿಕ ಲಸಿಕೆ ವಿತರಣೆ ಏರುಗತಿ ಪಡೆದುಕೊಂಡಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ಪ್ರತಿನಿತ್ಯ ಸರಾಸರಿ 4.83 ಲಕ್ಷ ಡೋಸ್‌ಗಳಷ್ಟು ಲಸಿಕೆಯನ್ನು ವಿತರಿಸಲಾಗಿತ್ತು. ಈಗ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ 7 ಸಾವಿರಕ್ಕೂ ಅಧಿಕ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತಿದೆ. ಈ ತಿಂಗಳು ಪ್ರತಿನಿತ್ಯ ಸರಾಸರಿ 3.38 ಲಕ್ಷದಷ್ಟು ಡೋಸ್‌ಗಳನ್ನು ವಿತರಿಸಲಾಗಿದೆ.

ಕೋವಿಡ್ ಲಸಿಕೆಯ ವಿವರ (ಜ.16)

- **9.14** ಕೋಟಿ — ಈವರೆಗೆ ರಾಜ್ಯದಲ್ಲಿ ವಿತರಿಸಲಾದ ಕೋವಿಡ್ ಲಸಿಕೆಯ ಡೋಸ್‌ಗಳು
- **5.05** ಕೋಟಿ — ಮೊದಲ ಡೋಸ್ ಲಸಿಕೆ ಪಡೆದವರು
- **4.05** ಕೋಟಿ — ಎರಡನೇ ಡೋಸ್ ಲಸಿಕೆ ಪಡೆದವರು
- **7.84** ಕೋಟಿ — ವಿತರಿಸಲಾದ 'ಕೋವಿಶೀಲ್ಡ್' ಲಸಿಕೆಯ ಡೋಸ್‌ಗಳು
- **1.29** ಲಕ್ಷ — ವಿತರಿಸಲಾದ 'ಕೋವ್ಯಾಕ್ಸಿನ್' ಲಸಿಕೆಯ ಡೋಸ್‌ಗಳು



ರಾಜ್ಯದಲ್ಲಿ 9.14 ಕೋಟಿಗೂ ಅಧಿಕ ಡೋಸ್‌ಗಳು ಲಸಿಕೆ ವಿತರಿಸಲಾಗಿದೆ. ಶೇ 99 ರಷ್ಟು ಮಂದಿ ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದು, ಉತ್ತಮ ಸಾಧನೆಯಾಗಿದೆ.

ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

2ನೇ ಡೋಸ್: ಮುಂದಿರುವ ಅಗ್ರ 5 ಜಿಲ್ಲೆಗಳು

ಜಿಲ್ಲೆ	ಪ್ರಮಾಣ (%)
ಬೆಂಗಳೂರು ನಗರ	106.7%
ಕೊಡಗು	95.7%
ಮಂಡ್ಯ	89.8%
ವಿಜಯಪುರ	88.8%
ರಾಮನಗರ	88.6%

ಹಿಂದುಳಿದ 5 ಜಿಲ್ಲೆಗಳು

ಜಿಲ್ಲೆ	ಪ್ರಮಾಣ (%)
ಕಲಬುರಗಿ	71.9%
ರಾಯಚೂರು	74.1%
ಯಾದಗಿರಿ	76%
ಹಾವೇರಿ	77%
ಚಿತ್ರದುರ್ಗ	78.3%

ಪ್ರಜಾವಾಣಿ ಗ್ರಾಫಿಕ್ಸ್

ಲಸಿಕೆ ಕಾರ್ಯಕ್ರಮಕ್ಕೆ ವರ್ಷ: ವಿಶೇಷ ಅಂಚೆ ಚೀಟಿ ಬಿಡುಗಡೆ

156 ಕೋಟಿಗೂ ಅಧಿಕ ಡೋಸ್ ನೀಡಿಕೆ

ನವದೆಹಲಿ (ಪಿಟಿಐ): ದೇಶದಾದ್ಯಂತ ನಡೆಯುತ್ತಿರುವ ಕೋವಿಡ್–19 ವಿರುದ್ಧದ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಭಾನುವಾರ ಒಂದು ವರ್ಷ ತುಂಬಿತು. ಈ ಅವಧಿಯಲ್ಲಿ 156.76 ಕೋಟಿಗೂ ಅಧಿಕ ಡೋಸ್‌ಗಳನ್ನು ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಲಸಿಕೆ ಕಾರ್ಯಕ್ರಮಕ್ಕೆ ಒಂದು ವರ್ಷ ತುಂಬಿರುವುದು ಹಾಗೂ ಕೋವ್ಯಾಕ್ಸಿನ್ ಲಸಿಕೆಯನ್ನು ದೇಶದಲ್ಲಿಯೇ ಅಭಿವೃದ್ಧಿಪಡಿಸಿ, ಉತ್ಪಾದಿಸಿದ ಸಾಧನೆಯ ನೆನಪಿಗಾಗಿ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ವಿಶೇಷ ಅಂಚೆ ಚೀಟಿಯನ್ನು ವರ್ಚುವಲ್ ವಿಧಾನದ ಮೂಲಕ ಬಿಡುಗಡೆ ಮಾಡಿದರು.

ಸಾಧನೆ: ವಯಸ್ಕರ ಪೈಕಿ ಶೇ 93ಕ್ಕೂ ಹೆಚ್ಚು ಜನರು ಲಸಿಕೆಯ ಮೊದಲ ಡೋಸ್ ಪಡೆದುಕೊಂಡಿದ್ದರೆ, ಎರಡೂ ಡೋಸ್‌ಗಳನ್ನು ಪಡೆದವರ ಪ್ರಮಾಣ ಶೇ 69.8ರಷ್ಟು ಎಂದು ಸಚಿವಾಲಯ ತಿಳಿಸಿದೆ.

ಕಳೆದ ವರ್ಷ ಜನವರಿ 16ರಂದು ಆರೋಗ್ಯ ಕಾರ್ಯಕರ್ತರಿಗೆ ಮೊದಲು ಲಸಿಕೆ ಹಾಕುವ ಮೂಲಕ ದೇಶದಾದ್ಯಂತ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಎರಡನೇ ಹಂತದ ಲಸಿಕಾ ಕಾರ್ಯಕ್ರಮಕ್ಕೆ ಫೆಬ್ರುವರಿ 2ರಂದು ಚಾಲನೆ ನೀಡಲಾಯಿತು. ಈ ಹಂತದಲ್ಲಿ ಕೋವಿಡ್–19 ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರಿಗೆ ಲಸಿಕೆ ನೀಡಲಾಯಿತು.


60 ವರ್ಷ ಮೇಲ್ಪಟ್ಟವರಿಗೆ ಹಾಗೂ ಮಧುಮೇಹ, ಅಧಿಕ ರಕ್ತದೊತ್ತಡ ಸೇರಿದಂತೆ ಇತರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ 45 ವರ್ಷ ಮೇಲ್ಪಟ್ಟ ವಯೋಮಾನದವರಿಗೆ ಮಾರ್ಚ್ 1ರಿಂದ ಲಸಿಕೆ ನೀಡಲು ಆರಂಭಿಸಲಾಯಿತು. ಅಲ್ಲದೇ, 45 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡುವುದಕ್ಕೆ ಏಪ್ರಿಲ್ 1ರಿಂದ ಹಾಗೂ 18 ವರ್ಷ ಮೇಲ್ಪಟ್ಟವರಿಗೆ ಮೇ 1ರಿಂದ ಲಸಿಕೆ ನೀಡುವುದಕ್ಕೆ ಚಾಲನೆ ನೀಡಲಾಯಿತು. ಈ ವರ್ಷ ಜನವರಿ 3ರಿಂದ 15–18 ವರ್ಷ ವಯೋಮಾನದವರಿಗೆ ನೀಡಲು ಆರಂಭಿಸಲಾಗಿದೆ.

ಬೃಹತ್ ಕಾರ್ಯಕ್ರಮ: ಕೋವಿಡ್ ವಿರುದ್ಧದ ಲಸಿಕೆಯನ್ನು ತನ್ನ ಜನಸಂಖ್ಯೆಯ ಪೈಕಿ ಹೆಚ್ಚು ಜನರಿಗೆ ನೀಡಿದ ಜಗತ್ತಿನ ರಾಷ್ಟ್ರಗಳ ಸಾಲಿನಲ್ಲಿ ಭಾರತ ನಿಲ್ಲುತ್ತದೆ. 9 ತಿಂಗಳ ಅಲ್ಪ ಅವಧಿಯಲ್ಲಿಯೇ 100 ಕೋಟಿಗೂ ಅಧಿಕ ಡೋಸ್ ಲಸಿಕೆ ನೀಡುವ ಮೂಲಕ ಭಾರತ ಅಭೂತಪೂರ್ವ ಸಾಧನೆ ಮಾಡಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಒಂದೇ ದಿನ 2.51 ಡೋಸ್ ಲಸಿಕೆ ನೀಡಿ, ದಾಖಲೆ ಮಾಡಿರುವ ಹೆಗ್ಗಳಿಕೆಯೂ ಭಾರತದ್ದಾಗಿದೆ ಎಂದೂ ಸಚಿವಾಲಯ ತಿಳಿಸಿದೆ.



ನವದೆಹಲಿಯಲ್ಲಿ ಭಾನುವಾರ ಆರೋಗ್ಯ ಕಾರ್ಯಕರ್ತರೊಬ್ಬರು ವೃದ್ಧೆಗೆ ಕೋವಿಡ್ ಲಸಿಕೆ ನೀಡಿದರು –ಪಿಟಿಐ ಚಿತ್ರ



ಲಸಿಕೆಯಿಂದಾಗಿ ಕೋವಿಡ್–19 ವಿರುದ್ಧದ ಹೋರಾಟಕ್ಕೆ ದೊಡ್ಡ ಬಲ ಸಿಕ್ಕಂತಾಯಿತು. ಜನರ ಪ್ರಾಣ ಉಳಿಯಿತು. ಈ ಲಸಿಕೆ ಕಾರ್ಯಕ್ರಮದೊಂದಿಗೆ ಗುರುತಿಸಿಕೊಂಡಿರುವ ಪ್ರತಿಯೊಬ್ಬರಿಗೂ ಧನ್ಯವಾದ ಹೇಳುತ್ತೇನೆ. ಕಾರ್ಯಕ್ರಮಕ್ಕೆ ಯಶಸ್ಸು ಸಿಗುವಲ್ಲಿ ನಮ್ಮ ವೈದ್ಯರು, ನರ್ಸ್‌ಗಳು ಹಾಗೂ ಆರೋಗ್ಯ ಕಾರ್ಯಕರ್ತರ ಪಾತ್ರ ಅನನ್ಯ

ನರೇಂದ್ರ ಮೋದಿ, ಪ್ರಧಾನಿ

'ಆರೋಗ್ಯವಾಣಿ -104' ಸ್ಥಗಿತ

ಒಂದನೇ ಪುಟದಿಂದ

2013ರಲ್ಲಿ ಹುಬ್ಬಳ್ಳಿ ಹಾಗೂ 2018ರಲ್ಲಿ ಬೆಂಗಳೂರಿನಲ್ಲಿ ಈ ಸಹಾಯವಾಣಿಯನ್ನು ಆರಂಭಿಸಲಾಗಿತ್ತು. ಆದರೆ, ₹ 40 ಲಕ್ಷ ಬಿಲ್ ಬಾಕಿ ಉಳಿಸಿಕೊಂಡಿದ್ದ ಕಾರಣಕ್ಕೆ ಕೇಂದ್ರದ ದೂರವಾಣಿ ಸಂಪರ್ಕವನ್ನು ಬಿಎಸ್‌ಎನ್‌ಎಲ್ ಕಡಿತಗೊಳಿಸಿತ್ತು. ಹೀಗಾಗಿ, ನ. 29ರಿಂದಲೇ ಸಹಾಯವಾಣಿಯ ಚಟುವಟಿಕೆ ಸ್ಥಗಿತಗೊಳಿಸಿರುವ ಸಂಸ್ಥೆ, ನ. 30ರಂದು ಸರ್ಕಾರಕ್ಕೆ ನೋಟಿಸ್ ನೀಡಿತ್ತು. ಆ ನೋಟಿಸ್‌ನಲ್ಲಿ ಸರ್ಕಾರ ಬಾಕಿ ಉಳಿಸಿಕೊಂಡಿರುವ ₹ 24.12 ಕೋಟಿ ಪಾವತಿಸುವಂತೆ ಉಲ್ಲೇಖಿಸಿತ್ತು.

ನವೆಂಬರ್ ಅಂತ್ಯದ ಒಳಗೆ ₹ 10 ಕೋಟಿ ನೀಡುವುದಾಗಿ ಸಂಸ್ಥೆಗೆ ಆರೋಗ್ಯ ಇಲಾಖೆ ಭರವಸೆ ನೀಡಿತ್ತು. ಅಲ್ಲದೆ, ಡಿ. 22ರಂದು ₹ 1.25 ಕೋಟಿ ಮತ್ತು ಜ. 5ರಂದು ₹ 4.92 ಕೋಟಿ ನೀಡಿತ್ತು. ಉಳಿದ ಹಣವನ್ನು ಪಾವತಿಸುವುದಾಗಿ ಹೇಳಿದ್ದ ಇಲಾಖೆ, ಸೇವೆಯನ್ನು ಮುಂದುವರಿಸುವಂತೆಯೂ ತಿಳಿಸಿತ್ತು. ಈ ಮೊತ್ತದಲ್ಲಿ ಬಿಎಸ್‌ಎನ್‌ಎಲ್ ಬಾಕಿ ಬಿಲ್ ಅನ್ನು ಸಂಸ್ಥೆ ಪಾವತಿಸಿತ್ತು. ಆದರೆ, ಸಂಸ್ಥೆಯ ಐಟಿ ಘಟಕದಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಗೆ 4 ತಿಂಗಳಿನಿಂದ ವೇತನ ಪಾವತಿ ಆಗಿರಲಿಲ್ಲ. ಹೀಗಾಗಿ ಆ ಸಿಬ್ಬಂದಿ ಕೆಲಸಕ್ಕೆ ಬರಲು ನಿರಾಕರಿಸಿದ್ದರು.

ಇದೀಗ, ₹ 10 ಕೋಟಿ ನೀಡುವ ಮಾತಿನಂತೆ ನಡೆದುಕೊಂಡಿಲ್ಲವೆಂದು ಕಾರಣ ನೀಡಿ, ಸಹಾಯವಾಣಿಗೆ ಸಂಬಂಧಿಸಿದಂತೆ ಸರ್ಕಾರದ ಜೊತೆ 2013 ಮಾರ್ಚ್ 6ರಂದು ಮಾಡಿಕೊಂಡಿದ್ದ ಒಡಂಬಡಿಕೆಯನ್ನು 'ಮುಕ್ತಾಯ'ಗೊಳಿಸುವುದಾಗಿ ನೋಟಿಸ್ ನೀಡಿರುವ ಪಿಎಸ್‌ಎಂಆರ್‌ಐ, ಫೆ. 22ರಂದು ಒಡಂಬಡಿಕೆಯಿಂದ ಹೊರಬರುವುದಾಗಿ ಸ್ಪಷ್ಟಪಡಿಸಿದೆ.

'ಹುಬ್ಬಳ್ಳಿ ಮತ್ತು ಬೆಂಗಳೂರು ಕೇಂದ್ರ ಹಾಗೂ ಮಹಿಳಾ ಸಹಾಯವಾಣಿ (181) ಕೇಂದ್ರದ ಮೂಲಕ ಸೇವಾ ಸೌಲಭ್ಯ ಒದಗಿಸಿದ ಮೊತ್ತ 2021ರ ಮಾರ್ಚ್‌ವರೆಗೆ (ಹಳೆ ಬಾಕಿ) ₹ 16.07 ಕೋಟಿ ಉಳಿಕೆ ಆಗಿತ್ತು. ಈ ಮೊತ್ತವೂ ಸೇರಿ ಪ್ರಸಕ್ತ ಸಾಲಿನಲ್ಲಿ (2022) ಜ. 12ರವರೆಗೆ ₹ 31.76 ಕೋಟಿ ಸರ್ಕಾರ ನೀಡಬೇಕಿದೆ. ವಿವಿಧ ಹಂತಗಳಲ್ಲಿ ಸರ್ಕಾರ ₹ 17.09 ಕೋಟಿ ಪಾವತಿಸಿದೆ. ಉಳಿದ ₹ 14.67 ಕೋಟಿ ಹಾಗೂ ಶೇ 15ರಂತೆ ಬಡ್ಡಿ (ಜ. 12ರವರೆಗೆ) ₹ 9 ಕೋಟಿ ಸೇರಿ ₹ 23.67 ಕೋಟಿ ನೀಡಬೇಕಿದೆ. ಅಲ್ಲದೆ, ಒಡಂಬಡಿಕೆ ಮುಕ್ತಾಯಗೊಳಿಸಲು ಸರ್ಕಾರವೇ ಕಾರಣ ಆಗಿರುವುದರಿಂದ ಹೆಚ್ಚುವರಿಯಾಗಿ ₹ 11.03 ಕೋಟಿ ನೀಡಬೇಕು' ಎಂದು ನೋಟಿಸ್‌ನಲ್ಲಿ ಸಂಸ್ಥೆ ವಿವರಿಸಿದೆ.

ಏನಿದು 'ಆರೋಗ್ಯವಾಣಿ–104'

ಆರೋಗ್ಯ ಸೇವಾ ಮಾಹಿತಿ ಒದಗಿಸಲು ದಿನದ 24 ಗಂಟೆ ಕಾರ್ಯಾಚರಿಸುವ 'ಆರೋಗ್ಯವಾಣಿ–104' ಅನ್ನು ಆರಂಭಿಸಲಾಗಿತ್ತು. ಚಿಕಿತ್ಸೆಗಾಗಿ ಸಕಾಲದಲ್ಲಿ ಆಸ್ಪತ್ರೆಗಳನ್ನು ತಲುಪಲು ಸಾಧ್ಯವಾಗದವರು ಈ ಸಂಖ್ಯೆಗೆ ಕರೆ ಮಾಡಿ, ತಜ್ಞ ವೈದ್ಯರ ಸಲಹೆ ಪಡೆಯಬಹುದು. ಆರೋಗ್ಯ ಸಲಹೆ, ಆಪ್ತ ಸಮಾಲೋಚನೆ, ಸೇವಾ ಸೌಲಭ್ಯಗಳ ಬಗ್ಗೆ ಮಾಹಿತಿ, ಆರೋಗ್ಯ ಸಂಸ್ಥೆಗಳ ಅಥವಾ ಸಿಬ್ಬಂದಿಯ ವಿರುದ್ಧ ದೂರು, ಸಾಂಕ್ರಾಮಿಕ ರೋಗಗಳ ಬಗ್ಗೆ ಹಾಗೂ ಸಾಮಾನ್ಯ ಕಾಯಿಲೆಗಳಾದ ಕೆಮ್ಮು, ಶೀತ, ಜ್ವರ, ಬೇಧಿ, ಹೊಟ್ಟೆನೋವು, ಸಕ್ಕರೆ ಕಾಯಿಲೆ ಮುಂತಾದ ಆರೋಗ್ಯ ಸಮಸ್ಯೆಗಳಿಗೆ ಔಷಧಿಯ ಶಿಫಾರಸ್ಸು ಹಾಗೂ ಅವುಗಳ ಸೇವನೆಯ ಬಗ್ಗೆ ದೂರವಾಣಿ ಮೂಲಕವೇ ಸಲಹೆ ಪಡೆಯಲು ಈ ಸಂಖ್ಯೆಗೆ ಉಚಿತವಾಗಿ ಕರೆ ಮಾಡಬಹುದು. ಆಪ್ತ ಸಮಾಲೋಚನೆ ಮತ್ತು ಸಲಹೆ (ಒತ್ತಡ, ಖಿನ್ನತೆ, ಆತಂಕ, ನಂತರದ ಆಘಾತ ಚೇತರಿಕೆ, ಎಚ್‌ಐವಿ, ಏಡ್ಸ್ ಇತ್ಯಾದಿ), ಆರೋಗ್ಯ ಮತ್ತು ರೋಗಲಕ್ಷಣಗಳ ಪರೀಕ್ಷೆಗೆ (ಆರಂಭಿಕ ಮೌಲ್ಯಮಾಪನ, ಜ್ವರ ಸಲಹೆ, ಗರ್ಭಧಾರಣೆ) ಸಂಬಂಧಿಸಿ ಪ್ರಥಮ ಚಿಕಿತ್ಸಾ ಮಾಹಿತಿ ಮತ್ತು ಸಲಹೆ ಪಡೆಯಲು ಅವಕಾಶವಿದೆ.

ಕೋವಿಡ್ ನಿಯಂತ್ರಣ: ಸಿ.ಎಂ ನೇತೃತ್ವದಲ್ಲಿ ಇಂದು ಸಭೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕೆ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಸೋಮವಾರ ಉನ್ನತಮಟ್ಟದ ಸಭೆ ನಡೆಯಲಿದೆ.

ಮುಖ್ಯಮಂತ್ರಿಯವರಿಗೂ ಕೋವಿಡ್ ತಗುಲಿರುವುದರಿಂದ ಅವರು ಪ್ರತ್ಯೇಕ ವಾಸದಲ್ಲಿದ್ದಾರೆ. ಈ ಕಾರಣದಿಂದ ವರ್ಚ್ಯುಯಲ್ ಆಗಿ ಸಭೆ ನಡೆಯಲಿದೆ. ಕಂದಾಯ ಸಚಿವ ಆರ್. ಅಶೋಕ, ಗೃಹ ಸಚಿವ ಆರಗ ಜ್ಞಾನೇಂದ್ರ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸೇರಿದಂತೆ ಕೆಲವು ಸಚಿವರು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮತ್ತು ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಳ್ಳುವರು.

ಸುದ್ದಿ 2 ನಿಮಿಷ

ಕುವೆಂಪು ವಿವಿ: 5 ದಿನ ರಜೆ ಘೋಷಣೆ

ಶಿವಮೊಗ್ಗ: ಕುವೆಂಪು ವಿಶ್ವವಿದ್ಯಾಲಯದ 19 ವಿದ್ಯಾರ್ಥಿಗಳು, 5 ಜನ ಗ್ರಂಥಾಲಯ ಸಿಬ್ಬಂದಿಗೆ ಕೊರೊನಾ ಪಾಸಿಟಿವ್ ಬಂದ ಕಾರಣ ವಿಶ್ವವಿದ್ಯಾಲಯಕ್ಕೆ 5 ದಿನ ರಜೆ ಘೋಷಿಸಲಾಗಿದೆ.

ನಾಲ್ಕು ದಿನಗಳ ಹಿಂದೆ ವಿಶ್ವವಿದ್ಯಾಲಯದ ಆವರಣದಲ್ಲಿರುವ ಗ್ರಂಥಾಲಯದ 5 ಜನ ಸಿಬ್ಬಂದಿಗೆ ಕೊರೊನಾ ಸೋಂಕು ದೃಢಪಟ್ಟಿತ್ತು. ಇವರ ಪ್ರಾಥಮಿಕ ಸಂಪರ್ಕಕ್ಕೆ ಬಂದಿದ್ದ 70 ವಿದ್ಯಾರ್ಥಿಗಳನ್ನು ಕೊರೊನಾ ಪರೀಕ್ಷೆಗೆ ಒಳಪಡಿಸಲಾಗಿದ್ದು, ಇದರಲ್ಲಿ 19 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ಕಾಣಿಸಿಕೊಂಡಿದೆ.

'ಸೋಂಕಿತರನ್ನು ಹೋಂ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ. ಉಳಿದ ವಿದ್ಯಾರ್ಥಿಗಳ ಆರೋಗ್ಯ ದೃಷ್ಟಿಯಿಂದ ವಿಶ್ವವಿದ್ಯಾಲಯದ ಭೌತಿಕ ತರಗತಿಗಳಿಗೆ ಜ.17ರಿಂದ ಜ.21ರ ವರೆಗೆ ರಜೆ ಘೋಷಿಸಲಾಗಿದೆ. ರಜೆ ಅವಧಿಯಲ್ಲಿ ಆನ್‌ಲೈನ್ ತರಗತಿ ನಡೆಯಲಿವೆ' ಎಂದು ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಬಿ.ಪಿ.ವೀರಭದ್ರಪ್ಪ ಹೇಳಿದರು.

ವಾರಾಂತ್ಯ ಕರ್ಫ್ಯೂ ನಡುವೆಯೂ ಶಾಸಕ ರಾಮಚಂದ್ರ ಹುಟ್ಟುಹಬ್ಬ ಆಚರಣೆ



ದಾವಣಗೆರೆ: ವಾರಾಂತ್ಯದ ಕರ್ಫ್ಯೂ ಇದ್ದರೂ ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಅವರು ತಮ್ಮ ಜನುಮ ದಿನವನ್ನು ಅಭಿಮಾನಿಗಳೊಂದಿಗೆ ಆಚರಿಸಿಕೊಂಡಿದ್ದಾರೆ.

ದಾವಣಗೆರೆ ಕೆ.ಬಿ. ಬಡಾವಣೆಯಲ್ಲಿರುವ ಅವರ ಮನೆಯ ಮುಂದೆ ಶಾಮಿಯಾನ, ವೇದಿಕೆ, ಕುರ್ಚಿಗಳನ್ನು ಹಾಕಲಾಗಿತ್ತು. ಅಭಿಮಾನಿಗಳು, ಜನಪ್ರತಿನಿಧಿಗಳು, ಬಿಜೆಪಿ ಕಾರ್ಯಕರ್ತರು, ಅಧಿಕಾರಿಗಳು, ಪೊಲೀಸರು ಭಾಗವಹಿಸಿ ಶಾಸಕರಿಗೆ ಶುಭಕೋರಿದರು. ಮಾಸ್ಕ್ ಹಾಕದೆ, ಅಂತರ ನಿಯಮ ಪಾಲಿಸದೆ ಜನುಮದಿನದ ಆಚರಣೆ ನಡೆಯಿತು.

'ನಮ್ಮಿಂದ ಯಾರೂ ಹುಟ್ಟಿದ ಹಬ್ಬದ ಕಾರ್ಯಕ್ರಮಕ್ಕೆ ಅನುಮತಿ ನೀಡಿಲ್ಲ. ನಮಗೆ ಯಾವುದೇ ಮಾಹಿತಿ ಇಲ್ಲ' ಎಂದು ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಪ್ರತಿಕ್ರಿಯಿಸಿದರು.

'ಕಳೆದ ವಾರ ಹೋರಿ ಹಬ್ಬದಲ್ಲಿ ಹೊನ್ನಾಳಿ ಶಾಸಕ ರೇಣುಕಾಚಾರ್ಯ ಕೋವಿಡ್ ನಿಯಮ ಮುರಿದಿದ್ದರು. ಈ ವಾರ ಜಗಳೂರು ಶಾಸಕರು ನಿಯಮ ಉಲ್ಲಂಘಿಸಿದ್ದಾರೆ' ಎಂದು ಕಾಂಗ್ರೆಸ್‌ನ ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಹರೀಶ್ ಬಸಾಪುರ ಟೀಕಿಸಿದ್ದಾರೆ.

2 ಲಕ್ಷದತ್ತ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 2 ಲಕ್ಷದ ಗಡಿ (1.97 ಲಕ್ಷ) ಸಮೀಪಿಸಿದೆ.

ಬೆಂಗಳೂರಿನಲ್ಲಿ 21,071 ಮಂದಿ ಸೇರಿದಂತೆ ರಾಜ್ಯದಲ್ಲಿ 34,047 ಮಂದಿ ಕೊರೊನಾ ಸೋಂಕಿತರಾಗಿರುವುದು ಭಾನುವಾರ ದೃಢಪಟ್ಟಿದೆ. ಒಂದು ದಿನದ ಅವಧಿಯಲ್ಲಿ 1.76 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಏರಿಕೆಕಂಡಿದ್ದು, ಶೇ 19.29 ರಷ್ಟು ವರದಿಯಾಗಿದೆ.

ಬೆಳಗಾವಿ–47, ಶಿರಸಿ–27 ವಿದ್ಯಾರ್ಥಿಗಳಲ್ಲಿ ಕೋವಿಡ್ (ಹುಬ್ಬಳ್ಳಿ): ಶಿರಸಿ ನಗರದ ಮೂರು ಕಾಲೇಜುಗಳ 27 ವಿದ್ಯಾರ್ಥಿಗಳಿಗೆ, ಭಟ್ಕಳದಲ್ಲಿ 17 ಶಾಲಾ ಮಕ್ಕಳಿಗೆ ಹಾಗೂ ಬೆಳಗಾವಿ ಜಿಲ್ಲೆಯ ರಾಣಿ ಚನ್ನಮ್ಮ ಸ್ಮಾರಕ ಬಾಲಕಿಯರ ವಸತಿ ಸೈನಿಕ ಶಾಲೆಯ 47 ವಿದ್ಯಾರ್ಥಿಗಳಿಗೆ ಭಾನುವಾರ ಕೋವಿಡ್ ದೃಢಪಟ್ಟಿದೆ.

- ಮಲೇಬೆನ್ನೂರು ಪಟ್ಟಣದ ಬೀರಲಿಂಗೇಶ್ವರ ಮಹಿಳಾ ಪದವಿ ಪೂರ್ವ ಕಾಲೇಜಿನ 11 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ತಗುಲಿರುವುದು ಭಾನುವಾರ ದೃಢಪಟ್ಟಿದೆ.
- ಚಿತ್ರದುರ್ಗ ಜಿಲ್ಲೆಯಲ್ಲಿ ಸೋಂಕು ಮಕ್ಕಳನ್ನು ಹೆಚ್ಚಿಗೆ ಬಾಧಿಸುತ್ತಿದೆ. 0-18 ವರ್ಷದೊಳಗಿನ 108 ಮಕ್ಕಳಲ್ಲಿ ಭಾನುವಾರ ಸೋಂಕು ದೃಢಪಟ್ಟಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

32,20,087 ▲	ಒಟ್ಟು ಸೋಂಕಿತರು (31,86,040 ನಿನ್ನೆಯ ವಿವರ)
1,97,982 ▲	ಸಕ್ರಿಯ ಪ್ರಕರಣಗಳು
29,83,645 ▲	ಗುಣಮುಖರಾದವರು
38,431 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	34,047	▲
ಗುಣಮುಖ	5,902	▲
ಸಾವು	13	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಆತಂಕ ಸೃಷ್ಟಿಸಿದ ನರ್ಸಿಂಗ್ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಭಾರತೀಯ ವೈದ್ಯಕೀಯ ಮಂಡಳಿ ಏರ್ಪಡಿಸಿರುವ ಬಿ.ಎಸ್‌ಸಿ ನರ್ಸಿಂಗ್ ಪರೀಕ್ಷೆಗೆ ಹಾಜರಾಗಲು ಭಾನುವಾರ ವಿವಿಧ ರಾಜ್ಯಗಳಿಂದ ನಗರಕ್ಕೆ ಬಂದಿರುವ ಸುಮಾರು 700 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆರ್‌ಟಿಪಿಸಿಆರ್ ನೆಗೆಟಿವ್ ವರದಿ ತೋರಿಸದೆ ಕೆಲಹೊತ್ತು ಆತಂಕ ಸೃಷ್ಟಿಸಿದರು.



ಹರಿಯಾಣ, ರಾಜಸ್ತಾನ ಸೇರಿದಂತೆ ವಿವಿಧ ರಾಜ್ಯಗಳಿಂದ ಬಂದಿರುವ ವಿದ್ಯಾರ್ಥಿಗಳು ಸೋಮವಾರ ಪರೀಕ್ಷೆಗೆ ಹಾಜರಾಗಲಿದ್ದಾರೆ. ವಿವಿಧ ಲಾಡ್ಜ್‌ಗಳಲ್ಲಿ ತಂಗಿರುವ ವಿದ್ಯಾರ್ಥಿಗಳಲ್ಲಿ ಕೆಲವರ ಬಳಿ ಮಾತ್ರ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಿಕೊಂಡು, ನೆಗೆಟಿವ್ ಬಂದ ವಿವರಗಳಿವೆ.ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳದವರನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ವಿಮ್ಸ್, ಶರಭೇಶ್ವರ ಕಾಲೇಜು, ರಾಜೀವ್ ಗಾಂಧಿ ನರ್ಸಿಂಗ್ ಇನ್‌ಸ್ಟಿಟ್ಯೂಟ್ ಮತ್ತು ಬೆಸ್ಟ್ ನರ್ಸಿಂಗ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ಪರೀಕ್ಷೆ ನಡೆಯಲಿದೆ. ಪರೀಕ್ಷೆ ನಾಲ್ಕು ದಿನಗಳಿದ್ದು, ತಾಲ್ಲೂಕು ವೈದ್ಯಾಧಿಕಾರಿ ಡಾ.ಮೋಹನ್ ಕುಮಾರಿ, ರಾಜೀವ್ ಗಾಂಧಿ ನರ್ಸಿಂಗ್ ಇನ್‌ಸ್ಟಿಟ್ಯೂಟ್ ಪ್ರಾಂಶುಪಾಲರ ಸಹಾಯ ಪಡೆದು ಹೊರರಾಜ್ಯಗಳ ವಿದ್ಯಾರ್ಥಿಗಳನ್ನು ಪತ್ತೆ ಹಚ್ಚಿದ್ದಾರೆ. ಸರ್ಕಾರಿ ಹಾಗೂ ಖಾಸಗಿ ಲ್ಯಾಬ್‌ಗಳು ಸೇರಿ ದಿನಕ್ಕೆ 2,500 ಜನರ ಸ್ವ್ಯಾಬ್ ಪರೀಕ್ಷೆ ಮಾಡಲು ಅವಕಾಶವಿದ್ದು, ಇಂದೇ ಎಲ್ಲರ ಆರ್‌ಟಿಪಿಸಿಆರ್ ಪರೀಕ್ಷೆ ಮುಗಿದಿದೆ.

'200 ನವೋದ್ಯಮಗಳಿಗೆ ಗರಿಷ್ಠ ತಲಾ ₹ 50 ಲಕ್ಷ ಮೂಲನಿಧಿ'

ಒಂದನೇ ಪುಟದಿಂದ

'ದೇಶದಲ್ಲಿ ಒಟ್ಟು 57 ಸಾವಿರ ನವೋದ್ಯಮಗಳಿವೆ. ಈ ಪೈಕಿ 13 ಸಾವಿರಕ್ಕೂ ಹೆಚ್ಚು ರಾಜ್ಯದಲ್ಲಿವೆ. ರಾಜ್ಯದಲ್ಲಿ ಅನುಷ್ಠಾನಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯು ಈ ಸ್ಥಾನ ಕಾಯ್ದುಕೊಳ್ಳಲು ಪೂರಕವಾಗಲಿದೆ' ಎಂದು ವಿವರಿಸಿದರು.

'ದೇಶವು ವಿಶ್ವಗುರುವಾಗಿ ಹಾಗೂ ಸೂಪರ್ ಪವರ್ ಆಗಿ ಹೊರಹೊಮ್ಮುವಲ್ಲಿ ನವೋದ್ಯಮಗಳ ಪಾತ್ರ ನಿರ್ಣಾಯಕ ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಒತ್ತಿ ಹೇಳಿದ್ದಾರೆ. ಇದನ್ನು ಗಮನದಲ್ಲಿರಿಸಿ ಹಾರ್ಡ್‌ವೇರ್ ವಲಯವನ್ನೂ ದಕ್ಷವಾಗಿ ಬೆಳೆಸಲಾಗುವುದು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸ್ಥಾಪಿಸಿರುವ 'ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಆ್ಯಂಡ್ ರೊಬೋಟಿಕ್ಸ್ ಟ್ರಾನ್ಸ್‌ಲೇಷನ್ ಪಾರ್ಕ್' (ಆರ್ಟ್ ಪಾರ್ಕ್) ಈ ದಿಸೆಯಲ್ಲಿ ಸರ್ಕಾರದ ಬದ್ಧತೆಗೆ ನಿದರ್ಶನ' ಎಂದರು.

'ರಾಜ್ಯದಲ್ಲಿ ಎಲೆಕ್ಟ್ರಾನಿಕ್ ಉದ್ದಿಮೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಮುಂದಿನ ಐದು ವರ್ಷಗಳಲ್ಲಿ ಎಲೆಕ್ಟ್ರಾನಿಕ್ಸ್ ವ್ಯವಸ್ಥೆ ವಿನ್ಯಾಸ ಮತ್ತು ತಯಾರಿಕೆ (ಇಎಸ್‌ಡಿಎಂ) ನೀತಿಯಡಿ ₹ 5 ಸಾವಿರ ಕೋಟಿ ಸಹಾಯಧನ ನೀಡಲಾಗುವುದು. ಮೊದಲನೇ ವರ್ಷದಲ್ಲೇ ₹ 2 ಸಾವಿರ ಕೋಟಿ ನೆರವು ಒದಗಿಸಲಾಗಿದೆ' ಎಂದರು.

ರಾಜ್ಯ ಸ್ಟಾರ್ಟ್ ಅಪ್ ವಿಷನ್ ಗ್ರೂಪ್ ಮುಖ್ಯಸ್ಥ ಪ್ರಶಾಂತ್ ಪ್ರಕಾಶ್ ಮಾತನಾಡಿ, 'ನಾವು ಕೇವಲ ನಮಗಾಗಿ ಮಾತ್ರ ಉತ್ಪನ್ನಗಳನ್ನು ತಯಾರಿಸಿದರೆ ಸಾಲದು. ಚೀನಾದಂತೆ ಜಗತ್ತಿನ ಅಗತ್ಯಗಳನ್ನು ಗಮನಿಸಿ, ಮಾರುಕಟ್ಟೆ ಹಿಗ್ಗಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಐಟಿ-ಬಿಟಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣ ರೆಡ್ಡಿ, 'ರಾಜ್ಯದಲ್ಲಿ ಉದ್ಯಮಶೀಲ ವ್ಯಕ್ತಿಗಳಲ್ಲಿರುವ ಹೊಸ ಆಲೋಚನೆಗಳನ್ನು ತ್ವರಿತಗತಿಯಲ್ಲಿ ಗುರುತಿಸಿ ನೆರವು ನೀಡಲಾಗುತ್ತಿದೆ' ಎಂದರು.

'ರಾಜ್ಯದಲ್ಲಿ ನವೋದ್ಯಮಗಳಿಗೆ ಪ್ರಶಸ್ತವಾದ ಹಲವು ನೀತಿಗಳಿವೆ. ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಮೂಲಕ ಮುಂದಿನ ಐದು ವರ್ಷಗಳ ಬೆಳವಣಿಗೆಗೆ ವೇದಿಕೆ ಸಿದ್ಧಪಡಿಸಲಾಗಿದೆ' ಎಂದು ಇಲಾಖೆಯ ನಿರ್ದೇಶಕಿ ಮೀನಾ ನಾಗರಾಜ್ ಹೇಳಿದರು.

ಚಿನ್ನದ ಆಮದು ಹೆಚ್ಚಳ

ನವದೆಹಲಿ (ಪಿಟಿಐ): ಚಿನ್ನ ಆಮದು ಮೌಲ್ಯವು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ₹ 2.81 ಲಕ್ಷ ಕೋಟಿಯಷ್ಟಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಎರಡು ಪಟ್ಟಿಗಿಂತಲೂ ಹೆಚ್ಚು ಏರಿಕೆ ಆಗಿದೆ.

2020–21ನೇ ಹಣಕಾಸು ವರ್ಷದ ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ₹ 1.24 ಲಕ್ಷ ಕೋಟಿ ಮೌಲ್ಯದ ಚಿನ್ನ ಆಮದಾಗಿತ್ತು ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಚಿನ್ನದ ಆಮದು ಹೆಚ್ಚಾಗಿರುವುದರಿಂದ ವ್ಯಾಪಾರ ಕೊರತೆ ಅಂತರವು ₹ 4.54 ಲಕ್ಷ ಕೋಟಿಯಿಂದ ₹ 10.54 ಲಕ್ಷ ಕೋಟಿಗೆ ಏರಿಕೆ ಆಗಿದೆ. ಬೆಳ್ಳಿ ಆಮದು ಮೌಲ್ಯವು ₹ 5,638 ಕೋಟಿಯಿಂದ ₹ 14,800 ಕೋಟಿಗೆ ಏರಿಕೆ ಆಗಿದೆ. ಹರಳು ಮತ್ತು ಚಿನ್ನಾಭರಣ ರಫ್ತು ಶೇ 71ರಷ್ಟು ಹೆಚ್ಚಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ರಾಮನಗರ ರೇಷ್ಮೆ

ಮಿಶ್ರತಳಿ	₹355-607
ದ್ವಿತಳಿ	₹563-741

ಎರಡು ಕಂಪನಿಗಳ ನಡುವೆ 'ಕಿತ್ತಾಟ'? • ಕಾಮಗಾರಿಗೆ ಕೆಎಸ್‌ಐಡಿಸಿ ಅತೃಪ್ತಿ

ಬಳ್ಳಾರಿ ವಿಮಾನ ನಿಲ್ದಾಣ ಕಾಮಗಾರಿ ಸ್ಥಗಿತ

• ಹೊನಕೆರೆ ನಂಜುಂಡೇಗೌಡ



ಬಳ್ಳಾರಿ ಸಮೀಪದ ಚಾಗನೂರಿನಲ್ಲಿ ನಿರ್ಮಾಣ ಹಂತದಲ್ಲಿರುವ ವಿಮಾನ ನಿಲ್ದಾಣ ಪ್ರಜಾವಾಣಿ ಚಿತ್ರ– ಸತೀಶ್ ಮುರಾಳ

ಪ್ರಜಾವಾಣಿ ವಿಶೇಷ

ಬಳ್ಳಾರಿ: ರೈತರ ಪ್ರತಿಭಟನೆಗಳ ನಡುವೆಯೂ ಬಳ್ಳಾರಿ ಸಮೀಪ ಸ್ವಾಧೀನ ಪಡಿಸಿಕೊಂಡಿರುವ ಭೂಮಿಯಲ್ಲಿ ವಿಮಾನ ನಿಲ್ದಾಣ ನಿರ್ಮಿಸಲು ರಾಜ್ಯ ಸರ್ಕಾರ ಹತ್ತು ವರ್ಷಗಳ ಹಿಂದೆ (2010ರ ಆಗಸ್ಟ್‌ನಲ್ಲಿ) ಚೆನ್ನೈ ಮೂಲದ 'ಮಾರ್ಗ್' ಕಂಪನಿ ಜತೆ ಒಪ್ಪಂದ ಮಾಡಿಕೊಂಡಿತ್ತು. ಈಚೆಗಷ್ಟೇ ಮಂದಗತಿಯಲ್ಲಿ ಆರಂಭವಾಗಿದ್ದ ಕಾಮಗಾರಿ ಎರಡು ಕಂಪನಿಗಳ ನಡುವಿನ 'ಕಿತ್ತಾಟ'ದಿಂದಾಗಿ ಸ್ಥಗಿತಗೊಂಡಿದೆ.

ಚಾಗನೂರು ಗ್ರಾಮದಲ್ಲಿ 987ಎಕರೆ ಭೂಮಿಯಲ್ಲಿ ₹330 ಕೋಟಿ ವೆಚ್ಚದಲ್ಲಿ ನಿರ್ಮಾಣ, ನಿರ್ವಹಣೆ ಮತ್ತು ವರ್ಗಾವಣೆ (ಬಿಲ್ಡ್–ಆಪರೇಟ್ ಅಂಡ್ ಟ್ರಾನ್ಸ್‌ಫರ್) ಆಧಾರದಲ್ಲಿ 30 ವರ್ಷಗಳ ಅವಧಿಗೆ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ವಿಮಾನ ನಿಲ್ದಾಣ ನಿರ್ಮಿಸುತ್ತಿದೆ. ಕಾಮಗಾರಿ ಗತಿ ಗಮನಿಸಿದರೆ ಇನ್ನು 10ವರ್ಷ ಕಳೆದರೂ ಯೋಜನೆ ಪೂರ್ಣಗೊಳ್ಳುವುದಿಲ್ಲ ಎಂಬ ಅನುಮಾನವನ್ನು ಅನೇಕರು ವ್ಯಕ್ತಪಡಿಸುತ್ತಿದ್ದಾರೆ.

ಇದರೊಟ್ಟಿಗೆ ಆರಂಭವಾದ ಶಿವಮೊಗ್ಗ, ವಿಜಯಪುರ ಹಾಗೂ ಹಾಸನ ವಿಮಾನ ನಿಲ್ದಾಣಗಳ ಕಾಮಗಾರಿ ಒಂದೆರಡು ವರ್ಷಗಳಲ್ಲಿ ಮುಗಿಯುವ ಹಂತದಲ್ಲಿವೆ. ಬಳ್ಳಾರಿ ವಿಮಾನ ನಿಲ್ದಾಣ ನಿರ್ಮಾಣ ಗುತ್ತಿಗೆ ಪಡೆದ 'ಮಾರ್ಗ್ ಶ್ರೀಕೃಷ್ಣದೇವರಾಯ ಏರ್‌ಪೋರ್ಟ್ ಪ್ರೈವೇಟ್ ಲಿ'. ಪೆರಿಫೆರಲ್ ರಸ್ತೆ, ಸಂಪರ್ಕ ರಸ್ತೆ, ಒಳ ರಸ್ತೆ, ಕಾಂಪೌಂಡ್ ನಿರ್ಮಾಣ ಹಾಗೂ ಸರ್ವೆ ಕಾರ್ಯವನ್ನು ಗುಜರಾತ್ ಮೂಲದ 'ವಿಜಯ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿ'. ಕಂಪನಿಗೆ ಕಳೆದ ವರ್ಷ (2021) ₹ 44.85 ಕೋಟಿಗೆ ಉಪ ಗುತ್ತಿಗೆ ನೀಡಿದೆ.

'ಉಪ ಗುತ್ತಿಗೆ ಪಡೆದು ಎಂಟು ತಿಂಗಳು ಕಳೆದರೂ ಯೋಜನೆಯ ಡ್ರಾಯಿಂಗ್, ವಿನ್ಯಾಸ, ಬಹುಪಾಲು ಜಮೀನನ್ನು ಮಾರ್ಗ್ ತನಗೆ ಹಸ್ತಾಂತರಿಸಿಲ್ಲ. ಅಡೆತಡೆಗಳ ನಡುವೆ ಅಲ್ಪಸ್ವಲ್ಪ ಕಾಮಗಾರಿಯನ್ನು ಕಂಪನಿ ಮಾಡಿದೆ. ಈ ಸಂಬಂಧದ ಬಿಲ್‌ಗಳನ್ನು ಮಾರ್ಗ್ ಪಾವತಿಸಿಲ್ಲ. ಬಾಕಿ ಪಾವತಿಸುವಂತೆ ಪತ್ರ ಬರೆಯಲಾಗಿದೆ' ಎಂದು ವಿಜಯ್ ಇನ್‌ಫ್ರಾ ಪ್ರಾಜೆಕ್ಟ್ಸ್ ನಿರ್ದೇಶಕ ಜಗದೀಶ್ ಖಾಟುವಾಲಾ ತಿಳಿಸಿದರು.

ವಿಜಯ್ ಇನ್‌ಫ್ರಾ ಕಂಪನಿ ಮಾರ್ಗ್‌ಗೆ ಬರೆದಿರುವ ಪತ್ರಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ. 'ಬಿಲ್ ಪಾವತಿಸದೆ ಇರುವುದರಿಂದ ವಿಮಾನ ನಿಲ್ದಾಣ ಕಾಮಗಾರಿ ಸ್ಥಗಿತಗೊಳಿಸಲಾಗುವುದು' ಎಂದೂ ಪತ್ರದಲ್ಲಿ ತಿಳಿಸಿತ್ತು.

ಕೆಎಸ್‌ಐಡಿಸಿ ಅತೃಪ್ತಿ: ಬಳ್ಳಾರಿ ವಿಮಾನ ನಿಲ್ದಾಣ ಕಾಮಗಾರಿ ಮಂದಗತಿಯಲ್ಲಿ ನಡೆಯುತ್ತಿರುವ ಕುರಿತು 'ಕರ್ನಾಟಕ ರಾಜ್ಯ ಮೂಲಸೌಲಭ್ಯ ಅಭಿವೃದ್ಧಿ ನಿಗಮ' (ಕೆಎಸ್‌ಐಡಿಸಿ) ಅತೃಪ್ತಿ ವ್ಯಕ್ತಪಡಿಸಿದೆ. 'ವಿಮಾನ ನಿಲ್ದಾಣ ಸ್ಥಳಕ್ಕೆ ತಜ್ಞರ ಸಮಿತಿ ಕಳಿಸಿ ವರದಿ ತರಿಸಿಕೊಳ್ಳಲಾಗಿದೆ. ಕಾಮಗಾರಿ ಮಂದಗತಿಯಲ್ಲಿ ನಡೆಯುತ್ತಿದೆ' ಎಂದು ಸಮಿತಿ ಹೇಳಿದೆ. ಪುನಃ ಮತ್ತೊಂದು ಸಮಿತಿ ಕಳುಹಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು ಕೆಎಸ್‌ಐಡಿಸಿ ಉನ್ನತ ಮೂಲಗಳು ಸ್ಪಷ್ಟಪಡಿಸಿವೆ. ವಿಮಾನ ನಿಲ್ದಾಣಕ್ಕೆ ಅಗತ್ಯವಿರುವ ಜಮೀನನ್ನು ಬಹುತೇಕ ವಶಪಡಿಸಿಕೊಂಡು ಮಾರ್ಗ್‌ಗೆ ಹಸ್ತಾಂತರಿಸಲಾಗಿದೆ. 41 ಎಕರೆಗೆ ಸಂಬಂಧಿಸಿ ಮಾತ್ರ ತಕರಾರಿದ್ದು, ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ ಎಂದು ಹೇಳಿವೆ.

ಎರಡೂವರೆ ತಿಂಗಳಿಂದ ವಿಮಾನ ನಿಲ್ದಾಣ ಕಾಮಗಾರಿ ಸ್ಥಗಿತಗೊಂಡಿರುವ ವಿಷಯ ಕೆಎಸ್‌ಐಡಿಸಿಗೆ ಅಥವಾ ಜಿಲ್ಲಾಡಳಿತದ ಗಮನಕ್ಕೆ ಬಂದಿಲ್ಲ.

ಅನೇಕ ಸಮಸ್ಯೆಗಳಿವೆ: ಮಾರ್ಗ್

'ಬಳ್ಳಾರಿ ವಿಮಾನ ನಿಲ್ದಾಣ ನಿರ್ಮಾಣ ಯೋಜನೆಗೆ ಹಲವು ಅಡೆತಡೆಗಳಿವೆ. ಅವುಗಳನ್ನು ಒಂದೊಂದಾಗಿ ನಿವಾರಣೆ ಮಾಡಿಕೊಂಡು ಕಾಮಗಾರಿ ತ್ವರಿತಗೊಳಿಸಲಾಗುವುದು' ಎಂದು 'ಮಾರ್ಗ್' ಕಂಪನಿಯ ಹಿರಿಯ ವ್ಯವಸ್ಥಾಪಕ ಅಜಿತ್ ಸ್ಪಷ್ಟಪಡಿಸಿದರು.

'ವಿಮಾನ ನಿಲ್ದಾಣ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನು ಹಳ್ಳಕೊಳ್ಳಗಳಿಂದ ಕೂಡಿದ್ದು, ಅದೇ ಮಾದರಿಯ ಮಣ್ಣು ತರಿಸಿ ಭರ್ತಿ ಮಾಡಬೇಕಿದೆ. ಈ ಬಗ್ಗೆ ವಿಮಾನ ನಿಲ್ದಾಣ ಪ್ರಾಧಿಕಾರದ ಜತೆ ಚರ್ಚಿಸಲಾಗುತ್ತಿದೆ. ಯೋಜನೆಗೆ ಪರಿಸರ ಇಲಾಖೆ ಅನುಮತಿ ಸಿಗಬೇಕಿದೆ. ಅಲ್ಲದೆ, ರಾಜ್ಯ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಜಮೀನು ಹಸ್ತಾಂತರಿಸಿಲ್ಲ. ಈ ಬಗ್ಗೆ ಯಾರನ್ನೂ ದೂಷಿಸಲು ನಾವು ಇಷ್ಟಪಡುವುದಿಲ್ಲ' ಎಂದು ಅಜಿತ್ ವಿವರಿಸಿದರು.

'ಬಿಲ್ ಪಾವತಿಸದ ಕುರಿತು ನಮ್ಮ ಪಾಲುದಾರ ಕಂಪನಿ ವಿಜಯ್ ಇನ್‌ಫ್ರಾ ಪ್ರಾಜೆಕ್ಟ್ ಪತ್ರ ಬರೆದಿರುವ ಬಗ್ಗೆ ಮಾಹಿತಿ ಇಲ್ಲ. ಅಕೌಂಟ್ಸ್ ವಿಭಾಗದಲ್ಲಿ ಪರಿಶೀಲಿಸಲಾಗುವುದು. ಸದರಿ ಕಂಪನಿ ಜತೆ ಯಾವುದೇ ಸಮಸ್ಯೆ ಇಲ್ಲ' ಎಂದರು.

'ನವೆಂಬರ್‌ನಲ್ಲಿ ಬಿದ್ದ ಅಕಾಲಿಕ ಮಳೆಯಿಂದ ವಾಹನಗಳ ಓಡಾಟಕ್ಕೆ ತೊಂದರೆ ಆಗಿದ್ದರಿಂದ ಕಾಮಗಾರಿ ನಿಲ್ಲಿಸಲಾಯಿತು' ಎಂದು ಮಾರ್ಗ್‌ನ ಮತ್ತೊಬ್ಬ ಹಿರಿಯ ಅಧಿಕಾರಿ ಹೇಳಿದರು.

ಮೇಲಿನ ಹಂತದಲ್ಲಿ ಮಾತ್ರ ಆರ್ಥಿಕ ಬೆಳವಣಿಗೆ: ಬಸು

ನವದೆಹಲಿ (ಪಿಟಿಐ): ಭಾರತದ ಒಟ್ಟು ಆರ್ಥಿಕ ವ್ಯವಸ್ಥೆಯು ಚೇತರಿಕೆಯ ಹಾದಿಯಲ್ಲಿ ಇದೆಯಾದರೂ, ಮೇಲ್ಮಟ್ಟದಲ್ಲಿ ಮಾತ್ರ ಬೆಳವಣಿಗೆ ಕಂಡುಬರುತ್ತಿದೆ ಎಂದು ಅರ್ಥಶಾಸ್ತ್ರಜ್ಞ ಕೌಶಿಕ್ ಬಸು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಸು ಅವರು ಯುಪಿಎ ಆಡಳಿತ ಅವಧಿಯಲ್ಲಿ ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರರಾಗಿ ಕೆಲಸ ಮಾಡಿದ್ದರು.

'ಆರ್ಥಿಕ ಬೆಳವಣಿಗೆಯು ಮೇಲಿನ ಹಂತದಲ್ಲಿ ಮಾತ್ರ ಕೇಂದ್ರೀಕೃತ ಆಗಿರುವುದು ಕಳವಳಕಾರಿ' ಎಂದು ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಯುವಕರು ನಿರುದ್ಯೋಗಿಗಳಾಗಿರುವ ಪ್ರಮಾಣವು ಕೋವಿಡ್‌ಗೂ ಮೊದಲೇ ದೇಶದಲ್ಲಿ ಶೇಕಡ 23ಕ್ಕೆ ತಲುಪಿತ್ತು. ಕಾರ್ಮಿಕರು, ರೈತರು, ಸಣ್ಣ ಉದ್ಯಮಗಳಲ್ಲಿ ತೊಡಗಿಸಿಕೊಂಡವರು ಹಿಮ್ಮುಖ ಚಲನೆ ಅನುಭವಿಸುತ್ತಿದ್ದಾರೆ ಎಂದಿದ್ದಾರೆ.

ದೇಶದ ಅರ್ಥ ವ್ಯವಸ್ಥೆಯಲ್ಲಿ ಹೆಚ್ಚಿನ ಹಣದುಬ್ಬರ ಹಾಗೂ ಹೆಚ್ಚಿನ ನಿರುದ್ಯೋಗ ಇದೆ. ಇದನ್ನು ಸರಿಪಡಿಸಲು, ಬಹಳ ಜಾಗರೂಕವಾಗಿ ನಿಯಮಗಳನ್ನು ರೂಪಿಸಬೇಕು. ಎರಡು ವರ್ಷಗಳಲ್ಲಿ ಕುಟುಂಬಗಳ ತಲಾವಾರು ಆದಾಯ ಇಳಿಕೆ ಆಗಿದೆ. ಇದೇ ಸಂದರ್ಭದಲ್ಲಿ ಹಣದುಬ್ಬರ ದರವು ಶೇ 5ರಷ್ಟು ಇದೆ. ಉದ್ಯೋಗ ಸೃಷ್ಟಿಸುವುದು, ಸಣ್ಣ ಉದ್ದಿಮೆಗಳಿಗೆ ನೆರವು ಒದಗಿಸುವುದು, ಉತ್ಪಾದಕತೆ ಹೆಚ್ಚಿಸುವುದು ಈಗಿನ ದೊಡ್ಡ ಸವಾಲುಗಳು ಎಂದು ಅವರು ಹೇಳಿದ್ದಾರೆ.

ರಿಲಯನ್ಸ್‌ನಿಂದ ವಜ್ರದ ವಿಶೇಷ ಕಿವಿಯೋಲೆ, ರಿಂಗ್


ರಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಜುವೆಲ್ಸ್ ಕಂಪನಿಯು ಸಂಕ್ರಾಂತಿ ಹಬ್ಬದ ಅಂಗವಾಗಿ ಸೂರ್ಯನ ಕಿರಣಗಳಿಂದ ಪ್ರೇರಿತವಾದ ವಿಶೇಷ ವಜ್ರದ ಕಿವಿಯೋಲೆಗಳು ಮತ್ತು ರಿಂಗ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ.

ಈ ವಜ್ರದ ಕಲೆಕ್ಷನ್‌ನಲ್ಲಿ ಪ್ರತಿ ಆಭರಣವನ್ನೂ ಅತ್ಯಂತ ಕಾಳಜಿಯಿಂದ ವಿನ್ಯಾಸ ಮಾಡಲಾಗಿದ್ದು, ಇವು ಸೂರ್ಯನ ಕಿರಣಗಳನ್ನು ನೆನಪಿಸುತ್ತವೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ವೈಯಕ್ತಿಕ ಆಭರಣಗಳ ಸಂಗ್ರಹಕ್ಕೆ ಹೊಸ ಸೇರ್ಪಡೆ ಇದಾಗಿದೆ. ದೇಶದಾದ್ಯಂತ ಇರುವ ರಿಲಯನ್ಸ್ ಜುವೆಲ್ಸ್ ಷೋರೂಂಗಳಲ್ಲಿ ಮತ್ತು ಜಾಲತಾಣದಲ್ಲಿ ಲಭ್ಯವಿದೆ ಎಂದು ಕಂಪನಿಯು ಹೇಳಿದೆ.

ಫೆಬ್ರುವರಿ 14ರವರೆಗೆ ನಡೆಯಲಿರುವ 'ಡ್ರೀಮ್ ಡೈಮಂಡ್ ಸೇಲ್'ನಲ್ಲಿ ವಜ್ರದ ಉತ್ಪನ್ನಗಳ ಇನ್‌ವಾಯ್ಸ್ ಮೌಲ್ಯದ ಮೇಲೆ ಶೇ 25ರಷ್ಟು ರಿಯಾಯಿತಿ ನೀಡಲಾಗುತ್ತದೆ. ಚಿನ್ನದ ಆಭರಣಗಳ ಮೇಲೆ ಶೇ 25ವರೆಗೆ ಮೇಕಿಂಗ್ ಚಾರ್ಜ್‌ನಲ್ಲಿ ರಿಯಾಯಿತಿ ಪಡೆಯಬಹುದು ಎಂದು ತಿಳಿಸಿದೆ.

ಪ್ರಯಾಣಿಕ ವಾಹನ ರಫ್ತು ಶೇ 46ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಭಾರತದಿಂದ ಪ್ರಯಾಣಿಕ ವಾಹನಗಳ ರಫ್ತು ಪ್ರಸಕ್ತ ಹಣಕಾಸು ವರ್ಷದ ಒಂಬತ್ತು ತಿಂಗಳಿನಲ್ಲಿ 4.24 ಲಕ್ಷ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಈ ಬಾರಿ ರಫ್ತು ಪ್ರಮಾಣ ಶೇಕಡ 46ರಷ್ಟು ಹೆಚ್ಚಾಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ 2.91 ಲಕ್ಷ ಪ್ರಯಾಣಿಕ ವಾಹನಗಳು ರಫ್ತಾಗಿದ್ದವು ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟವು (ಎಸ್‌ಐಎಎಂ) ಹೇಳಿದೆ.

ಈ ಅವಧಿಯಲ್ಲಿ ಕಾರು ಮಾರಾಟವು ಶೇ 45ರಷ್ಟು ಹೆಚ್ಚಾಗಿದ್ದು 2.75 ಲಕ್ಷಕ್ಕೆ ತಲುಪಿದೆ. ಯುಟಿಲಿಟಿ ವಾಹನಗಳ ರಫ್ತು ಪ್ರಮಾಣವು ಶೇ 47ರಷ್ಟು ಹೆಚ್ಚಾಗಿದೆ. ವ್ಯಾನ್ ರಫ್ತು 877ರಿಂದ 1,621ಕ್ಕೆ ಏರಿಕೆ ಆಗಿದೆ.

ಮಾರುತಿ ಸುಜುಕಿ ಇಂಡಿಯಾ ಕಂಪನಿಯು 1.68 ಲಕ್ಷ ವಾಹನಗಳನ್ನು ರಫ್ತು ಮಾಡಿದ್ದು, ಮೊದಲ ಸ್ಥಾನದಲ್ಲಿದೆ. ಹುಂಡೈ ಮತ್ತು ಕಿಯಾ ಇಂಡಿಯಾ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

ಅಕ್ಟೋಬರ್–ಡಿಸೆಂಬರ್ ತ್ರೈಮಾಸಿ ಅವಧಿಯಲ್ಲಿ ಪ್ರಯಾಣಿಕ ವಾಹನಗಳ ರಫ್ತು 1.36 ಲಕ್ಷದಿಂದ 1.39 ಲಕ್ಷಕ್ಕೆ ಏರಿಕೆ ಆಗಿದೆ.

ಪಾಲಕರನ್ನು ಕಳೆದುಕೊಂಡ ಮಕ್ಕಳ ಸಂಖ್ಯೆ 1.47 ಲಕ್ಷ

ನವದೆಹಲಿ (ಪಿಟಿಐ): ಕೋವಿಡ್–19 ಹಾಗೂ ಇತರ ಕಾರಣಗಳಿಂದಾಗಿ 2020ರ ಏಪ್ರಿಲ್ 1ರಿಂದ ಈ ವರೆಗೆ ದೇಶದಲ್ಲಿ 1,47,492 ಮಕ್ಕಳು ತಮ್ಮ ಪಾಲಕರನ್ನು ಕಳೆದುಕೊಂಡಿದ್ದಾರೆ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಹೇಳಿದೆ.

ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಆಯೋಗ ಈ ಮಾಹಿತಿ ನೀಡಿದ್ದು, ಈ ಮಕ್ಕಳಲ್ಲಿ ತಂದೆ ಅಥವಾ ತಾಯಿ ಅಥವಾ ಇಬ್ಬರನ್ನೂ ಕಳೆದುಕೊಂಡವರೂ ಸೇರಿದ್ದಾರೆ ಎಂದು ತಿಳಿಸಿದೆ.

ತನ್ನ 'ಬಾಲ ಸ್ವರಾಜ್ ಪೋರ್ಟಲ್–ಕೋವಿಡ್ 19'ನಲ್ಲಿ ಜನವರಿ 11 ವರೆಗೆ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಅಪ್‌ಲೋಡ್ ಮಾಡಿರುವ ವಿವರಗಳನ್ನು ಆಧರಿಸಿ ಈ ಮಾಹಿತಿಯನ್ನು ಸಿದ್ಧಪಡಿಸಲಾಗಿದೆ ಎಂದು ಆಯೋಗದ ಪರ ವಕೀಲ ಸ್ವರೂಪಮಾ ಚತುರ್ವೇದಿ ಅವರು ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

'ಆಯೋಗದ ಪೋರ್ಟಲ್‌ನಲ್ಲಿನ ಮಾಹಿತಿಯಂತೆ, 10,094 ಮಕ್ಕಳು ಅನಾಥರಿದ್ದರೆ, 1,36,910 ಮಕ್ಕಳು ತಂದೆ ಅಥವಾ ತಾಯಿಯನ್ನು ಕಳೆದುಕೊಂಡಿದ್ದಾರೆ. ಪರಿತ್ಯಕ್ತ ಮಕ್ಕಳ ಸಂಖ್ಯೆ 488 ಇದ್ದು, ಒಟ್ಟು 1,47,492 ಮಕ್ಕಳಿಗೆ ಪಾಲನೆ ಹಾಗೂ ರಕ್ಷಣೆಯ ಅಗತ್ಯವಿದೆ' ಎಂದು ಆಯೋಗ ತಿಳಿಸಿದೆ.

ಸ್ತಬ್ಧಚಿತ್ರ ತಿರಸ್ಕಾರ ಆಘಾತ ತಂದಿದೆ: ಮಮತಾ

ಕೋಲ್ಕತ್ತ (ಪಿಟಿಐ): ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆಗಳನ್ನು ಬಿಂಬಿಸುವ ಪಶ್ಚಿಮ ಬಂಗಾಳದ ಸ್ತಬ್ಧಚಿತ್ರವನ್ನು ದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪರೇಡ್‌ನಿಂದ ಹೊರಗಿಟ್ಟಿರುವ ಕೇಂದ್ರ ಸರ್ಕಾರದ ನಡೆ ಆಘಾತ ತಂದಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಾನುವಾರ ಪತ್ರ ಬರೆದಿರುವ ಮಮತಾ, 'ಸರ್ಕಾರದ ಈ ನಿರ್ಧಾರದಿಂದ ರಾಜ್ಯದ ಜನರಿಗೆ ನೋವುಂಟಾಗಿದೆ. ಈ ಬಗ್ಗೆ ಮರುಪರಿಶೀಲಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಯಾವುದೇ ಕಾರಣ ಹೇಳದೆ ಸ್ತಬ್ಧಚಿತ್ರವನ್ನು ತಿರಸ್ಕರಿಸಿರುವುದು ದಿಗ್ಭ್ರಮೆಗೊಳಿಸುವ ಸಂಗತಿಯಾಗಿದೆ' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸ್ತಬ್ಧಚಿತ್ರವು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 125ನೇ ಜನ್ಮ ದಿನದ ವರ್ಷದಲ್ಲಿ ಅವರ ಐಎನ್‌ಎಯ ಕೊಡುಗೆಗಳನ್ನು ಸ್ಮರಿಸುವ ಉದ್ದೇಶ ಹೊಂದಿತ್ತು ಎಂದೂ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

140 ವರ್ಷ ಹಳೆಯ ಕಟ್ಟಡದಲ್ಲಿ ಬೆಂಕಿ ಅವಘಡ

ಹೈದರಾಬಾದ್: ಇಲ್ಲಿನ ಐತಿಹಾಸಿಕ, 140 ವರ್ಷದಷ್ಟು ಹಳೆಯದಾದ ಸಿಕಂದರಾಬಾದ್ ಕ್ಲಬ್ ಕಟ್ಟಡದಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, ಪ್ರವೇಶ ಭಾಗವು ಸೇರಿದಂತೆ ಭಾಗಶಃ ಸುಟ್ಟುಭಸ್ಮವಾಗಿದೆ.

ಕ್ಲಬ್ 1878ರಲ್ಲಿ ಸ್ಥಾಪನೆಯಾಗಿದ್ದು, 22 ಎಕರೆ ವ್ಯಾಪ್ತಿಯಲ್ಲಿದೆ. ಈ ವರ್ಣರಂಜಿತ ಸಂಕೀರ್ಣಕ್ಕೆ ಪಾರಂಪರಿಕ ಕಟ್ಟಡ ಎಂಬ ಹಣೆಪಟ್ಟಿಯಿದೆ. ಹೈದರಾಬಾದ್, ಸಿಕಂದರಾಬಾದ್‌ನ ಪ್ರಮುಖರು ಈ ಕ್ಲಬ್‌ಗೆ ಭೇಟಿ ನೀಡುತ್ತಿದ್ದರು.

ಪೊಲೀಸರಿಗೆ ಈ ಕುರಿತು ನೀಡಿರುವ ದೂರಿನಲ್ಲಿ ಕ್ಲಬ್‌ನ ಅಧ್ಯಕ್ಷ ರಘುರಾಂ ರೆಡ್ಡಿ ಅವರು, ಬೆಂಕಿಯ ಜ್ವಾಲೆ ಕಟ್ಟಡವನ್ನು ಆವರಿಸಿದ್ದು, ಅವಘಡದಿಂದ ಅಂದಾಜು ₹ 25 ಕೋಟಿ ನಷ್ಟವಾಗಿದೆ ಎಂದು ತಿಳಿಸಿದ್ದಾರೆ. ಬಹುತೇಕ ಹಿರಿಯ ಸದಸ್ಯರು, ಸಾಂಸ್ಕೃತಿಕವಾಗಿ ಆಗಿರುವ ನಷ್ಟ ಅದಕ್ಕೂ ಹೆಚ್ಚಿನದು ಎಂದು ಪ್ರತಿಕ್ರಿಯಿಸಿದ್ದಾರೆ.

ಟೊಂಗಾ: ಸುನಾಮಿ ಆತಂಕ ದೂರ

ವೆಲ್ಲಿಂಗ್ಟನ್ (ಎಪಿ): ಟೊಂಗಾ ದ್ವೀಪದ ಸಮೀಪ ಪೆಸಿಫಿಕ್ ಸಾಗರದಾಳದಲ್ಲಿ ಸ್ಫೋಟಿಸಿದ್ದ ಜ್ವಾಲಾಮುಖಿಯಿಂದ ಸುನಾಮಿ ಅಪ್ಪಳಿಸುವ ಸಾಧ್ಯತೆ ಕಡಿಮೆಯಾಗಿದ್ದು, ಜ್ವಾಲಾಮುಖಿಯಿಂದ ಮೇಲೆದ್ದ ಬೂದಿ ಸಾಗರದ ಮೇಲ್ಭಾಗದಲ್ಲೂ ಹರಡಿಕೊಂಡಿರುವುದರಿಂದ ಮೇಲ್ವಿಚಾರಣಾ ಕಾರ್ಯಗಳಿಗೆ ಅಡ್ಡಿ ಉಂಟಾಗಿದೆ.

ಶನಿವಾರ ಸಂಜೆ ಜ್ವಾಲಾಮುಖಿ ಸ್ಫೋಟಗೊಂಡ ಬಳಿಕ ನೀಲ ಸಾಗರದ ಮೇಲ್ಭಾಗದಲ್ಲಿ ಕಂಡುಬಂದ ಬೂದಿಯ ರಾಶಿಯ ದೃಶ್ಯಗಳು ಉಪಗ್ರಹ ಕ್ಯಾಮೆರಾಗಳಲ್ಲಿ ಸೆರೆಯಾಗಿವೆ. ಸುನಾಮಿ ಅಪ್ಪಳಿಸದಿದ್ದರೂ ಬೃಹತ್ ತೆರೆಗಳು ಸೃಷ್ಟಿಯಾಗಿದ್ದು, ಟೊಂಗಾ ದ್ವೀಪರಾಷ್ಟ್ರದ ಕೆಲವೆಡೆ ದೋಣಿಗಳು ಮುಗುಚಿ ಬಿದ್ದಿರುವುದು ಕ್ಯಾಮೆರಾಗಳಲ್ಲಿ ಸೆರೆಯಾಗಿವೆ. ಆದರೆ ಎಷ್ಟರ ಮಟ್ಟಿಗೆ ಹಾನಿ ಉಂಟಾಗಿದೆ ಎಂಬ ಮಾಹಿತಿ ಲಭ್ಯವಾಗಿಲ್ಲ.

ಸಾವು, ನೋವು, ಹಾನಿಯ ವಿವರ ಇದುವರೆಗೆ ಲಭಿಸಿಲ್ಲ ಎಂಧು ನ್ಯೂಜಿಲೆಂಡ್ ಪ್ರಧಾನಿ ಜೆಸಿಂದಾ ಆರ್ಡೆನ್ ಹೇಳಿದ್ದಾರೆ.

ಸಾಲ ನಿರ್ವಹಣೆ: ಮೂರು ವಿಚಾರ ನೆನಪಿರಲಿ



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಸಾಲ ನಿರ್ವಹಣೆಯಲ್ಲಿ ಯಾರು ಎಡವುತ್ತಾರೋ ಅವರು ಆರ್ಥಿಕ ನಿರ್ವಹಣೆಯಲ್ಲಿ ಹಿಂದೆ ಬೀಳುತ್ತಾರೆ. ಸಾಲ ನಿರ್ವಹಣೆ ಅಂತ ಬಂದಾಗ ಕ್ರೆಡಿಟ್ ಸ್ಕೋರ್, ಕ್ರೆಡಿಟ್ ಕಾರ್ಡ್ ಮತ್ತು ಸಾಲ ಖಾತರಿದಾರ ಎಂಬ ಮೂರು ವಿಚಾರಗಳನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ.

ಸುಲಭ ಸಾಲಕ್ಕೆ ಬೇಕು ಉತ್ತಮ ಕ್ರೆಡಿಟ್ ಸ್ಕೋರ್: ಕಡಿಮೆ ಬಡ್ಡಿ ದರದಲ್ಲಿ, ಸುಲಭದಲ್ಲಿ ಸಾಲ ಸಿಗಬೇಕು ಎಂದು ಎಲ್ಲರೂ ಬಯಸುತ್ತಾರೆ. ಆದರೆ, ಸುಲಭ ಸಾಲಕ್ಕೆ ಮಾನದಂಡ ಕ್ರೆಡಿಟ್ ಸ್ಕೋರ್. ನಿಮ್ಮ ಹಣಕಾಸಿನ ವ್ಯವಹಾರದ ಶಿಸ್ತು ಅಥವಾ ಅಶಿಸ್ತಿಗೆ ಕ್ರೆಡಿಟ್ ಸ್ಕೋರ್ ಕನ್ನಡಿ ಇದ್ದಂತೆ. ಸಾಲ ಮರುಪಾವತಿ ಇತಿಹಾಸ, ಸಮಯಕ್ಕೆ ಸರಿಯಾಗಿ ಸಾಲದ ಕಂತು ಪಾವತಿ, ಸಾಲ ಮರುಪಾವತಿಗೆ ತೆಗೆದುಕೊಂಡ ಅವಧಿ, ಸಾಲಕ್ಕೆ ಎಷ್ಟು ಬಾರಿ ಅರ್ಜಿ ಸಲ್ಲಿಸಲಾಗಿದೆ, ಸಾಲವಾಗಿ ಪಡೆದ ಹಣ ಬಳಸುವಲ್ಲಿ ವೈವಿಧ್ಯತೆ ಸೇರಿ ಹತ್ತಾರು ಅಂಶಗಳು ಕ್ರೆಡಿಟ್ ಸ್ಕೋರ್‌ಅನ್ನು (ಸಾಲ ಸಾಮರ್ಥ್ಯದ ಅಂಕಗಳು) ನಿರ್ಧರಿಸುತ್ತವೆ. ಕ್ರೆಡಿಟ್ ರೇಟಿಂಗ್ ಸಂಸ್ಥೆಗಳಾದ ಕ್ರೆಡಿಟ್ ಇನ್ಫಾರ್ಮೇಷನ್ ಬ್ಯೂರೋ ಆಫ್ ಇಂಡಿಯಾ ಲಿ. (CIBIL), ಈಕ್ವಿಫ್ಯಾಕ್ಸ್, ಎಕ್ಸ್‌ಪೀರಿಯನ್ ಸಂಸ್ಥೆಗಳು ಬ್ಯಾಂಕ್‌ಗಳಿಂದ ಮಾಹಿತಿ ಪಡೆದು ಸಾಲಗಾರರ ಮಾಹಿತಿಯನ್ನು ಭರ್ತಿ ಮಾಡಿ ದತ್ತಾಂಶವನ್ನು ಹಂಚಿಕೊಳ್ಳುತ್ತವೆ.

300ರಿಂದ 900ರವರೆಗೆ ಕ್ರೆಡಿಟ್ ಸ್ಕೋರ್ ಅಂಕಗಳನ್ನು ನೀಡಲಾಗುತ್ತದೆ. 750ಕ್ಕಿಂತ ಹೆಚ್ಚು ಕ್ರೆಡಿಟ್ ಸ್ಕೋರ್ ಹೊಂದಿದ್ದರೆ ಸಾಲ ಸಿಗುವ ಸಾಧ್ಯತೆ ಹೆಚ್ಚಿರುತ್ತದೆ. ಹಲವಾರು ವೆಬ್‌ಸೈಟ್‌ಗಳು ಕೆಲವು ಪೂರಕ ಮಾಹಿತಿ ಭರ್ತಿ ಮಾಡಿದರೆ ಉಚಿತವಾಗಿ ಕ್ರೆಡಿಟ್ ಸ್ಕೋರ್ ಮಾಹಿತಿ ಒದಗಿಸುತ್ತವೆ. ಬ್ಯಾಂಕ್‌ಗಳಿಂದ ಸಾಲ ಪಡೆಯಲು ಅರ್ಜಿ ಸಲ್ಲಿಸಿದ ಕೂಡಲೇ ಅಧಿಕಾರಿಗಳು ಕ್ರೆಡಿಟ್ ರಿಪೋರ್ಟ್ ಮತ್ತು ಕ್ರೆಡಿಟ್ ಸ್ಕೋರ್ ಕೇಳುತ್ತಾರೆ. ಕ್ರೆಡಿಟ್ ಸ್ಕೋರ್ ಉತ್ತಮವಾಗಿದ್ದರಷ್ಟೇ ಸಾಲ ಸಿಗುತ್ತದೆ. ಸಾಲದ (ಕ್ರೆಡಿಟ್) ರಿಪೋರ್ಟ್‌ನಲ್ಲಿ ನೀವು ಯಾವ ಬ್ಯಾಂಕ್‌ನಿಂದ ಸಾಲ ಪಡೆದಿದ್ದೀರಿ, ಸಾಲದ ಮೊತ್ತವೆಷ್ಟು, ನಿಗದಿತ ಸಮಯಕ್ಕೆ ಅದು ಮರುಪಾವತಿ ಆಗಿದೆಯಾ, ಸಾಲ ಮನ್ನಾ ಆಗಿದೆಯಾ, ಸಾಲಕ್ಕೆ ಸಲ್ಲಿಸಿದ ಅರ್ಜಿ ತಿರಸ್ಕೃತವಾಗಿದೆಯಾ ಎಂಬ ಮಾಹಿತಿ ಇರುತ್ತದೆ.

ಕ್ರೆಡಿಟ್ ಕಾರ್ಡ್ ಬಳಕೆ ಎಷ್ಟು ಸರಿ?: ಕ್ರೆಡಿಟ್ ಕಾರ್ಡ್ ಎಂದಾಕ್ಷಣ, 'ಅಯ್ಯೋ, ಅದರ ಸಹವಾಸವೇ ಬೇಡ' ಎನ್ನುವ ಮಂದಿ ಒಂದು ಕಡೆಯಾದರೆ, 'ನಾನು ಕ್ರೆಡಿಟ್ ಕಾರ್ಡ್ ಬಳಸಿಯೇ ಜೀವನ ಮಾಡುತ್ತಿದ್ದೇನೆ' ಎನ್ನುವ ಮಂದಿ ಇನ್ನೊಂದು ಕಡೆ. ಈ ಎರಡೂ ರೀತಿಯ ಆಲೋಚನೆಗಳು ಕ್ರೆಡಿಟ್ ಕಾರ್ಡ್ ವಿಚಾರದಲ್ಲಿ ಸಮಂಜಸವಲ್ಲ.

ಅಗತ್ಯ ಅರಿತು ಬಳಸಿದರೆ ಕ್ರೆಡಿಟ್ ಕಾರ್ಡ್ ನಿಮ್ಮ ಪಾಲಿನ ಆಪತ್ಬಾಂಧವ. ಆದರೆ ಹಣಕಾಸು ನಿರ್ವಹಣೆಯಲ್ಲಿ ಶಿಸ್ತು ಇಲ್ಲದಿದ್ದರೆ ಕ್ರೆಡಿಟ್ ಕಾರ್ಡ್ ನಿಮ್ಮನ್ನು ಶೂಲವಾಗಿ ಕಾಡುತ್ತದೆ. ಕ್ರೆಡಿಟ್ ಕಾರ್ಡ್‌ನಿಂದಾಗಿ ಸುಮಾರು 45 ದಿನಗಳವರೆಗೆ ಬಡ್ಡಿ ರಹಿತ ಸಾಲ ಸಿಗುತ್ತದೆ. ಕ್ರೆಡಿಟ್ ಕಾರ್ಡ್ ಸರಿಯಾಗಿ ಬಳಸಿದರೆ ಕ್ರೆಡಿಟ್ ಸ್ಕೋರ್ ಉತ್ತಮಪಡಿಸಿಕೊಳ್ಳಲು ಸಾಧ್ಯವಿದೆ. ಕ್ರೆಡಿಟ್ ಕಾರ್ಡ್‌ನ ಕ್ರೆಡಿಟ್ ಲಿಮಿಟ್‌ಅನ್ನು (ಸಾಲದ ಮಿತಿ) ಸಂಪೂರ್ಣವಾಗಿ ಬಳಸಬಾರದು. ಇದರಿಂದ ಕ್ರೆಡಿಟ್ ಸ್ಕೋರ್ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಕ್ರೆಡಿಟ್ ಕಾರ್ಡ್ ಬಳಸಿದ ಮೇಲೆ ಸಮಯಕ್ಕೆ ಸರಿಯಾಗಿ ಬಾಕಿ ಪಾವತಿ ಮಾಡಬೇಕು, ಕ್ರೆಡಿಟ್ ಕಾರ್ಡ್ ಸಾಲದ ಪಾವತಿಗೆ ಆಟೊ ಡೆಬಿಟ್ ವ್ಯವಸ್ಥೆ ಬಳಸಿಕೊಳ್ಳುವುದು ಒಳಿತು. ಯಾವುದೇ ಕಾರಣಕ್ಕೂ, ಕ್ರೆಡಿಟ್ ಕಾರ್ಡ್‌ನ ಮಾಸಿಕ ಬಿಲ್‌ನಲ್ಲಿ ಇರುವ ಮಿನಿಮಂ ಅಮೌಂಟ್ ಡ್ಯೂ (ಪಾವತಿಸಬೇಕಿರುವ ಕನಿಷ್ಠ ಮೊತ್ತ) ಮಾತ್ರವೇ ಪಾವತಿಸಿ ಬಡ್ಡಿಯ ಶೂಲಕ್ಕೆ ಸಿಲುಕಬಾರದು. ಪ್ರತಿ ತಿಂಗಳೂ ಕ್ರೆಡಿಟ್ ಕಾರ್ಡ್ ಬಿಲ್‌ನ ಪೂರ್ತಿ ಮೊತ್ತವನ್ನು ನಿಗದಿತ ದಿನದೊಳಗೆ ಪಾವತಿಸುವ ಶಿಸ್ತು ಪಾಲಿಸಬೇಕು. ಈ ಎಲ್ಲ ಸಲಹೆಗಳನ್ನು ಪಾಲಿಸಿದರೆ, ಕ್ರೆಡಿಟ್ ಕಾರ್ಡ್‌ನ ಅನುಕೂಲವನ್ನು ಪಡೆಯಬಹುದು.

ಬೇರೆಯವರ ಸಾಲಕ್ಕೆ ಖಾತರಿದಾರ ಆಗುವಾಗ ಎಚ್ಚರ: ಸಾಲ ಕೊಡುವವರು, ಸಾಲ ತೆಗೆದುಕೊಳ್ಳುವವರ ನಡುವೆ ಸೇತುವೆಯಂತೆ ಇರುವವ ಜಾಮೀನುದಾರ/ಖಾತರಿದಾರ. ನೀವು ಯಾರಾದರೂ ಸಂಬಂಧಿಕರು, ಸ್ನೇಹಿತರು ಅಥವಾ ಪರಿಚಯಸ್ಥರಿಗೆ ಸಾಲಕ್ಕೆ ಖಾತರಿದಾರ ಆಗುವ ಮುನ್ನ ಅಳೆದು–ತೂಗಿ ನಿರ್ಧಾರಕ್ಕೆ ಬರಬೇಕು. ಸಾಲಕ್ಕೆ ಖಾತರಿದಾರ (ಗ್ಯಾರಂಟರ್) ಆಗುವುದೆಂದರೆ ಬೇರೆಯವರ ಹಣಕಾಸಿನ ಹೊರೆ ಹೊರುವ ದೊಡ್ಡ ಜವಾಬ್ದಾರಿ. ಪೂರ್ವಾಪರ ಯೋಚಿಸದೆ ಬೇರೆಯವರ ಸಾಲದ ಜಾಮೀನು ಕರಾರಿಗೆ ಸಹಿ ಹಾಕಿದರೆ, ಆ ಬಲೆಯಲ್ಲಿ ನೀವೇ ಸಿಲುಕಿ ಪರದಾಡಬೇಕಾಗಬಹುದು. ಸಾಲ ಪಡೆಯುವ ವ್ಯಕ್ತಿಗೆ ಸಾಲ ಮರುಪಾವತಿ ಸಾಮರ್ಥ್ಯ ಕಡಿಮೆ ಇದೆ ಅನ್ನಿಸಿದರೆ ಅಥವಾ ಸಾಲ ಪಡೆಯಲು ನಿರ್ದಿಷ್ಟ ವ್ಯಕ್ತಿಗೆ ಅಗತ್ಯ ಅರ್ಹತೆಗಳು ಇಲ್ಲ ಎನ್ನುವ ಸಂದರ್ಭದಲ್ಲಿ ಬ್ಯಾಂಕ್‌ಗಳು ಖಾತರಿದಾರ ಬೇಕು ಎಂದು ಕೇಳುತ್ತವೆ. ಬ್ಯಾಂಕ್‌ಗಳು ಅಡಮಾನ ಸಾಲ ಅಥವಾ ಅಡಮಾನ ರಹಿತ ಸಾಲಗಳಿಗೂ ಸಾಲ ಖಾತರಿದಾರರನ್ನು ಕೇಳಬಹುದು.

ಕ್ರೆಡಿಟ್ ಸ್ಕೋರ್ ಕಡಿಮೆ ಇದ್ದಾಗ, ಸಾಲದ ಮೊತ್ತ ಜಾಸ್ತಿ ಇದ್ದಾಗ, ಸಾಲ ಪಡೆಯುವ ವ್ಯಕ್ತಿಗೆ ವಯಸ್ಸಾಗಿದ್ದಾಗಲೂ ಬ್ಯಾಂಕ್‌ಗಳು ಸಾಲ ಖಾತರಿದಾರರನ್ನು ಕೇಳುತ್ತವೆ. ಜಾಮೀನುದಾರ/ಖಾತರಿದಾರ ಆಗುವುದೆಂದರೆ ಸಾಲ ಪಡೆದ ವ್ಯಕ್ತಿಯು ಒಂದೊಮ್ಮೆ ಸರಿಯಾದ ಸಮಯಕ್ಕೆ ಸಾಲ ಮರುಪಾವತಿ ಮಾಡದಿದ್ದರೆ ಅದರ ಹೊಣೆಯನ್ನು ತಾನು ಹೊರುತ್ತೇನೆ ಎಂದು ವಾಗ್ದಾನ ಮಾಡಿದಂತೆ. ಅಂದರೆ ನೀವು ಸಾಲಕ್ಕೆ ಕರಾರು ಮಾಡಿರುವ ವ್ಯಕ್ತಿಯು ಬ್ಯಾಂಕ್ ಸಾಲ ಕಟ್ಟದಿದ್ದರೆ ನಿಮ್ಮ ಜೇಬಿನಿಂದ ಅದನ್ನು ಕಟ್ಟಬೇಕಾಗುತ್ತದೆ. ಒಂದೊಮ್ಮೆ ಕಟ್ಟದಿದ್ದರೆ, ಅದು ನಿಮ್ಮ ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಉಂಟುಮಾಡುತ್ತದೆ. ಹಾಗಾಗಿ ಖಾತರಿದಾರ ಆಗುವಾಗ ಯೋಚಿಸಿ ನಿರ್ಧಾರಕ್ಕೆ ಬನ್ನಿ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಅನಿಶ್ಚಿತತೆ ನಡುವೆ ಉತ್ತಮ ಗಳಿಕೆ ಕಂಡ ಸೂಚ್ಯಂಕ

ಜನವರಿ 14ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅನಿಶ್ಚಿತತೆಯ ನಡುವೆಯೂ ಉತ್ತಮ ಗಳಿಕೆ ಕಂಡಿವೆ. 61,223 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.70ರಷ್ಟು ಗಳಿಕೆ ಕಂಡಿದ್ದರೆ, 18,255 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.05ರಷ್ಟು ಜಿಗಿದಿದೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಎಫ್‌ಎಂಸಿಜಿ ಹೊರತುಪಡಿಸಿ ಎಲ್ಲ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 4.3ರಷ್ಟು, ಮೂಲಸೌಕರ್ಯ ಶೇ 3.8ರಷ್ಟು ಮತ್ತು ಲೋಹ ವಲಯ ಶೇ 3.5ರಷ್ಟು ಗಳಿಸಿಕೊಂಡಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಎಲ್‌ಆ್ಯಂಡ್‌ಟಿ ಶೇ 8ರಷ್ಟು, ಅದಾನಿ ಪೋರ್ಟ್ಸ್ ಶೇ 6.5ರಷ್ಟು, ಇನ್ಫೊಸಿಸ್ ಶೇ 6.5ರಷ್ಟು, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 6.5ರಷ್ಟು ಮತ್ತು ಕೋಲ್ ಇಂಡಿಯಾ ಶೇ 5ರಷ್ಟು ಗಳಿಕೆ ಕಂಡಿವೆ. ವಿಪ್ರೊ ಶೇ 10ರಷ್ಟು, ಏಷ್ಯನ್ ಪೇಂಟ್ಸ್ ಶೇ 6ರಷ್ಟು, ನೆಸ್ಲೆ ಶೇ 2.5ರಷ್ಟು, ಹಿಂದೂಸ್ಥಾನ್ ಯುನಿಲಿವರ್ ಶೇ 2ರಷ್ಟು ಮತ್ತು ಬ್ರಿಟಾನಿಯಾ ಶೇ 1ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಐಸಿಐಸಿಐ ಬ್ಯಾಂಕ್, ಹ್ಯಾತ್ ವೇ, ಹಿಂದೂಸ್ತಾನ್ ಯುನಿಲಿವರ್, ಪಾಲಿ ಕ್ಯಾಬ್, ಯೆಸ್ ಬ್ಯಾಂಕ್, ಪಿವಿಆರ್, ಹ್ಯಾವೆಲ್ಸ್, ಬಯೋಕಾನ್, ಡೂಡ್ಲಾ, ಬಜಾಜ್ ಫಿನ್‌ಸರ್ವ್, ಜೆಎಸ್‌ಡಬ್ಲ್ಯು ಎನರ್ಜಿ, ಏಷ್ಯನ್ ಪೇಂಟ್ಸ್, ಸಿಯೆಟ್, ಬಜಾಜ್ ಆಟೊ, ಜಸ್ಟ್ ಡಯಲ್, ಹ್ಯಾಟ್‌ಸನ್, ಎಚ್‌ಡಿಎಫ್‌ಸಿ ಲೈಫ್, ಎಂಫಸಿಸ್, ಐಸಿಐಸಿಐ ಪ್ರುಡೆನ್ಸಿಯಲ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ತ್ರೈಮಾಸಿಕ ಫಲಿತಾಂಶದಲ್ಲಿ ಕಂಪನಿಗಳು ಹೇಗೆ ಸಾಧನೆ ತೋರಲಿವೆ ಎನ್ನುವುದು ಸೂಚ್ಯಂಕದ ಮೇಲೆ ಪರಿಣಾಮ ಬೀರಲಿದೆ. ಜಾಗತಿಕ ವಿದ್ಯಮಾನಗಳು ಮತ್ತು ಓಮೈಕ್ರಾನ್ ಎಷ್ಟರಮಟ್ಟಿಗೆ ಜನಜೀವನದ ಮೇಲೆ ಪರಿಣಾಮ ಉಂಟುಮಾಡಲಿದೆ ಎನ್ನುವ ಅಂಶವೂ ಷೇರು ಹೂಡಿಕೆದಾರರಿಗೆ ಮುಖ್ಯವಾಗಲಿದೆ. ಇನ್ನು, ಕೇಂದ್ರ ಬಜೆಟ್‌ಗೆ ಕೆಲವೇ ದಿನಗಳಿದ್ದು ಅದರ ಮೇಲೆ ಎಲ್ಲರ ಚಿತ್ತ ನೆಟ್ಟಿದೆ.

ಜ.7–13ರ ಅವಧಿಯಲ್ಲಿನ ಪ್ರಮಾಣ • ಐಐಟಿ–ಮದ್ರಾಸ್ ತಜ್ಞರ ವಿಶ್ಲೇಷಣೆ

ಕೋವಿಡ್ ಪ್ರಸರಣ ಸೂಚ್ಯಂಕ 2.2ಕ್ಕೆ ಇಳಿಕೆ


ದೆಹಲಿಯ ಕಾಮನ್‌ವೆಲ್ತ್ ಗೇಮ್ಸ್ ಗ್ರಾಮದ ಕೋವಿಡ್ ಕೇರ್ ಸೆಂಟರ್‌ನಲ್ಲಿ ವೈದ್ಯರು ಸೋಂಕಿತರಿಗೆ ಯೋಗ ಹೇಳಿಕೊಟ್ಟರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್–19 ಎಷ್ಟು ವೇಗವಾಗಿ ಪ್ರಸರಣಗೊಳ್ಳುತ್ತದೆ ಎಂಬುದರ ಸೂಚ್ಯಂಕವಾದ 'ಆರ್–ವ್ಯಾಲ್ಯೂ' ಜ. 7 ರಿಂದ 13ರ ಮಧ್ಯೆ 2.2ರಷ್ಟು ದಾಖಲಾಗಿತ್ತು. ಹಿಂದಿನ ಎರಡು ವಾರಗಳ ಅವಧಿಗೆ ಹೋಲಿಸಿದಾಗ ಈ ಸೂಚ್ಯಂಕದಲ್ಲಿ ಇಳಿಕೆ ಕಂಡು ಬಂದಿದೆ ಎಂದು ಐಐಟಿ–ಮದ್ರಾಸ್‌ನ ಸಂಶೋಧಕರು ಹೇಳಿದ್ದಾರೆ.

ಈ ಕುರಿತು ಪ್ರಾಥಮಿಕ ವಿಶ್ಲೇಷಣೆ ನಡೆಸಿದ್ದು, ಜ. 7ಕ್ಕೂ ಹಿಂದಿನ ಎರಡು ವಾರಗಳ ಅವಧಿಯಲ್ಲಿ ಈ ಸೂಚ್ಯಂಕ ಕ್ರಮವಾಗಿ 4 (ಜ.1 ರಿಂದ 6) ಹಾಗೂ 2.9 (ಡಿಸೆಂಬರ್ 25–31)) ಇತ್ತು ಎಂದು ಸಂಶೋಧಕರು ಹೇಳಿದ್ದಾರೆ.

ಐಐಟಿಯ ಗಣಿತ ವಿಭಾಗದ ಪ್ರಾಧ್ಯಾಪಕರಾದ ನೀಲೇಶ್ ಎಸ್.ಉಪಾಧ್ಯೆ ಹಾಗೂ ಎಸ್.ಸುಂದರ್ ನೇತೃತ್ವದ ತಂಡ ಈ ವಿಶ್ಲೇಷಣೆ ನಡೆಸಿದೆ.

ಕೋವಿಡ್ ಪೀಡಿತರು ಎಷ್ಟು ಜನರಿಗೆ ಸೋಂಕನ್ನು ಪ್ರಸರಣ ಮಾಡುತ್ತಾರೆ ಎಂಬುದನ್ನು 'ಆರ್–ವ್ಯಾಲ್ಯೂ' ಸೂಚಿಸುತ್ತದೆ. ಈ 'ಆರ್–ವ್ಯಾಲ್ಯೂ' 1ಕ್ಕಿಂತ ಕಡಿಮೆಯಾದರೆ, ಪಿಡುಗು ಕೊನೆಯಾಯಿತು ಎಂಬುದಾಗಿ ಪರಿಗಣಿಸಲಾಗುತ್ತದೆ.

'ಪ್ರಸರಣದ ಸಂಭವನೀಯತೆ, ಇತರರು ಸೋಂಕಿತನೊಂದಿಗೆ ಸಂಪರ್ಕಕ್ಕೆ ಬರುವ ದರ ಹಾಗೂ ಸೋಂಕು ತಗುಲಲು ಬೇಕಾದ ಸಮಯವನ್ನು ಈ ಆರ್ ವ್ಯಾಲ್ಯೂ ಅವಲಂಬಿಸಿರುತ್ತದೆ' ಎಂದು ಗಣಿತ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಜಯಂತ್ ಝಾ ಹೇಳಿದರು.

ತೆಲಂಗಾಣ: ಶಾಲೆಗಳಿಗೆ ಜ.30ರವರೆಗೆ ರಜೆ

ಹೈದರಾಬಾದ್ (ಪಿಟಿಐ): ಕೋವಿಡ್ ಪ್ರಕರಣಗಳ ಹೆಚ್ಚಳದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಎಲ್ಲಾ ಶಿಕ್ಷಣ ಸಂಸ್ಥೆಗಳ ರಜಾ ಅವಧಿಯನ್ನು ಜನವರಿ 30 ರವರೆಗೆ ವಿಸ್ತರಿಸಲಾಗಿದೆ.

ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರ ಅಧ್ಯಕ್ಷತೆಯಲ್ಲಿ ರಾಜ್ಯ ಸಚಿವ ಸಂಪುಟ ಸಭೆಯು ಸೋಮವಾರ (ಜ.17) ನಡೆಯಲಿದೆ. ಪ್ರಮುಖವಾಗಿ ಕೋವಿಡ್ ಮತ್ತು ಇನ್ನಿತರ ವಿಷಯಗಳ ಕುರಿತು ಚರ್ಚಿಸಲಾಗುವುದು ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ತಮಿಳುನಾಡು: ಜ.31ರವರೆಗೆ ಶಾಲೆ ಬಂದ್

ಚೆನ್ನೈ (ಪಿಟಿಐ): ಕೋವಿಡ್ ಪ್ರಕರಣಗಳ ಹೆಚ್ಚಳದ ಕಾರಣ ರಾಜ್ಯದ 10–12 ತರಗತಿ ವಿದ್ಯಾರ್ಥಿಗಳ ಶಾಲೆಗಳ ಬಂದ್ ಅವಧಿಯನ್ನು ಜನವರಿ 31 ರವರೆಗೆ ವಿಸ್ತರಿಸಲಾಗಿದೆ ಎಂದು ತಮಿಳುನಾಡು ಸರ್ಕಾರ ಭಾನುವಾರ ಘೋಷಿಸಿದೆ.

10 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ ಜನವರಿ 19 ರಂದು ನಿಗದಿಯಾಗಿದ್ದ ಪರೀಕ್ಷೆಗಳನ್ನೂ ಮುಂದೂಡಲಾಗಿದೆ ಎಂದೂ ಸರ್ಕಾರ ಹೇಳಿದೆ.

'ಶಾಲೆ ಮುಚ್ಚುವುದಕ್ಕೆ ಸಮರ್ಥನೆಗಳೇ ಇಲ್ಲ'

ನವದೆಹಲಿ (ಪಿಟಿಐ): ಸಾಂಕ್ರಾಮಿಕದ ನೆಪ ಹೇಳಿ ಶಾಲೆಗಳ ಬಾಗಿಲು ಮುಚ್ಚುವುದಕ್ಕೆ ಈಗ ಸಮರ್ಥನೆಗಳೇ ಇಲ್ಲ ಎಂದು ವಿಶ್ವ ಬ್ಯಾಂಕ್‌ನ ಜಾಗತಿಕ ಶಿಕ್ಷಣ ನಿರ್ದೇಶಕ ಜೈಮಿ ಸಾವೆದ್ರಾ ಹೇಳಿದ್ದಾರೆ. ಸಾಂಕ್ರಾಮಿಕದ ಹೊಸ ಅಲೆಗಳು ಎದುರಾದರೂ ಶಾಲೆಗಳನ್ನು ಮುಚ್ಚುವುದು ಅಂತಿಮ ಆಯ್ಕೆಯಾಗಬೇಕು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕೋವಿಡ್–19ರಿಂದ ಶಿಕ್ಷಣದ ಮೇಲೆ ಆಗಿರುವ ಪರಿಣಾಮಗಳನ್ನು ಗಮನಿಸುತ್ತ ಬಂದಿರುವ ಅವರು, 'ಶಾಲೆಗಳ ಬಾಗಿಲು ತೆರೆದ ಕಾರಣದಿಂದಾಗಿ ಕೋವಿಡ್ ಪ್ರಕರಣಗಳು ಹೆಚ್ಚಾದವು ಎನ್ನಲು ಆಧಾರಗಳು ಇಲ್ಲ. ಶಾಲೆಗಳು ಸುರಕ್ಷಿತ ಅಲ್ಲ ಎನ್ನುವುದಕ್ಕೂ ಆಧಾರಗಳು ಇಲ್ಲ' ಎಂದು ಹೇಳಿದ್ದಾರೆ.

'ರೆಸ್ಟೊರೆಂಟ್, ಬಾರ್, ಶಾಪಿಂಗ್ ಮಾಲ್‌ಗಳನ್ನು ತೆರೆದು ಶಾಲೆಗಳನ್ನು ಮುಚ್ಚಿ ಇರಿಸುವುದು ವಿವೇಕದ ಕೆಲಸವಲ್ಲ' ಎಂದು ಅವರು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

> **ಭಾರತದಲ್ಲಿ ಶಾಲೆಗಳನ್ನು ಮುಚ್ಚಿದ್ದರಿಂದ ಆಗಿರುವ ಪರಿಣಾಮವು ಮೊದಲು ಅಂದು ಕೊಂಡಿದ್ದಕ್ಕಿಂತಲೂ ತೀವ್ರವಾಗಿದೆ**
> **ಜೈಮಿ ಸಾವೆದ್ರಾ,** ವಿಶ್ವ ಬ್ಯಾಂಕ್‌ನ ಜಾಗತಿಕ ಶಿಕ್ಷಣ ನಿರ್ದೇಶಕ

ವಿಶ್ವ ಬ್ಯಾಂಕ್ ನಡೆಸಿರುವ ಹಲವು ಅಧ್ಯಯನಗಳ ಪ್ರಕಾರ, ಶಾಲೆಗಳನ್ನು ತೆರೆದಾಗ ಮಕ್ಕಳಿಗೆ ಎದುರಾಗಬಹುದಾದ ಆರೋಗ್ಯ ಸಮಸ್ಯೆಗಳು ಅತ್ಯಂತ ಕಡಿಮೆ. ಆದರೆ, ಶಾಲೆಗಳನ್ನು ಮುಚ್ಚುವುದರಿಂದ ತೆರಬೇಕಾಗಿರುವ ಬೆಲೆ ತೀರಾ ದೊಡ್ಡದು.

'ಮಕ್ಕಳಿಗೆ ಸೋಂಕು ತಗುಲಿದರೂ, ಅವರಲ್ಲಿ ಗಂಭೀರ ಸಮಸ್ಯೆಗಳಾಗುವುದು ತೀರಾ ಅಪರೂಪ. ಮಕ್ಕಳಿಗೆ ಲಸಿಕೆ ಆದ ನಂತರವೇ ಶಾಲೆಗಳನ್ನು ತೆರೆಯಬಹುದು ಎಂಬ ಷರತ್ತು ವಿಧಿಸಿರುವ ಯಾವ ದೇಶವೂ ಇಲ್ಲ. ಈ ರೀತಿ ತೀರ್ಮಾನ ಕೈಗೊಳ್ಳಲು ವೈಜ್ಞಾನಿಕ ಆಧಾರ ಇಲ್ಲ' ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕಜಕಿಸ್ತಾನ ಹಿಂಸೆ: ಸತ್ತವರ ಸಂಖ್ಯೆ 225

ಮಾಸ್ಕೊ (ಎಪಿ): ಕಜಕಿಸ್ತಾನದಲ್ಲಿ ಇಂಧನ ಬೆಲೆಯನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿರುವುದನ್ನು ವಿರೋಧಿಸಿ ನಡೆದ ಹಿಂಸಾತ್ಮಕ ಪ್ರತಿಭಟನೆಗಳಲ್ಲಿ ಮೃತಪಟ್ಟವರ ಸಂಖ್ಯೆ 225ಕ್ಕೆ ಏರಿದೆ.

ಜನವರಿ 2ರಂದು ಈ ಪ್ರತಿಭಟನೆಗಳು ಆರಂಭವಾಗಿದ್ದವು. 4,300ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಕ್ರಿಮಿನಲ್ ಪ್ರಾಸಿಕ್ಯೂಷನ್ ಸರ್ವಿಸ್‌ನ ಮುಖ್ಯಸ್ಥ ಸೆರೆಕ್ ಶಲಬಯೆವ್ ಅವರನ್ನು ಉಲ್ಲೇಖಿಸಿ ಸುದ್ದಿ ಸಂಸ್ಥೆಗಳು ವರದಿ ಮಾಡಿವೆ.

ಬ್ಯಾಡ್ಮಿಂಟನ್ ಟೂರ್ನಿ: ವಿಶ್ವ ಚಾಂಪಿಯನ್ ಲೊಹ್ ಕೀನ್ ಯಿವ್‌ಗೆ ಸೋಲು

ಸೇನ್‌ಗೆ ಒಲಿದ ಇಂಡಿಯಾ ಓಪನ್ ಪಟ್ಟ

ನವದೆಹಲಿ (ಪಿಟಿಐ): ಭಾರತದ ಯುವ ಪ್ರತಿಭೆ ಲಕ್ಷ್ಯ ಸೇನ್, ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೋಡಿ ಮಾಡಿದರು.

ಭಾನುವಾರ ನಡೆದ ಫೈನಲ್‌ನಲ್ಲಿ ಲಕ್ಷ್ಯ, ವಿಶ್ವ ಚಾಂಪಿಯನ್ ಸಿಂಗಪುರದ ಲೊಹ್ ಕೀನ್ ಯಿವ್ ಅವರನ್ನು ಮಣಿಸಿ ತಮ್ಮ ಮೊದಲ ಸೂಪರ್ 500 ಟ್ರೋಫಿ ಗೆದ್ದರು.

ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಕೂಡ ಐತಿಹಾಸಿಕ ಸಾಧನೆ ಮಾಡಿದರು. ಡಬಲ್ಸ್ ವಿಭಾಗದಲ್ಲಿ ಇಂಡಿಯಾ ಓಪನ್ ಟ್ರೋಫಿ ಜಯಿಸಿದ ದೇಶದ ಮೊದಲ ಜೋಡಿ ಎಂಬ ಶ್ರೇಯ ಗಳಿಸಿದರು.

20 ವರ್ಷದ ಲಕ್ಷ್ಯ, ಕಳೆದ ತಿಂಗಳು ಸ್ಪೇನ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು.

ಇಲ್ಲಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ 24-22, 21-17ರಿಂದ ಲೊಹ್ ಕೀನ್ ಅವರನ್ನು ಪರಾಭವಗೊಳಿಸಿದರು. 54 ನಿಮಿಷಗಳ ಪೈಪೋಟಿಯಲ್ಲಿ ಜಯ ಒಲಿಸಿಕೊಂಡರು.

ಭಾನುವಾರ ಆಕ್ರಮಣಕಾರಿ ಆಟದ ಮೂಲಕ ಗಮನಸೆಳೆದ ಲಕ್ಷ್ಯ, ಅದಕ್ಕೆ ಸೂಕ್ತ ಫಲವನ್ನೂ ಪಡೆದರು.

ಲಕ್ಷ್ಯ ಅವರಿಗೆ ಇದು ವೃತ್ತಿಜೀವನದ ಅತಿದೊಡ್ಡ ಪ್ರಶಸ್ತಿಯಾಗಿದೆ.

ಅವರು ಈ ಹಿಂದೆ ಎರಡು ಸೂಪರ್ 100 (ಡಚ್ ಮತ್ತು ಸಾರ್‌ಲೊರ್‌ಲಕ್ಷ್ ಓಪನ್) ಮತ್ತು ಮೂರು ಇಂಟರ್‌ನ್ಯಾಷನಲ್ ಚಾಲೆಂಜ್ (ಬೆಲ್ಜಿಯಂ, ಸ್ಕಾಟ್ಲೆಂಡ್ ಮತ್ತು ಬಾಂಗ್ಲಾದೇಶ) ಟೂರ್ನಿಗಳಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಕೋವಿಡ್ ಕಾರಣ ಅವರ ಯಶಸ್ಸಿನ ಓಟಕ್ಕೆ ಕೆಲವು ಕಾಲ ಸ್ವಲ್ಪ ಹಿನ್ನಡೆಯಾಗಿತ್ತು.

ಕಳೆದ ವರ್ಷ ಹೈಲೊ ಓಪನ್ ಟೂರ್ನಿಯಲ್ಲಿ ಸೆಮಿಫೈನಲ್, ವಿಶ್ವ ಟೂರ್ ಫೈನಲ್ಸ್‌ನಲ್ಲಿ ನಾಕೌಟ್ ಹಂತ ಪ್ರವೇಶಿಸಿದ್ದರು.



ಲಕ್ಷ್ಯ ಸೇನ್ ಆಟದ ವೈಖರಿ – ಪಿಟಿಐ ಚಿತ್ರ

ಪುರುಷರ ಸಿಂಗಲ್ಸ್ ಫೈನಲ್	ಗೇಮ್ ವಿವರ	
ಲಕ್ಷ್ಯ ಸೇನ್	24	21
ಲೊಹ್ ಕೀನ್ ಯಿವ್	22	17
ಪುರುಷರ ಡಬಲ್ಸ್ ಫೈನಲ್		
ಸಾತ್ವಿಕ್– ಚಿರಾಗ್	21	26
ಎಹಸಾನ್– ಸೆಟಿಯಾವಾನ್	16	24

ಭಾರತೀಯರ ಸಾಧನೆ
(ಪ್ರಶಸ್ತಿ ವಿಜೇತರು)

ಪುರುಷರ ಸಿಂಗಲ್ಸ್
- ಪ್ರಕಾಶ್ ಪಡುಕೋಣೆ (1981)
- ಕಿದಂಬಿ ಶ್ರೀಕಾಂತ್ (2015)
- ಲಕ್ಷ್ಯ ಸೇನ್ (2022)

ಮಹಿಳಾ ಸಿಂಗಲ್ಸ್
- ಸೈನಾ ನೆಹ್ವಾಲ್ (2010, 2015)
- ಪಿ.ವಿ.ಸಿಂಧು (2017)

ಮಿಶ್ರ ಡಬಲ್ಸ್
- ವಿ.ದಿಜು– ಜ್ವಾಲಾ ಗುಟ್ಟಾ (2010)

ಪುರುಷರ ಡಬಲ್ಸ್
- ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ (2022)



ಸಾತ್ವಿಕ್ ಸಾಯಿರಾಜ್ ಚಿರಾಗ್ ಶೆಟ್ಟಿ

ಚಿರಾಗ್– ಸಾತ್ವಿಕ್ ಚಾರಿತ್ರಿಕ ಸಾಧನೆ

ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಪುರುಷರ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದರು. ಫೈನಲ್‌ನಲ್ಲಿ 21-16 26-24ರಿಂದ ಮೊಹಮ್ಮದ್ ಎಹಸಾನ್ ಮತ್ತು ಹೆಂಡ್ರಾ ಸೆಟಿಯಾವಾನ್ ಅವರನ್ನು ಭಾರತದ ಜೋಡಿ ಮಣಿಸಿದರು.

ಮೊದಲ ಗೇಮ್‌ನ ವಿರಾಮದ ವೇಳೆಗೆ ಎರಡು ಪಾಯಿಂಟ್ಸ್ ಮುಂದಿದ್ದ ಸಾತ್ವಿಕ್– ಚಿರಾಗ್ ನಂತರವೂ ಅದೇ ಲಯದೊಂದಿಗೆ ಮುಂದುವರಿದರು. ದೀರ್ಘ ರ‍್ಯಾಲಿಗಳು ಕಂಡ ಗೇಮ್‌ನಲ್ಲಿ 18–13ರಿಂದ ಮುನ್ನಡೆ ಸಾಧಿಸಿದರು. ಇಂಡೊನೇಷ್ಯಾ ಜೋಡಿ 16–18ಕ್ಕೆ ಹಿನ್ನಡೆ ತಗ್ಗಿಸಿಕೊಂಡರೂ ಮೊದಲ ಗೇಮ್ ಭಾರತದ ಆಟಗಾರರ ಕೈವಶವಾಗುವುದನ್ನು ತಪ್ಪಿಸಲಾಗಲಿಲ್ಲ.

ಎರಡನೇ ಗೇಮ್‌ನಲ್ಲಿ ಎಹಸಾನ್ –ಸೆಟಿಯಾವಾನ್ ಪ್ರಬಲ ಸ್ಪರ್ಧೆಯೊಡ್ಡಿದರು. ಆರಂಭದಲ್ಲಿ 9–6ರಿಂದ ಮುಂದಿದ್ದರು. ಆದರೆ ತಿರುಗೇಟು ನೀಡಿದ ಭಾರತದ ಜೋಡಿ ವಿರಾಮದ ಹೊತ್ತಿಗೆ 11–10ರ ಮೇಲುಗೈ ಸಾಧಿಸಿತು. ರ‍್ಯಾಲಿಗಳಲ್ಲಿ ಚುರುಕುತನ ಕಾಯ್ದುಕೊಂಡ ಸಾತ್ವಿಕ್– ಚಿರಾಗ್ 15–13ರಿಂದ ಮುನ್ನಡೆದರು. 17–17, 19–19ರಿಂದ ಸಮಬಲದಲ್ಲಿ ಸಾಗಿದ್ದ ಗೇಮ್‌ನಲ್ಲಿ ಇಂಡೊನೇಷ್ಯಾ ಜೋಡಿಯು ಐದು ಗೇಮ್ ಪಾಯಿಂಟ್ಸ್ ಕಳೆದುಕೊಂಡಿದ್ದು, ಭಾರತದ ಆಟಗಾರರಿಗೆ ವರದಾನವಾಯಿತು. ಪಂದ್ಯದೊಂದಿಗೆ ಟ್ರೋಫಿಯೂ ಕೈವಶವಾಯಿತು.

2019ರಲ್ಲಿ ಥಾಯ್ಲೆಂಡ್ ಓಪನ್ ಸೂಪರ್ 500 ಟೂರ್ನಿಯಲ್ಲಿ ಚಿರಾಗ್– ಸಾತ್ವಿಕ್ ಪ್ರಶಸ್ತಿ ಜಯಿಸಿದ್ದರು. ಅದೇ ವರ್ಷ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದರು. ಟೋಕಿಯೊ ಒಲಿಂಪಿಕ್ಸ್‌ಗೂ ಅರ್ಹತೆ ಗಳಿಸಿದ್ದರು.

ಬುಸಾನನ್‌ಗೆ ಪ್ರಶಸ್ತಿ: ಮಹಿಳಾ ಸಿಂಗಲ್ಸ್‌ನಲ್ಲಿ ಥಾಯ್ಲೆಂಡ್‌ನ ಬುಸಾನನ್ ಒಂಗ್‌ಬಮ್ರುಂಗ್‌ಪನ್ ಪ್ರಶಸ್ತಿ ಜಯಿಸಿದರು. ಫೈನಲ್‌ನಲ್ಲಿ ಅವರು 22–20, 19–21, 21–13ರಿಂದ ತಮ್ಮದೇ ದೇಶದ ಸುಪನಿದಾ ಕೇಟ್‌ಥೊಂಗ್ ಅವರನ್ನು ಸೋಲಿಸಿದರು. ಮಹಿಳಾ ಡಬಲ್ಸ್ ಪ್ರಶಸ್ತಿಯೂ ಥಾಯ್ಲೆಂಡ್ ಆಟಗಾರ್ತಿಯರ ಪಾಲಾಯಿತು. ಬೆನ್ಯಾಪ ಐಮ್‌ಸಾರ್ದ್ ಮತ್ತು ನುಂತಕರ್ನ ಐಮ್‌ಸಾರ್ದ್ ಅವರು ಫೈನಲ್‌ನಲ್ಲಿ 21–13, 21–5ರಿಂದ ರಷ್ಯಾದ ಅನಸ್ತಾಸಿಯಾ ಅಕ್ಚುನಿನಾ ಮತ್ತು ಓಲ್ಗಾ ಮೊರೊಜೊವಾ ಅವರನ್ನು ಸೋಲಿಸಿದರು. ಮಿಶ್ರ ಡಬಲ್ಸ್‌ನಲ್ಲಿ ಸಿಂಗಪುರದ ಟೆರಿ ಹಿ–ತಾನ್ ವೇ ಹಾನ್ 21–15, 21–15ರಿಂದ ಮಲೇಷ್ಯಾದ ಚೆನ್ ತಾಂಗ್ ಜಿ– ಪೆಕ್ ಯೆನ್ ವೇ ವಿರುದ್ಧ ಜಯಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ನಾಯಕತ್ವದ ಆರಂಭ ಮತ್ತು ಗಡ್ಡದೊಳಗಿನ ಬಿಳಿಕೂದಲು



ಅನುಷ್ಕಾ ಶರ್ಮಾ ಮತ್ತು ವಿರಾಟ್ ಕೊಹ್ಲಿ

‘2014ರ ಆ ದಿನ ನನಗಿನ್ನೂ ನೆನಪಿದೆ. ಎಂ.ಎಸ್.ಧೋನಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗಲು ನಿರ್ಧರಿಸಿದ್ದರು. ಆದ್ದರಿಂದ ನಿಮ್ಮನ್ನು ನಾಯಕನನ್ನಾಗಿ ಮಾಡಲಾಗಿದೆ ಎಂದು ನನಗೆ ಹೇಳಿದ್ದಿರಿ. ಅದರ ನಂತರ ಎಂ.ಎಸ್, ನೀವು ಮತ್ತು ನಾನು ಚಾಟ್ ಮಾಡಿದ್ದಾಗ, ನಿಮ್ಮ ಗಡ್ಡದಲ್ಲಿ ಆಗಲೇ ಬಿಳಿಕೂದಲು ಇಣುಕುತ್ತಿರುವುದನ್ನು ಧೋನಿ ತಮಾಷೆ ಮಾಡಿದ್ದರು. ನಾವೆಲ್ಲರೂ ಮನದುಂಬಿ ನಕ್ಕಿದ್ದೆವು. ಅಂದಿನಿಂದ ಇಲ್ಲಿಯವರೆಗೂ ನಿಮ್ಮ ಗಡ್ಡ ಬಿಳಿ ಬಣ್ಣಕ್ಕೆ ತಿರುಗುವದಷ್ಟೇ ಅಲ್ಲ, ವೃತ್ತಿ–ಜೀವನದಲ್ಲಿ ಸಾಧಿಸಿದ ಪ್ರಗತಿಯನ್ನು ಹತ್ತಿರದಿಂದ ಗಮನಿಸಿದ್ದೇನೆ. ನಾಯಕತ್ವದಲ್ಲಿ ಭಾರತ ತಂಡ ಉತ್ತಮ ಸಾಧನೆ ಮಾಡಿದೆ. ಆದರೆ, ಅದಕ್ಕಿಂತಲೂ ನೀವು ಅಂತರಂಗದಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ನನಗೆ ಹೆಚ್ಚು ಹೆಮ್ಮೆ ಅನಿಸುತ್ತದೆ. ಒಳ್ಳೆಯ ಚಿಂತನೆ, ಸಕಾರಾತ್ಮಕ ಮನೋಭಾವ ಜೀವನದಲ್ಲಿ ಮುಂದೆ ಕೊಂಡೊಯ್ಯಬಹುದು ಎಂಬ ಯೋಚನೆಗಳನ್ನು ಸದಾ ಕಾಪಾಡಿಕೊಂಡು ಬಂದಿದ್ದೀರಿ. ಮೈದಾನದಲ್ಲಷ್ಟೇ ಅಲ್ಲ ಹೊರಗೆ ಎದುರಿಸಿದ ಸವಾಲುಗಳೂ ಕಠಿಣವಾಗಿದ್ದವು. ತಂಡವನ್ನು ಸದಾ ಜಯಗಳಿಸುವ ಹುರುಪಿನಲ್ಲಿ ಮುನ್ನಡೆಸಿದ್ದನ್ನು ಕಂಡಿದ್ದೇನೆ. ಪಂದ್ಯ ಸೋತಾಗ ನಿಮ್ಮ ಹನಿಗಣ್ಣುಗಳನ್ನು ನೋಡುತ್ತ ಪಕ್ಕದಲ್ಲಿ ಮೌನವಾಗಿ ಕುಳಿತಿದ್ದೇನೆ. ಉತ್ತಮ ಫಲಿತಾಂಶಕ್ಕಾಗಿ ನಿಮ್ಮಿಂದ ಇನ್ನಷ್ಟು ಏನಾದರೂ ಮಾಡಬಹುದಿತ್ತಾ ಎಂಬ ನಿಮ್ಮ ಸ್ವಗತಕ್ಕೆ ಅಚ್ಚರಿಯಾಗಿದ್ದೇನೆ. ನೀವು ಪ್ರತಿಯೊಬ್ಬರಿಂದ ನಿರೀಕ್ಷಿಸಿದ್ದು ಇದನ್ನೇ. ನೇರನುಡಿಯ ವ್ಯಕ್ತಿತ್ವ. ದುರುದ್ದೇಶಗಳಿಲ್ಲದ ನಡವಳಿಕೆಗಳು ನಿಮ್ಮದು. ಆದರೆ, ಅದು ಇತರರಿಗೆ ಅರ್ಥವಾಗಲು ಸಾಧ್ಯವಿಲ್ಲ. ನಿಮ್ಮ ಕಣ್ಣುಗಳನ್ನು ನೋಡಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವವರು ನಿಜವಾಗಿಯೂ ಧನ್ಯರು. ನೀವು ಪರಿಪೂರ್ಣರಲ್ಲ. ನಿಮ್ಮಲ್ಲಿಯೂ ನ್ಯೂನತೆಗಳಿವೆ. ಆದರೆ, ಯಾವಾಗಲೂ ಅದನ್ನು ಮರೆಮಾಚಲು ಪ್ರಯತ್ನಿಸಿಲ್ಲವಲ್ಲ? ಕಠಿಣವಾದರೂ ಸರಿಯಾದ ಕೆಲಸವನ್ನೇ ಮಾಡಿದ್ದೀರಿ. ದುರಾಶೆಯಿಂದ ಏನನ್ನೂ ಪಡೆದಿಲ್ಲ. ಈ ಸ್ಥಾನವೂ ಕೂಡ (ನಾಯಕತ್ವ). ಯಾವುದೇ ವ್ಯಕ್ತಿಯು ಏನನ್ನೇ ಆಗಲಿ ಬಿಗಿಹಿಡಿತದಲ್ಲಿಟ್ಟುಕೊಂಡರೆ ಅಷ್ಟಕ್ಕೇ ತನ್ನನ್ನು ಮಿತಿಗೊಳಿಸಿಕೊಳ್ಳುತ್ತಾನೆ. ಆದರೆ ನಿಮ್ಮ ಪ್ರೀತಿಗೆ ಮಿತಿಯಿಲ್ಲ. ಈ ಏಳು ವರ್ಷಗಳಲ್ಲಿ ನೀವು ಶ್ರೇಷ್ಠ ಕೆಲಸ ಮಾಡಿದ್ದೀರಿ. ಈ ಅವಧಿಯ ಕಲಿಕೆಯನ್ನು ನಮ್ಮ ಮಗಳು ನಿಮ್ಮೊಳಗೆ ನೋಡುತ್ತಾಳೆ’

(ವಿರಾಟ್ ಕೊಹ್ಲಿಯವರ ಪತ್ನಿ, ಬಾಲಿವುಡ್ ನಟಿ ಮತ್ತು ನಿರ್ಮಾಪಕಿ ಅನುಷ್ಕಾ ಶರ್ಮಾ ಇನ್‌ಸ್ಟಾಗ್ರಾಮ್‌ನಲ್ಲಿ ಪ್ರಕಟಿಸಿರುವ ಪತ್ರ ಇದು. ಶನಿವಾರ ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕತ್ವಕ್ಕೆ ವಿರಾಟ್ ರಾಜೀನಾಮೆ ನೀಡಿದ್ದರು. ಪತಿಯ ನಾಯಕತ್ವದ ಪಯಣವನ್ನು ಅನುಷ್ಕಾ ಇಲ್ಲಿ ಉಲ್ಲೇಖಿಸಿದ್ದಾರೆ)

ಆಸ್ಟ್ರೇಲಿಯಾ ಓಪನ್ ಟೆನಿಸ್ ಇಂದಿನಿಂದ: ಪ್ರಶಸ್ತಿ ಮೇಲೆ ನಡಾಲ್ ಕಣ್ಣು

ನೊವಾಕ್ ಅನುಪಸ್ಥಿತಿಯ ಲಾಭ ಯಾರಿಗೆ?

ಮೆಲ್ಬರ್ನ್ (ರಾಯಿಟರ್ಸ್): ನೊವಾಕ್ ಜೊಕೊವಿಚ್ ಅಧಿಪತ್ಯಕ್ಕೆ ಒಗ್ಗಿಕೊಂಡಂತಿದ್ದ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಈ ಬಾರಿ ಹೊಸ ನೀರು ಹರಿಯಲಿದೆಯೇ?..

ಕೋವಿಡ್ ಲಸಿಕೆ ಪ್ರಕರಣದಲ್ಲಿ ವೀಸಾ ರದ್ದುಗೊಂಡು ಟೂರ್ನಿಯಲ್ಲಿ ಆಡಲು ಸರ್ಬಿಯಾ ಆಟಗಾರನಿಗೆ ಅವಕಾಶ ಸಿಕ್ಕಿಲ್ಲ. ಸೋಮವಾರ ಆರಂಭವಾಗುವ ಟೂರ್ನಿಯಲ್ಲಿ ಅವರ ಅನುಪಸ್ಥಿತಿಯ ಸುವರ್ಣಾವಕಾಶವನ್ನು ಯಾರು ಬಳಸಿಕೊಳ್ಳಲಿದ್ದಾರೆ ಎಂಬ ಕುತೂಹಲ ಗರಿಗೆದರಿದೆ.

ಕಳೆದ ಮೂರು ಬಾರಿ ಪುರುಷರ ಸಿಂಗಲ್ಸ್ ವಿಭಾಗದ ಕಿರೀಟವು ಜೊಕೊವಿಚ್ ಪಾಲಾಗಿತ್ತು.

ಈಗಾಗಲೇ ದಿಗ್ಗಜ ಆಟಗಾರ, ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಹಾಗೂ ಡಾಮನಿಕ್ ಥೀಮ್ ಕೂಡ ಆಡದ ಟೂರ್ನಿ ತಾರಾ ಆಟಗಾರರ ಕೊರತೆ ಎದುರಿಸುತ್ತಿದೆ. ಹೀಗಾಗಿ ಜೊಕೊವಿಚ್ ಅವರ ಅನುಪಸ್ಥಿತಿಯು ಟೂರ್ನಿಯು ಮತ್ತಷ್ಟು ಕಳೆಗುಂದುವಂತೆ ಮಾಡಿದೆ. ಆದರೆ ಸದ್ಯ ಟೂರ್ನಿಯಲ್ಲಿ ಆಡಲಿರುವ ಆಟಗಾರರಿಗೆ ಹೊಸ ಅವಕಾಶದ ಬಾಗಿಲು ತೆರೆದಿದೆ.

ಆರನೇ ಶ್ರೇಯಾಂಕದ ಆಟಗಾರ, ಸ್ಪೇನ್ ರಫೆಲ್ ನಡಾಲ್ ಈಗ ಪ್ರಶಸ್ತಿ ಜಯಿಸುವ ನೆಚ್ಚಿನ ಆಟಗಾರ ಎನಿಸಿದ್ದಾರೆ. ಜೊಕೊವಿಚ್ ಮತ್ತು ನಡಾಲ್ ತಲಾ 20 ಗ್ರ್ಯಾನ್‌ಸ್ಲಾಮ್ ಒಡೆಯರು. ಈಗ ಸ್ಪರ್ಧೆಯಲ್ಲಿ ಉಳಿದಿರುವ ಏಕೈಕ ಆಸ್ಟ್ರೇಲಿಯಾ ಓಪನ್ ಚಾಂಪಿಯನ್ (2009) ನಡಾಲ್ ಆಗಿದ್ದಾರೆ.



ನವೊಮಿ ಒಸಾಕ– ಎಎಫ್‌ಪಿ ಚಿತ್ರ

ನಡಾಲ್ ಅವರು ಸದ್ಯ ಮೂರನೇ ಶ್ರೇಯಾಂಕದ ಆಟಗಾರ, ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಮತ್ತು ಇಟಲಿಯ ಮಟಿಯೊ ಬೆರೆಟಿನಿ ಸವಾಲುಗಳನ್ನು ಮೀರಬೇಕಿದೆ. ಎರಡನೇ ಶ್ರೇಯಾಂಕದ ಡ್ಯಾನಿಲ್ ಮೆಡ್ವೆಡೆವ್, ನಾಲ್ಕನೇ ಶ್ರೇಯಾಂಕದ ಸ್ಟೆಫನೊಸ್ ಸಿಟ್ಸಿಪಾಸ್ ಕೂಡ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ.



ರಫೆಲ್ ನಡಾಲ್

ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಅಗ್ರಶ್ರೇಯಾಂಕದ ಆಟಗಾರ್ತಿ ಆಸ್ಟ್ರೇಲಿಯಾದ ಆ್ಯಷ್ಲೆ ಬಾರ್ಟಿ ಮತ್ತು ಜಪಾನ್‌ನ ನವೊಮಿ ಒಸಾಕಾ (13ನೇ ಶ್ರೇಯಾಂಕ) ಭರವಸೆ ಮೂಡಿಸಿದ್ದಾರೆ.

ಬೆಲಾರಸ್ ಆಟಗಾರ್ತಿ ಎರಡನೇ ಶ್ರೇಯಾಂಕದ ಅರಿನಾ ಸಬಲೆಂಕಾ, ಸ್ಪೇನ್‌ನ ಗಾರ್ಬೈನ್ ಮುಗುರುಜಾ, ಜೆಕ್ ಗಣರಾಜ್ಯದ ಬಾರ್ಬರಾ ಕ್ರೇಸಿಕೊವಾ ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ.

ಅತಿ ಹೆಚ್ಚು ಬಾರಿ ಗೆದ್ದವರು (ಮುಕ್ತ ಯುಗ)

ಆಟಗಾರ	ದೇಶ	ಎಷ್ಟು ಬಾರಿ
ಪುರುಷರ ಸಿಂಗಲ್ಸ್		
ನೊವಾಕ್ ಜೊಕೊವಿಚ್	ಸರ್ಬಿಯಾ	9
ರೋಜರ್ ಫೆಡರರ್	ಸ್ವಿಟ್ಜರ್ಲೆಂಡ್	6
ಆ್ಯಂಡ್ರೆ ಅಗಾಸ್ಸಿ	ಅಮೆರಿಕ	4
ಮಹಿಳಾ ಸಿಂಗಲ್ಸ್		
ಸೆರೆನಾ ವಿಲಿಯಮ್ಸ್	ಅಮೆರಿಕ	7
ಮಾರ್ಗರೇಟ್ ಕೋರ್ಟ್	ಆಸ್ಟ್ರೇಲಿಯಾ	4
ಇವಾನ್ ಗೂಲಗಾಂಗ್	ಆಸ್ಟ್ರೇಲಿಯಾ	4
ಸ್ಟೆಫಿ ಗ್ರಾಫ್	ಜರ್ಮನಿ	4
ಮೋನಿಕಾ ಸೆಲೆಸ್	ಅಮೆರಿಕ	4

ನಿರಾಶೆ ವ್ಯಕ್ತಪಡಿಸಿದ ನೊವಾಕ್ ಜೊಕೊವಿಚ್

ಮೆಲ್ಬರ್ನ್ (ಎಪಿ): ವೀಸಾ ರದ್ದುಗೊಳಿಸುವ ಸಚಿವರ ನಿರ್ಧಾರವನ್ನು ಮರುಪರಿಶೀಲಿಸುವಂತೆ ನಾನು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಾಲಯದ ತೀರ್ಪು ತೀವ್ರ ನಿರಾಸೆ ಮೂಡಿಸಿದೆ ಎಂದು ಸರ್ಬಿಯಾದ ಟೆನಿಸ್ ಆಟಗಾರ ಜೊಕೊವಿಚ್ ಹೇಳಿದ್ದಾರೆ.

ಜೊಕೊವಿಚ್ ಗೆದ್ದಿರುವ ಒಟ್ಟು 20 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಲ್ಲಿ ಒಂಬತ್ತು ಆಸ್ಟ್ರೇಲಿಯಾ ಓಪನ್ ಟ್ರೋಫಿಗಳು. ಸೋಮವಾರ ಆರಂಭವಾಗುವ ಟೂರ್ನಿಯ ಮೊದಲ ದಿನ ಅವರು ಕಣಕ್ಕಿಳಿಯಬೇಕಿತ್ತು.

ನ್ಯಾಯಾಲಯದ ತೀರ್ಪಿನ ಬಗ್ಗೆ ಹೇಳಿಕೆ ನೀಡಿರುವ ಅವರು ‘ನಾನು ಆಸ್ಟ್ರೇಲಿಯಾದಿಂದ ನಿರ್ಗಮಿಸುವ ವಿಷಯದಲ್ಲಿ ನ್ಯಾಯಾಲಯದ ತೀರ್ಪನ್ನು ಗೌರವಿಸುತ್ತೇನೆ. ಅಧಿಕಾರಿಗಳಿಗೆ ಸಹಕರಿಸುತ್ತೇನೆ. ಇದರಿಂದ ಚೇತರಿಸಿಕೊಳ್ಳಲು ಮತ್ತು ವಿಶ್ರಾಂತಿಗಾಗಿ ಸ್ವಲ್ಪ ಸಮಯ ತೆಗೆದುಕೊಳ್ಳಲು ಯೋಜಿಸಿದ್ದೇನೆ’ ಎಂದಿದ್ದಾರೆ.

ಬ್ಲಾಸ್ಟರ್ಸ್–ಮುಂಬೈ ಪಂದ್ಯ ಮುಂದೂಡಿಕೆ

ವಾಸ್ಕೊ (ಪಿಟಿಐ): ಕೇರಳ ಬ್ಲಾಸ್ಟರ್ಸ್ ಮತ್ತು ಮುಂಬೈ ಸಿಟಿ ಎಫ್‌ಸಿ ನಡುವೆ ಭಾನುವಾರ ನಡೆಯಬೇಕಾಗಿದ್ದ ಐಎಸ್‌ಎಲ್ ಪಂದ್ಯವನ್ನು ಮುಂದೂಡಲಾಗಿದೆ. ಮುಂದೂಡಲು ನಿಖರ ಕಾರಣವೇನೆಂದು ಆಯೋಜಕರು ಸ್ಪಷ್ಟಪಡಿಸಿಲ್ಲ.

ಕೋವಿಡ್ ಕಾರಣದಿಂದ ಎರಡು ಪಂದ್ಯಗಳನ್ನು ಈಗಾಗಲೇ ಮುಂದೂಡಲಾಗಿದೆ. ಶನಿವಾರ ನಡೆಯಬೇಕಾಗಿದ್ದ ಬೆಂಗಳೂರು ಎಫ್‌ಸಿ ಮತ್ತು ಎಟಿಕೆ ಮೋಹನ್ ಬಾಗನ್ ನಡುವಿನ ಪಂದ್ಯವನ್ನು ಮುಂದೂಡಲಾಗಿತ್ತು. ಹಿಂದಿನ ವಾರ ನಡೆಯಬೇಕಾಗಿದ್ದ ಎಟಿಕೆ ಮೋಹನ್ ಬಾಗನ್ ಮತ್ತು ಒಡಿಶಾ ಎಫ್‌ಸಿ ನಡುವಿನ ಪಂದ್ಯವನ್ನೂ ಮುಂದೂಡಲಾಗಿತ್ತು.

ಇಂದಿನ ಪಂದ್ಯ: ಜೆಮ್‌ಷೆಡ್‌ಪುರ ಎಫ್‌ಸಿ–ಹೈದರಾಬಾದ್ ಎಫ್‌ಸಿ
ಆರಂಭ: ರಾತ್ರಿ 7.30; ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆ್ಯಷಸ್ ಸರಣಿ: ಕೊನೆಯ ಪಂದ್ಯದಲ್ಲೂ ಇಂಗ್ಲೆಂಡ್‌ಗೆ ಬ್ಯಾಟಿಂಗ್ ವೈಫಲ್ಯ

ಮತ್ತೆ ಪಾರಮ್ಯ ಮೆರೆದ ಆಸ್ಟ್ರೇಲಿಯಾ

ಹೋಬರ್ಟ್, ಆಸ್ಟ್ರೇಲಿಯಾ (ಎಪಿ): ಮೂರೇ ದಿನಗಳಲ್ಲಿ ಇಂಗ್ಲೆಂಡ್ ತಂಡವನ್ನು ಮಣಿಸಿದ ಆಸ್ಟ್ರೇಲಿಯಾ ಆ್ಯಷಸ್ ಟೆಸ್ಟ್ ಸರಣಿಯನ್ನು 4–0ಯಿಂದ ತನ್ನದಾಗಿಸಿಕೊಂಡಿತು. ಭಾನುವಾರ ಮುಕ್ತಾಯಗೊಂಡ ಐದನೇ ಮತ್ತು ಕೊನೆಯ ಪಂದ್ಯದಲ್ಲಿ ಆತಿಥೇಯರು 146 ರನ್‌ಗಳ ಗೆಲುವು ದಾಖಲಿಸಿದರು.

271 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್ ಮತ್ತೊಮ್ಮೆ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ಆರಂಭಿಕ ಬ್ಯಾಟರ್‌ಗಳಾದ ರೋರಿ ಬರ್ನ್ಸ್ ಮತ್ತು ಜ್ಯಾಕ್ ಕ್ರಾವ್ಲಿ ಅವರನ್ನು ಹೊರತುಪಡಿಸಿದರೆ ಉಳಿದ ಯಾರಿಗೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲು ಆಗಲಿಲ್ಲ. ಹೀಗಾಗಿ ತಂಡ 124 ರನ್‌ಗಳಿಗೆ ಪತನ ಕಂಡಿತು. ಬರ್ನ್ಸ್ ಮತ್ತು ಕ್ರಾವ್ಲಿ ಮೊದಲ ವಿಕೆಟ್‌ಗೆ 68 ರನ್ ಸೇರಿಸಿ ನಿರೀಕ್ಷೆ ಮೂಡಿಸಿದ್ದರು.

ಸತತ ಎರಡನೇ ದಿನವೂ 17 ವಿಕೆಟ್ ಉರುಳಿದ ಪಂದ್ಯದಲ್ಲಿ ಆಸ್ಟ್ರೇಲಿಯಾ ನಾಯಕ,ವೇಗಿ ಪ್ಯಾಟ್ ಕಮಿನ್ಸ್ ಕೂಡ ಮೂರು ವಿಕೆಟ್ ಗಳಿಸಿ ಮಿಂಚಿದರು.



ಆ್ಯಷಸ್ ಟ್ರೋಫಿಯೊಂದಿಗೆ ಆಸ್ಟ್ರೇಲಿಯಾ ಆಟಗಾರರ ಸಂಭ್ರಮ –ರಾಯಿಟರ್ಸ್ ಚಿತ್ರ

ಹಗಲು ರಾತ್ರಿ ಟೆಸ್ಟ್‌ನ ಎರಡನೇ ದಿನ ಮೂರು ವಿಕೆಟ್‌ಗಳಿಗೆ 37 ರನ್ ಗಳಿಸಿದ್ದ ಆಸ್ಟ್ರೇಲಿಯಾ ಭಾನುವಾರ ಭೋಜನ ವಿರಾಮದ ಸ್ವಲ್ಪ ಹೊತ್ತಿನಲ್ಲಿ 155 ರನ್‌ಗಳಿಗೆ ಆಲೌಟಾಯಿತು. ಶಾರ್ಟ್ ಬಾಲ್ ಎಸೆತಗಳ ಮೂಲಕ ಕಾಡಿದ ಮಾರ್ಕ್ ವುಡ್ ಆರು ವಿಕೆಟ್ ಉರುಳಿಸಿದರು. ಅಲೆಕ್ಸ್ ಕ್ಯಾರಿ ಏಕಾಂಗಿ ಹೋರಾಟ ನಡೆಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 303; **ಇಂಗ್ಲೆಂಡ್:** 188; ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 56.3 ಓವರ್‌ಗಳಲ್ಲಿ 155 (ಸ್ಟೀವನ್ ಸ್ಮಿತ್ 27, ಕ್ಯಾಮರಾನ್ ಗ್ರೀನ್ 23, ಅಲೆಕ್ಸ್ ಕ್ಯಾರಿ 49; ಸ್ಟುವರ್ಟ್ ಬ್ರಾಡ್ 51ಕ್ಕೆ3, ಮಾರ್ಕ್ ವುಡ್ 37ಕ್ಕೆ6); **ಇಂಗ್ಲೆಂಡ್:** 38.5 ಓವರ್‌ಗಳಲ್ಲಿ 124 (ರೋರಿ ಬರ್ನ್ಸ್ 26, ಜ್ಯಾಕ್ ಕ್ರಾವ್ಲಿ 36; ಪ್ಯಾಟ್ ಕಮಿನ್ಸ್ 42ಕ್ಕೆ3, ಸ್ಕಾಟ್ ಬೊಲ್ಯಾಂಡ್ 18ಕ್ಕೆ3, ಕ್ಯಾಮರಾನ್ ಗ್ರೀನ್ 21ಕ್ಕೆ3). **ಫಲಿತಾಂಶ:** ಆಸ್ಟ್ರೇಲಿಯಾಗೆ 146 ರನ್‌ಗಳ ಜಯ; ಸರಣಿಯಲ್ಲಿ 4–0 ಯಿಂದ ಗೆಲುವು.

ಭಾರತ–ದಕ್ಷಿಣ ಆಫ್ರಿಕಾ ಟೆಸ್ಟ್ ಸರಣಿ ಭಾವುಕ ಕ್ಷಣಗಳಿಗೆ ಸಾಕ್ಷಿಯಾಗಿತ್ತು. ಆದರೆ ಆ್ಯಷಸ್ ಸರಣಿ ಏಕಪಕ್ಷೀಯವಾಗಿ ಸಪ್ಪೆಯಾಗಿ ಹೋಯಿತು.

ಇಯಾನ್ ಚಾಪೆಲ್ ಆಸ್ಟ್ರೇಲಿಯಾದ ಮಾಜಿ ಆಟಗಾರ

ಫುಟ್‌ಬಾಲ್ ಪಟು ಅಜೀಜ್ ಇನ್ನಿಲ್ಲ



ಅಜೀಜ್

ಬೆಂಗಳೂರು: ರಾಜ್ಯದ ಪರವಾಗಿ ಮತ್ತು ಎಎಸ್‌ಸಿ ಸೆಂಟರ್ ಸಂಸ್ಥೆಯಲ್ಲಿ ಆಡಿದ್ದ ಫುಟ್‌ಬಾಲ್ ಪಟು ಅಜೀಜ್ (73) ಕೇರಳದ ಮಲಪ್ಪುರಂ ಜಿಲ್ಲೆಯಲ್ಲಿ ಭಾನುವಾರ ನಿಧನರಾದರು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ರಾಷ್ಟ್ರೀಯ ಸೀನಿಯರ್ ಟೂರ್ನಿಯಲ್ಲಿ ಎಎಸ್‌ಸಿ ಸೆಂಟರ್‌ಗಾಗಿ ಆಡಿದ್ದ ಅಜೀಜ್ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. 1968ರಲ್ಲಿ ಪ್ರಶಸ್ತಿ ಗೆದ್ದ ತಂಡದಲ್ಲಿ ಅವರಿದ್ದರು. ಕೊಲ್ಲಂನಲ್ಲಿ 1972ರಲ್ಲಿ ನಡೆದ ಪೆಂಟಾಗುಲರ್ ಟೂರ್ನಿಯಲ್ಲೂ ಅರು ರಾಜ್ಯದ ಪರ ಆಡಿದ್ದಾರೆ. ಅಲ್ಲಿ ಅತ್ಯುತ್ತಮ ಆಟಗಾರ ಪ್ರಶಸ್ತಿ ಗಳಿಸಿದ್ದರು.

ಆರಂಭದಲ್ಲಿ ಫಾರ್ವರ್ಡ್ ವಿಭಾಗದಲ್ಲಿ ಆಡುತ್ತಿದ್ದ ಅವರು ನಂತರ ಮಿಡ್‌ಫೀಲ್ಡರ್ ಆಗಿ ಗಮನ ಸೆಳೆದಿದ್ದರು. ಮಿಡ್‌ಫೀಲ್ಡರ್ ಆಗಿದ್ದಾಗಲೂ ಚೆಂಡಿನ ಮೇಲೆ ಹಿಡಿತ ಸಾಧಿಸಿ ಮುನ್ನುಗ್ಗಿ ಗೋಲು ಹೊಡೆಯುವುದರಲ್ಲಿ ನಿಸ್ಸೀಮರಾಗಿದ್ದರು. ಚುರುಕಿನ ಟ್ಯಾಕ್ಲಿಂಗ್, ವೇಗದ ಡ್ರಿಬ್ಲಿಂಗ್ ಮತ್ತು ಶಕ್ತಿಶಾಲಿ ಶಾಟ್‌ಗಳು ಅವರ ಆಟದ ವೈಶಿಷ್ಟ್ಯಗಳಾಗಿದ್ದವು.

ಪ್ರೊ ಕಬಡ್ಡಿ ಲೀಗ್: ಪವನ್ ‘ಸೂಪರ್ ಟೆನ್’ ವ್ಯರ್ಥ

ಪಟ್ನಾಗೆ ಮಣಿದ ಬುಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ಪವನ್ ಶೆರಾವತ್ ಗಳಿಸಿದ ‘ಸೂಪರ್ 10’ ವ್ಯರ್ಥವಾಯಿತು. ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಭಾನುವಾರ 31–38ರಿಂದ ಪಟ್ನಾ ಪೈರೇಟ್ಸ್ ತಂಡಕ್ಕೆ ಸೋತಿತು.

ವೈಟ್‌ಫೀಲ್ಡ್‌ನಲ್ಲಿರುವ ಹೋಟೆಲ್ ಶೆರಟನ್ ಗ್ರ್ಯಾಂಡ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಹಣಾಹಣಿಯಲ್ಲಿ ಪಟ್ನಾ ತಂಡಕ್ಕೆ ಡಿಫೆಂಡರ್ ಸುನಿಲ್ (9 ಪಾಯಿಂಟ್ಸ್) ಮತ್ತು ರೇಡರ್‌ಗಳಾದ ಸಚಿನ್ (8) ಮತ್ತು ಗುಮನ್ ಸಿಂಗ್ (7) ಗೆಲುವು ತಂದುಕೊಟ್ಟರು.

ಬೆಂಗಳೂರು ಪರ ಮಹೇಂದರ್ ಸಿಂಗ್ ಹಾಗೂ ಸೌರಭ್ ನಂದಾಲ್ ತಲಾ ಆರು ಪಾಯಿಂಟ್ಸ್ ಗಳಿಸಿದರು.

ಪಟ್ನಾ ಮೊದಲಾರ್ಧದಲ್ಲೇ 20–16ರಿಂದ ಮುನ್ನಡೆ ಸಾಧಿಸಿತ್ತು. ಬಳಿಕವೂ ಪಾರಮ್ಯ ಮೆರೆದು ಗೆಲುವು ಒಲಿಸಿಕೊಂಡಿತು.

ಪಂದ್ಯ ಸೋತರೂ ಬುಲ್ಸ್ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿಯಿತು. ಪಟ್ನಾ ಎರಡನೇ ಸ್ಥಾನದಲ್ಲಿದೆ.

ತಲೈವಾಸ್– ಪಿಂಕ್ ಪ್ಯಾಂಥರ್ಸ್ ಸಮಬಲ: ಜಿದ್ದಾಜಿದ್ದಿನ ಪೈಪೋಟಿ ನಡೆದ ಇನ್ನೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್– ತಮಿಳ್ ತಲೈವಾಸ್ ತಂಡಗಳು 31–31ರಿಂದ ಟೈ ಸಾಧಿಸಿದವು.

ಆರಂಭದಿಂದಲೇ ಭಾರಿ ಹೋರಾಟ ನಡೆದ ಪಂದ್ಯದ ಮೊದಲಾರ್ಧದ ಮುಕ್ತಾಯದ ವೇಳೆಗೆ ಜೈಪುರ 17–13ರಿಂದ ಮುಂದಿತ್ತು. ಆದರೆ ದ್ವಿತೀಯಾರ್ಧದಲ್ಲಿ 18 ಪಾಯಿಂಟ್ಸ್ ಗಳಿಸಿದ ತಲೈವಾಸ್ ತಂಡವು ಸಮಬಲ ಸಾಧಿಸುವಲ್ಲಿ ಯಶಸ್ವಿಯಾಯಿತು. ಜೈಪುರ ತಂಡದ ಪರ ರೇಡರ್ ಅರ್ಜುನ್ ದೇಸ್ವಾಲ್ ಮತ್ತು ನವೀನ್ ತಲಾ ಆರು ಪಾಯಿಂಟ್ಸ್ ಕಲೆಹಾಕಿ ಮಿಂಚಿದರು. ಡಿಫೆಂಡರ್ ಸಂದೀಪ್ ಧುಳ್ ಕೂಡ ಐದು ಪಾಯಿಂಟ್ಸ್ ಗಳಿಸಿದರು.

ತಮಿಳ್ ತಲೈವಾಸ್ ತಂಡಕ್ಕೆ ಮಂಜೀತ್ (9 ಪಾಯಿಂಟ್ಸ್), ಡಿಫೆಂಡರ್‌ಗಳಾದ ಸುರ್ಜೀತ್ ಸಿಂಗ್ (5) ಮತ್ತು ಸಾಗರ್ (4) ಕಾಣಿಕೆ ನೀಡಿದರು.



ತಮಿಳ್ ತಲೈವಾಸ್‌ನ ಮಂಜೀತ್ ಅವರನ್ನು ಟ್ಯಾಕಲ್ ಮಾಡಿದ ಜೈಪುರ ಪಿಂಕ್ ಪ್ಯಾಂಥರ್ಸ್ ಆಟಗಾರರು

ಇಂದಿನ ಪಂದ್ಯ (ರಾತ್ರಿ)

ಪುಣೇರಿ ಪಲ್ಟನ್ – ಯು.ಪಿ.ಯೋಧಾ	7.30
ತೆಲುಗು ಟೈಟನ್ಸ್ – ಬೆಂಗಾಲ್ ವಾರಿಯರ್ಸ್	8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	11	7	3	1	39
ಪಟ್ನಾ ಪೈರೇಟ್ಸ್	10	7	2	1	39
ದಬಂಗ್ ಡೆಲ್ಲಿ	10	6	2	2	37
ಜೈಪುರ್ ಪಿಂಕ್ ಪ್ಯಾಂಥರ್ಸ್	10	5	4	1	31
ತಮಿಳ್ ತಲೈವಾಸ್	10	3	2	5	30
ಯುಪಿ ಯೋಧಾ	10	3	4	3	28
ಯು ಮುಂಬಾ	10	3	3	4	28
ಬೆಂಗಾಲ್ ವಾರಿಯರ್ಸ್	10	4	5	1	25
ಹರಿಯಾಣ ಸ್ಟೀಲರ್ಸ್	10	3	5	2	24
ಪುಣೇರಿ ಪಲ್ಟನ್	9	4	5	-	21
ಗುಜರಾತ್ ಜೈಂಟ್ಸ್	9	2	5	2	20
ತೆಲುಗು ಟೈಟನ್ಸ್	9	-	7	2	11

(ಭಾನುವಾರದ ಪಂದ್ಯಗಳ ಅಂತ್ಯಕ್ಕೆ)

ಯಶ್ ಮಿಂಚು: ಭಾರತಕ್ಕೆ ಜಯ

ಜಾರ್ಜ್‌ಟೌನ್ (ಪಿಟಿಐ): ನಾಯಕ ಯಶ್ ಧುಳ್ (82) ಅವರ ಜವಾಬ್ದಾರಿಯುತ ಬ್ಯಾಟಿಂಗ್, ವಿಕಿ ಓಸ್ವಾಲ್ ಅವರ ಪರಿಣಾಮಕಾರಿ ಬೌಲಿಂಗ್ (28ಕ್ಕೆ 5) ನೆರವಿನಿಂದ ಭಾರತ ತಂಡವು 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ನಡೆದ ‘ಬಿ’ ಗುಂಪಿನ ಪಂದ್ಯದಲ್ಲಿ ಭಾರತ 45 ರನ್‌ಗಳಿಂದ ದಕ್ಷಿಣ ಆಫ್ರಿಕಾ ತಂಡಕ್ಕೆ ಸೋಲುಣಿಸಿತು. ಟಾಸ್ ಗೆದ್ದ ದಕ್ಷಿಣ ಆಫ್ರಿಕಾ, ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ 232 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಆದರೆ ದಕ್ಷಿಣ ಆಫ್ರಿಕಾ ತಂಡವನ್ನು 187 ರನ್‌ಗಳಿಗೆ ಕಟ್ಟಿ ಹಾಕಿತು.



ಯಶ್ ಧುಳ್ – ಐಸಿಸಿ ಟ್ವಿಟರ್ ಚಿತ್ರ

ಸಂಕ್ಷಿಪ್ತ ಸ್ಕೋರು: ಭಾರತ 19 ವರ್ಷದೊಳಗಿನವರ ತಂಡ: 46.5 ಓವರ್‌ಗಳಲ್ಲಿ 232 (ಯಶ್ ಧುಳ್ 82, ಕೌಶಲ್ ತಾಂಬೆ 35, ಶೇಕ್ ರಶೀದ್ 31, ನಿಶಾಂತ್ ಸಿಂಧು 27; ಮ್ಯಾಥ್ಯು ಬೋಸ್ಟ್ 40ಕ್ಕೆ 3, ಅಫಿವ್ ನ್ಯಾಂದಾ 29ಕ್ಕೆ 2, ಡೇವಾಲ್ಡ್ ಬ್ರೆವಿಸ್ 43ಕ್ಕೆ 3). **ದಕ್ಷಿಣ ಆಫ್ರಿಕಾ 19 ವರ್ಷದೊಳಗಿನವರ ತಂಡ:** 45.4 ಓವರ್‌ಗಳಲ್ಲಿ 187 (ವ್ಯಾಲೆಂಟಿನ್ ಕಿಟಿಮ್ 25, ಡೇವಾಲ್ಡ್ ಬ್ರೆವಿಸ್ 65, ಜಾರ್ಜ್ ವ್ಯಾನ್ ಹೀರ್ಡನ್ 36. ಲಿಯಾಮ್ ಅಲ್ಡರ್ 17; ರಾಜ್ ಬಾವಾ 47ಕ್ಕೆ 4, ವಿಕಿ ಓಸ್ವಾಲ್ 28ಕ್ಕೆ 5). **ಫಲಿತಾಂಶ:** ಭಾರತ ತಂಡಕ್ಕೆ 45 ರನ್‌ಗಳ ಜಯ.

ಹೈದರಾಬಾದ್ ರೇಸ್

ಅಶ್ವ ಬ್ರಾವೋ ಗೆಲ್ಲುವ ನಿರೀಕ್ಷೆ

ಕಾಕಟಿಯಾ ಮಿಲಿಯನ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಅಶ್ವ ಬ್ರಾವೋ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 12.40ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಲ್ಮಾಸ್ 4, ಕಾರ್ಲಿಸ್ಲ್ 1, ಸ್ಟಾರ್ ಮೆಡಲ್ 2
2ನೇ ರೇಸ್: ಗುಡ್ ಟೈಡಿಂಗ್ಸ್ 10, ಬಕ್ಷಿ 4, ಸ್ಪೇಸ್ ಟೈಮ್ 3
3ನೇ ರೇಸ್: ಬೌಡೆಲೈರ್ 2, ಟಾಪ್ ಡೈಮಂಡ್ 1, ಮುಯಾಸೆರ್ 3
4ನೇ ರೇಸ್: ಇಂಡೀ 2, ಎಕ್ಸಿಕ್ಯುಟಿವ್ ಡಿಸಿಷನ್ 8, ಗಾರ್ನೆಟ್ 6
5ನೇ ರೇಸ್: ಅಶ್ವ ಬ್ರಾವೋ 1, ಕಾರ್ಫ್ ಕ್ಯಾಸ್ಲ್ 2
6ನೇ ರೇಸ್: ಅಬೌವ್ ದಿ ಲಾ 8, ಅಶ್ವ ರಜೌರಿ 4, ಅನ್‌ಮ್ಯಾಚ್ಡ್ 6
7ನೇ ರೇಸ್: ಏರಿಯಲ್ ಕಂಬಾಟ್ 10, ಮಿರಾನ 4, ಗುಡ್ ಕನೆಕ್ಷನ್ 8
8ನೇ ರೇಸ್: ಸ್ಟಾರ್ಕ್ 4, ವೈಲ್ಡ್ ಕಾರ್ಡ್ 3, ಬ್ಲೂ ಲೇಬಲ್ 1

ಉತ್ತಮ ಬೆಟ್: ಗುಡ್ ಟೈಡಿಂಗ್ಸ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
4,5,6,7,8	2,3,4,5	5,6,7,8

1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
1,2,3	3,4,5	6,7,8